ಎ.ಪಿ. ಮಾಲತಿ

# ಹೊಳೆಬಾಗಿಲು



ಕಾದಂಬರಿ

# ಹೊಳೆಬಾಗಿಲು

ಕಾದಂಬರಿ

ಎ.ಪಿ. ಮಾಲತಿ

ಪಾಂಚಜನ್ಯ ಪಬ್ಲಿಕೇಷನ್ಸ್
ನಂ. 1, ಮಿಲ್ಕ್ ನರಸಿಂಹಯ್ಯ ಲೇಔಟ್, ಎನ್.ಆರ್.ಐ. ಇನ್ಸ್ಟಿಟ್ಯೂಟ್ ಹತ್ತಿರ,
ಪಾಪರೆಡ್ಡಿಪಾಳ್ಯ, ಬೆಂಗಳೂರು-560 072. ಫೋನ್: 9740066842

**HOLEBAGILU**

*A novel written by*
**A.P. MALATHI**
Aaraypu Village & Post,
Puttur-574210.
Dakshina Kannada
Ph : 08251-285093 / 9449704354

Published by :
Nidasale P. Vijay on behalf of
**M/s. Panchajanya Publications**
No.1, Milk Narasimhaiah Layout,
Near NRI Institute, Papareddypalya,
Bangalore-560 072. Ph : 9740066842

| | | |
|---|---|---|
| **ISBN** | : | 978-93-92275-09-8 |
| **First Impression** | : | 2022 |
| © | : | Author |
| **Copies** | : | 1000 |
| **Paper used** | : | 70 GSM N.S. Maplitho |
| **Size** | : | 1/8 Demy |
| **Pages** | : | 164 + iv |
| **Price** | : | Rs.200/- |
| **Cover Design** | : | M.R. Guruprasad |
| **Page Design** | : | Mahesh Kumar B |
| **Printed at** | : | Jagruthi Printers<br>56/1-6, Narasimhaiah Garden,<br>Kottigepalya, Magadi Main Road,<br>Bangalore-560 091.<br>Phone : 9740066842 |

## ಮೊದಲ ಮಾತು

ದಕ್ಷಿಣ ಕನ್ನಡದ ಕುಂದಾಪುರ ಸಮೀಪದ ಗಂಗೊಳ್ಳಿ ಹೊಳೆಗೆ ಸೌಪರ್ಣಿಕಾ, ವಾರಾಹಿ, ಕೇದಕಿ, ಕುಬ್ಜ, ಚಕ್ರ ಹೊಳೆ ಈ ಐದು ನದಿಗಳು ಒಂದಾಗಿ ಸೇರಿಕೊಳ್ಳುತ್ತವೆ. ಈ ಒಂದೊಂದು ನದಿಗಳೂ ಜನಸಾಮಾನ್ಯರಿಗೆ ಪವಿತ್ರವಾಗಿದ್ದು ಜನರ ಬಾಯಲ್ಲಿ ಪಂಚ ಗಂಗಾವಳಿಯಾಗಿ ಕಾಲಕ್ರಮೇಣ ಗಂಗೊಳ್ಳಿ ಹೆಸರಿನ ಹೊಳೆಯಾಗಿದೆ. ಇದು ಅನತಿ ದೂರದ ಅರಬ್ಬೀ ಸಮುದ್ರ ಸೇರಿಕೊಳ್ಳುವ ಆ ಸುಂದರ ದೃಶ್ಯ ಮನುಕುಲಕ್ಕೆ ನಿಸರ್ಗ ನೀಡಿದ ಕೊಡುಗೆ. ಶತಮಾನದ ಹಿಂದೆ ಗಂಗೊಳ್ಳಿ ಹೊಳೆಯ ತೀರ ಪ್ರದೇಶದಿಂದ ಸ್ವಲ್ಪ ದೂರವಾಗಿ ಅನೇಕ ಸಣ್ಣದೊಡ್ಡ ಕುದ್ರುಗಳರಿದ್ದವು. (ದ್ವಿಪಗಳು, ಅಥವಾ ನಡುಗಡ್ಡೆಗಳು) ಹೊಳೆ ತೀರದ ಉದ್ದಕ್ಕೂ ಕೆಸರು ನಿಲ್ಲುವ ಜೌಗು ಪ್ರದೇಶ, ಬಿದಿರು ಸಾಲುಗಳು, ಪಾಪಾಸು ಕಳ್ಳಿಗಳು, ಕುರುಚಲು ಕಾಡು, ಬಯನೆ ಮರಗಳು, ಬಾಗಿ ನಿಂತ ತೆಂಗಿನ ಮರಗಳು, ಕಾಡು ಬಾಳೆಗಳು, ಅದರಾಚೆ  ಭತ್ತದ ಗದ್ದೆಗಳು, ಮನುಷ್ಯ ವಾಸದ ಕುರುಹುಗಳು. ಕೆಲವು ಕುದ್ರುಗಳು ಕೇವಲ ಕಾಡುಗಳ ಬೀಡು. ಇನ್ನು ಕೆಲವು ಮನುಷ್ಯನ ವಾಸಸ್ಥಾನದ ಗೂಡು. ಭಯಾನಕ, ಅಷ್ಟೇ ನಿಗೂಢತೆ ತುಂಬಿದ ಕುದ್ರುಗಳು.

70–80 ವರ್ಷಗಳ ಹಿಂದೆ ಗಂಗೊಳ್ಳಿ ಹೊಳೆ ಮಧ್ಯೆ ಇರುವ ಕೆಲವು ಕುದ್ರುಗಳಲ್ಲಿ

ನನ್ನ ಅಮ್ಮಮ್ಮನ [ತಾಯಿಯ ತಾಯಿ] ಸಂಬಂಧಿಕರ ಮನೆಗಳಿದ್ದವು. ಅಲ್ಲಿಗೆ ತಾಯಿ, ಅಮ್ಮಮ್ಮನ ಜೊತೆ ಅನೇಕಬಾರಿ ದೋಣಿಯಲ್ಲಿ ಹೋಗಿ ನಾಲ್ಕಾರು ದಿನ ಉಳಿದು ಬರುತ್ತಿದ್ದೆ. ಆಗೆಲ್ಲ ದೋಣಿಯಾನ, ಕುದ್ರು ವಾಸ ನನಗಿಷ್ಟವಾಗಿತ್ತು. ಮದುವೆಯಾಗಿ ಪುತ್ತೂರಿಗೆ ಬಂದ ನಂತರ ಒಂದೆರಡು ಬಾರಿ ಗಂಗೊಳ್ಳಿಗೆ ಹೋಗಿರಬಹುದು. ಅನಂತರ ಹೋಗುವುದು ಕಡಿಮೆಯಾಗಿ ಕುದ್ರು ವಾಸವೂ ತಪ್ಪಿತು. ಮುಂದೆ ಜನವಾಸವಿರುವ ಕುದ್ರುಗಳ ಆಸುಪಾಸು ಸಣ್ಣದೊಡ್ಡ ಹೊಳೆಗಳಿಗೆ ಸೇತುವೆಯಾಗಿ, ಹೊಳೆ ತೀರದಲ್ಲಿ ಕಾಲುದಾರಿಗಳಾಗಿ ರಸ್ತೆಗಳಾಗಿ, ದೋಣಿಗಳ ಬದಲಿಗೆ ವಾಹನಗಳ ಓಡಾಟ ಹೆಚ್ಚಿ ನಾಗರೀಕತೆ ಬೆಳೆಯಿತು. ಹಳೆಯದೆಲ್ಲ ಮೂಲೆ ಸೇರಿತು. ಆದರೆ ನನ್ನ ಮನದ ಮೂಲೆಯಲ್ಲಿ ದಟ್ಟವಾಗಿ ತಳವೂರಿತ್ತು ಕುದ್ರುವಾಸದ ನೆನಪುಗಳು. ಅವು ಮತ್ತೆ ಚಿಗುರೊಡೆದದ್ದು ನನ್ನ ಕೆಲಸದವಳ ಸಣ್ಣ ಮಾತಿನಿಂದ. ಅದು ಆದದ್ದು ಹೀಗೆ–

ಬಹಳ ಸಮಯದಿಂದ ಹೊಸ ಕಾದಂಬರಿ ರಚನೆಗೆ ವಸ್ತುವಿನ ಹುಡುಕಾಟದಲ್ಲಿದ್ದೆ. ಮಳೆಗಾಲದ ದಿನಗಳು. ತುಂಬಿ ಹರಿಯುತ್ತಿದ್ದ ನಮ್ಮತೋಡಿನ ನೀರಿನಲ್ಲಿ ಕಸ ಕಡ್ಡಿಗಳ ಜೊತೆ ತೆಂಗಿನ ಕಾಯಿಗಳೂ ತೇಲಿ ಬರುವುದು ಮಾಮೂಲು. ತೆಂಗಿನಕಾಯಿ ಆಸೆಗೆ ಚೆನ್ನಾಗಿ ಈಜು ಬಲ್ಲವರು ಮಾತ್ರ ದೋಂಟಿಯಿಂದ ಅದನ್ನು ಮೇಲೇಳೆದು ಹಿಡಿದುಕೊಳ್ಳುವ ಸಾಹಸ ಮಾಡುವುದುಂಟು. ಆದರೆ ನನ್ನ ಕೆಲಸದವಳು ನೀರಿನ ರಭಸ ಲೆಕ್ಕಿಸದೆ ನಾಲ್ಕಾರು ತೆಂಗಿನಕಾಯಿ ಎಳೆದು ಮೇಲೆ ಹಾಕಿದ ಸಂಗತಿ ತಿಳಿಯಿತು. ಕಾದಂಬರಿ ವಸ್ತುವಿಗೂ ತೆಂಗಿನಕಾಯಿಗೂ ಏನು ಸಂಬಂಧ? ಹುಬ್ಬೇರಿಸಬೇಡಿ. ಈಕೆ ಯಾವ ಭಂಡ ಧೈರ್ಯದಲ್ಲಿ ಈ ಸಾಹಸಕ್ಕೆ ಕೈ ಹಾಕಿದಳೆಂದು ಗದರಿಸಿ ವಿಚಾರಿಸಿದೆ. ಆಗ ಅವಳು ತನ್ನ ತಾಯಿ ಮನೆ ನದಿ ತೀರದಲ್ಲಿ ಇದೆಯೆಂದು ಬಾಲ್ಯದಿಂದಲೇ ಈಜು ಬಲ್ಲವಳೆಂದೂ ಹೇಳುತ್ತ, "ಹೊಳೆ ಬಾಗಿಲಲ್ಲಿ ಹುಟ್ಟಿ ಬೆಳೆದ ಗಟ್ಟಿಗಳು ನಾನು" ಎಂದಳು ಹೆಮ್ಮೆಯಲ್ಲಿ.

"ಹೊಳೆಬಾಗಿಲು"! ಹೆಸರು ಕೇಳಿಯೇ ರೋಮಾಂಚಿತಳಾದ ನನಗೆ ಕಾದಂಬರಿ ವಸ್ತುವಿನ ಹುಡುಕಾಟಕ್ಕೆ ಒಂದು ನಿಶ್ಚಿತ ರೂಪ ಬಂದುಬಿಟ್ಟಿತು. ಬಾಲ್ಯದಲ್ಲಿ ನನ್ನ ಕುದ್ರು ವಾಸದಲ್ಲಿ ಅನುಭವಕ್ಕೆ ಬಂದ ಒಂದೊಂದು ವಿಷಯವೂ ಹೊಳೆಯ ಅಲೆಯಂತೆ ನನ್ನಲ್ಲಿ ಹೊಸ ಕಲ್ಪನೆಯ ಹೊಳವನ್ನು ಹುಟ್ಟು ಹಾಕಿತು. ನನ್ನಲ್ಲೇ ಸುಪ್ತವಾಗಿದ್ದ ನಿಸರ್ಗ ಮತ್ತು ಮನುಷ್ಯನ ಅವಿನಾಭಾವ ಸಂಬಂಧವನ್ನು, ಚಿಂತನೆಗೆ ಹೊಸ ದಾರಿಯನ್ನು ತೆರೆದು ತೋರಿಸಿತು. ಇಲ್ಲಿ ಜೀವ ಚೈತನ್ಯ ಉಸಿರಾಡುವ ರೀತಿ, ಬದುಕು ಕಟ್ಟಿಕೊಂಡ ಪರಿ, ಸ್ವಾತಂತ್ರ್ಯ ಪೂರ್ವದ ಎರಡು ತಲೆಮಾರುಗಳ ಸಾಮಾಜಿಕ ಸ್ಥಿತ್ಯಂತರ, ಕರಾವಳಿ ತೀರದ ಕುದ್ರುಗಳಲ್ಲಿ ನೆಲೆಸಿದ ಜನಜೀವನದ ಅಂದಿನ ಅನೇಕ ಅಜ್ಞಾನ, ಮೌಢ್ಯಗಳ

ಚಿತ್ರಣವೇ ನನ್ನ ಕಾದಂಬರಿ ಸೃಷ್ಟಿಯ ಪ್ರಮುಖ ವಸ್ತುವಾಯಿತು. ಸ್ವಾತಂತ್ರ್ಯ ಪೂರ್ವದಲ್ಲಿ ಹುಟ್ಟಿದ ಎರಡು ಪುಟ್ಟ ಮಕ್ಕಳು ಕೌಟುಂಬಿಕ, ಸಾಮಾಜಿಕ, ವ್ಯವಹಾರಿಕ ಬದುಕನ್ನು ತಮ್ಮದೇ ದೃಷ್ಟಿಯಲ್ಲಿ ನೋಡುವ ರೀತಿಯಲ್ಲಿ ಬರೆದ ಈ ಕಾದಂಬರಿ "ಹೊಳೆಬಾಗಿಲು"

"ಹೊಳೆಬಾಗಿಲು" ಇದು ಹಲವಾರು ನೆನಪುಗಳ ಅನುಭವದ ಹೂರಣ. ಜೊತೆಗೆ ಚೆಂದಕ್ಕೆ ಸೇರಿದ ಕಲ್ಪನೆಯ ಚಿತ್ರಣ. ಕುದ್ರುವಿನ ಜೀವನದ ಅನುಭವ ಸುಮಾರಾಗಿ ನನಗಿದ್ದರೂ ಕಾದಂಬರಿಯ ದೊಡ್ಡ ಕ್ಯಾನ್ವಾಸಿಗೆ ನನ್ನ ಈ ಅನುಭವ ಸಾಲದು. ಸರಿಯಾದ ಮಾಹಿತಿ ಅಗತ್ಯ. ಆಗ ಹೊಳೆ ದಡದಲ್ಲೇ ತಮ್ಮ ಬಾಲ್ಯ ಕಳೆದ ಉಡುಪಿ ಪೂರ್ಣಪ್ರಜ್ಞ ಕಾಲೇಜಿನ ಪ್ರಾಂಶುಪಾಲರಾದ ಡಾ. ಲಕ್ಷ್ಮಿನಾರಾಯಣಕರ್ಣಿ ಕರು ಗಂಗೊಳ್ಳಿ ಹೊಳೆಗೆ ಸೇರುವ ಪಂಚ ನದಿಗಳ ಚಿತ್ರಣ, ಕುದ್ರುಗಳ ಭೌಗೋಲಿಕ ವಿವರಣೆ, ಶತಮಾನದ ಹಿಂದೆಅದರಲ್ಲಿ ವಾಸಿಸುವ ಜನರಜೀವನ ಕ್ರಮಗಳ ಕುರಿತು ನನಗೆ ಬೇಕಾದ ಮಾಹಿತಿ ಒದಗಿಸಿದ್ದರು. ಕಾದಂಬರಿ "ಅವಧಿ" ಅಂತರ್‌ಜಾಲದ ಬ್ಲಾಗಿನಲ್ಲಿ ಧಾರಾವಾಹಿಯಾಗಿ ಪ್ರಕಟ ಆಗುವಾಗ ಸಂತೋಷಪಟ್ಟಿದ್ದರು. ಅದು ಪುಸ್ತಕ ರೂಪದಲ್ಲಿ ಅಚ್ಚಾದ ನಂತರ ಉಡುಪಿಗೆ ಹೋಗಿಯೇ ಕೊಡಬೇಕು ಎಂದುಕೊಂಡಿದ್ದೆ. ಆದರೆ ಪುಸ್ತಕ ಪ್ರಕಟಣೆ ತಡವಾಗಿಯೇ ಹೋಯಿತು. ಅಷ್ಟರಲ್ಲಿ ಕಾಲನ ಕರೆಗೆ ಓಗೊಟ್ಟ ಅವರಿಗೆ ಹೇಳಬೇಕಾದ ಕೃತಜ್ಞತೆಯ ಪದಗಳು ಉಳಿದೇ ಹೋಯಿತು ನನ್ನಲ್ಲಿ. ಅವರ ಸಹಕಾರವನ್ನು ಈ ಹೊತ್ತಿನಲ್ಲಿ ನೆನಪಿಸಿಕೊಳ್ಳುತ್ತ ಅವರಿಗೆ ಅನಂತ ವಂದನೆಗಳು.

ಈ ಕಾದಂಬರಿಯನ್ನು ಮೊದಲು ತಮ್ಮ "ಅವಧಿ" ಅಂತರ್ ಜಾಲದ ಬ್ಲಾಗ್‌ನಲ್ಲಿ ದಿನ ಧಾರಾವಾಹಿಯಾಗಿ ಪ್ರಕಟಿಸಿದ ಸಂಪಾದಕ ಜಿ.ಎನ್. ಮೋಹನ್ ಅವರಿಗೆ ನನ್ನ ವಂದನೆಗಳು. ಕಾದಂಬರಿ ಅವಧಿಯಲ್ಲಿ ಧಾರಾವಾಹಿಯಾಗಿ ಬರುತ್ತಿದ್ದಂತೆ ಪತ್ರಿಕಾ ಧಾರಾವಾಹಿಯಂತೆ ದೂರದೂರದ ಸಹೃದಯದ ಮೊಬೈಲ್ ಓದುಗರೂ ಅದ್ಭುತವಾಗಿ ಸ್ಪಂದಿಸಿದ್ದಾರೆ. ವಾಟ್ಸ್‌ಅಪ್, ಫ್ಲೋನ್ ಕರೆ, ಇ-ಮೇಲ್ ಮೂಲಕ ವಿಮರ್ಶಿಸಿದ್ದಾರೆ. ತಮ್ಮ ಸಂತೋಷ, ಅಭಿಪ್ರಾಯ ಹಂಚಿಕೊಂಡಿದ್ದಾರೆ. ಅವರೆಲ್ಲರ ಅಭಿಮಾನಕ್ಕೆ ನನ್ನ ಹಾರ್ದಿಕ ವಂದನೆಗಳು. ಕೃತಜ್ಞತೆಗಳು.

ಕಾದಂಬರಿಗೆ ಚೆಂದದ ಬೆನ್ನುಡಿ ಬರೆದ ನನ್ನ ಅಭಿಮಾನಿಯಾದ ಸುಪ್ರಸಿದ್ಧ ಚಲನ ಚಿತ್ರಕಲಾವಿದೆ, ಕಿರುತೆರೆ ನಟಿ ವಿನಯಾ ಪ್ರಸಾದ್ ಅವರಿಗೆ ನನ್ನ ಕೃತಜ್ಞತೆಗಳು. ಮುಖಪುಟ ಹಿಂಬದಿ ರಕ್ಷಾಪುಟ ಬಿಡಿಸಿದ ನನ್ನ ಮೊಮ್ಮಗ ಎ.ಪಿ. ಗೌತಮನಿಗೆ ಪ್ರೀತಿಯ ನೆನಹುಗಳು.

ನನ್ನ ಕಾದಂಬರಿಯನ್ನು ಆಸಕ್ತಿಯಿಂದ ಪ್ರಕಟಿಸುತ್ತಿರುವ ಪಾಂಚಜನ್ಯ ಪಬ್ಲಿಕೇಷನ್ಸ್‌ನ ಮಾಲೀಕರಾದ ನಿಡಸಾಲೆ ಪಿ. ವಿಜಯ್ ಹಾಗೂ ಅವರ ಕುಟುಂಬದವರಿಗೂ, ಮುಖಪುಟ ರಚಿಸಿದ ಶ್ರೀ ಎಂ.ಆರ್. ಗುರುಪ್ರಸಾದ್ ಇವರಿಗೂ, ಅಚ್ಚುಕೂಟದವರಿಗೂ ನನ್ನ ನಮನಗಳು. ಜಾಗೃತಿ ಪ್ರಿಂಟರ್ಸ್‌ನ ಕಾರ್ಯನಿರ್ವಾಹಕರಾದ ಶ್ರೀ ಮಹೇಶ್ ಕುಮಾರ್ ಬಿ. ರವರಿಗೂ, ನೆಚ್ಚಿನ ಓದುಗರಿಗೂ ನನ್ನ ನಮನಗಳು.

ಇದೀಗ ಅಭಿಮಾನಿ ಓದುಗರ ಮುಂದೆ ಇದೆ ಹೊಳೆಬಾಗಿಲು ಕಾದಂಬರಿ. ತೆರೆದು ಓದಿ. ಸಾಹಿತ್ಯಪ್ರಿಯ ಓದುಗರಿಗೆ ಕಾದಂಬರಿ ಇಷ್ಟವಾದರೆ ಅದೇ ನನಗೆ ಸಲ್ಲುವ ಗೌರವ.

– ಎ.ಪಿ. ಮಾಲತಿ
ಪುತ್ತೂರು

**ವಿಳಾಸ:**
'ಚೇತನ" ಸಂಟ್ಯಾರು
ಆರ್ಯಾಪು ಅಂಚೆ,
ಪುತ್ತೂರು–574210
ದಕ್ಷಿಣ ಕನ್ನಡ.
ಮೊ: 9449704354

# ಹೊಳೆಬಾಗಿಲು

ಕಾದಂಬರಿ

## ಅಧ್ಯಾಯ-1

ದಕ್ಷಿಣ ಕನ್ನಡದ ಗಂಗೊಳ್ಳಿ ಹೊಳೆ ಎಂದರೆ ಅದು ತನ್ನ ಉದರದಲ್ಲಿ ಹಳ್ಳ, ಕೊಳ್ಳ, ತೊರೆ, ಝರಿ, ನದಿಗಳನ್ನು ಕೂಡಿಸಿಕೊಂಡು ಹರಿಯುವ ಜೀವದಾಯಿನಿ ನದಿ. ಸೌಪರ್ಣಿಕಾ, ವಾರಾಹಿ, ಕೇದಕಿ, ಕುಬ್ಜ, ಚಕ್ರ ಹೊಳೆ ಈ ಐದು ನದಿಗಳು ಒಂದಾಗಿ ಕೂಡಿಕೊಂಡು ಅಂತ್ಯದಲ್ಲಿ ಅರಬ್ಬೀ ಸಮುದ್ರ ಸೇರಿಕೊಳ್ಳುತ್ತದೆ. ಈ ಒಂದೊಂದು ನದಿಗಳೂ ಜನಸಾಮಾನ್ಯರಿಗೆ ಪವಿತ್ರವಾದದ್ದು. ಮನುಕುಲಕ್ಕೆ ನಿಸರ್ಗ ನೀಡಿದ ಕೊಡುಗೆಯಾಗಿ ಪಂಚ ಗಂಗಾವಳಿ ಎಂದೂ ಕರೆಯಲ್ಪಡುವ ಇದು ಮುಂದೆ ಜನರ ಬಾಯಲ್ಲಿ ಗಂಗೊಳ್ಳಿ ಹೊಳೆಯಾಗಿದೆ. ಗಂಗೊಳ್ಳಿ ಹರಿಯುವತೀರದ ಉದ್ದಕ್ಕೂ ಕೆಸರು ನಿಲ್ಲುವ ಜೌಗು ಪ್ರದೇಶದಲ್ಲಿ ಬಿದಿರು ಸಾಲುಗಳು, ಪಾಪಾಸು ಕಳ್ಳಿಗಳು, ಕುರುಚಲು ಕಾಡು, ಬಯನೆ ಮರಗಳು,ಬಾಗಿನಿಂತ ತೆಂಗಿನ ಮರಗಳು, ಕಾಡು ಬಾಳೆಗಳು, ಅದರಾಚೆ ಭತ್ತದ ಗದ್ದೆಗಳು, ಮನುಷ್ಯ ವಾಸದ ಕುರುಹುಗಳು. ಅಲ್ಲಲ್ಲಿ ಬಿದಿರಿನ ತೆಪ್ಪಗಳು, ಲಂಗರು ಹಾಕಿನಿಂತ ದೋಣಿಗಳು. ಹೊಳೆಯಲ್ಲಿ ತೀರ ಪ್ರದೇಶದಿಂದ ಸ್ವಲ್ಪ ದೂರವಾಗಿ ಅನೇಕ ಸಣ್ಣ ದೊಡ್ಡ ದ್ವಿಪಗಳಂತೆ [ನಡುಗಡ್ಡೆ] ಕಾಣುವ ಕುದಿರುಗಳಿವೆ. ಆಡುಭಾಷೆಯಲ್ಲಿ ಕುದ್ರು. ಕೆಲವು ಕುದ್ರುಗಳು ಕೇವಲ ಕಾಡುಗಳ ಬೀಡು. ಇನ್ನು ಕೆಲವು ಮನುಷ್ಯನ ವಾಸಸ್ಥಾನದ ಬೀಡು. ಬೇಸಿಗೆ ಕಾಲಕ್ಕೆ ಆ ಕುದ್ರುಗಳಿಗೆ ಹೋಗಿ ಬರಲು ದಡದಿಂದ ಕಾಲು ಹಾದಿಗಳಿವೆ. ಆದರೆ ಮಳೆಗಾಲದಲ್ಲಿ ಹೊಳೆ ತುಂಬಿ ಹರಿಯುತ್ತಿದ್ದರೆ, ಗಾಳಿ ಜೋರಾಗಿದ್ದರೆ, ಮೋಡ ಮುಸುಕಿದ ವಾತಾವರಣವಿದ್ದರೆ ಕುದ್ರುಗಳ ಹಾದಿಯೂ ಮುಳುಗಿ ಕಾಣುವುದು ಜಲಾಶಯ ಒಂದೇ. ಎಷ್ಟು ಭವ್ಯ ಭಯಾನಕ, ಅಷ್ಟೇ ನಿಗೂಢತೆ! ಹೊಳೆಯ ದಡ ಸಮೀಪವಿದ್ದರೂ ಯಾವ ನೀರಿನ ಋಣವೋ, ಯಾವ ಮಣ್ಣಿನ ಗುಣವೋ, ಯಾವ ಸಂಬಂಧಗಳ ನೆಲೆಯೋ, ಇಲ್ಲಿ ಜೀವ ಚೈತನ್ಯ ಉಸಿರಾಡುವ

ರೀತಿ, ಬದುಕು ಕಟ್ಟಿಕೊಂಡ ಪರಿಗೆ ನಿಸರ್ಗವೇ ತಲೆಬಾಗಿದೆ, ನಿಸರ್ಗ ಮತ್ತು ಮನುಷ್ಯನ ಅವಿನಾಭಾವ ಸಂಬಂಧವೇ ಇಲ್ಲಿ ಮುಖ್ಯ.

ಸುಬ್ಬಪ್ಪಯ್ಯನವರ ಹಿರಿಯರು ಬಾಳಿ ಬದುಕಿದ್ದು, ಈಗಲೂ ಕಿರಿಯರು ತಮ್ಮ ಬದುಕನ್ನು ಸಂಭ್ರಮಿಸುತ್ತಿರುವುದು ಸೌಪರ್ಣಿಕಾ ನದಿ ಹರಿಯುತ್ತಿರುವ ಗಂಗೊಳ್ಳಿ ನೀರಿನಲ್ಲಿ ಎದ್ದು ನಿಂತ ವಿಶಾಲವಾದ ನಾಲ್ಕೈದು ಮೈಲಿ ವಿಸ್ತಾರವಾದ ಕುದ್ರುವಿನಲ್ಲಿ. ಭತ್ತ, ತೆಂಗು, ಉದ್ದು, ನವಣೆ, ಅವಡೆ, ಮೆಣಸು ಇತ್ಯಾದಿ ಬೆಳೆದು, ದನ ಎಮ್ಮೆ ಹಾಲು ಕರಾವು ಎಂದು ಬದುಕು ಕಟ್ಟಿಕೊಂಡವರು. ಸಮೀಪದ ಕೋಟೇಶ್ವರ, ಸಾಸ್ತಾನ, ತ್ರಾಸಿ ಕಡೆಗೆ ಕುದ್ರುವಿನಿಂದ ಕಾಲು ದಾರಿಯಲ್ಲಿ ಹೋದರೆ ಎರಡು ಮೈಲು. ನಡೆಯಬೇಕು. ಸಾಸ್ತಾನದ ಅಳವೆ ಬಾಗಿಲಲ್ಲಿ ದೋಣಿ ಹಿಡಿದರೆ ಕೇವಲ ಅರ್ಧ ಗಂಟೆ ಸಾಕು. ಬೇರೆ ಊರ ಗ್ರಾಮ ನದಿ ತೀರಕ್ಕೆ ತೆರಳಲು ದೋಣಿಯೇ ಗತಿ. ಬ್ರಿಟಿಶ್ ವಸಾಹಿತಶಾಹಿ ಕಾಲದಲ್ಲಿಯೇ ಇತ್ತ ಅವರ ಅಧಿಕಾರಿಗಳು ದೋಣಿಯಲ್ಲಿ ಬಂದದ್ದು ಇಲ್ಲ. ಕೆಲವೊಮ್ಮೆ ಅರಬ್ಬೀ ಸಮುದ್ರದಲ್ಲಿ ಬರುವ ಹಡಗಿನಿಂದ ಕೆಲ ವಿದೇಶಿಯರು, ದೇಶೀಯರು ಕುಶಾಲಿಗೆ ದೋಣಿ ಏರಿ ಇಂತಹ ಕುದುರುಗಳ ಸುತ್ತಲೂ ವಿಹಾರ ಮಾಡಿ ತಾವು ತಂದ ಕಳ್ಳ ಮಾಲನ್ನು ಮಾರಿ ಹೋಗುತ್ತಿದ್ದರಂತೆ. ಸುಮಾರು ಮೂವತ್ತು ಮನೆಗಳಿರುವ ಈ ಪ್ರದೇಶಕ್ಕೆ ಬಂಧುಗಳು, ನೆಂಟರು ಬರುವುದೂ ಅಪರೂಪ. ಹೊರ ಜಗತ್ತಿನ ಸಂಪರ್ಕ ಕಡಿಮೆಯೇ.

ಸುಬ್ಬಪ್ಪಯನವರಿಗೆ ಏಳು ಗಂಡು ಎರಡು ಹೆಣ್ಣು ಒಟ್ಟೂ ಒಂಬತ್ತು ಮಕ್ಕಳು. ಗಂಡುಮಕ್ಕಳಲ್ಲಿ ಬದುಕಿ ಉಳಿದವರು ಮೂವರೇ. ಹಿರಿಯವ ರಘುರಾಮ, ಎರಡನೇಯವ ಸೀತಾರಾಮ ಮೂರನೇಯವ ಅನಂತ ರಾಮ. ಶಾಲಾ ವಿದ್ಯಾಭ್ಯಾಸ ಹೆಚ್ಚಿಲ್ಲದಿದ್ದರೂ ರಘುರಾಮ ಮದುವೆ ಆದಾಕ್ಷಣ ಕೆಲಸ ಹಿಡಿದು ಹೋದದ್ದು ಸಿರ್ಸಿಗೆ. ಅಡಿಕೆಮಂಡಿಯ ಕೆಲಸ. ಈಗ ನಾಲ್ಕು ಮಕ್ಕಳ ತಂದೆ. ಸೀತಾರಾಮ ತನ್ನ ಮದುವೆ ಆಗುವ ತನಕ ಇಲ್ಲೇ ಇದ್ದ. ಮೊದಲ ಮಗು ಹುಟ್ಟಿದ ನಂತರ ದೂರದ ಗೋವಾದಲ್ಲಿ ಹೆಂಡತಿಯ ಅಣ್ಣನ ಸಣ್ಣ ಬಿಸಿನೆಸ್‌ನ ಪಾಲುದಾರನಾಗಿ ಅಲ್ಲೇ ಖಾಯಂ ನೆಲೆಯೂರಿದ. ಅವನಿಗೂ ನಾಲ್ಕು ಮಕ್ಕಳು. ಎಲ್ಲರೂ ಒಟ್ಟಿಗೇ ಇರಬೇಕೆಂದು ಆಸೆಯಿತ್ತು ಸುಬ್ಬಪ್ಪಯ್ಯನವರಿಗೆ. ಇಲ್ಲಿ ಹೆಚ್ಚಿನ ಆದಾಯದ ದಾರಿ ಆಶಾದಾಯಕ ಮಾಡಬಹುದಿತ್ತು. ಆದರೆ ಅವರಿಬ್ಬರ ಹೆಂಡತಿಯರು ಹೊಳೆಬಾಗಿಲಿನ ಸೊಸೆಯಾಗಿ ಬಂದರೂ ಈ ಕುದ್ರುವಿನ ನೀರಸ ಜೀವನದಿಂದ ಹೊರ ಹೋಗುವ ನಿರ್ಧಾರ ಮಾಡಿರಬೇಕು. ಸಂತೋಷ, ತೃಪ್ತಿಯೇ ಜೀವನದ ಸುಖ ಸೂತ್ರ. ಮತ್ತೆ ಉಳಿದವನು ಅನಂತ ರಾಮ. ಅರ್ಥಾತ್ ರಾಮಪ್ಪಯ್ಯ. ಅಪ್ಪ ಅಮ್ಮನ ಮುದ್ದಿನ ಕೊನೆಮಗ. ಗಂಡು ಮಕ್ಕಳ

ಸಂಸಾರ ಬೇರೆ ಬೇರೆಯಾದರೂ ಅವರಲ್ಲಿತ್ತು ಒಗ್ಗಟ್ಟು, ಮಧುರ ಪ್ರೀತಿ. ಪರಸ್ಪರ ನೋವು, ನಲಿವಿನಲ್ಲಿ ಬೆರೆಯುವ ಅನ್ಯೋನ್ಯತೆ. ಹುಡುಗಿಯರಲ್ಲಿ ಉಳಿದವರು ಇಬ್ಬರೇ. ದೊಡ್ಡವಳು ಕಮಲಿಗೆ ಮದುವೆ ಆಗಿದ್ದರೂ ಹಿಂದಿರುಗಿದ್ದಾಳೆ ತಂದೆ ಮನೆಗೆ. ತಂಗಿ ಶಾರದೆ ಮದುವೆಗೆ ಇರುವವಳು.

ರಾಮಪ್ಪಯ್ಯ ಹುಟ್ಟಿದ್ದು ದೇಶಕ್ಕೆ ಸ್ವಾತಂತ್ರ್ಯ ದೊರೆಯುವ ಇಪ್ಪತ್ತು ವರ್ಷಗಳ ಮೊದಲೇ. ಬ್ರಿಟಿಶರ ಆಳ್ವಿಕೆ, ದಬ್ಬಾಳಿಕೆ,ಮೊದಲ ಮಹಾಯುದ್ಧ, ಸ್ವಾತಂತ್ರ್ಯ ಸಮರದ ಬಿಸಿ ಈ ಕೂಪದ ತನಕ ತಲುಪದ ಕಾರಣ ದೇಶದ ರಾಜಕಾರಣವೂ ಇವನ ಅರಿವಿಗೆ ಬಂದದ್ದೇ ಇಲ್ಲ. ಅಣ್ಣಂದಿರೂ ಹಾಗೇ ಇದ್ದವರೇ. ಅವರು ಗೋವಾ, ಸಿರ್ಸಿಗೆ ಹೋದನಂತರ ಇವನ ಸವಾರಿ ಹಲವು ಬಾರಿ ಅಲ್ಲಿಗೆ ಹೋಗಿದೆ. ಆಗೆಲ್ಲ ಹೊಳೆಬಾಗಿಲಿನ ಬದುಕೇ ಬಹು ದೊಡ್ಡದು. ಪ್ರಕೃತಿಯ ಆರಾಧನೆಯೇ ಸರ್ವಶ್ರೇಷ್ಠವೆಂದು ನಂಬಿದವ. ಆದರೆ ಒಮ್ಮೆ ಸಾಸ್ತಾನದಲ್ಲಿ ಬ್ರಿಟಿಶರ ವಿರುದ್ಧ ಸ್ವದೇಶೀ ಆಂದೋಲನ, ಪ್ರತಿಭಟನೆಗೆ ಹೋದಾಗ ಪೋಲೀಸರು ನೂರಾರು ಮಂದಿಯನ್ನು ಬಂಧಿಸಿದ್ದರು. ಆ ಬಂಧಿತರಲ್ಲಿ ಇವನೂ ಒಬ್ಬ. ಆರು ತಿಂಗಳು ಬೆಳಗಾವಿ ಜೈಲ್ ವಾಸ. ಜೈಲಿನಲ್ಲಿ ತನಗಿಂತ ಕಿರಿಯರು ಅದೆಷ್ಟೋ ವಿಷಯ ತಿಳಿದುಕೊಂಡಿದ್ದಾರೆ. ತಾನೊಬ್ಬ ಕೂಪ ಮಂಡೂಕ. ಹೊಳೆಬಾಗಿಲಿನ ಆಚೆ ಹೊರ ಪ್ರಪಂಚ ಕಾಣದಂತೆ ಕಣ್ಣಿಗೆ ಪಟ್ಟಿಕಟ್ಟಿಕೊಂಡು ಅಪ್ಪನ ಜೊತೆ ತಾಳಮದ್ದಳೆ, ಅಮ್ಮನ ಜೊತೆ ಪಗಡೆ ಆಟ, ತಂಗಿಯರ ಜೊತೆ ಇಸ್ಪೀಟು, ಚೆನ್ನೆಮಣೆ ಆಡ್ತಾ ಇದೇ ಪ್ರಪಂಚ ಎಂದುಕೊಂಡವ. ಏನೇ ಆಗಲಿ ಜೈಲಿನಿಂದ ಬಿಡುಗಡೆ ಆದ ನಂತರ ಸಣ್ಣದೋ ದೊಡ್ಡದೋ ಒಂದು ಉದ್ಯೋಗ ಮಾಡಬೇಕು, ಪ್ರಪಂಚ ಅರಿಯಬೇಕೆಂದು ಆಗಲೇ ನಿರ್ಧಾರ ಮಾಡಿದ್ದ. ಜೈಲಿಗೆ ಹೋಗುವ ಎರಡು ವರ್ಷಗಳ ಮೊದಲೇ ಅವನ ಮದುವೆಯಾಗಿತ್ತು ಹತ್ತರ ಬಾಲೆ ಶರಾವತಿಯ ಜೊತೆಯಲ್ಲಿ. ಅವಳು ಮೈ ನೆರೆದ ಮೇಲೆಯೇ ಪ್ರಸ್ತ ಮಾಡಿ ಮನೆ ತುಂಬಿಸಿಕೊಳ್ಳಬೇಕು ಎಂದಿದ್ದರು ಸುಬ್ಬಪ್ಪಯ್ಯನವರು. ಮುಂದೆ ಆರು ತಿಂಗಳಲ್ಲಿ ಶರಾವತಿ ಮನೆ ತುಂಬುವಾಗ ರಾಮಪ್ಪಯ್ಯ ಸಾಸ್ತಾನದಲ್ಲಿ ಸಣ್ಣ ಸಣ್ಣ ಎರಡು ಕಡೆ ಕೆಲಸ ಹಿಡಿದು ಮನಸ್ಸಿಗೆ ಒಪ್ಪದೆ ಕೊನೆಗೆ ಹೆಸರಾಂತ ವಕೀಲರಾದ ಕಾಮತರಲ್ಲಿ ಲೆಖ್ಖ ಬರೆಯುವ ಉದ್ಯೋಗಕ್ಕೆ ಸೇರಿಕೊಂಡಿದ್ದ. ಸಣ್ಣ ಬಾಡಿಗೆ ಕೋಣೆ ಮಾಡಿದ. ವಾರ ಪೂರಾ ಸಾಸ್ತಾನದಲ್ಲಿ. ಶನಿವಾರ ಹೊಳೆಬಾಗಿಲಿಗೆ ಬಂದರೆ ಸೋಮವಾರ ಬೆಳಗಿನ ದೋಣಿಯಲ್ಲಿ ಮರಳಿ ಸಾಸ್ತಾನಕ್ಕೆ.

ಇದಿಷ್ಟು ಹಳೆಕಥೆ.

♣♣♣

ಹೊಳೆ ಬದಿಯ ಬಿದಿರು ಮೆಳೆಗಳ ಆಚೆ ದೊಡ್ಡ ಹಳೆ ಮಾವಿನ ಮರ.

ಹೆಚ್ಚೇನೂ ಎತ್ತರವಿಲ್ಲ. ಅದನ್ನು ಏರಿ ಕುಳಿತಿದ್ದಾರೆ ಇಬ್ಬರು ಮಕ್ಕಳು. ಇಬ್ಬರ ದೃಷ್ಟಿ ಹೊಳೆಯ ಹರಿಯುವ ನೀರಿನ ಮೇಲಿದೆ. ಸಂತೋಷ, ಆತಂಕ ಗಡಿಬಿಡಿಯಲ್ಲಿ ಎಳೆ ಮುಖ ಸಂಜೆ ಬಿಸಿಲಿನಲ್ಲಿ ಹೊಳೆಯುತ್ತಿದೆ. ಮುಗ್ಧ ಚೆಲುವು ಇಡೀ ಪ್ರಕೃತಿಯ ಸೌಂದರ್ಯವನ್ನೇ ಅವರಲ್ಲೇ ತುಂಬಿಸಿ ಇಟ್ಟಿದೆಯೋ ಎನ್ನುವಂತೆ ಸಣ್ಣಗೆ ಅರಳುವ ನಗು ಸಂಜೆ ಮಲ್ಲಿಗೆಯಂತೆ ಅರಳಿಕೊಳ್ಳುತ್ತಿದೆ.

ಆ ಎರಡು ಮಕ್ಕಳೂ ಪ್ರತಿ ಶನಿವಾರ ಮಾವಿನ ಮರದಡಿ ಬರುತ್ತಾರೆ. ಶನಿವಾರವೆಂದರೆ ಇಬ್ಬರಿಗೂ ಖುಷಿ, ಮರದ ಬಳಿ ನಿಲ್ಲುತ್ತಾರೆ. ತಮ್ಮಿಂದ ಸಾಧ್ಯವಾದಷ್ಟು ಎತ್ತರಕ್ಕೆ ಕಾಲು ಚೊಟ್ಟೆ ಮಾಡುತ್ತ ಹತ್ತುತ್ತಾರೆ. ಮೆತ್ತಗೇ! ಮೆಲ್ಲ ಮೆಲ್ಲ! ಅನ್ನುತ್ತ ಹತ್ತುವುದನ್ನು ಕಂಡರೆ ಮರದ ಗೆಲ್ಲುಗಳು ಇವರಿಗಾಗಿಯೇ ಬಾಗಿವೆ ಎನ್ನುವಂತಿವೆ. ಸವುಳಿ, ಗೊದ್ದ ಇದ್ದರೂ ಇರುವೆ, ಜೇಡರ ಬಲೆ ಸಿಕ್ಕರೂ ಎಂತ ಹೆದರಿಕೆನೂ ಇಲ್ಲ. ಈ ದಿನವೂ ಬಂದಿದ್ದಾರೆ. ಮರದಡಿ ಬಿದ್ದ ಒಣ ಎಲೆ, ಕಸಕಡ್ಡಿ, ಚೂರುಪಾರು ಕೈಯ್ಯಿಂದ ಸರಿಸಿ ಮರ ಹತ್ತಿದ್ದಾರೆ ಉತ್ಸಾಹದಲ್ಲಿ. ಆ ಮಕ್ಕಳ ಎಳೆ ಮೋರೆಯಲ್ಲಿ ಸಂಜೆ ಐದರ ಬಿಸಿಲಿನ ರಂಗು ತುಂಬಿ ಅರಳಿದೆ ಸಂಜೆಮಲ್ಲಿಗೆಯಂತೆ. "ಮೇಲೆ ಬರ್ತಾ ಇದ್ದ್ಯಾ ನಾಣಿ?" ಕೇಳುತ್ತಾಳೆ ಮೊದಲು ಮರ ಹತ್ತಿದ ಹುಡುಗಿ. ಅವಳಿನ್ನೂ ಹನ್ನೊಂದರ ಬಾಲೆ. ಹೆಸರು ಗೌರಿ. ಬೆಳ್ಳಗೆ ಗುಂಡು ಗುಂಡು ಶರೀರ.

"ಬಂದೆ ಅಕ್ಕಾ, ಇನ್ನು ನನ್ನ ಕೈಲಿ ಆಗ್ತಿಲ್ಲೆ" ಬಾಗಿದ ಕೆಳಗಿನ ಗೆಲ್ಲಿನ ಮೇಲೆ ಅಂಡು ಊರಿ ಕಾಲುಗಳನ್ನು ಕೆಳಗೆ ಇಳಿಬಿಟ್ಟು ಉಫ್ ಎನ್ನುತ್ತಾನೆ ಹುಡುಗ. ಎಂಟು ವರ್ಷ ಮೀರದ ಅವನೂ ಸಣ್ಣವನೇ. ಗೌರಿಯ ತದ್ರೂಪ. ಹೆಸರು ನಾರಾಯಣ. ಮನೆ ಮಂದಿಯ ಮುದ್ದಿನ ನಾಣಿ. ಚಡ್ಡಿ ಒಂದೇ ಮೈಮೇಲೆ. "ಒಂದು ಬೈರಾಸು ಹೊದ್ದುಕೊಂಡು ಹೋಗೋ" ಆಯಿ ಹೇಳಿದ್ದು ಎಲ್ಲಿ ಕೇಳುತ್ತಾನೆ? ಅವಸರ ಒಂದೇ. ದೋಣಿ ಸಾಸ್ತಾನದಿಂದ ಬೇಗ ಬಂದರೆ ಅದನ್ನು ನೋಡುವುದೇ ಸಂಭ್ರಮ. ಅಲ್ಲಾ, ದೋಣಿಯಿಂದ ಇಳಿಯುವವರನ್ನು?

ಹುಡುಗಿ ಅದಕ್ಕಿಂತ ಮೇಲಿನ ಗೆಲ್ಲಿಗೆ ಆರಾಮದಿಂದ ಮೈ ವರೆಸಿಕೊಳ್ಳುವಾಗ ನಾಣಿ ಕುತ್ತಿಗೆ ಎತ್ತಿ ಕೇಳುತ್ತಾನೆ, "ಅಕ್ಕ ದೋಣಿ ಕಾಣ್ತಾ ಇದ್ದಾ?"

"ಇನ್ನೂ ಇಲ್ಲೆ. ಇಂದು ನಾವು ಬೇಗ ಮನೆಯಿಂದ ಹೊರಟದ್ದು ಅಲ್ಲದಾ? ಸುಮ್ಮನೆ ಕೂತ್ಕೋ"

ಒಂಚೂರು ಬೇಗವೇ ಹೊರಟದ್ದು. ದೋಣಿ ಕಾಣ್ತಾ ಇಲ್ಲ. ಎಲ್ಲಿ ತಡ ಆಯಿತೋ. ಅಕ್ಕ ಹೇಳುವುದು ಬರಿ ಸುಳ್ಳು. ತನಗೆ ಅವಳಿಗಿಂತ ಇನ್ನೂ ಮೇಲೆ ಹತ್ತುವುದು ಸಾಧ್ಯ ಇದ್ದರೆ ಅನ್ನಿಸಿ ಮುಖ ಚಿಕ್ಕದಾಗಿ ಅಳು ಬಂದುಬಿಟ್ಟಿತು. ಕಳೆದವಾರ ಅಪ್ಪಯ್ಯ

ಸಾಸ್ತಾನದಿಂದ ವಿಶ್ವದ ಭೂಪಟ ತಂದಿದ್ದ. ಏಳೆಂಟು ಪುಟಗಳ ಚೆಂದದ ಭೂಪಟ. ಅದರಲ್ಲಿ ಯಾವ ಯಾವ ಊರುಗಳಿವೆ, ಎಲ್ಲಿವೆ ಎಂದು ನೋಡಬಹುದಂತೆ. ವಿಶ್ವಭೂಪಟದಲ್ಲಿ ಊರುಗಳಲ್ಲ, ದೇಶಗಳು ಎಂದಿದ್ದ. ಅಜ್ಜಯ್ಯ. ಸುಶೀಲಾ ಚಿಕ್ಕಿ ನಮ್ಮ ದೇಶ ಯಾವುದೆಂದು ತೋರಿಸಿದ್ದಳು. ಆ ದೇಶದಲ್ಲಿ ಹುಡುಕಿದರೂ ನಮ್ಮ ಹೊಳೆಬಾಗಿಲು ಮನೆ ಕಾಣಲೇ ಇಲ್ಲ. ಎಂತ ಭೂಪಟವೋ. ಬರಿ ಲೊಟ್ಟೆ. ಆಗ ಅಪ್ಪಯ್ಯ ಕರ್ನಾಟಕ ಭೂಪುಟ ತರ್ತೇನೆ ಎಂದಿದ್ದ, ಅದರಲ್ಲಿ ಗಂಗೊಳ್ಳಿ ಹೊಳೆ, ಸೌಪರ್ಣಿಕಾ ನದಿ ಎಲ್ಲಾ ಕಾಣ್ತದಂತೆ. ಹಾಗೆ ಕಂಡರೆ ತಾನು ಇನ್ನೂ ಊಂಚು ಮರ ಏರಿ ಅಕ್ಕನಂತೆ ಹೊಳೆಯನ್ನು ದೂರ ದೂರಕ್ಕೆ ನೋಡಬಹುದು. ಬೇಗ ದೊಡ್ಡವನೂ ಆಗಬೇಕು. ಈ ಮರಕ್ಕಿಂತ ಎತ್ತರೆತ್ತರಕ್ಕೆ ಬೆಳೆಯಬೇಕು.

ಈ ಕಲ್ಪನೆಯಲ್ಲಿ ಮರದ ಎತ್ತರಕ್ಕೂ ಒಮ್ಮೆ ನೋಡಿದ. ಅವರು ಹತ್ತಿದ ಆ ಮಾವಿನಮರ ಸುಬ್ಬಪ್ಪಯ್ಯನವರ ಕಾಲದಿಂದಲೂ ಹೊಳೆ ದಡದಲ್ಲಿ ನಿಂತಿದೆ. ಬೇಸಿಗೆ ಕಾಲದಲ್ಲಿ ಉಪ್ಪಿನಕಾಯಿಗೆ ಯೋಗ್ಯವಾದ ಜೀರಿಗೆ ಪರಿಮಳದ ಸೊನೆ ಮಾವಿನಮಿಡಿಯ ಮರ. ವರ್ಷಕ್ಕೆ ಬೇಕಾಗುವಷ್ಟು ಉಪ್ಪಿನಕಾಯಿಗೆ ಕುಯ್ಯಿಸಿದ ನಂತರವೂ ಅದರ ಹುಳಿ ಸಿಹಿ ಮಿಶ್ರಿತ ಹಣ್ಣುಗಳು ಸಾಕು ಸಾಕೆನಿಸುವಷ್ಟು ಉದುರಿ ಬೀಳುತ್ತಿದ್ದವು. ಕುದ್ರುವಿನ ಆಳುಕಾಳು ಮಕ್ಕಳು ಬೆಳಿಗ್ಗೆಯೇ ದೌಡಾಯಿಸುತ್ತಾರೆ ಹಣ್ಣು ಹೆಕ್ಕಲು. ಆ ಕಾಲ ಕಳೆದ ಮೇಲೆ ಅತ್ತ ನರ ಮನುಷ್ಯರ ಸುಳಿವಿಲ್ಲ. ಕುರುಚಲು ಕಾಡು, ಜೊಂಡು ಬಳ್ಳಿಗಳು, ಉದುರಿದ ಹಳೆ ಗೆಲ್ಲುಗಳು. ಮರದಡಿ ಹೋಗಲೇ ಹೆದರಿಕೆ. ಆದರೆ ಎಲ್ಲ ಕಾಲದಲ್ಲೂ ಆ ಮರದ ತುದಿಗೆ ಏರಿದರೆ ಸುತ್ತಲೂ ಸೌಪರ್ಣಿಕಾ ನದಿ ಗಂಗೊಳ್ಳಿಗೆ ಸೇರಿ ಅದರಿಂದಾಚೆ ಗೆರೆಯಂತೆ ಎಳೆಯಲ್ಪಟ್ಟ ಅರಬ್ಬೀ ಸಮುದ್ರ ಕಾಣಬಹುದು. ಸಂಜೆ ಐದರ ಬಿಸಿಲಿನಲ್ಲಿ ದೂರ ಕ್ಷಿತಿಜದ ಆಚೆ ಕೆಂಪಾಗಿ ಹೊಳೆಯುವ ದುಂಡಗಿನ ಸೂರ್ಯ, ನೀರಿನ ಅಲೆಯುದ್ದಕ್ಕೂ ರಕ್ತಕೆಂಪಿನ ಗಾಢ ನೆರಳು, ಬಿಳಿಯ ಮೋಡಗಳ ಮಾಲೆಯಲ್ಲಿ ಕಪ್ಪು ಕೆಂಪಿನ ರಂಗೋಲಿ ಬರೆದಂತೆ ಹಾರುವ ಬೆಳ್ಳಕ್ಕಿ ಸಾಲುಗಳು, ವಿವಿಧ ಹಕ್ಕಿ ಪಕ್ಕಿಗಳು ರೆಕ್ಕೆ ಬಿಡಿಸಿ ತಮ್ಮ ಗುರಿಯತ್ತ ಹಾರುವ ಧಾವಂತ. ಅದೋ ಹೊಳೆಯಲ್ಲಿ ತೇಲಿ ಬರುವ ಹಾಯಿ ದೋಣಿಗಳು. ರಸ್ತೆಗಳಿಲ್ಲದ ಕಡೆ ಜನರನ್ನು ಅವರವರ ಹೊಳೆ ದಡಕ್ಕೆ ಮುಟ್ಟಿಸುವ ದೋಣಿಗಳು. ನೀರಿನಲ್ಲಿ ಚಪ್ ಚಪ್ ಸದ್ದಿನ ಜೊತೆಗೆ ಬೀಸುವ ತಂಗಾಳಿ. ನೋಡುವುದೇ ಖುಷಿ.

ಇದೇ ಕನಸಿನಲ್ಲಿ ಇದ್ದಾಗಲೇ ಮರದ ಕೆಳಗೆ ಚುರ್ ಚುರ್ ಸದ್ದು. ಕೆಳಗೆ ಬಾಗಿದ ನಾಣಿ ಉದ್ಘರಿಸಿದ. "ಅಕ್ಕಾ, ಅಲ್ನೋಡೆ ಟುಣು ಟುಣು ಓಡ್ತಾ ಇವೆ ಎರಡು ಬಿಳಿ ಮೊಲಗಳು! ಕೆಳಗಿಳಿದು ಹೋಗಿ ಹಿಡಿಯಲಾ?"

ಗೌರಿ ಕಣ್ಣು ಪೂರಾ ಇವನ ಮೇಲೆ. ನಿನ್ನೆ ಮೊನ್ನೆ ಇದ್ದ ಚೋಟುದ್ದದ ಮಗು ಎಷ್ಟು ಬೇಗ ದೊಡ್ಡವನಾದ? ಅವನ ಕುತೂಹಲದ ಕಣ್ಣಿಗೆ ಕಂಡದ್ದೆಲ್ಲ ಬೇಕು. ಮೊಲಗಳು ಓಡುತ್ತಿವೆ ಹೌದು. ಅವನ್ನು ಹಿಡಿಯುವುದು ಸಾಧ್ಯವಾ? ಕೆಲ ಸಮಯದ ಹಿಂದೆ ತಾನು ಅವನೂ ಗದ್ದೆ ಹುಣಿಯಲ್ಲಿ ಒಂದು ಮೊಲವನ್ನು ಬೆಳಗಿನಿಂದ ಅಟ್ಟಾಡಿಸಿ ಹಿಡಿಯಲು ಓಡಿದ್ದೇ ಓಡಿದ್ದು. ಕಳ್ಳ ಜಾತೀದು. ಕೈಗೆ ಸಿಕ್ಕಿತು ಎನ್ನುವಾಗ ಭಲ್ಲೆಯಲ್ಲಿ ನುಗ್ಗಿ ಮಂಗಮಾಯ. ಆಯಾಸದಿಂದ ಅತ್ತದ್ದು ತಾನು, ಪುಟ್ಟ ತಮ್ಮ, "ಅಳಬೇಡ ಅಕ್ಕ, ಇನ್ನೊಂದು ದಿನ ನಾನೇ ಹಿಡಿದುಕೊಡ್ತೆ." ಹಿಡಿದು ಪಂಜರದಲ್ಲಿ ಸಾಕುವ ಉಮೇದು ತಮಗೆ. ಅಪ್ಪಯ್ಯ, "ನಮ್ಮ ಸಣ್ಣ ಕಾಡಿನಲ್ಲಿ ಅವು ಸ್ವಚ್ಚಂದವಾಗಿ ಓಡಿಯಾಡ್ತಾ ಇರಲಿ. ನಮಗೂ ಖುಷಿ. ನಿಮ್ಮನ್ನು ಹೀಗೆ ಕಟ್ಟಿ ಹಾಕಲಾ?" ಕೇಳಿದ್ದ. ಒಮ್ಮೆ ಒಂದು ಮೊಲ ಪಾರಿಜಾತ ಮರದ ಕೆಳಗೆ ಹೇಗೋ ಕೈಗೆ ಸಿಕ್ಕಿಬಿಟ್ಟಿತ್ತು. ಅದನ್ನು ಹಿಡಿದು ಮನೆ ಅಂಗಳಕ್ಕೆ ತಂದಾಗ ನಾಯಿ ಮೋತಿ ನಮ್ಮ ಮೈಮೇಲೆ ಹಾರಿ ಅದು ಕೈಯ್ಯಿಂದ ಜಾರಿ, ಬಚ್ಚಲು ಸಂದಿಗೆ ಓಡಿ ಗುಡ್ಡೆ ಬದಿಗೆ ಕಾಣದಾಗಿ ಅಮ್ಮಮ್ಮೋ! ಮೋತಿ ಮೇಲೆ ತಮಗೆ ಸಿಟ್ಟು ಬಂದಿತ್ತು. ಕೆಟ್ಟ ನಾಯಿ. ಹೊಡೆವಷ್ಟು ಸಿಟ್ಟು ಮಾಡಿದ್ದೆವಲ್ಲ. ತ್ಸೂ, ಆಗ ಅಜ್ಜಮ್ಮ ಸಮಾಧಾನದಲ್ಲಿ, "ಪ್ರಕೃತಿಯಲ್ಲಿ ಒಂದಕ್ಕೊಂದು ವೈರಿಗಳು. ಹಾವು ಮುಂಗುಸಿಯಂತೆ ಕಚ್ಚಾಟ. ಕೆಲ ಸಮಯ. ಜೊತೆಗಿದ್ದರೆ ಅವು ಒಪ್ಪಕ್ಕಗಳೇ!" ಎನ್ನಲಿಲ್ಲವೇ?

"ಹೋಗ್ಲಿ ಬಿಡೋ, ಹೊಳೆ ಸುಮ್ಮನೆ ಹರೀತಾ ಇದೆ. ಪೇರಳೆ ಹಣ್ಣು ತಿಂತೀಯಾ?"

ದಾರಿಯಲ್ಲಿ ಬರುವಾಗಲೇ ಮುರುಗಲ ಗಿಡದ ಬದಿಗೆ ಬೆಳೆದು ನಿಂತ ಪೇರಳೆ ಗಿಡದ ಕೆಳಗೆ ಕೆಲವು ಬೆಳೆದ ಹಣ್ಣುಗಳು ಬಿದ್ದಿದ್ದವು. ಅವನ್ನು ಹೆಕ್ಕುವಾಗ, "ನೀನೂ ಒಂದೆರಡು ಹೆಕ್ಕಿ ಚಡ್ಡಿ ಕಿಸೆಗೆ ಹಾಕಿಕೋ ನಾಣಿ. ಮರದ ಮೇಲೆಕೂತು ತಿನ್ನಲಕ್ಕು" ಎಂದಿದ್ದಳು. ನಾಣಿ ಉಡಾಫೆ ಮಾಡಿದ್ದ. ಈಗ ನೋಡಿದರೆ ಒಂದೇ ಹಣ್ಣಿದೆ ಅವಳ ಬಳಿ. ಉಳಿದದ್ದು ಮರದ ಕೆಳಗಿದೆ ಕಾಬಾಳೆ ಎಲೆಯಲ್ಲಿ. ತನ್ನದು ಎಂಜಲು ಹಣ್ಣು. ಭಾಗ ಮಾಡುವುದು ಹೇಗೆ? "ಗುಬ್ಬಿ ಎಂಜಲು ಅರ್ಧ ಮಾಡಿಕೊಡಲಾ?" ಕೇಳಿದಳು. ಅವಳುಟ್ಟ ಉದ್ದದ ಪರಕಾರದ [ಉದ್ದ ಲಂಗ]. ತುದಿಗೆ ಎಂಜಲು ಮಾಡದ ಭಾಗ ಇಟ್ಟು ಹಲ್ಲಿನಿಂದ ಕಚ್ಚಿ ಎರಡು ಭಾಗ ಮಾಡಿ ದೊಡ್ಡ ತುಂಡನ್ನು ಅವನು ಮೇಲೆ ನೀಡಿದ ಕೈಗೆ ಬೀಳುವಂತೆ ಎಸೆದಳು. ಎಸೆದುದನ್ನು ಕೆಳಗೆ ಬೀಳದಂತೆ ಹಿಡಿಯುವ ಕಲೆಯಲ್ಲಿ ನಾಣಿ ನಿಸ್ಸೀಮ.

"ನೀನು ಒಳ್ಳೆಯವಳು ಅಕ್ಕಾ"ಮುಖ ಅರಳಿಸಿ ಹಣ್ಣು ತಿನ್ನುತ್ತ ಮರದ ಗೆಲ್ಲಿನಲ್ಲಿ ಇಳಿಬಿಟ್ಟ ಕಾಲುಗಳನ್ನು ಆಚೀಚೆ ತಿರುಗಿಸಿದ. ಅವನ ಎಡ ಪಾದದ ಮೇಲೆ ಇನ್ನೂ ಸುಡುಮಣ್ಣಿನ ಬೂದಿಗೆ ಬಿದ್ದು ಬೆಂದು ಕಪ್ಪಗಾದ ಮಾಸದ ಕಲೆ ನೋಡಿದರೆ ಗೌರಿಗೆ

ಸಂಕಟ. ಅಯ್ಯೋ, ಗೆಣಸು ಬೆಂದು ಹೋದಂತೆ ಹೇಗೆ ಬೆಂದು ಬಿಟ್ಟಿತ್ತು ಆ ಪುಟ್ಟ ಪಾದ? ಈಗ್ಗೆ ಎಷ್ಟೋ ಸಮಯದ ಹಿಂದೆ, ವಾರ ದಿನದ ಲೆಕ್ಕ ತಿಳಿಯದು. ಪ್ರತಿದಿನ ಅಜ್ಜಯ್ಯ ಮನಸ್ಸಿಗೆ ತಾಕುವಂತೆ ರಾಮಾಯಣದ ಲವಕುಶರ ಕಥೆ ಹೇಳುತ್ತಿದ್ದರು. ಅದರ ಪ್ರಭಾವ. ನಾಣಿಗೂ ಬಿಲ್ಲುಬಾಣ ಬಿಡುವ ಉಮೇದು. ಸರಿ, ಕೆಲಸದ ಲಿಂಗಪ್ಪ ಬಿದಿರಿನ ಬಿಲ್ಲುಬಾಣ ಮಾಡಿಕೊಟ್ಟದ್ದೇ ಬಾಳೆಸಸಿ, ದಾಸವಾಳದ ಗಿಡ, ಮರ, ಬಾಗಿಲು ಗೋಡೆ ಕೇಳಬೇಕೇ? ವೀರಾವೇಶದಲ್ಲಿ ಬಾಣ ಬಿಟ್ಟದ್ದೇ ಬಿಟ್ಟದ್ದು. ಒಂದು ದಿನ ಬಿಲ್ಲಿಗೆ ಬಾಣ ಹೂಡಿ ಆಡುತ್ತ ಆಡುತ್ತ ಗುಡ್ಡೆಯಲ್ಲಿ ಕಸಕಡ್ಡಿ ಪೇರಿಸಿಟ್ಟ ಬೆಂಕಿ ಕೊಟ್ಟ ಸುಡುಮಣ್ಣು ರಾಶಿಯ ಬೂದಿ ಮೇಲೆ ಇವನು ಹಾರಿ, ಎಡ ಕಾಲು ಸುಡುಮಣ್ಣಿನ ಒಳಗೆ ಕಾಣದ ಕೆಂಡಕ್ಕೆ ಬಿದ್ದು, ಅಯ್ಯಮ್ಮೋ, ಪಾದ ಬೆಂದು, ಒಂದೆರಡು ದಿನವಲ್ಲ ವಾರಗಟ್ಟಲೆ ನಾಣಿ ನಿತ್ರಾಣಿಯಾಗಿ ಮಲಗಿದ್ದ. ದೊಡ್ಡ ಹೆಂಗಸಿನಂತೆ ಗೌರಿ ಆರೈಕೆ ಮಾಡಿದ್ದಳು. "ನನ್ನ ತಮ್ಮನನ್ನು ಬದುಕಿಸಿಕೊಡು ದೇವರೇ!"ಹಲುಬಿ ಬೇಡಿದ್ದು ಎಷ್ಟು ಬಾರಿಯೋ? ಜೀವರಸ ಹಿಂಡಿದಂತೆ ಅವಳು ಏನನ್ನೂ ಮರೆತಿಲ್ಲ. ಸುಟ್ಟ ಗಾಯ ಕಡಿಮೆಯಾದರೂ ಕಲೆ ಉಳಿದಿದೆ ಹಾಗೇ. ತುಂಟ ವಾಮನ ಮೂರ್ತಿ. ಅವನ ಚೇಷ್ಟೆಗೆ ಆಯಿ ಗದರುವುದು ಬಿಟ್ಟಿಲ್ಲ. ಮತ್ತೊಂದು ದಿನ, ನೆತ್ತಿಗೇರಿದ ಬಿಸಿಲು ಧಗೆಗೆ ಬಾಯಿತುಂಬ ಮಣ್ಣು ತುಂಬಿಕೊಂಡು ಅಕ್ಕನ ಹತ್ತಿರ ಬಂದಾಗ ಅವಳು ಅವನ ಕಿವಿ ಹಿಡಿದು ಆಯಿ ಬಳಿ ದೂರು ತಂದಿದ್ದಳು. ಆಗ,

"ಹೋ! ದೋಣಿ ದೋಣಿ ಬರ್ತಾ ಇದೆ. ಈ ಬದಿಗೆ, ನಮ್ಮದೇ ತೀರಕ್ಕೆ, ನಾಣಿ, ಕೆಳಗಿಳಿ" ಗೌರಿ ಪೇರಳೆ ತಿಂದ ಬಾಯಿ ಒರಸಿಕೊಳ್ಳುತ್ತ ಕೈಯ್ಯನ್ನು ಇನ್ನೊಂದು ಗೆಲ್ಲಿಗೆ ಒತ್ತಿ ಕಾಲನ್ನು ಮಡಚಿ ಕೆಳಗೆ ಬಗ್ಗಿ ನಾಣಿಯ ಹಿಂದೆಯೇ ಸರಸರ ಮರ ಇಳಿದಳು. ಇಬ್ಬರೂ ಓಡಿದರು ಹೊಳೆ ತೀರಕ್ಕೆ. ಆಗಲೇ ದೋಣಿ ಒಬ್ಬನನ್ನು ಇಳಿಸಿ ಮತ್ತೆ ಎಡಕ್ಕೆ ತಿರುಗಿ ಹೊಳೆಯಲ್ಲಿ ಮುಂದೆ ಸಾಗಿತು. ದೋಣಿಯಲ್ಲಿ ಬೇರೆ ದಿಕ್ಕಿಗೆ ಹೋಗುವ ಇನ್ನೂ ಕೆಲವರಿದ್ದರು. ಅವರು ಯಾರಿದ್ದರೆ ಎಂತಾ? ಎತ್ತ ಹೋದರೇನು? ದೋಣಿ ಇಳಿದು ನೀರಿನಲ್ಲಿ ದಡ ಏರಿದವನನ್ನು ಕೊಕ್ಕರೆಯ ಗುಂಪು ಬುರ್ರನೆ ಹಾರಿ ಹೋದಂತೆ ಓಡಿಬಂದ ಮಕ್ಕಳಿಬ್ಬರೂ ಬಿಗಿಯಾಗಿ ತಬ್ಬಿಕೊಂಡರು, "ಅಪ್ಪಯ್ಯಾ!"

❋❋❋

## ಅಧ್ಯಾಯ-2

ಒಂದು ವಾರ! ಅದೆಷ್ಟು ದೀರ್ಘ ಅವಧಿ! ವಿಷಯಗಳ ಮಹಾಪೂರ ಗೌರಿ,

ನಾಣಿಯ ಬಾಯಲ್ಲಿ. ನಾ ಮುಂದು, ತಾ ಮುಂದು ಎನ್ನುತ್ತ ಮನೆ ಒಳಗೆ ನಡೆದದ್ದು, ಕೆಲಸದವರ ಸಂಗತಿ, ಮೇಯಲು ಬಿಟ್ಟ ದನಗಳಲ್ಲಿ ಒಂದು ಸಂಜೆ ತನಕ ಬಾರದೆ ಅಜ್ಜಯ್ಯ,ಮೋತಿನಾಯಿ, ಲಿಂಗಣ್ಣ ಹೊಳೆ ಬದಿಗೆಲ್ಲ ಹುಡುಕಿ ಕರೆ ತಂದದ್ದು, ಬೆಕ್ಕು ಮೂರು ಮರಿ ಹಾಕಿದ್ದು, ಆ ತಾಯಿ ಬೆಕ್ಕು ತನ್ನದೇ ಒಂದು ಮರಿಯನ್ನು ತಿಂದದ್ದು, ನಾಣಿ ಸಿಟ್ಟಿನಲ್ಲಿ ತಾಯಿ ಬೆಕ್ಕನ್ನು ಹೊಳೆಗೆ ಹಾಕಲು ಹೊರಟಾಗ ಆಯಿ. ಅಜ್ಜಮ್ಮ ತಡೆದದ್ದು,ಹೊಸದಾಗಿ ನೆಟ್ಟ ಗುಲಾಬಿ ಗಿಡದಲ್ಲಿ ಕೆಂಪು ಗುಲಾಬಿ ಅರಳಿದ್ದು ಹೀಗೆ ಮುಗಿಯದಷ್ಟು ಸುದ್ದಿಗಳು. ಎಲ್ಲಾ ವರದಿ ಮಾಡುತ್ತ ಅಪ್ಪಯ್ಯನ ತಲೆಚಿಟ್ಟು ಹಿಡಿಸುವ ಹೊತ್ತಿಗೆ ಶಾರದತ್ತೆಗೆ ಕೊಖ್ ಕೊಖ್ ನಗು. ಅಜ್ಜಮ್ಮನೂ ಸೆರಗಿನಿಂದ ಬಾಯಿ ಮುಚ್ಚಿ, "ಮಕ್ಕಳು ಬೆಲ್ಲದ ಅಕ್ರೋಟ್ ಮಾಡಿ ಅದು ಅಡಿ ಹಿಡಿದು ಅಜೀರ್ಣ ಆಗುವಷ್ಟು ತಿಂದು ಹೊರಕಡೆ ಶುರುವಾದದ್ದು ಹೇಳಲಿಲ್ಲ" ಎಂದು ಮುಸಿ ಮುಸಿ ನಗುತ್ತ, "ಎರಡು ದಿನ ಊಟಕ್ಕೆ ಚೆನ್ನಾಗಿ ಬೇಯಿಸಿದ ಹುರಿದ ಅಕ್ಕಿ ಗಂಜಿಗೆ ಕಂಚಿಸಟ್ಟಿನ ಚಪ್ಪೆ ಉಪ್ಪಿನಕಾಯಿ ಕೊಟ್ಟೆ. ಸರಿ ಹೋಯ್ತು ಹೊಟ್ಟೆ" ಎಂದಳು.

ತನ್ನದೇ ಮೊಮ್ಮಕ್ಕಳಾದರೂ ಕ್ಷುಲ್ಲಕ ಸಂಗತಿಗೆ ದೂರು ಹೇಳುವುದರಲ್ಲಿ ಅಜ್ಜಮ್ಮ ನಂಬರ್ ಒಂದು. ನಾವೇನು ಬೇಕೆಂದೇ ಅಡಿ ಹಿಡಿಸಿದ್ದಲ್ಲ. ಆಯಿ ಹದ ನೋಡಿ ಹೇಳಿದ್ದರೂ ಎಂತದೋ ಆಯ್ತು. ಅದೇನು ಮಹಾ ತಪ್ಪಾ? ಆಗ ಅಜ್ಜಮ್ಮ ಚಪ್ಪರಿಸಿ ತಾನೂ ಅಕ್ರೋಟ ಜಾಸ್ತಿ ತಿಂದು ಈಗ ಅಪ್ಪಯ್ಯನಿಗೆ ಹೀಗಾ ದೂರು ಕೊಡುವುದು? ಚಾಡಿ ಮಾತು ಎಂತಕ್ಕೆ? ಗೌರಿ ತಮ್ಮನ ಕಿವಿಯಲ್ಲಿ ಪಿಸುಗುಟ್ಟಿ, "ನಾವು ಅಜ್ಜಮ್ಮನಿಗೆ ಥೂ!"ಎರಡು ಬೆರಳನ್ನು ತುಟಿಗಿಟ್ಟು ಥೂ ಮಾಡಿದಳು. ನಾಣಿಯೂ ಥೂ ಎಂದ. ಮಕ್ಕಳಾದರೂ ದೊಡ್ಡವರು ತಮ್ಮದೇ ಸಮಪ್ರಾಯ ಎಂದವರ ಊಹೆ. "ಅಜ್ಜಮ್ಮನಿಗೆ ತಮ್ಮನ್ನು ಕಂಡರೆ ಒಂಚೂರು ತಾತ್ಸಾರ ಅಲ್ಲದಾ? ಮತ್ತೆ ಚಕ್ರಿ ಅಮ್ಮಮ್ಮನ ಕಾಣು. ನಾವೆಂತ ಮಾಡಿದ್ರೂ ಯಾರ ಹತ್ರಾನೂ ಚಾಡಿ ಮಾತು ಊಹೂಂ. ಹಾಂಗೇ ಇರಬೇಕಲ್ದ?" ಗೌರಿ ತಮ್ಮನ ಕಿವಿಯಲ್ಲಿ ಪಿಸುಗುಟ್ಟಿದಳು.

ಚಕ್ರಿ ಅಮ್ಮಮ್ಮ ಶರಾವತಿಯ ತಾಯಿ. ಆ ಅಮ್ಮಮ್ಮನ ಪರ ಮಕ್ಕಳು ವಹಿಸಿ ಮಾತನಾಡುವುದು ಅಜ್ಜಮ್ಮನಿಗೆ ತಿಳಿದ ಸಂಗತಿಯೇ. ಆದರೂ? ಮಕ್ಕಳನ್ನು ತಬ್ಬಿಕೊಂಡ ಅಪ್ಪಯ್ಯನಿಗೆ ನಗುವೋ ನಗು., "ದೊಡ್ಡವರು ಚಾಡಿ ಹೇಳಿದರೂ ಅದರಲ್ಲಿ ಒಳ್ಳೆತನ ಇರುತ್ತದಲ್ಲ ಗೌರಿ. ಪ್ರೀತಿ ಇದ್ದಲ್ಲಿ ಬುದ್ಧಿ ಮಾತು. ಅಜ್ಜಮ್ಮನಿಗೆ ನೀವಲ್ಲದೆ ಮುದ್ದು ಮಾಡಲು ಇನ್ಯಾರಿದ್ದೋ? ಕೆಟ್ಟ ಯೋಚ್ನೆ ಬಾರದಂತೆ ನಿಮ್ಮಲ್ಲೇ ತಪ್ಪಾಯ್ತು ಅನ್ನಿ."

ಹೊಳೆಬಾಗಿಲು ಆ ಊರ ಹೆಸರು. ಆ ಮನೆಯ ಹೆಸರು ಹೌದು. ಹಳೆ ಮಾದರಿಯ ನಾಲ್ಕು ಕೋಣೆ, ಮುಖಮಂಟಪ, ಉದ್ದದ ಊಟದ ಮನೆ, ಹಿಂದೆ

ಅಡಿಗೆ ಕೋಣೆ, ಇವುಗಳ ಮೇಲೆ ಮಾಳಿಗೆ, ಮರದ ಏಣಿ ಹತ್ತಿಳಿಯಲು, ಅಲ್ಲೇ ಸಾಮಾನು ಸರಂಜಾಮು ಇಡುವ ಅಟ್ಟ, ಅನುಕೂಲಕ್ಕೆ ತಕ್ಕಂತೆ ಕಟ್ಟಿಸಿದ ಹಿಂಬದಿಯ ಕೋಣೆಗಳು. ಹೊಳೆ ಬದಿಯ ಭದ್ರತೆಗೆ ತಳಪಾಯ ಮತ್ತು ಎಂಟಡಿ ಎತ್ತರ ಕಲ್ಲು ಕಟ್ಟಿದ ಗಟ್ಟಿಮುಟ್ಟಾದ ಮನೆ. ಎದುರಿಗೆ ಮುಖ ಮಂಟಪ, ಅದರಾಚೆ ದೂರದಲ್ಲಿ ಹರಿಯುವ ಸೌಪರ್ಣಿಕಾ ನದಿ. ಹಿಂಭಾಗದಲ್ಲಿ ಅಡಿಗೆ ಕೋಣೆ, ಬಚ್ಚಲು ಮನೆ, ದನದ ಕೊಟ್ಟಿಗೆ.ರಾತ್ರೆ ಆ ಮನೆಗೆ ಚಿಮಣಿ ಎಣ್ಣೆಯದೇ ದೀಪಗಳು. ಉದ್ದದ ಜಗಲಿಯಂತೆ ಇರುವ ಸಣ್ಣ ಮಹಡಿಯಿದೆ. ಕೆಳಗಿನ ಉದ್ದದ ಹೊರ ಜಗಲಿಯಿಂದ ಮಹಡಿಗೆ ಹೋಗಲು ಮರದ ಏಣಿ. ಇದು ಹಳೆ ಸಾಮಾನು ಸರಂಜಾಮು, ಪಾತ್ರೆ ಪಗಡಿ, ತೆಂಗಿನಕಾಯಿರಾಶಿ, ಉಪ್ಪಿನಕಾಯಿ, ಹಪ್ಪಳ, ಬೆಲ್ಲ ಇತ್ಯಾದಿ ಆಹಾರ ವಸ್ತು ಇಡುವ ಬೆಚ್ಚಗಿನ ಜಾಗ. ಸುಶೀಲಚಿಕ್ಕಿ ಈ ಮನೆಗೆ ಬಂದ ಲಾಗಾಯ್ತು ಮಹಡಿ ಮೂಲೆಯೇ ಅವಳ ವಾಸದ ಸ್ಥಾನ. ಸುಬ್ಬಪ್ಪಯ್ಯ ಎಷ್ಟು ಹೇಳಿದರೂ ರಾತ್ರೆ ಹಗಲು ಬೆಕ್ಕಿನ ಬಿಡಾರ ಬೇರೆಯೇ. ಕೆಳಗೆ ಅಪ್ಪಯ್ಯನ ಮಲಗುವ ಕೋಣೆ ದೊಡ್ಡದು. ಅದರ ಮಧ್ಯ ಬಟ್ಟೆ ಪರದೆ. ಒಂದು ಭಾಗದಲ್ಲಿ ಅಪ್ಪಯ್ಯ, ಆಯಿ. ಇನ್ನೊಂದು ಭಾಗದಲ್ಲಿ ಗೌರಿ, ನಾಣಿ. ಅಪ್ಪಯ್ಯ ಸಾಸ್ತಾನಕ್ಕೆ ಹೋದ ದಿನಗಳಲ್ಲಿ ಅರ್ಧ ಕಟ್ಟಿದ ಪರದೆ ಸರಿಸಿ ಮಕ್ಕಳು ಆಯಿಯ ಹಾಸಿಗೆಯಲ್ಲಿ ತೂರಿಕೊಳ್ಳುತ್ತವೆ. ಆಚೆಗೊಬ್ಬರು, ಈಚೆಗೊಬ್ಬರು. ಸ್ವರ್ಗೀಯ ಸುಖ! ಗೌರಿ ನಾಣಿ ನಿದ್ದೆ ಬರುವ ತನಕ ಮಾತು ಮಾತು, ಆಯಿ ಗದರಬೇಕು. "ಹೋಗಿ ಹೊರಗೆ, ಅಜ್ಜಯ್ಯನ ಮಗ್ಗಲಿಗೆ"

ಸುಬ್ಬಪ್ಪಯನವರಿಗೆ ಹಗಲು ಹೊತ್ತು ಮಕ್ಕಳ ಸಾಮಿಪ್ಯ ಆಪ್ಯಾಯಮಾನ. ರಾತ್ರೆ ಹತ್ತಿರ ಬರಬಾರದು. "ನಿಮ್ಮ ಜಾಗದಲ್ಲಿ ಬಿದ್ದುಕೊಳ್ಳಿ" ಅಟ್ಟುತ್ತಾರೆ. ಬಿದ್ದು ಕೊಳ್ಳಿ ಅವರ ಎದುರಿನ ಕೋಣೆ ಶಾರದತ್ತೆ, ಕಮಲತ್ತೆಯದು. ಅವರ ನಿದ್ರೆಯ ಸಹವಾಸ ಗೌರಿಗೆ ದೂರವೇ. ಅದೇನು ಹರಟೆಯೋ ತಡ ರಾತ್ರೆವರೆಗೆ. ಅಳು ನಗು ಒತ್ತರಿಸುವ ಜೊತೆಗೆ ಈ ಕಮಲತ್ತೆಗೆ ಹಲ್ಲು ಜಗಿಯುವ ರೋಗ. ಕರಕಟ, ಕರಕಟ ಸಪ್ಪಳ ಅಪ್ಪಳಿಸುತ್ತದೆ ಕಿವಿಗೆ. ಒಮ್ಮೆ ಗೌರಿ ಅವಳ ಬಾಯಿಗೆ ಬಟ್ಟೆ ತುರುಕಿದ್ದು, ಅವಳ ಉಸಿರುಗಟ್ಟಿದ್ದು, ನಿದ್ದೆಗಣ್ಣಿನಲ್ಲಿ ಎದ್ದ ಕಮಲತ್ತೆ ಗೌರಿಯನ್ನು ಹೊಡೆದದ್ದು, ಬೇಡಪ್ಪ ನಿನ್ನ ತಂಟೆ ಎಂದು ತಮ್ಮನೊಂದಿಗೆ ಗುಬ್ಬಚ್ಚಿಯಂತೆ ಮುದುರಿ ಮಲಗುತ್ತಾಳೆ. ಅಪ್ಪಯ್ಯನ ಪರದೆಯಾಚೆ ಬದಿಯಲ್ಲಿದೆ. ಈ ದಿನವೂ ಹಾಸಿಗೆ ಒದರಿ ಹಾಕಿಕೊಳ್ಳುವ ಹೊತ್ತಿನ್ಲಿ ದೀಪ ಬೆಳಗುತ್ತಿದ್ದ ಮುಖಮಂಟಪದಲ್ಲಿ ಹಿರಿಯರ ಪಿಸು ಮಾತುಗಳು. ಗ... ವಿಷಯ. ಗೌರಿಯ ಕಿವಿ ನಿಮಿರಿತು. ಅಪ್ಪಯ್ಯ ಹೇಳುತ್ತಿದ್ದ,

"ನಾಳೆ ಬೆಳಿಗ್ಗೆ ಸಾಸ್ತಾನದಿಂದ ಕಮ್ತಿಯವರ ಗೆಳೆಯ ಮತ್ತು ಅವರ ಮಗ

ಶಾರದೆಯನ್ನು ನೋಡ್ಲಿಕ್ಕೆ ಬರ್ತಾ ಇದ್ದೋ. ಒಂದು ಸಿಹಿ, ಒಂದು ಖಾರದ ತಿಂಡಿ ಮಾಡಿ. ಶಾರದೆ ತಯಾರಾಗಿರಲಿ"

ಶಾರದತ್ತೆ ಗೋಣಗಿದಳು. ಅಪ್ಪಯ್ಯ ತನ್ನ ಮೂರು ಬೆರಳೆತ್ತಿದ, "ಇವ ಮೂರನೇಯವ. ಮೂರಕ್ಕೆ ಮುಕ್ತಾಯ!"

"ಮೂರಕ್ಕೆ ಮುಕ್ಕ ಆದ್ರೆ ಮತ್ತೆ ಮದಿ ಇಲ್ಲೆ ಅಣ್ಣಯ್ಯ, ನನಗೆ ಸಾಕಾಯ್ತು"

"ಅಪದ್ದ ಹೇಳ್ಬೇಡ ಶಾರು. ಹುಡುಗ ಶ್ರೀಮಂತ. ತೋಟ, ಗದ್ದೆ, ಕರಾವು ಸಂಪತ್ತು ಇದ್ದವ. ಓದಿದವ. ಹಳ್ಳಿ ಹುಡುಗಿಯೇ ಆಯೆಕ್ಕಂತೆ." ಇನ್ನೂ ಏನೇನೋ ಅಸ್ಪಷ್ಟ ಮಾತುಗಳು.

ಗೌರಿ ತಮ್ಮನ ಹಾಸಿಗೆ ಬದಿಗೆ ಸರಿದಳು, "ನಾಣಿ, ನಾಳೆ ಶಾರದತ್ತೆನ್ನ ನೋಡಲು ಇನ್ನೊಬ್ಬರು ಬರ್ತಾ ಇದ್ದವು. ಖಾರ, ಸಿಹಿತಿಂಡಿ. ಗಮ್ಮತ್ತು ಇದ್ದು. ಕೇಳ್ತಾ, ನಾಳೆ ಬೇಗ ಏಳೆಕ್ಕು"

ನಾಣಿಗೆ ಸಂಜೆಗತ್ತಲಲ್ಲಿ ಅಪ್ಪಯ್ಯ ತಂದ ಕರ್ನಾಟಕ ಭೂಪಟದಲ್ಲಿ ಸಾಸಿವೆ ಗಾತ್ರದ ಅಕ್ಷರಗಳಲ್ಲಿ ಗಂಗೊಳ್ಳಿ ಹೊಳೆ, ಹೊಳೆಬಾಗಿಲು ಎಲ್ಲಿದ್ದವೋ ಅಪ್ಪಯ್ಯ ತೋರಿಸಿದರೂ ಅಸ್ಪಷ್ಟ. ತಿಳಿದುಕೊಳ್ಳಲು ಆಗಲೇ ಇಲ್ಲ. ಸುಶೀಲ ಚಿಕ್ಕಿಗೂ ಹಾಗೇ ಆಗಿತ್ತು. ನಾಳೆ ಬೆಳಿಗ್ಗೆ ಮೊದಲು ಮಾಡುವ ಕೆಲಸ, ಮುಖಮಂಟಪದಲ್ಲಿ ಭೂಪಟ ಬಿಡಿಸಿ ನೋಡುವುದು. ಆ ಗುಂಗಿನಲ್ಲಿ ಕನಸಿನ ರಾಜ್ಯಕ್ಕೆ ಹೋಗಿದ್ದ ಈ ಹುಡುಗನಿಗೆ ಅಕ್ಕನ ಧ್ವನಿ ಕೇಳಿಸಲಿಲ್ಲ.

ಅದೇನೋ ಗೌರಿಗೆ ಕೆಲವೊಮ್ಮೆ ನಿದ್ರೆ ಬರುವುದೇ ಇಲ್ಲ. ಆವತ್ತು ಒಂದು ದಿನ ಮನೆಯಲ್ಲಾದ ಸನ್ನಿವೇಶ ನೆನಪಾಗುತ್ತದೆ. ಹಾಗೇ ಅಟ್ಟದ ಮೇಲೆ ಕೊಳತಪ್ಪಲೆಗಳು, ಪಾತ್ರೆಗಳು ಉರುಳಿದಂತೆ ಧಡಭಡ ಸದ್ದು. ಕೊಟ್ಟಿಗೆಯಿಂದ ಮರಮುಟ್ಟುಗಳ ಲೆಕ್ಕಾಚಾರ, ಒಳಗೆ ಹಿರಿಯರ ವಾಗ್ಯುದ್ಧ. ಇತ್ಯರ್ಥಕ್ಕೆ ರಘು ದೊಡ್ಡಪ್ಪ. ಸೀತೂದೊಡ್ಡಪ್ಪ ಅವರಿಗೆ ಹೆಣ್ಣುಕೊಟ್ಟ ಮಾವಂದಿರು ಸೇರಿದ್ದಾರೆ. ಹೊಳೆಬಾಗಿಲು ಆಸ್ತಿ, ಮನೆಯ ಪಾಲುದಾರಿಕೆಯ ಮಾತುಕಥೆ. ಗೌರಿಗೆ ಏನೂ ಅರ್ಥವಾಗದ ವಯಸ್ಸು. ಅವಳ ಕಣ್ಣ ಮುಂದೆ ಚಿತ್ರದ ಪರದೆಯಂತೆ ಇದೇ ಮನೆಯ ಭದ್ರ ಬುನಾದಿಯೊಂದು ಶಿಥಿಲವಾಗಿ ಹೋದದ್ದು, ಸಂಬಂಧದ ಒಡಕುಗಳು ಇನ್ನೆಂದೂ ಸರಿಪಡಿಸದಂತೆ ಕಮರಿ ಹೋದದ್ದು. ಮಾತು ಮೌನವಾಗಿ ಹೃದಯ ಭಾರವಾದ ಆಯಿ ಗೌರಿಯನ್ನು ತಬ್ಬಿಕೊಂಡು ಸುರಿಸಿದ ಕಣ್ಣೀರಿಗೆ ಸಾಕ್ಷಿಯಾಗಿತ್ತು ಗಂಗೊಳ್ಳಿ ಹೊಳೆ. ಆ ಕಣ್ಣೀರಿನಲ್ಲಿ ಬದುಕಿನ ನೈಜ ಕಥೆಯಿತ್ತು. ಅವಳು ಈ ಮನೆ ತುಂಬಿದ ದಿನ ರಾತ್ರೆ ಅಪ್ಪಯ್ಯ ಹೇಳಿದ ಮೊದಲ ಮಾತು, "ಶರಾವತಿ, ನೀನು ಗಂಗೆಯಂತೆ. ತುಂಬಿದ ನಮ್ಮ ಸಂಸಾರದ ಕೊನೆ ಸೊಸೆ. ಕೂಡು

ಕುಟುಂಬದಲ್ಲಿ ಯಾರೂ ನಿನ್ನತ್ತ ಬೊಟ್ಟು ಮಾಡಿ ತೋರಿಸಿ ಕೆಟ್ಟ ಮಾತು ಹೇಳದಂತೆ, ಸಂಬಂಧದಲ್ಲಿ ಒಡಕು ಬಾರದಂತೆ ನೋಡಿಕೊಳ್ಳುವ ಹೊಣೆ ನಿನ್ನದು. ನಿನ್ನಲ್ಲಿ ನಾನಿಟ್ಟ ವಿಶ್ವಾಸ ಉಳಿಸಿಕೊಡು?"

ಆಯಿ ಈ ಮಾತನ್ನು ಹೇಳುತ್ತ ಗೌರಿಯನ್ನು ಕೇಳಿದ್ದಳು, "ಮಾವನವರಿಗೆ ನನ್ನಲ್ಲಿ ವಿಶ್ವಾಸ. ನಾನು ಶರಾವತಿ ನದಿಯಂತೆ ಶಾಂತ ಸ್ಥಿತಪ್ರಜ್ಞೆಯಂತೆ. ಎಲ್ಲರಿಗೂ ಬೇಕಾದವಳಂತೆ. ಅಲ್ಲವೇ ಗೌರಿ, ಚಕ್ರ ಹೊಳೆ ತೀರದಲ್ಲಿ ಹುಟ್ಟಿ ಬೆಳೆದ ಹುಡುಗಿ ನಾನು. ಆ ಹೊಳೆಬದಿಯ ಮನೆಯಿಂದ ಈ ಹೊಳೆಬದಿಯ ಮನೆಗೆ ಎಂಟರ ಪ್ರಾಯದಲ್ಲಿ ಮದುವೆಯಾಗಿ ಬಂದವಳು. ಅಲ್ಲಿ ದೋಣಿ ಹತ್ತಿದರೆ ಹೊಳೆಬಾಗಿಲಿಗೆ ನೀರಿನಲ್ಲಿ ನಾಲ್ಕು ಮೈಲುಗಳ ದಾರಿ. ಅದು ಚೂರು ಪೇಟೆ ತರಹ. ಶಾಲೆ, ಅಂಗಡಿ, ಚಕ್ರೇಶ್ವರಿ ದೇವಸ್ತಾನ, ಮೋಟಾರ್ ಬಂಡಿ ಹೋಪ ವಾಹನ ಮಸ್ತ ಜನ ಇದ್ದ ಜಾಗ. ಇಲ್ಲಿ ಅದೆಂತದೂ ಇಲ್ಲೆ. ನಿನ್ನ ದೊಡ್ಡಪ್ಪನ ಹೆಂಡತಿಯರು ಸಮಾ ಒಂದು ವಾರ ನಿಂತರೆ ಕೇಳು. ಮೈಮೇಲೆ ಚೇಳು ಬಿದ್ದಂಗೆ ಥೈ ಥೈ. ಯಾವ ಕಷ್ಟಕ್ಕೆ ಹೆದರದ ನಾನು ನಿನ್ನ ದೊಡ್ಡಪ್ಪನ ಹೆಂಡತಿಯರಂತೆ ನಾಜೂಕಿನವಳಾ? ಹೇಳು. ಆಸ್ತಿಯಲ್ಲಿ ಪಾಲು ಕೊಡ್ಬೇಡಿ ಅಂತ ನಾನು ನಿನ್ನ ಅಪ್ಪನ ಕಿವಿ ಊದಿದ್ದೇನಾ? ಹೇಳು"

"ಪಾಲು ಅಂದ್ರೆ ಎಂತಾದ್ದು?" ಗೌರಿ ಕೇಳಿದ ಪ್ರಶ್ನೆಗೆ ಆಯಿ ಉತ್ತರವಿತ್ತಷ್ಟೂ ಮುಗಿಯದು. ರಘುರಾಮ ಸಿರ್ಸಿಯಲ್ಲಿ, ಸೀತೂ ದೊಡ್ಡಪ್ಪ ಗೋವಾದಲ್ಲಿ ಹೊಸಮನೆ ಕಟ್ಟಿಸುವ ಅಂದಾಜು ಮಾಡಿ ಮೂಲಮನೆ ಆಸ್ತಿಯಲ್ಲಿ ಪಾಲು ಬೇಡಿಕೆ ಇಟ್ಟಿದ್ದರು. ಎರಡು ಬಾರಿ ಬಂದು ನೆನಪಿಸಿ ಹೋಗಿದ್ದರು. ಅವರ ಒತ್ತಾಯ ಜಾಸ್ತಿಯಾದಾಗ ಏನನ್ನೂ ಉತ್ತರಿಸಲಿಲ್ಲ. ಕೆಲವು ಸಾವಿರ ರೂಪಾಯಿ, ಕಿಟಕಿ ಬಾಗಿಲಿಗೆ ಮನೆಯಲ್ಲೇ ಕಡಿಸಿಟ್ಟ ಹಲಸು, ದೇವದಾರು ಮರಗಳನ್ನು ಕೊಡುತ್ತೇನೆ ಎಂದು ಸುಬ್ಬಪ್ಪಯ್ಯ ಹೇಳಿದರೂ ಸಮಾಧಾನ ಆಗಲಿಲ್ಲ. ಇಡೀ ಜಾಗದ ಸಮಪಾಲು ಬೇಕು. ಅಥವಾ ವರ್ಷಕ್ಕೆ ಇಂತಿಷ್ಟು ಆದಾಯದ ಪಾಲಿನ ಹಣ ಸಿಗಬೇಕು ಎಂದವರ ಶರ್ತು. ಜಾಗದಲ್ಲಿ ಪಾಲು ಕೊಡುವುದು ಕಷ್ಟ. ಆದಾಯದಲ್ಲಿ ಪ್ರತಿವರ್ಷ ಮೂರುಪಾಲು ಮಾಡಿದರೆ ರಾಮಪ್ಪಯ್ಯ ಸಾಲದ ಸುಳಿಗೆ ಬಿದ್ದಂತೆ. ಹುಟ್ಟುವಳಿ ಬರದಿದ್ದರೆ ಗಂಗೊಳ್ಳಿ ಹೊಳೆಯೇ ಗತಿ. ಸುಬ್ಬಪ್ಪಯ್ಯ ಮುಂದಾಲೋಚನೆ ಮಾಡಿಯೇ ಗೌರಿ ಹುಟ್ಟಿದ ವರ್ಷ ಜಮೀನನ್ನು ರಾಮಪ್ಪಯ್ಯನ ಹೆಸರಿಗೆ ಮಾಡಿಬಿಟ್ಟಿದ್ದರು. ದೊಡ್ಡ ಬಾಂಬ್ ಬಿದ್ದಂತೆ ಸ್ಫೋಟ.

"ಗೌರಿ, ನಾನು ಹೇಳಿ ಬರೆಸಿದ್ದ.? ಮಾವನವರು ಅವೇ ಬರೆದು ಹಾಕಿದ್ದು. ಮತ್ತೆ ಈ ಭಾವಂದಿರು ನಾನೇ ಕುಮ್ಮಕು ಕೊಟ್ಟೆ ಅಂತ ಎಷ್ಟು ಗಲಾಟೆ ನೋಡು. ಅವೇ ಇಬ್ಬರು ಉಳೀಲಿ ಇಲ್ಲಿ. ಮಾರಿ ಎಲ್ಲ ತಕ್ಕೊಂಡು ಹೋಗ್ಲಿ. ನಂಗೆತ್ತದು? ನಾವಿಬ್ಬರು

ನಿನ್ನನ್ನು ಮಾಣಿಯನ್ನು ಕರ್ಕೊಂಡು ಹೊರ ಬೀಳ್ತೊ. ಹುಟ್ಟಿಸಿದ ದೈವ ಹೊಟ್ಟೆ ನೋಡಲಾರನೇ? ರಟ್ಟೆಲಿ ಗೆಯ್ಯುವ ತಾಕತ್ತು ಇದ್ದು. ಎಲ್ಲೊ ದುಡಿದು ತಿಂದರೆ ಸಾಕು"

ಆಯಿಯನ್ನು ಅಪ್ಪಿ ಹಿಡಿದು ಗೌರಿ ತಾನೂ ಅತ್ತಳು. ಇಬ್ಬರು ದೊಡ್ಡಪ್ಪಂದಿರಲ್ಲಿ ಅವಳಿಗೆ ಸಲುಗೆ ಜಾಸ್ತಿ.ಒಮ್ಮೆ ಅಪ್ಪಯ್ಯನ ಜೊತೆ ಇಬ್ಬರು ದೊಡ್ಡಪ್ಪಂದಿರ ಮನೆಗೆ ಹೋದಾಗ ಎಂತ ಸಮ್ಮಾನ! ಅವಳಿಗೆ ಅಂಗಿ, ನಾಣಿ ಬರಲಿಲ್ಲವೆಂದು ಅವನಿಗೆ ಅಂಗಿ ಚಡ್ಡಿ ಕೊಡಿಸಿದ್ದು ರಘು ದೊಡ್ಡಪ್ಪ, ಕಾಲಿನ ಬೆಳ್ಳಿ ಗೆಜ್ಜೆ, ಕೀಲಿ ತಿರುಗಿಸಿದರೆ ಓಡುವ ಕಾರು ನಾಣಿಗೆ ಕೊಟ್ಟದ್ದು ಸೀತೂದೊಡ್ಡಪ್ಪ. "ಮಕ್ಕಳನ್ನು ಶಾಲೆಗೆ ಕಳಿಸಿ ಚೆನ್ನಾಗಿ ಓದಿಸು" ಎಂದಿದ್ದರು ಇಬ್ಬರೂ ಅಪ್ಪಯ್ಯನಿಗೆ. ಈಗ ನೋಡಿದರೆ ಆ ಜನ ಬೇರೆಯೇ. ಹೀಗಾ ಆಯಿಯನ್ನು ಗೋಳಾಡಿಸುವುದು? ಅಜ್ಜಯ್ಯ, ಅಜ್ಜಮ್ಮ ಎಂತಕ್ಕೆ ಮಾತಾಡ್ತಿಲ್ಲೆ? ಪಾತ್ರೆಪಗಡಿ, ಮರಮಟ್ಟು, ಚಿನ್ನಾಬರಣದ ವಿಷಯ ಹೇಗೆ? ರಘು ದೊಡ್ಡಪ್ಪನಿಗೆ ಒಂಚೂರೂ ನಾಚಿಕೆಯಿಲ್ಲೆ. ಅಪ್ಪಯ್ಯ ಬಾಯಿಗೆ ಬೀಗ ಹಾಕಿ ಕೂತಿದ್ದ. ಸುಬ್ಬಪ್ಪಯ್ಯನವರೇ ಮಾತಾಡಿದ್ದು,

"ನಿಮಗೆ ಮನೆ ಕಟ್ಟೋಣಕ್ಕೆ ಬೇಕಾದ ಮರದ ಹಲಗೆಗಳು ಅಟ್ಟದಲ್ಲಿ ಮತ್ತು ಹಟ್ಟಿಯಲ್ಲಿವೆ. ನಿತ್ಯ ಬಳಸುವ ಹಿತ್ತಾಳೆ ಪಾತ್ರೆಗಳು. ತಾಮ್ರದ ಕೊಳತಪ್ಪಲೆಗಳು,ಏನು ಬೇಕು? ಶರಾವತಿಗೆ ಅವಳ ಅಪ್ಪನ ಮನೆಯಿಂದ ಕೊಟ್ಟ ಬೆಳ್ಳಿ ನೀಲಾಂಜನ, ಬೆಳ್ಳಿ ಬಟ್ಟಲು, ಕುಂಕುಮ ಭರಣಿ ಇವಿಷ್ಟು ಬಿಟ್ಟು ದೇವರ ಪರಿಕರಗಳು, ಆರತಿ, ಬೆಳ್ಳಿ ಹರಿವಾಣ ಏನೇನು ಇದೆಯೋ ಎಲ್ಲ ಇಬ್ಬರೂ ಹಂಚಿಕೊಳ್ಳಿ.ಎಲ್ಲ ನಿಮಗೇ!"

ದಾಕ್ಷಿಣ್ಯದ ಮಾತೇಇಲ್ಲ. ಅಟ್ಟ ಖಾಲಿಯಾಯ್ತು. ಮರಮಟ್ಟುಗಳನ್ನು ತ್ರಾಸಿಯಲ್ಲಿ ಬಂದು ನಿಂತ ಮೋಟಾರ್ ಗಾಡಿಗೆ ಸಾಗಿಸಿಯಾಯ್ತು. ಆಮೇಲೆ ತಿಂಗಳಿಗೊಮ್ಮೆ ಅಮವಾಸ್ಯೆ ಹುಣ್ಣಿಮೆಗಳು ಬರುವಂತೆ ಇಬ್ಬರು ದೊಡ್ಡಪ್ಪಂದಿರೂ ಅಪ್ಪಯ್ಯ ತೆಗೆದ ಉತ್ಪನ್ನದಲ್ಲಿ ನಾಚಿಕೆಯಿಲ್ಲದೆ ತುಂಬಿದ್ದೇ ತುಂಬಿದ್ದು. ವರ್ಷಕ್ಕೊಮ್ಮೆ ಮಾಡಿರಿಸಿದ ಮಿಡಿ ಉಪ್ಪಿನಾಕಾಯಿ, ಉದ್ದು, ಹಲಸಿನ ಹಪ್ಪಳದಕಟ್ಟು,ಬಾಳಕ ಮೆಣಸು, ಜೇನು, ಕಾಯಿಸಿದ ತಾಜಾ ದನದ ತುಪ್ಪ ಒಂದೇ ಎರಡೇ ಹಳ್ಳಿಮನೆಯದು ಎಂದು ಹೊಗಳಿಕೆ ಬೇರೆ. ಆಯಿ ನಗುತ್ತಲೇ ಕೊಡುವಾಗ ಗೌರಿ ಮೋರೆ ಬಿಗಿದುಕೊಳ್ಳುತ್ತಿತ್ತು. ನಾಣಿಗೆ ಹಲಸಿನ ಹಪ್ಪಳ ಪ್ರೀತಿ. ಅದು ಊಟಕ್ಕಿದ್ದರೆ ಅವ ಎರಡು ತುತ್ತು ಜಾಸ್ತಿಯೇ ಉಣ್ಣುವವ. "ಇಬ್ಬರು ದೊಡ್ಡಮ್ಮರು ಹಪ್ಪಳ ಸಂಡಿಗೆ ಮಾಡದೆ ನಿನ್ನನ್ನು ಯಾಕೆ ಕೇಳ್ತಾರೆ ಆಯಿ? ಅಜ್ಜಮ್ಮನೂ ಯಾಕೆ ಹೇಳ್ತಿಲ್ಲೆ? ಅಪ್ಪಯ್ಯನೂ."

“ಏನೋ ಅವರಿಗೂ ಮಕ್ಕಳಿದ್ದಾರೆ ನಿನ್ನ ಹಾಗೆ. ತಿನ್ನಲಿ ಬಿಡೆ. ನಿಮಗೆ ಕಮ್ಮಿ ಮಾಡಿದ್ದೇನಾ?”

ಆದರೆ ಒಮ್ಮೆ ಸುಬ್ಬಪ್ಪಯ್ಯನೇ ಬರೆ ಕಾಸಿದರು, ಚೆನ್ನಾಗಿ ತಾಗುವಂತೆ.“ಚೆಂದಕ್ಕೆ ಬಂದು ಹೋಗಿ ಮಾಡಿ. ನಿಮ್ಮ ತಮ್ಮನಿಗೂ ಒಂದು ಸಂಸಾರ ಇದೆ, ನೆನಪಿರಲಿ. ಇನ್ಮೇಲೆ ಇಲ್ಲಿಂದ ಎಂತ ಸಾಗಿಸಿದರೂ ನಾ ಪರುಷರಾಮನ ಅವತಾರ ತಾಳ್ಬೇಕಾದೀತು. ಹುಷಾರ್!”

ಸ್ವಂತ ಮಕ್ಕಳಿಗೆ ತಿರುಗಿಬಿದ್ದ ಅಪ್ಪ. ಅಲ್ಲದಾ ಮತ್ತೆ? ಹಾಗೇ ಆಗಬೇಕು. ನಾವು ಮಕ್ಕಳು ತಪ್ಪು ಮಾಡಿದಂತೆ ದೊಡ್ಡವರ ತಪ್ಪು ಅವಕ್ಕೆ ಗೊತ್ತಾಗ್ಬೇಕು. “ಹಾಗಾಗ್ಬೇಕು, ಹಲ್ಲು ಮುರೀಬೇಕು” ಗೌರಿಗೆ ಖುಷಿಯೇ ಖುಷಿ. ನಾಣಿಯ ಕೈ ಹಿಡಿದು ಗರ ಗರ ಸುತ್ತು ಬಂದಿದ್ದಳು. ಅದೇ ಕೊನೆ. ಸಂಬಂಧದ ಗೋಡೆ ಪೂರಾ ಕುಸಿದು ಬಿತ್ತು. ದೊಡ್ಡಪ್ಪಂದಿರು ಅವರ ಕುಟುಂಬ ಹೊಳೆಬಾಗಿಲಿಗೆ ಬರುವುದು ನಿಂತು ಹೋಯಿತು. ಅನ್ನಪೂರ್ಣೇಶ್ವರಿ ದೇವಸ್ಥಾನದ ನವರಾತ್ರೆ ಪೂಜೆಗೆ ದೊಡ್ಡಪ್ಪಂದಿರು ಮಾತ್ರ ಒಂದುದಿನಕ್ಕೆ ಬಂದು ಹಾಜರಿ ಹಾಕಿ ಪ್ರಸಾದ ಸ್ವೀಕರಿಸಿ ಹೋಗುತ್ತಾರೆ. ಮಾತಿಲ್ಲ, ಕತೆಯಿಲ್ಲ. ಗುಮ್ಮನಗುಸ್ಕಗಳು! ರಾಮಪ್ಪಯ್ಯ ಹಾಗೆಲ್ಲ ಸಂಬಂಧ ಕಳೆದುಕೊಳ್ಳದೆ ಹೋಗಿಬರುವ ಪರಿಪಾಠ ಇಟ್ಟುಕೊಂಡಿದ್ದ. ಒಮ್ಮೆ ಗೋವಾಕ್ಕೆ ಗೌರಿಯೂ ಹೋಗಿದ್ದಳು. ಆಗ ಸೀತೂದೊಡ್ಡಪ್ಪ ಅವಳ ಸಾಮನ್ಯ ಕ್ರಯದ ಪರಕಾರ ರವಿಕೆ ಕಂಡು ಕುಚೇಷ್ಟೆ ಮಾಡಿದ್ದ.

“ದಂಡಿಯಾಗಿ ಗದ್ದೆ ತೋಟದ ಆದಾಯ ಇದ್ದರೂ ಎಂತ ಕಂಜೂಸು ನಿನ್ನ ಅಪ್ಪ?ಅಲ್ಲ, ನಿಂಗೊಂದು ಒಳ್ಳೆಯ ಬಟ್ಟೆ ಹೊಲಿಸುವ ಯೋಗ್ಯತೆಯೂ ಇಲ್ಲವೇನೇ ಅವನಿಗೆ?” ಕೇಳಿದಾಗ ದೊಡ್ಡಪ್ಪನ ಮೇಲೆ ಸಿಟ್ಟು ಬಂದಿತ್ತು. ರಘು ದೊಡ್ಡಪ್ಪ ಇನ್ನೂ ಕಠೋರ. “ನನ್ನ ಅಮ್ಮನ ಚಿನ್ನಾಭರಣ ಪೂರಾ ಶರಾವತಿ ಅತ್ತಿಗೆ ಬುಟ್ಟಿಗೆ ಹಾಕಿಕೊಂಡಿದ್ದಾಳಲ್ಲೆ? ಮತ್ತೆ ಇದು ಎಂತದೂ ಹಾಕ್ದೆ ಬೋಳು ಕಿವಿಲಿ ಬಂದಿದೆ? ಒಂದು ಚಿನ್ನದ ಟಿಕ್ಕಿ ಹಾಕೂಕೆ ಆತಿಲ್ಯಾ? ಕಥೆ ಎಂತಾ?”ಗೌರಿಗೆ ಕೇಳಲೆಂದೇ ಹೆಂಡತಿಯ ಬಳಿ ಹೇಳಿದ್ದ, ಚಿನ್ನದ ಟಿಕ್ಕಿಯಲ್ಲಿ ಒಂದರ ತಿರುಪು ಜಾರಿಬಿದ್ದು ಕಳೆದುಹೋಗಿ ಬೋಳುಕಿವಿಯಲ್ಲಿ ಇಲ್ಲಿಗೆ ಬಂದದ್ದೇ ಕಣ್ಣು ಕಿಸುರಾದದ್ದು. ಸೂಕ್ಷ ಮನಸ್ಸಿನ ಹುಡುಗಿ. ತನ್ನ ಮುಂದೆ ಅಪ್ಪಯ್ಯ ಆಯಿ ಬಗ್ಗೆ ಹೀಗಾ ಆಡಿಕೊಳ್ಳುವುದು? ನಾ ಬೋಳು ಕಿವಿಯಲ್ಲಿ ಬರಲಿ, ಬಟ್ಟೆ ಇಲ್ಲದೆ ದುಂಡಗೆ ತಿರಗಲಿ ಇವಕ್ಕೆ ಎಂತಾ ಹೇಳುವ ರೋಗ? ಇನ್ನೂ ಹೋಗಲಿಲ್ಲ ಇವರ ಚಿನ್ನದ ಮೋಹ. ಆದಿನ, ಪಾತ್ರೆಗಳು ಸಪ್ಪಳ ಮಾಡಿದ ದಿನ ಕೊನೆಗೆ ರಘು ದೊಡ್ಡಪ್ಪ, ಇಬ್ಬರು ದೊಡ್ಡಮ್ಮರು ಅಜ್ಜಮ್ಮನ ಒಡವೆ ಎಲ್ಲಾ ತೋರಿಸಲೇ ಬೇಕೆಂದು ಹಠ ಮಾಡಿದ್ದರು. ಇಲ್ಲ ಎನ್ನುತ್ತಲೇ ಅಜ್ಜಮ್ಮನ ಒಪ್ಪದ

[ಚೆಂದದ] ಸಂದೂಕದಿಂದ ಹೊರಬಂದಿತ್ತು ಹಳೆಕಾಲದ ಒಡವೆಗಳು. ಅಬ್ಬ. ಎಷ್ಟು ನಮೂನಿಗಳು. ಆಸೆ ನೀರೂರುವಂತೆ ಇನಿತೂ ಬಣ್ಣಗೆಡದೆ ಝುಗಮಗ! ಗೌರಿಗೆ ಅಜ್ಜಮ್ಮ ಎಷ್ಟು ಬಾರಿ ತೋರಿಸಿದ್ದೋ.ಅದರಿಂದ ರಘುವಿನ ಇಬ್ಬರು ಮತ್ತು ಸೀತಾರಾಮನ ಮೂವರು ಹುಡುಗಿಯರಿಗೆ ಕಿವಿಯೋಲೆ, ಸರ, ಬಳೆಗಳನ್ನು ಈಗಾಗಲೆ ಕೊಟ್ಟಾಗಿದೆ. ಉಳಿದ ರಾಶಿ ದೊಡ್ಡಮ್ಮರು ನೋಡಿದ್ದು ಇದೇ ಮೊದಲು. ಅವರ ಅರಳಿದ ಕಣ್ಣು ಮುಚ್ಚಲೇ ಇಲ್ಲ. ಅವನ್ನು ಮೂರು ಪಾಲು ಮಾಡಬೇಡವೇ? ಆದರೆ ತುಂಬ ಹುಷಾರು ಅಜ್ಜಮ್ಮ. ಎಲ್ಲವನ್ನೂ ಗೌರಿಯ ಆಯಿಗೇ ಮುಚ್ಚಿ ಇಟ್ಟಳಲ್ಲ! ಆದರೂ ಆಯಿ ಹೇಳಿದ್ದೇನು?

"ದೊಡ್ಡ ಸೊಸೆಯರು ಪಾಲು ಕೇಳ್ತಿದಾರೆ. ಅವರಿಗೆ ಬೇಕ್ಕಾದು ಕೊಡಿ ಅತ್ತೆ."ದೊಡ್ಡ ಮನಸ್ಸು ಆಯಿಯದು.

"ನೀನು ಸುಮ್ಮನಿರು ಶರಾವತಿ. ಇದೆಲ್ಲ ನನ್ನ ಸೊತ್ತು. ಪಾವಲಿ ತೂಕದ್ದೂ ನನ್ನ ಗಂಡ ಮಾಡಿಸಿದ್ದಲ್ಲ. ನನ್ನ ಅಪ್ಪ ಗುರಿಕಾರ ಆಗಿದ್ದ. ಒಬ್ಬಳೇ ಮಗಳು ಹೇಳಿ ಕೊಟ್ಟದ್ದು ಇದೆಲ್ಲ. ಅಪ್ಪನ ಮನೆಗೇ ಅಕ್ಕಸಾಲಿಗ ಬಂದು ನನ್ನ ಮರ್ಜಿಗೆ ಬೇಕಾದ್ದು ಕೇಳಿ ಅಳತೆ ತಕ್ಕೊಂಡು ಹೋಗಿ ಮಾಡಿ ತಂದದ್ದು. ಇನ್ನೂ ಹೊಸ್ತರ ಹಾಗಿದೆ. ಇವನ್ನು ಯಾರಿಗೆ ಕೊಡಬೇಕು? ಯಾವಾಗ ಕೊಡಬೇಕು ಅದು ನನ್ನ ಮರ್ಜಿ. ನನ್ನ ಮನೆ ನಂದಾದೀಪ ಹಚ್ಚುವವಳಿಗೆ ಕೊಡುವ ಹಕ್ಕು ನನಗಿದೆ."

"ನಂದಾದೀಪ ಅಂದ್ರೆ ಎಂತ ಆಯೀ?" ಗೌರಿಗೆ ಅಷ್ಟೂ ತಿಳಿಯದು.

"ದೇವರ ಮುಂದೆ ದಿನ ರಾತ್ರೆ ಎಂದಿಗೂ ನಂದದಂತೆ ಹಚ್ಚಿ ಇಡ್ತಾರಲ್ಲ ಮಗಾ" ಆಯಿಗೆ ಮಗಳ ಮೇಲೆ ಹೆಚ್ಚು ಕೊಂಡಾಟ ಬಂದರೆ ಮಗಾ ಎನ್ನಬೇಕು. "ಅದು ನಂದಾದೀಪ. ಅತ್ತೆ, ನಿಮ್ಮ ಒಡವೆ ಆಸೆಗೆ ಜೊಲ್ಲು ಸುರಿಸಿ ನಂದಾದೀಪ ಹಚ್ಚುವವಳು ನಾನು ಅಂತ ಕೆಟ್ಟ ಹಣೆಪಟ್ಟಿ ಬೇಡ. ನಿಮ್ಮ ಮನೆಯ ನಂದಾದೀಪ ನಾನು ಹಚ್ಚಿದರೂ ಒಂದೇ, ಅವರಿಬ್ಬರೂ ಸೊಸೆಯಂದಿರು ಹಚ್ಚಿದರೂಒಂದೇ."

ಅಜ್ಜಮ್ಮ ಗುಲಗುಂಜಿ ತೂಕದ ಚಿನ್ನ ತೆಗೆಯದೆ ಒಡವೆ ಸಂದೂಕ ಮುಚ್ಚಿ ಒಳ ನಡೆದಾಗ ನಿಜಕ್ಕೂ ಗೌರಿಯ ತುಟಿಯಂಚಿನಲ್ಲಿ ನಗು. ಚಿನ್ನಕ್ಕೆ ಆಸೆಪಟ್ಟರಲ್ಲ ದೊಡ್ಡಮ್ಮರು? ಅತಿಆಸೆ ಮಾಡಿ ನೇರಳೇಹಣ್ಣು ಹುಳಿ ಎಂದೋಡಿದ ನರಿಯ ಕಥೆ ನೆನಪು. ಗೋಸುಂಬೆ ಬಣ್ಣ ನಂಬಬಾರದಂತೆ. ಯಾಕೋ? ಇವತ್ತು ಅಜ್ಜಮ್ಮ ತಮ್ಮ ವಿರುದ್ಧ ಅಪ್ಪಯ್ಯನ ಬಳಿ ಚಾಡಿ ಹೇಳಿದರೂ ಪಾಪ ಅಜ್ಜಮ್ಮ. ಗೌರಿ, ನಾಣಿಯೆಂದರೆ ತಲೆಮೇಲೆ ಹೊರುವ ದೇವರು. ಕೊಲ್ಲೂರು ಮೂಕಾಂಬಿಕಾ ಸ್ತೋತ್ರ ಹೇಳುತ್ತ ಕೆಲವೊಮ್ಮೆ ಅವಳಿಗೆ ಐಲು ಬರುತ್ತದೆ. ಆಗ ಈ ಒಡವೆ ಸಂದೂಕ ಹೊರ ಬಂದು ಗೌರಿಯನ್ನು ಕರೆಯುತ್ತಾಳೆ. "ನನ್ನ ಬಂಗಾರ, ನನ್ನ ಕೂಸೇ, ನನ್ನ ಮುದ್ದೇ" ಕೊಂಡಾಟದಲ್ಲಿ ಗೌರಿಯ ಎಳೆ ಮೈಗೆ

ಸರ, ನೆಕ್ಲೇಸ್, ಹವಳದ ಹಾರ, ಸೊಂಟಪಟ್ಟಿ, ಕಾಲ್ಗೆಜ್ಜೆ, ತೋಳ್ಬಳೆ, ನೆತ್ತಿಎಳೆ ತೊಡಿಸಿ "ನೀ ಪುಟ್ಟ ದೇವಿ ಹಾಗೇ, ಕೊಲ್ಲೂರು ಮೂಕಾಂಬಿಕಾ ದೇವಿಯೇ! ನಿನಗೆ ನಮೋ ನಮಃ"ಅಂದ ನೋಡಿ ಮರುಳಾಗಿ ಕಣ್ಣೀರು ಸುರಿಸಿ ಬಿಗಿದಪ್ಪಿದರೆ ಅಜ್ಜಮ್ಮ ಮೊಮ್ಮಗಳಿಗೆ ಸಮಯದ ಪರಿವೆಯಿಲ್ಲ. ಅಜ್ಜಮ್ಮ ಮಗು, ಗೌರಿ ದೇವಿ, ನಡೆಯುತ್ತದೆ ಆಟ ಅವರಲ್ಲಿ. ಹೊರಗೆ ಹಿತವಾದ ಮಳೆ ಇದ್ದರೆ ಅಜ್ಜಮ್ಮ ಮೂಕಾಂಬಿಕಾ ದೇವಿಯ ವೈಭವದ ಕಥೆ ಹೇಳುತ್ತ ಹೇಳುತ್ತಾ... ... ...

* * *

## ಅಧ್ಯಾಯ 3

ಗಂಗೊಳ್ಳಿ ಹೊಳೆಯಮೇಲೆ ಹೊಳೆಯುತ್ತಿರುವ ಬಾಲ ಸೂರ್ಯನ ಕಿರಣಗಳು ತೀರದುದ್ದಕ್ಕೂ ಬಂದು ಸುತ್ತಲೂ ಆವೃತ್ತವಾದ ಗಿಡ ಮರ, ಬಳ್ಳಿಗಳ ಸಂದುಗಳಲ್ಲಿ ಹಾದು ಭತ್ತದ ಗದ್ದೆಯಾಚೆ ಗುಡ್ಡ ಕಲ್ಮರಗಳ ಕಾಡಿನಲ್ಲಿ ತೂರಿ ಬೆಳ್ಳಿರೇಖೆ ಎಳೆಯುವಾಗ ನಾಣಿಗೆ ಎಣೆಯಿಲ್ಲದ ಉತ್ಸಾಹ. ಆ ಹೊತ್ತಿಗೆ ದನ ಕರುಗಳ ಕೊರಳ ಹಗ್ಗದ ಕುಣಿಕೆ ಸಡಲಿಸಿ ಕಟ್ಟಿಗೆಯ ಉರುಗೋಲು ಬಾಗಿಲು ತೆಗೆದು ಹೊರಬಿಡಬೇಕು. ಕೆಲಸದ ಲಿಂಗಣ್ಣ ಇದ್ದರೂ ಬೆಳಿಗ್ಗೆ ದನಕರುಗಳನ್ನು ಮೇಯಲು ಬಿಡುವ ಕೆಲಸ ಮಕ್ಕಳಿಗೇ ಮೀಸಲು. ಅವೂ ಈ ಮಕ್ಕಳಿಗೆ ಚೆನ್ನಾಗಿ ಹೊಂದಿಕೊಂಡಿವೆ. ಅವುಗಳಲ್ಲಿ ಉದ್ದಕೋಡಿನ ಹೆಣ್ಣು ಕರು ಬಹಳ ಜೋರು. ಆದರೆ ಇವರ ಬಳಿ ಬೆಕ್ಕಿನಂತೆ. ಮೈ ಮೂಸಿ ನೋಡುತ್ತ ಓಡುವುದೇ ಚೆಂದ. ಎಲ್ಲ ದನ ಕರುಗಳಿಗೂ ಜೊತೆಯಾಗಿ ಹೊರ ಬೀಳುವಾಗ ಏನವುಗಳ ಖುಷಿ. ಬಾಲ ಎತ್ತಿ ಚಂಗನೆ ಹಾರಿ ಪುಟು ಪುಟು ಹೆಜ್ಜೆ ಇಟ್ಟು ಗದ್ದೆ ಹುಣಿಯಾಚೆ ಜಿಗಿದು ಹಸಿರು ಹುಲ್ಲು ಇದ್ದಲ್ಲಿ ಓಡುತ್ತವೆ ಒಂದರ ಹಿಂದೆ ಇನ್ನೊಂದು. ಆಗ ನಾಣಿಯೂ ಕೈಯ್ಯಲ್ಲಿ ಕೋಲು ಹಿಡಿದು ಓಡ್ತಾನೆ ಅವುಗಳ ಹಿಂದೆ. ಮೈಮೇಲೆ ಬಟ್ಟೆ ಇಲ್ಲ. ಸೊಂಟದ ಕೆಳಗೆ ಚಡ್ಡಿ, ಅಥವಾ ಕೆಲವೊಮ್ಮೆ ಕಚ್ಚೆಯಂತೆ ತುಂಡು ಬಟ್ಟೆ ಸುತ್ತಿಕೊಂಡರೂ ಆಯ್ತು. ಇವತ್ತು ಕಟ್ಟಿಕೊಂಡದ್ದು ತುಂಡು ಬಟ್ಟೆ. ಹಾಗೆ ಕೆಲಸದವರು ಬಿಟ್ಟರೆ ಇನ್ನಾರು ಬರುತ್ತಾರೆ ಈ ಕುದ್ರುವಿಗೆ? ಅವನ ಹಿಂದೆ ನಿಧಾನ ಗತಿಯಲ್ಲಿ ಗೌರಿಯ ಹೆಜ್ಜೆಗಳು. "ರಂಗೋಲಿ ಹಾಕಿದ್ಯಾ?, ದೇವರಿಗೆ ಹೂವು, ತುಳಸಿ ಕುಯ್ದು ಆಯ್ತಾ? ದೀಪಕ್ಕೆ ಆರತಿಗೆ ಬತ್ತಿ ಇಟ್ಟೆಯಾ? ಆಯಿ ಹೇಳುವ ಮೊದಲೇ ತನ್ನ ನಿರ್ಕಿನ ಕೆಲಸ ಮುಗಿಸಿ ಬಿಟ್ಟರೆ ಕಿವಿ ಹಿಂಡಿಸಿಕೊಳ್ಳಬೇಕಿಲ್ಲ.. ಹೊಟ್ಟೆಗಿಷ್ಟು ಬಿದ್ದರೆ ಮತ್ತೆ ನಾಣಿ ಅವಳು ಸ್ವಚ್ಛಂದವಾಗಿ ತಿರುಗುವ ಹಕ್ಕಿಗಳು. ಬೆಳಗಿನ ಕುಳಿರ್ಗಾಳಿ ಚಾಮರ ಬೀಸುವಾಗ ಮೈ ಮನಗಳಲ್ಲಿ ಉಲ್ಲಸಿತ ಸುಳಿಗಾಳಿ. ಗೌರಿ ಹೇಳುತ್ತಾಳೆ,

"ಆಯಿ ರವೆ ಹುರಿದು ಸಿಹಿ ತಿಂಡಿ ಮಾಡುವ ಹೊತ್ತಿಗೆ ನಾವು ಮನ್ಲಿರಬೇಕು. ಇವತ್ತು ಯಾರು ಬತ್ತೋ ಗೊತ್ತೇನೋ ನಿಂಗೆ?

"ಯಾವ ಭೂತ ಬತ್ತು ಈ ಕೂಪಕ್ಕೆ?"

"ಮಾತು ಕಲಿತಿದ್ದಿಯಾ ಜೋರಾಗಿ. ನಿನ್ನೆ ರಾತ್ರೆ ನಾ ಏನು ಹೇಳಿದ್ದೆ ಹೇಳು?"

ನಾಣಿ ತಲೆಕೆದರಿಕೊಂಡ. ನಿನ್ನೆ ರಾತ್ರೆ ಅಪ್ಪ ತಂದುಕೊಟ್ಟ ಕರ್ನಾಟಕದ ಭೂಪಟದಲ್ಲಿ ಗಂಗೊಳ್ಳಿ ಹೊಳೆ, ಹೊಳೆಬಾಗಿಲು ಮನೆ ಹುಡುಕುವ ಗುಂಗಿನಲ್ಲಿದ್ದ. ಅಕ್ಕ ಹೇಳಿದ್ದು ಏನು? ಸರಿ ಕೇಳಲಿಲ್ಲ. ಅಕ್ಕ ಹೊಸಜನ ಶಾರದತ್ತೆಯನ್ನು ನೋಡಲು ಬರುತ್ತಾರೆ ಎಂದಳಂತೆ. ನೋಡಲು ಬರುವುದು ಎಂದರೇನು? ಅವನಿಗೆ ಅರ್ಥವಾಗದ ಸಂಗತಿ. ಹೌದಲ್ಲ, ಹೊಸಜನ ಬರುವಾಗ ಅವರಿಗೆ ತಿಂಡಿ ಆಸರಿಂಗೆ ಆಗಬೇಕು. ಆಯಿ, ಅಜ್ಜಮ್ಮ, ಸುಶೀಲ ಚಿಕ್ಕಿ ಅಡಿಗೆಮನೆ ಹೊಕ್ಕಿದ್ದಾರೆ ಬೆಳಿಗ್ಗೆಯೇ ಸಿಹಿ ತಿಂಡಿ ತಯಾರಿಗೆ. "ದನ ಕರುಗಳನ್ನು ಮೇಯಲು ಅಟ್ಟಿ ಬೇಗ ಬನ್ನಿ"ಎಂದು ಅಜ್ಜಮ್ಮ. "ಬರ್ತಾ ಸಂಪಿಗೆ ಹೂ ಕುಯ್ದು ತಾ ಗೌರಿ"ಎಂದು ಸುಶೀಲ ಚಿಕ್ಕಿ ಹೇಳಿದ್ದಾರೆ. ಹೆಚ್ಚು ಎತ್ತರವಿಲ್ಲದ ಸಂಪಿಗೆ ಮರ. ಕೆಳಗಿನ ಟೊಂಗೆಯ ತುದಿಗೆ ದೋಂಟಿಯಲ್ಲಿ ಎಳೆದರೆ ಸಾಕು, ನಾಲ್ಕಾರು ಹೂವುಗಳು ಸಿಗುತ್ತವೆ. ಮನೆ ಬಿಡುವಾಗಲೇ ಕಂಕುಳಲ್ಲಿ ದೋಂಟಿ, ಕೈಯ್ಯಲ್ಲಿ ಬಿದಿರು ಬುಟ್ಟಿ ತಂದ ಗೌರಿ ನಾಲ್ಕಾರು ಹೂವುಗಳನ್ನು ಕುಯ್ದು ಬುಟ್ಟಿಗೆ ಹಾಕಿ,

"ಪೇರಳೆ ಗಿಡದಲ್ಲಿ ಹಣ್ಣು ಉದುರಿ ಬೀಳ್ತಾ ಇದ್ದು. ತ್ಯಾಂಪನೂ, ಲಿಂಗಣ್ಣನೂ ಬರ್ಲಿಲ್ಲೆ. ನಾವೇ ಕೊಯ್ದುತರುವ. ಬರ್ತಿಯಾ?" ಕೇಳಿದಳು ಮುಂದಡಿ ಇಟ್ಟು.

"ನೀ ಎಲ್ಲಿ ಹೇಳಿದರೂ ನಾ ತಯಾರು!" ನಾಣಿ ಓಟ ಕಿತ್ತ. ಆದರೆ ಅಷ್ಟರಲ್ಲಿ ಇಬ್ಬರ ಕಣ್ಣು ಹೊರಳಿತು. ಅದೋ, ಕಿಸ್ಕಾರ ಹೂವಿನ ಮೇಲೆ ಹಾರುತ್ತಿದ್ದ ಪಾತರಗಿತ್ತಿ! ಎಷ್ಟು ದೊಡ್ಡದು, ನಸುಗಂದು ಬಣ್ಣದ ರೆಕ್ಕೆ ಮೇಲೆ ಮುತ್ತಿನ ಮಣಿಗಳು ಇಟ್ಟಂತೆ ಚುಕ್ಕಿಗಳು. ಒಮ್ಮೆ ರೆಕ್ಕೆ ಮುದುಡಿಸಿ ಮತ್ತೊಮ್ಮೆ ಪೂರಾ ತೆರೆದು ಹೂವಿನಿಂದ ಹೂವಿಗೆ ಹಾರುತ್ತಿದೆ ವಯ್ಯಾರದಲ್ಲಿ. ನೋಡುತ್ತ ನಾಣಿ ಹುಚ್ಚನಾಗಿ ಹೋದ, ಅದೀಗ ತನಗೇ ಸಿಗಬೇಕು. ಅದರ ಮೃದು ರೆಕ್ಕೆಯನ್ನು ಸವರಬೇಕು ಅಂಗೈಯ್ಯಲ್ಲಿಟ್ಟು, ಅಕ್ಕನನ್ನು ಕರೆದ. ಗೋಗರೆದ. ಹಾರುವ ಪಾತರಗಿತ್ತಿ, ಹಿಡಿಯುವುದು ಸುಲಭವೇ?

"ಆವತ್ತೊಂದು ದಿನ, ಇಂತಹದೇ ಪಾತರಗಿತ್ತಿಯನ್ನು ಹಿಡಿಯಲು ನೀನು ಅದರ ಹಿಂದೆ ಓಡ್ತಾ ಗದ್ದೆ ಬದಿಯ ಹೊಂಡಕ್ಕೆ ದುಡುಂ! ನೆನಪಿದೆಯಾ ನಾಣಿ?"

ನೆನಪಿಲ್ಲದೆ ಏನು? ಆ ಪಾತರಗಿತ್ತಿ ಹಿಡಿಯಲು ಹೋಗಿ ಗದ್ದೆ ಕೆಸರಿಗೆ ಬಿದ್ದು ಮೈಯ್ಯೆಲ್ಲ ಕೆಸರಾಗಿ ಅಕ್ಕ ಹಿಡಿದೆಳೆದು."ಅದೇ ಪಾತರಗಿತ್ತಿ ಅಕ್ಕಾ, ಇದು ನೋಡು,

ಅದೇ ರೆಕ್ಕೆ, ಮೀಸೆ. ಆವತ್ತು ನನ್ನ ಕೈಯ್ಯಿಂದ ಉಳುಚಿ ಹೋಗಿತ್ತು. ಇಕಾ, ಇವತ್ತು ನಾ ಹಿಡಿದೇ ಶುದ್ಧ"

ತಮ್ಮನ ಅಜ್ಞಾನಕ್ಕೆ ನಕ್ಕಳು. ಗದ್ದೆ ಕೆಸರಿಗೆ ಬಿದ್ದು ತಿಂಗಳ ಮೇಲಾಯ್ತು. ಪಾತರಗಿತ್ತಿ ಆಯುಷ್ಯ ಎಷ್ಟು ಕಾಲದ್ದು?ಅಪ್ಪಯ್ಯನನ್ನು ಕೇಳೆಕ್ಕು. ಒಂದೊಂದು ಜೀವಿಗೂ ಇಂತಿಷ್ಟೇ ಆಯುಷ್ಯ ಇರುತ್ತದಂತೆ.ಪಾತರಗಿತ್ತಿಗೂ ಇಕ್ಕು. ಪಾಪ, ನಾಣಿ ಆಸೆಗಾದರೂ ಅದನ್ನು ಹಿಡಿಯಕ್ಕು.

"ಅದರ ರೆಕ್ಕೆಗೆ ನೂಲು ಕಟ್ಟಿ ಕಿಟಕಿಗೆ ಕಟ್ಟಬೇಕು ಅಕ್ಕಾ, ಆವತ್ತು ದೇವರಕುದುರೆಯನ್ನು ಕಟ್ಟಿದ್ದೆವಲ್ಲ?"

ನಾಣಿ ಹೇಳುತ್ತ ಧಾವಿಸಿದ ಪಾತರಗಿತ್ತಿಯ ಹಿಂದೆ. ದೇವರಕುದುರೆ ಉದ್ದ ರೆಕ್ಕೆ, ಉದ್ದ ಮೂತಿ, ಹಸಿರು ಹಸಿರು ಚೆಂದ. ಕೈಗೆ ಸಿಗುವಂತೆ ಮೆಲ್ಲ ಹಾರಾಟ.ಆರಾಮದಲ್ಲಿ ಕೈಗೆ ಸಿಗುವ ನಿರುಪದ್ರ ಕೀಟ. ಅದನ್ನು ನೂಲಿನಲ್ಲಿ ಕಟ್ಟಿದಾಗ ಪರ ಪರ ರೆಕ್ಕೆ ಬಡಿದು ಹಾರಲು ನೋಡಿತ್ತು. ಪಾಪ, ಸ್ವಲ್ಪಹೊತ್ತಿನಲ್ಲೇ ರೆಕ್ಕೆ ಕಳಚಿದಂತೆ ನಿಶ್ಶಬ್ಧ.

"ಆ ಪಾಪದ ಕೀಟಕ್ಕೆ ಸುಮ್ಮನೆ ಶಿಕ್ಷೆ ಕೊಟ್ಟಿರಲ್ಲ ಮಕ್ಕಳೇ. ತಪ್ಪು, ತಪ್ಪು. ಪ್ರಕೃತಿಯಲ್ಲಿ ಪ್ರತಿ ಜೀವಕ್ಕೂ ಬದುಕುವ ಹಕ್ಕಿದೆ. ನಮ್ಮ ಕೈಯ್ಯಾರೆ ಅವಕ್ಕೆ ಹಿಂಸೆ ಕೊಡಬಾರದಲ್ವೇ?"

ಬುದ್ಧಿ ಹೇಳಿದ್ದಳು ಆಯಿ. ಯಾವ ಜೀವಿಗೂ ಹಿಂಸೆ ಕೊಡಬಾರದು ಎನ್ನುವ ತತ್ವ ಅವಳದು. ಕೆಲವೊಮ್ಮೆ ಗುಂಪುಗೂಡಿ ಮನೆ ಅಂಗಳಕ್ಕೆ ಬರುತ್ತಿದ್ದವು ಬುಲ್ ಬುಲ್ ಹಕ್ಕಿಗಳು. ಉದ್ದ ಬಾಲದ ಅಪರೂಪದ ಹಕ್ಕಿಗಳು. ಆಯಿ ಅವಕ್ಕೆ ಮುಷ್ಟಿ ಅನ್ನ ಹಾಕಿದ್ದೇ ತಡ ಗುಂಪಿನಲ್ಲಿ ಹಾರಿಬಂದು ಕೊಕ್ಕಿನಲ್ಲಿ ಅನ್ನದ ಅಗುಳನ್ನು ಕುಟಕ್ ತೆಗೆದು, ಬುರ್ರನೆ ಮರದತ್ತ ಹಾರಿ ತಿರುಗಿ ಕೆಳಕ್ಕಿಳಿದು ಎಷ್ಟು ಚೆಂದ ನೋಡಲು! ಹಿಡಿಯಲು ಹೋದರೆ ಒಂದೂ ಕೈಗೆ ಸಿಗದಂತೆ ಪುರ್ರನೆ ಇನ್ನೆತ್ತ ಹಾರುತ್ತಾವೋ. ಹಾಗೇ ಅಳಿಲುಗಳು ಕಣ್ತಪ್ಪಿಸಿ ಅತ್ತಿತ್ತ ಓಡುತ್ತಿದ್ದರೆ ಗೌರಿಯೂ ಓಡುತ್ತಿದ್ದಳು ಅವುಗಳ ಹಿಂದೆ. ಇನ್ನೇನು ಕೈಗೆ ಸಿಕ್ಕಿತು ಎನ್ನುವಾಗ ಅವು ಮರ ಏರಿ ಪರಾರಿ. ಕೈಗೆ ಸಿಕ್ಕರಲ್ಲವೇ. ಅದೇ ಆಟದ ಮೋಜು. ಇವತ್ತು ಪಾತರಗಿತ್ತಿ ಹಿಡಿಯುವ ಉಮೇದು ನಾಣಿಗೆ. ಗೌರಿ ತಾನೂ ಉಮೇದಿನಿಂದ ತಮ್ಮನ ಜೊತೆಗೇ ಧಾವಿಸಿದಳು. ಹಿಂದೆ ಮುಂದೆ, ಅಲ್ಲಿ ಇಲ್ಲಿ, ಆಕಡೆ ಈಕಡೆ ಒಬ್ಬರಿಗೊಬ್ಬರು ತಡೆಯುತ್ತ ಅದು ಹೋದಲ್ಲಿ ಹಿಂಬಾಲಿಸುತ್ತ ಹೊತ್ತು ಎಷ್ಟು ಕಳೆಯಿತೋ. ಕೋಲು ಬಿಸಿಲು ಮೇಲೇರುವ ಹೊತ್ತಿಗೆ ಇಬ್ಬರೂ ಹೊಳೆ ದಡಕ್ಕೆ ಬರುವುದು, ದೋಣಿಯಿಂದ ಮೂವರು ಕೆಳಗಿಳಿದು ಬರುವುದೂ, ಅದೇ ವೇಳೆ ಅಪ್ಪಯ್ಯನೂ ಅಲ್ಲಿರುವುದು ಸರಿಹೋಯಿತು. ಹೊಸಬರು ಬಂದವರು ಯಾರು? ಒಬ್ಬರು ಕಮ್ತಿಯವರು. ತಮಗೆ ಗೊತ್ತಿದ್ದವರು. ಅವರ ಜೊತೆ ಇನ್ನಿಬ್ಬರು,

ಹೋ, ಶಾರದತ್ತೆಯನ್ನು ನೋಡಲು ಬಂದವರು. ಅರೆ! ಸಂಪಿಗೆ ಹೂವು, ಪೇರಳೆ ಅಲ್ಲೆ ಉಳಿದು ಹೋಯ್ತಲ್ಲ. ಅಜ್ಜಮ್ಮ ನಮ್ಮನ್ನು ಕಾಯುತ್ತ ಬೈಯುತ್ತ. ಗೌರಿ ಗಡಬಡಿಸಿದಳು, "ನಡಿ ನಾಣಿ, ಅವನ್ನು ತಕ್ಕೊಂಡು ಹೋಗೋಣ"

ನಾಣಿ ತನ್ನ ಸೊಂಟದ ಕೆಳಗಿನ ಮಾರುದ್ದದ ತುಂಡು ಬಟ್ಟೆ ನೋಡಿದವನೇ ಜಿಂಕೆಯಂತೆ ಓಡಿದ ಮನೆಕಡೆ. ಗೌರಿಯೂ ಉದ್ದ ಅಂಗಿಯನ್ನು ಮೇಲಕ್ಕೆಳೆದು ಕಟ್ಟಿ ತಮ್ಮನ ಹಿಂದೆ ಕಾಲ್ಕಿತ್ತಳು. ಹಾಗೆಲ್ಲ ಹೊಸಬರಿಗೆ ಮುಖ ತೋರಿಸಲು ನಾಚಿಕೆ. ಹೆಣ್ಣುಮಕ್ಕಳಿಗೆ ನಾಚಿಕೆ ಎಂಬ ಶಬ್ಧ ಯಾವ ಕೋಶದಲ್ಲಿ ಇರುತ್ತದೆಯೋ? ಹೊಳೆಬಾಗಿಲು ಮನೆಯಲ್ಲಿ ಸಂಭ್ರಮ ಇಣುಕಿತ್ತು. ಶಾರದತ್ತೆ ಅಲಂಕಾರ ಮುಗಿಸಿ ಕಿಟಕಿ ಬಳಿ ಇಣುಕುವಾಗ ಗೌರಿ ಕಾಣಿಸಿದಳು, "ಅತ್ತೆ, ಸಂಪಿಗೆ ತಂದೆ. ಮುಡೀತಿಯಾ ಕಟ್ಟಿಕೊಡ್ತೆ"

ಶಾರದತ್ತೆಗೆ ಸಂಪಿಗೆಯ ಕಡು ವಾಸನೆ ಆಗದು. ಸುಶೀಲಚಿಕ್ಕಿ ಅದನ್ನೇ ಮುಡಿ ಎನ್ನುತ್ತಿದ್ದಾಳೆ. "ನೀನೇ ಕಟ್ಟಿ ಮುಡ್ಕ್ಕೊ ಗೌರಿ. ಕಳೆದಬಾರಿ ಹುಡುಗ ನೋಡಲು ಬಂದಾಗ ಅದರ ವಾಸನೆಗೆ ಹುಡುಗನಿಗೆ ತಲೆನೋವು, ವಾಂತಿ ಬಂತಂತೆ" ನೆನಪಿಸಿದಳು.

"ಎಂತ ತಲೆನೋವಾ?"ಗುಡುಗಿದಳು ಕಮಲತ್ತೆ, "ಕಳ್ಳನಿಗೊಂದು ಪಿಳ್ಳೆ ನೆವ. ನೀನು ಬೇಡ ಅನ್ನಲು ಅವಂಗೆ ಈ ಕಾರಣವೇ? ಇವತ್ತು ಸಂಪಿಗೆ ಹೂವಿನದೇ ದಂಡೆ ಮುಡಿ. ಈ ಹುಡುಗ ಮೂಗು ಮುಚ್ಚಿ ಕೊಳ್ತಾನೋ ಕಾಂಬ"

ಪಾಪ ಕಮಲತ್ತೆ. ಹೂವು ಮುಡಿಯುವ ಭಾಗ್ಯ ಇಲ್ಲೆ. ಅಲಂಕಾರವೂ ಇಲ್ಲೆ."ಬಂದವರ ಎದುರು ನಿನ್ನ ನೆರಳು ಬೀಳದಂತೆ ಒಳಗಿರೆಕ್ಕು" ಅಜ್ಜಯ್ಯ ಬೆಳಿಗ್ಗೆ ತಿಂಡಿ ಹೊತ್ತಲ್ಲಿ ಹೇಳಿಯಾಗಿತ್ತು.

"ಕಮಲತ್ತೆ ನೆರಳು ಬಿದ್ದರೆ ಎಂತಾ ಆಗ್ತು ಆಯಿ?" ಗೌರಿ ಅಮಾಯಕಳು.

"ನಂಗೊತ್ತಿಲ್ಲ. ಹಳೆನಂಬಿಕೆ. ನಾವು ಮುಟ್ಟೂಲಾಗ, ಕೇಳೂಲಾಗ. ನಿಂಗೆಂತಕ್ಕೆ ಹೋಗು ಹೊರಗೆ"

ಯಾರೂ ಮುಡಿಯದ ಸಂಪಿಗೆ. ಗೌರಿ ಅವನ್ನು ತಮ್ಮ ಕೋಣೆಗೆ ತಂದಿಡುವಾಗ ನೋಡುತ್ತಾಳೆ, ನಾಣಿಯ ಸೊಂಟದ ಸಣ್ಣ ತುಂಡು ಬಟ್ಟೆ ನೆಲದಲ್ಲಿದೆ. ಅವನು ಆಗಲೇ ಚಡ್ಡಿ ಅಂಗಿ ಹಾಕಿ ತಲೆಬಾಚಿ ನೆಲದ ಮೇಲೆ ಕರ್ನಾಟಕ ಭೂಪಟ ಬಿಡಿಸಿ ಕುಳಿತಾಗಿತ್ತು. ಗೌರಿ ಕಾಲಬೆರಳಿನಿಂದ ಅವನ ತುಂಡುಬಟ್ಟೆಯನ್ನು ಮೂಲೆಗೆ ಒತ್ತಿ, "ಮದುಮಗ ಸಿದ್ಧವೋ?ಬನ್ನಿ ಮಹಾರಾಜರೇ ಹೊರಗೆ!" ನಕ್ಕಳು.

"ನೋಡೇ ಅಕ್ಕ, ಗಂಗೊಳ್ಳಿ ಹೊಳೆ ಕಾಣ್ತಿದೆ ಇಲ್ಲಿ. ಇದಾ ಸೌಪರ್ಣಿಕಾ ನದಿ.

ಇದಾ ಚಕ್ರ ಅಮ್ಮಮ್ಮನ ಊರು ಚಕ್ರೀ ಹೊಳೆ. ಇಕಾ ಇದು ವಾರಾಹಿ ನದಿ.ಇನ್ನೂ ಎಷ್ಟೋ ಸಣ್ಣ ದೊಡ್ಡ ಹೊಳೆಗಳು. ನಾವಿನ್ನೂ ನೋಡ್ಲೇ ಇಲ್ಲವಲ್ಲೇ?"

"ನಮ್ಮ ಹೊಳೆಬಾಗಿಲು ಮನೆ ಕಂಡ್ಯಾ?"

"ಇಲ್ಲ ಅಕ್ಕಾ. ಅದೆಂತಕ್ಕೆ ಭೂಪಟದಲ್ಲಿ ಇಲ್ಲೆ?"

"ಸುಶೀಲ ಚಿಕ್ಕಿ ಇದರಲ್ಲಿ ಜ್ಞಾತಿ ಇದ್ದವಳು. ಹೇಳಿದಳಲ್ಲ ನಮ್ಮದು ಹೆಸರು ಪಡೆದ ಊರುಕೇರಿ ಅಲ್ಲ. ಒಂದು ಕೂಪ. ಸುತ್ತ ಹೊಳೆನೀರು ಇದ್ದ ನಡುಗಡ್ಡೆ. ಸಾಕು ಬಿಡು. ಭೂಪಟ ಆಚೆಗಿಟ್ಟು ಹೊರಗೆ ಬಾ. ಅಕಾ, ಮೋತಿ ಕೂರೀತಾ ಇದ್ದು. ಹೋ, ಅವರೆಲ್ಲ ಬಂದವು."

ಬಂದವರು ಮೂರೇ ಮಂದಿ. ಒಬ್ಬರು ಕಮ್ತಿಯವರು. ಮತ್ತಿಬ್ಬರು ಇಂದು ನೋಡಲು ಬಂದ ಯುವಕ, ಮತ್ತು ಅವನ ತಂದೆ. ಕಮ್ತಿಯವರಿಗೆ ಸುಮಾರು ಅರ್ವತ್ತರ ಆಸುಪಾಸು. ಅಪ್ಪಯ್ಯನ ಸ್ನೇಹಿತರು. ಈ ಮನೆಯವರಲ್ಲಿ ಸಂಪರ್ಕ ಜಾಸ್ತಿ. ಕಮ್ತಿಯವರ ಅಂಗಡಿ ಎಂದರೆ ಸಾಸ್ತಾನದಲ್ಲಿ ಪ್ರಸಿದ್ಧವೇ. ಲೆಕ್ಕಕ್ಕೆ ಕಿರಾಣಿ ಅಂಗಡಿ. ಮಕ್ಕಳ ಶಾಲಾ ಪುಸ್ತಕ, ಬೈರಾಸು, ಬಟ್ಟೆ ಬರೆ, ಕಬ್ಬಿಣದ ಸಾಮಾನುಗಳು, ಬೆತ್ತದ ಬಟ್ಟಿಗಳು, ಓಲೆಗರಿಯ ಕೊಡೆಗಳು, ಆಯುರ್ವೇದ ಔಷಧಿ, ನಾರು ಬೇರು, ಬೀಡಿ, ನಸ್ಯ, ಪೂಜಾ ಸಾಮಗ್ರಿಗಳು ಯಾವ ವಸ್ತು ಬೇಕು ಹೇಳಿ ಅಲ್ಲಿದೆ. ಊರ ಹಜಾಮನ ಅಂಗಡಿ ಎದುರಲ್ಲಿದೆ. ಅಲ್ಲಿ ತಲೆಗೆಗೂದಲು ತೆಗೆಯಿಸಲು ಬಂದವರ ಪೈಕಿ ಹೆಚ್ಚು ಮಂದಿ ಇತ್ತ ಬಾರದೆ ಇರುವವರಲ್ಲ. ರಾಮಪ್ಪಯ್ಯ ಕೆಲಸಕ್ಕಿರುವ ಕಾಮತ ವಕೀಲರ ಆಫೀಸುಮಗ್ಗುಲಲ್ಲೆ ಇದೆ. ಕಕ್ಷಿಗಾರರು, ಫಿರ್ಯಾದಿಗಳು, ಬೇರೆ ವಕೀಲರು ಬಂದು ಹೋಗುವ ಜಾಗ. ಕಮ್ತಿಯವರ ವ್ಯಾಪಾರವೂ ಭರ್ಜರಿಯೇ. ಶಾರದೆಗೆ ಮೊದಲ ಎರಡು ಸಂಬಂಧ ತಂದದ್ದು ಅವರೇ. ಅದು ಆಗದೆ ಈಗ ಬಂದದ್ದು ಅವರ ಹೇಳಿಕೆಯಿಂದಲೇ.

"ಪ್ರಯತ್ನ ನಮ್ಮದು. ಫಲ ದೇವರ ಇಚ್ಚೆ" ಎನ್ನುವ ಕಮ್ತಿಯವರ ಮಾತಿಗೆ ಎಲ್ಲರೂ ಸೈ. ಗೌರಿಗೆ ಕುತೂಹಲ. ಕಾಲುಗಳು ಒಳ ನಿಲ್ಲುವುದೇ ಇಲ್ಲ. ಒಳಬಾಗಿಲಿನಿಂದ ಹೊರಬಿದ್ದು ಮುಖಮಂಟಪದಲ್ಲಿ ಇಣುಕಿ ಅಪ್ಪಯ್ಯನ ಕಣ್ಣ ಕೊಡಿಯಲ್ಲಿ ಅಸಮಾಧಾನ ಕಂಡು ನಾಣಿಯನ್ನು ಎಳೆದುಕೊಂಡು ಹಿಂಬದಿಯ ಅಂಗಳಕ್ಕೆ ಹಾರಿದಳು. "ನಡಿ ನಾಣಿ, ದೊಡ್ಡವರ ಮಾತಿಗೆ ನಾವು ಮೂಗು ತುರುಕೂಕಾಗ. ಬಾ, ಎಂತಾದರೂ ಆಡ್ವ. ಕುಂಟಲಪಿ ಆಗ್ದಾ? ಬಿಸಿಲು ಹೆಚ್ಚಿಲ್ಲೆ"

ಸೆಗಣಿ ಸಾರಿಸಿ ಹದ ಮಾಡಿದ ಹಿಂಬದಿ ಅಂಗಳದ ಖಾಲಿ ಜಾಗದಲ್ಲಿ ಗೌರಿ ಮಸಿಕೆಂಡದಿಂದ ಕುಂಟಲಪಿಯ ಮನೆ, ಅದರ ಒಳಗೆ ಗೆರೆ ಎಳೆದಳು. ಚಪ್ಪಟೆ

ಕಲ್ಲಿನಲ್ಲಿ ಶುರುವಾದ ಆಟದಲ್ಲಿ ಮೊದಲು ಆಡಿದ್ದು ನಾಣಿ. ಬಿಲ್ಲೆಯನ್ನು ಒಂಟಿ ಕಾಲಿನಿಂದ ಮನೆಯಿಂದ ಮನೆಗೆ ದೂಡಬೇಕು. ದೂಡಿದಷ್ಟು ದೂರಕ್ಕೆ ಒಂಟಿ ಕಾಲಲ್ಲಿ ಹಾರಿ ಮೆಟ್ಟಿ ಮುಂದಿನ ಮನೆಗೆ ದೂಡಬೇಕು. ಕಾಲು ಬಿಟ್ಟರೆ ಅಥವಾ ಮನೆಗಳ ಗೆರೆ ಮೇಲೆ ಬಿಲ್ಲೆ ಬಿದ್ದರೆ ಮುಂದೆ ಅವರು ಔಟ್. ನಾಣಿ ದೂಡಿದ ಬಿಲ್ಲೆ ಒಂದನೆ ಮನೆಯಿಂದ ಮುಂದೆ ಹೋಗಲೇ ಇಲ್ಲ. "ಅಕ್ಕ, ನೀ ದೊಡ್ಡ ಮನೆ ಬಿಡಿಸಿ ನಂಗೆಒಂದು ಕಾಲಲ್ಲಿ ಹಾರೂಕೆ ಆತಿಲ್ಲೆ. ಸಣ್ಣ ಮನೆ ಹಾಕು" ಗೋಗರೆದ.

"ಮಂಗಾ! ಸರಿಯಾಗಿ ಬಿಲ್ಲೆ ದೂಡಿ ಹಾಕು" ಅವಳು ತೂರಿದ ಬಿಲ್ಲೆ ಮೂರನೇ ಮನೆಯ ಗೆರೆ ಮೇಲೆ ಬಿದ್ದು ಅವಳು ಔಟ್. ನಾಣಿಯ ಮುಂದಿನ ಸರದಿಯಲ್ಲಿ ಬಿಲ್ಲೆ ಮನೆ ಹೊರಗೆ. ಗೌರಿಯ ಸರದಿ ಬಂದಾಗ ಅದು ಇನ್ನೆಲ್ಲೋ. ಆಟದ ಮನಸ್ಸು ಇಲ್ಲದೆ ನಾಣಿ ಕಾಲಿನಿಂದ ಮಸಿಗೆರೆ ಅಳಸಿ, "ಕಮಲತ್ತೆ ಹೇಳ್ತಾಳೆ ಇದು ಹುಡುಗೀರ ಆಟವಂತೆ. ನಾನು ಹುಡುಗಿಯಲ್ಲ. ನಂಗೆ ಬೇಡ."

ಅದು ಹುಡುಗಿಯರ ಆಟವೆಂದು ಯಾರು ಅವನ ತಲೆಗೆ ಹುಳು ಬಿಟ್ಟದ್ದೋ? ಕರೆದರೆ ನಾಣಿ ಈಗೆಲ್ಲ ಬರುವುದೇ ಇಲ್ಲ. ಆ ಕುದ್ರುವಿನಲ್ಲಿ ಇರುವುದು ಕೆಲವೇ ಕೆಲವು ಮನೆಗಳು.ಮಕ್ಕಳ ಸಂಖ್ಯೆ ಹೆಚ್ಚಿಗೆ ಇದ್ದರೂ ಎಲ್ಲರೂ ನಾಣಿ ವಯಸ್ಸಿನವರು. ಅವಳದೇ ವಯಸ್ಸಿನ ಬಾಯಮ್ಮನ ಮಗಳು ಸಿಸಿಲಾ, ಲಿಂಗಣ್ಣನ ಮೊಮ್ಮಗಳು ನಿಂಗಿ ಇಬ್ಬರೇ. ವಿದ್ಯೆಯ ಗಂಧಗಾಳಿಯಿಲ್ಲದೆ ತಾಯಂದಿರ ಸೆರಗಿನ ಹಿಂದೆ ಅವರ ಪಡಿಯಚ್ಚುಗಳು. ಬಾಯಮ್ಮನ ಅಂಗಳದ ತುಂಬ ಮಲ್ಲಿಗೆ ಕೃಷಿ, ಸೇವಂತಿಗೆ ಬೆಳೆ. ಅಬ್ಬಲಿಗೆ, ಗೋರಟೆ ಅಲಾಯಿದ. ಗಂಡ ತರಕಾರಿ ಬೆಳೆಯುವವ. ಪ್ರತಿದಿನ ಇವರು ಬೆಳೆದದ್ದು ಮೊದಲ ದೋಣಿಯಲ್ಲಿ ಸಾಸ್ತಾನ ಪೇಟೆಗೆ, ಅಲ್ಲಿಂದಾಚೆ ಮೋಟಾರು ಬಂಡಿಯಲ್ಲಿ ಐರೋಡಿ ತನಕ ಹೋಗುತ್ತದೆ. ತಾಜಾ ಹೂವಿಗೆ ಬೇಡಿಕೆ ಜಾಸ್ತಿ. ಕೋಟೇಶ್ವರದ ಅಮೃತೇಶ್ವರಿ ದೇವಸ್ಥಾನಕ್ಕೆ ಇವಳು ಬೆಳೆದ ಹೂವುಗಳಿಗೆ ಹೆಚ್ಚಿನ ಆದ್ಯತೆ. ಸಿಸಿಲಾ ಅವಳ ಇಬ್ಬರು ತಂಗಿಯರೂ ತಾಯಿಗೆ ಜೊತೆಗೂಡುತ್ತಾರೆ. ನಿಂಗಿ ಗೌರಿಗಿಂತ ಎರಡುವರ್ಷಕ್ಕೆ ದೊಡ್ಡವಳು. ಅಪ್ಪನ ಜೊತೆ ಈ ಮನೆಗೆ ಕೂಲಿ ಕೆಲಸಕ್ಕೆ ಬರುತ್ತಾಳೆ. ಸಂಜೆ ಗೌರಿ, ನಾಣಿ ಆಟಕ್ಕೆ ಕರೆದರೆ ಹೆಚ್ಚಿನ ಮಕ್ಕಳು ಅವರ ಮನೆ ಬಳಿ ಬರುವುದುಂಟು. ಕುಂಟಲಪಿ, ಮನೆಯಾಟ, ಮರಮಂಗನಾಟ, ಕಣ್ಣಾಮುಚ್ಚಾಲೆ, ಗೋಲಿಯಾಟ. ಗೌರಿ ಮುಕ್ರಿ ಇವರಿಗೆಲ್ಲ.

"ಮೆಣಸಿನ ಕಾಯಿ ಅಷ್ಟು ದೊಡ್ಡ ಇದ್ದಿ, ಹುಡುಗೀರ ಆಟ ಅಂತ ಸಸ್ಸಾರ ನಿನಗೆ. ಹೋಗ್ಲಿ ಬಿಡು. ಸಂಜೆ ಎಲ್ಲರೂ ಮರಮಂಗನಾಟ ಆಡೋಣ್ವಾ?"

"ಅದಿನ್ನೂ ಮಜ. ಹೇಳಿ ಬರ್ಲಾ ಎಲ್ಲರಿಗೂ?"

ಅವನ ತಲೆಮೇಲೆ ಮೊಟಕಿದಳು, "ಮನೇಲಿ ಜನ ಇದ್ದೋ ಗೊತ್ತಿಲ್ಯಾ?. ಈಗೆಲ್ಲಿಗೆ ಸವಾರಿ?"

ಮುಖ ಸಣ್ಣದು ಮಾಡಿ ಜಾರುತ್ತಿರುವ ಚಡ್ಡಿ ಮೇಲಕ್ಕೆಳೆದು ಒಳಗೆ ಓಡಿದ. ದೊಡ್ಡದಾಗಿ ಆಕಳಿಸಿದಳು ಗೌರಿ. ಬೇರೆ ದಿನಗಳಲ್ಲಿ ಹೀಗೆ ಆಕಳಿಕೆ ಇಲ್ಲದೆ ಅಕ್ಕ ತಮ್ಮ ದೊಡ್ಡ ಸ್ವರದಲ್ಲಿ ಹಾಡುತ್ತ, ನಗೆ ಮಾಡುತ್ತ ತಮ್ಮದೇ ಸಾಮ್ರಾಜ್ಯದಲ್ಲಿ. ಹಾಂ, ಇವತ್ತು ಬಂದವರ ಮುಂದೆ ಬಿಗುಮಾನ! ಖಿಲ್ಲನೆ ನಕ್ಕಳು. ಶಾರದತ್ತೆ ಮದುವೆ ಬೇಗ ಇಕ್ಕು. ಅಪ್ಪಯ್ಯ ಹೇಳಿದ್ದಲ್ಲವ? ಕಮ್ತಿಯವರು ಹೇಳಿದ್ದಂತೆ "ಬಂದ ಕುಳ ಶಾರದೆಯನ್ನು ಒಪ್ಪಿದರೆ ಹದಿನೈದು ದಿನದಲ್ಲಿ ಮದುವೆ ಮಾಡಿಕೊಡಬೇಕು. ಆಗಬಹುದಾ?"

ಅಪ್ಪಯ್ಯ ಹದಿನೈದು ದಿನವಲ್ಲ, ನಾಳೆಯೇ ತಯಾರು. ಆದರೆ ತನಗೊಂದು ಸಿಲ್ಕಿನ ಜರಿ ಪರಕರ ಬೇಕು. ಅದಿಲ್ಲದಿದ್ದರೆ ಯಾರಿಗೆ ಬೇಕು ಮದ್ವೆ ಗೌಜು? ಒಳಗಿಂದ ಅಜ್ಜಯ್ಯನ ಸ್ವರ, "ನಮ್ಮ ಕೂಸು ಎಲ್ಲಿ? ಮದುವಣಗಿತ್ತಿ ಹಂಗೆ ಅಡಗಿತ್ತಾ.? ಹೊರಗೆ ಬರೂಕೆ ಹೇಳಿ" ಅಜ್ಜಯ್ಯ ಬಂದವರಿಗೆ ಗೌರಿಯನ್ನು, ನಾಣಿಯನ್ನು ಪರಿಚಯಿಸಿದರು. ಅವರೂ ಮೆಚ್ಚುಗೆಯಲ್ಲಿ ಮಕ್ಕಳನ್ನು ನೋಡಿದರು,

"ಎಲ್ಲಿ ಶಾಲೆಗೆ ಹೋಗ್ತಿದ್ದಾರೆ? ಏನು ಓದ್ತಾ ಇದ್ದಾರೆ" ಹುಡುಗನ ತಂದೆ ಕೇಳಿದರು.

ಇಬ್ಬರೂ ಶಾಲೆಗೆ ಹೋಗುತ್ತಿಲ್ಲವೆಂದು ಸುಬ್ಬಪ್ಪಯ್ಯ ಹೇಳುವಾಗ ಮುಖ ಎತ್ತಿದಳು ಗೌರಿ. ಆಗ ಕಿರುಮೀಸೆಯಇನ್ನೂ ಎಳಸು ಮುಖದ ಯುವಕ ಅವಳನ್ನೇ ನೋಡುತ್ತಿದ್ದ. ಅಲ್ಲ, ಎಲ್ಲರೂ ಈ ಪ್ರಶ್ನೆ ಯಾಕೆ ಕೇಳ್ತಾರೋ. ಇಬ್ಬರೂ ಶಾಲೆಗೆ ಹೋಗುವುದೇ? ಹೊಳೆ ಮಧ್ಯದ ಕುದ್ರುವಿನಿಂದ ಶಾಲೆಗೆ ಹೋಗಿ ಬಪ್ಪದು ಬಾಳೆಹಣ್ಣು ಸುಲಿದು ತಿಂದ ಹಾಂಗಾ? ಮನೆಯಲ್ಲೇ ಅಕ್ಷರಾಭ್ಯಾಸ ಮಾಡಿಸಿದ್ದು ಅಪ್ಪಯ್ಯನೇ. ಓದಲು ಬರೆಯಲು ಹೇಳಿಕೊಡುವುದು ಆಜ್ಜಯ್ಯ. ಒಂದರಿಂದ ಇಪ್ಪತ್ತರ ತನಕ ಮಗ್ಗಿ, ವಾರ, ತಿಥಿ ಹೆಸರು, ಅಶ್ವಿನಿ ಭರಣಿ ನಕ್ಷತ್ರಗಳ ಹೆಸರು, ವಾರಕ್ಕೆ ಎಷ್ಟು ದಿನ, ವರ್ಷಕ್ಕೆ ಎಷ್ಟು ತಿಂಗಳು, ಎಷ್ಟು ದಿಗಳು? ತನಗೂ ನಾಣಿಗೂ ಬಾಯಿಪಾಠ. ಕೂಡಿಸು ಕಳೆ, ಭಾಗಿಸು ಗುಣಿಸು ತಮಗೆ ಉತ್ತರ ನಾಲಿಗೆಯಲ್ಲೇ. ಅಪ್ಪಯ್ಯ ರಾಮಾಯಣದ ಪುಸ್ತಕ ತಂದಾಗ ತಾವು ಪೂರಾ ಓದಿದ್ದು ಸುಳ್ಳಾ? ಶಾಲೆಗೆ ಹೋಗಲಿಲ್ಲ ಅಂದ್ರೆ ಎಂತದೂ ಗೊತ್ತಿಲ್ಲೆಯಾ? ಆದರೂ ಅಪ್ಪಯ್ಯ ನಾಣಿ ಒಬ್ಬ ಶಾಲೆಗೆ ಹೋಗಿ ಕಲಿಯಲೆಂದು ಕಳೆದ ವರ್ಷ ಚಕ್ರೀಅಮ್ಮಮ್ಮನ ಮನೆಗೆ ಕಳುಹಿಸಿದ್ದ. ಅಲ್ಲಿ ಗಂಪತಿ ಮಾವ, ನಾರ್ಣಮಾವ, ಅಪ್ಪೂ ಮಾವನ ಮಕ್ಕಳಿದ್ದರು. ಅವರೆಲ್ಲರೂ ಶಾಲೆಗೆ ಹೋಗುವವರೇ. ಮಕ್ಕಳದೇ ಪ್ರಪಂಚ. ನಾಣಿ, ಗೌರಿಗೆ ಚಕ್ರೀ ಅಮ್ಮಮ್ಮನ ಮನೆ ಅಂದರೆ ಸೈ, ಅತ್ತ ಹೋದರೆ ಬರುವ

ಮನಸ್ಸು ಇಲ್ಲ. ಈ ನಾಣಿ ಬಂದಿದ್ದ ಒಬ್ಬನೇ. ಅಪ್ಪಯ್ಯ ಶಾಲೆಗೆ ಸೇರಿಸಿ ತಿಂಗಳು ಆಗಿರಲಿಲ್ಲ ಜನ ಮರಳಿ ಮನೆಗೆ! ಒಬ್ಬನೇ ಬಂದದ್ದು. ಶಾಲೆಯಿಂದಲೇ ಪಾಟಿ ಚೀಲ ಹೆಗಲಿಗೇರಿಸಿ ಅಲ್ಲಿ ದೋಣಿಹತ್ತಿ, ಅಲ್ಲ, ಅಂಬಿಗ ಅಪ್ಪಯ್ಯನ ಗುರುತಿನವ. ದಮ್ಮಡಿ ತಕ್ಕೊಳ್ಳದೆ ಹೊಳೆಬದಿಗೆ ದೋಣಿಯಿಂದ ಇಳಿಸಿ ಹೋಗಿದ್ದ. ಬಿತ್ತು ಅಪ್ಪಯ್ಯನ ಕೈಯ್ಯಿಂದ ಪೆಟ್ಟು. "ಅಕ್ಕ ಇಲ್ಲದೆ ನಾನೂ ಹೋಗ್ತಿಲ್ಲೆ, ನಂಗೆ ಬೇಡ ಆ ಮನೆ"ಪಟ್ಟು ಹಿಡಿದು ಅಲ್ಲಿಗೆ ಮುಗೀತಲ್ಲ ಅವನ ಶಾಲೆಯ ಅವತಾರ. ಶಾಲೆಗೆ ಹೋಗದಿದ್ದರೂ ಈಗೀಗ ಅವನಿಗೂ ಗೌರಿಗೂ ಓದುವ ಹುಚ್ಚು. ಅಪ್ಪಯ್ಯ ಯಾವ ಪುಸ್ತಕ ತಂದರೂ ಪುಟ ಬಿಡಿಸಿ ಓದಬೇಕು. ಮತ್ತೆ ಇವರೆಂತಾ ರಾಗವಾಗಿ ಶಾಲೆಗೆ ಹೋಗ್ತಿದ್ದಾರಾ? ಕೇಳುವುದೇ. ಜಂಬದ ಜನ. ಅವಳು ತಮ್ಮನಿಗೆ ಕಣ್ಣಿನಲ್ಲೇ ಸನ್ನೆ ಮಾಡಿ ಕೆನ್ನೆ ತಟ್ಟಿದಳು.

ಕಾಫ಼ಿ ತಿಂಡಿ ಆಯಿತು. ಮಾತುಕಥೆ ಮುಗಿಯಿತು. ಬಂದವರು ವಾರದಲ್ಲಿ ಹೇಳುತ್ತೇವೆಂದು ಹೊರಟು ಹೋದರು. ಅಪ್ಪಯ್ಯ ಅವರನ್ನು ದೋಣಿಗೆ ಬಿಡಲು ಹೊಳೆತೀರಕ್ಕೆ ಹೋದ ನಂತರ ಗೌರಿ ಶಾರದತ್ತೆಯ ಕೋಣೆಗೆ ಬಂದಳು. ಉಟ್ಟ ಸೀರೆ ಬಿಚ್ಚಿ ಸಾದಾ ನೂಲಿನ ಸೀರೆ ಉಡುತ್ತಿದ್ದ ಶಾರದತ್ತೆ, "ಸಂಪಿಗೆ ಹೂವು ಮುಡಿದೇ ಇದ್ದದ್ದು ಒಳ್ಳೆಯ ಶಕುನ ಗೌರಿ. ನೆಗಾಡಿ ಹೋದದ್ದು ಕಂಡ್ರೆ ಒಪ್ಪಿಗೆ ಆಗಿದ್ದೀತು ಅಲ್ವ?"

ಗೌರಿ ಶಾರದತ್ತೆಯ ಕುತ್ತಿಗೆಗೆ ಜೋತು ಬಿದ್ದಳು. "ಧಾಮ್ ಧೂಂ ಮದುವೆ. ರಾಜಂಗೂ ರಾಣಿಗೂ ಮದುವೆ!"

ಶಾರದತ್ತೆಯ ಮನಸ್ಸು ಸೂಕ್ಷ್ಮ. ಗುಲಗುಂಜಿ ತೂಕದ ಹೊಸ ಬೆಳವಣಿಗೆ ಕಾಣದಂತೆ ಸ್ವಲ್ಪ ಮೊದಲು ಇದ್ದ ನವಿರಾದ ಸುಖ ಆವಿಯಾಗಿ ಹೋದೀತೇ? ಉತ್ತರಿಸುವರೇ ಕಮ್ತಿಯವರು? ಬೇಡ ಎನ್ನುವನೇ ಹುಡುಗ? ಅವರ ನಗುವಿನ ಹಿಂದೆ ಬೇರಾವ ಮುಖವಾಡ ಇದ್ದೀತೇ?ಇದೇ ಚಿಂತೆ. ಅವರ ಒಪ್ಪಿಗೆ ಬಂದ್ರೆ ವಾರದ ಮಧ್ಯೆ ಬರುತ್ತೇನೆ ಎಂದಿದ್ದಅಪ್ಪಯ್ಯ. ಗೌರಿ ನಾಣಿಗೆ ಪ್ರತಿದಿನ ಹೊಳೆ ದಡದಲ್ಲಿ ಕಾಯುವ ಕೆಲಸ. ಆದರೆ ಅಪ್ಪಯ್ಯ ಬಂದದ್ದು ವಾರದ ಕೊನೆಗೆ ಎಂದಿನಂತೆ ಶನಿವಾರ ಸಂಜೆ. ಅಪ್ಪಯ್ಯನನ್ನು ಕಂಡದ್ದೇ ಇಬ್ಬರೂ ವರದಿ ಹೇಳುವವರೇ. ಅಜ್ಜಮ್ಮ, ಸುಶೀಲಚಿಕ್ಕಿಯಿಂದ ಹಪ್ಪಳ ಸಂಡಿಗೆ ತಯಾರಿ, ಹೊಸ ಬಟ್ಟೆ ಬರೆ ಯಾರ್ಯಾರಿಗೆ ಬೇಕು? ಪಟ್ಟಿ ಹಾಕುವುದು ಅಜ್ಜಯ್ಯ. ಬಂಧು ಬಳಗದ ಕರೆಯೋಲೆಯ ಪಟ್ಟಿ ಆಯಿಯಿಂದ, ಚಕ್ರೀ ಮನೆಗೆ ಆ ಬದಿಗೆ ಹೋಗುವ ದೋಣಿಯವನ ಮೂಲಕ ಶುಭ ವಾರ್ತೆಯ ಕಾಗದ ಮೊನ್ನೆಯೇ ಕಳಿಸಿಯಾಗಿದೆ.

"ನನಗೆ ಬಣ್ಣದ ಅಂಗಿ ಚಡ್ಡಿ, ಅಕ್ಕನಿಗೆ ಸಿಲ್ಕ ಪರಕರ ಮೊದಲೇ ತೆಗೀಬೇಕು."

ನಾಣಿ ಹೇಳುತ್ತಿದ್ದರೆ ಗೌರಿ, "ಅಪ್ಪಯ್ಯ, ಸಾಸ್ತಾನದಲ್ಲಿ ಬಳೆಗಾರ ಇಲ್ಲವಂತೆ. ಚಕ್ರೀ ಅಮ್ಮಮ್ಮನ ಊರಿನಲ್ಲಿ ಬಳೆಗಾರ ಇದ್ದಾನಂತೆ. ನಮ್ಮ ಕೈ ಹಾಳತಕ್ಕೆ ಒಪ್ಪುವ ಬಣ್ಣದ ಬಳೆಗಳನ್ನು ಅವನೇ ಹೊಳೆಬಾಗಿಲಿಗೆ ಬಂದು ತೊಡಿಸ್ತಾನಂತೆ. ನನಗೆ ಕೈತುಂಬ ಬಳೆ ಬೇಕು ಗಿಲಿ ಗಿಲಿ!."

"ಆಕ್ಕನ ಕಾಲಿನ ಗೆಜ್ಜೆ ಹಳ್ತಾಯ್ತು. ಮದ್ವೆಗೆ ಹೊಸ ಗೆಜ್ಜೆ."ಅಕ್ಕನ ಪರ ತಮ್ಮನ ವಕಾಲತ್ತು?

ಆದರೆಅಪ್ಪಯ್ಯನಲ್ಲಿ ಲವಲವಿಕೆ ಇರಲಿಲ್ಲ. ಮನೆ ಸೇರಿದ ಮೇಲೆಯೇ ವಿಷಯ ತಿಳಿಯಿತು ಹುಡುಗ ಒಪ್ಪಿದ್ದಾನೆ. ಶಾರದೆಯನ್ನಲ್ಲ, ಗೌರಿಯನ್ನು! ದೊಡ್ಡ ಸುದ್ದಿ. ಸಂತೋಷದ ಮತ್ತು ಆಘಾತದ ಸುದ್ದಿ. ಮದುವೆ ಮಾಡಲು ಅಡ್ಡಿಯಿಲ್ಲ, ಚಪ್ಪರ ಎಬ್ಬಿಸುವುದೇ ಮನೆ ಅಂಗಳದಲ್ಲಿ! ಅಜ್ಜಮ್ಮ, ಸುಶೀಲಚಿಕ್ಕಿ, ಕಮಲತ್ತೆಗೆ ಈ ಸುದ್ದಿ ಅರಗಿಸಿಕೊಳ್ಳಲು ಸ್ವಲ್ಪ ಕಷ್ಟವಾಯಿತು. ಹುಡುಗ ಒಪ್ಪಿದ, ಒಪ್ಪಿಯೇಬಿಟ್ಟ. ಶಾರದೆಯ ಬದಲಿಗೆ ಗೌರಿಯನ್ನು. ಇದೇ ಅಲ್ಲವೇ ವಿಪರ್ಯಾಸ? ಈ ಒಂದುವಾರ ಅವರ ಬಾಯಲ್ಲಿ ಹುಡುಗನದೇ ಗುಣಗಾನ. ಚೆಂದ, ವಿನಯಶೀಲ, ಮರ್ಯಾದಸ್ಥ, ಈ ಮನೆ ಅಳಿಯನಾದರೆ ತಾವೇ ಪುಣ್ಯವಂತರು. ಬಹಳ ಸಮಯದ ನಂತರ ಶಾರದತ್ತೆಗೆ ಒಳ್ಳೆಯ ಹುಡುಗ ಸಿಕ್ಕಿದನೆಂದು ಸಂಭ್ರಮವಿತ್ತು. ಆದರೆ ಅಪ್ಪಯ್ಯ ಹೇಳಿದ್ದೇನು? ಸುಶೀಲಚಿಕ್ಕಿ ಮೊದಲೇ ಊಹಿಸಿದ್ದಳಂತೆ, ಹುಡುಗನ ಕಣ್ಣುಗಳು ಶಾರದೆಯ ಬದಲಿಗೆ ಗೌರಿಯನ್ನು ದಿಟ್ಟಿಸಿ ನೋಡಿದಂತೆ, ಪೂರಾ ಆಹ್ವಾನ ಮಾಡಿದಂತೆ, ಚೆಂದದ ಒಂದು ಮುಗುಳ್ನಗು ಕಾಣಿಸಿತಂತೆ ಎಂದು ಆತ ಬಂದು ಹೋದ ದಿನವೇ ಆಯಿಗೆ ಗುಟ್ಟಿನಲ್ಲಿ ಹೇಳುತ್ತ, "ಅಕ್ಕಯ್ಯ, ಎಂತಾದರೂ ಎಡವಟ್ಟು ಆಯ್ತಾ? ನಾ ಈ ಪ್ರಶ್ನೆ ಕೇಳೂಕಾಗ. ನನ್ನ ತಲೆ ತುಂಬ ಗಿಜಿ ಗಿಜಿ.'

"ಎಂತದೂ ಇಲ್ಲೆ. ಗೌರಿಗೆ ಸುಮ್ಮನೆ ಇರೂದೂ ಗೊತ್ತಿಲ್ಲೆ. ಜನ ಬಂದಾಗ ಹಿಂದಿನ ಅಂಗಳದಲ್ಲಿ ಕುಂಟಾಬಿಲ್ಲೆ ಆಡಿದ್ದು ಅವನೂ ನೋಡ್ತಾ ಇದ್ದ. ಮಗೂನ ಮುಗ್ಧತೆಗೆ ನಗು ಬೆರೆಸಿದಂತೆ ಅಜ್ಜಯ್ಯನ ಬದಿಗೆ ಬಂದು ಕೂತಾಗಲೂ ಅವ ನೋಡ್ತಾ ಇದ್ದ. ಸಣ್ಣದಲ್ದ? ಇದರ ವಯಸ್ಸಿನ ಒಂದು ತಂಗಿ ಇದೆಯಂತೆ ಅವನಿಗೆ. ಅದಕ್ಕೆ ಶಾಲೆ ಪಾತು ಏನು ಓದಿದ್ದು ಕೇಳಿದ್ದು ತಪ್ಪೇನು?"

ತಪ್ಪು ಆಗಿತ್ತು. ಎಳೆ ಶರೀರದ ಕೋಮಲೆ ಬೆಪ್ಪಳಂತೆ ಅರೆ ನಿಮಿಷದಲ್ಲಿ ದೊಡ್ಡ ಹೆಂಗಸಿನಂತಾಗಿ ನಿಂತುಬಿಟ್ಟಳು. ಗಂಗೊಳ್ಳಿ ಹೊಳೆ ಉಕ್ಕಿ ಉಕ್ಕಿ ಹರಿದಂತೆ, ಬಿರುಗಾಳಿ ಬೀಸಿದಂತೆ ಎಲ್ಲ ಅಯೋಮಯ. ಅಜ್ಜಮ್ಮ ಮೊಮ್ಮಗಳನ್ನು ಎಳೆದು ನಸು ಬೆಳಕಿಗೆ

ನಿಲ್ಲಿಸಿದಳು, "ತಾಯಿ ಮೂಕಾಂಬಿಕೆ, ಏನು ನಿನ್ನ ಅದೃಷ್ಟವೋ! ಬೆರಗು ಪಡೆದೆನಮ್ಮ. ಮದುವೆಯೋಗ ಬರುವುದು ಸಾಮಾನ್ಯವೇ ಈ ವಯಸ್ಸಿನಲ್ಲಿ! ಎಲ್ಲ ನಿನ್ನ ಲೀಲೆ."

ಆಯಿ ಮೈಮರೆತಿದ್ದಳು. ತಾವು ನಿರೀಕ್ಷಿಸದೇ ಇದ್ದದ್ದು ಮಗಳಿಗೆ ಹೀಗೆ ಸಂಬಂಧ ಒದಗಿ ಬರಬೇಕೇ? ಶಾರದತ್ತೆಯ ನಸೀಬು. ಒಳಗೆ ಬಿಕ್ಕುತ್ತಿದ್ದಾಳೆ. ಮೂರಕ್ಕೆ ಮುಕ್ಕ ಆಯ್ತಲ್ಲ ಹೆಣ್ಣೇ! ರಾತ್ರೆ ಎಣ್ಣೆ ತೀರಿ ದೀಪ ಮಂಕಾಗುವ ತನಕವೂ ಪಡಸಾಲೆಯಲ್ಲಿ ಮಾತು ಮಾತು, ಮಾತು. ಶಾರದೆಗಿಂತ ಚಿಕ್ಕವಳು ಹನ್ನೊಂದರ ಬಾಲೆ. ಇಷ್ಟು ಬೇಗ ಒಂಬತ್ತು ಮೊಳದ ಸೀರೆ ಉಡಿಸಿ ಗಂಡನ ಮನೆಗೆ ಕಳುಹಿಸುವುದೇ? ಬೇಡವೇ ಬೇಡ ಎನ್ನಲು ಸಬೂಬು ಇಲ್ಲ.

"ನಾ ಮದಿ ಆದಾಗ ಎಂಟರ ಪ್ರಾಯ." ಅಜ್ಜಮ್ಮ ಕವಳ ಬಾಯಿಗೆ ಹಾಕಿ ಕೊಳ್ಳುತ್ತ, "ನಾ ಬರಲಿಲ್ಯಾ ಗಂಡನ ಮನೆಗೆ, ಈ ಕೂಪಕ್ಕೆ? ದೊಡ್ಡ ಸಂಸಾರ. ಇಷ್ಟು ವರ್ಷದಿಂದ ಇದ್ದೆ ಇಲ್ಲೇ ಗೂಟಕ್ಕೆ ಕಟ್ಟಿದ ದನದ ಹಾಂಗೆ."

"ಶರಾವತಿಗೂ ಎಂಟರಲ್ಲೇ ಮದ್ವೆ ಆದದ್ದು." ಸುಬ್ಬಪ್ಪಯ್ಯರಿಗೆ ಸಂತೃಪ್ತಿಯ ನಗು, "ಇವಳನ್ನು ನಾವು ನೋಡಲು ಚಕ್ರೀ ಮನೆಗೆ ಹೋದಾಗ ಸಣ್ಣ ಅಂಗಿ ಹಾಕ್ಕಂಡ ಹೊರಗೆ ಬಂದಿತ್ತು ಈ ಕೂಸು. ಈಗ ನೋಡು ನಮ್ಮೆಲ್ಲರ ಜುಟ್ಟು ಅವಳ ಕೈಯ್ಯಲ್ಲಿ. ಇವಳಂತೆ ಇನ್ನೊಬ್ಬರನ್ನು ನಾ ಕಾಣೆ. ಇವಳದೇ ಪಡಿಯಚ್ಚು ನಮ್ಮ ಮೊಮ್ಮಗಳು. ಇದ್ದ ಮನೆಗೂ ಹೋದ ಮನೆಗೂ ಹೆಸರು ತರುವ ಹುಡುಗಿ."

ಸುಶೀಲಚಿಕ್ಕಿ ತಟ್ಟನೆ ಅಂದಳು, "ವಿಚಾರ ಮಾಡಿ ಅಣ್ಣಯ್ಯ, ಕೂಸಿಗೆ ತ್ರಾಸ ಆಗ್ಬಾರದಲ್ಲ. ಅವರದು ದೊಡ್ಡ ಕುಟುಂಬವಂತೆ. ಇವ ಹಿರಿಮಗ. ಇವನ ಹಿಂದೆ ಏಳು ಚಿಳ್ಳೆಪಿಳ್ಳೆಗಳು"

"ಇದ್ದಾವೆಂದು ಗೊತ್ತು. ಕೂಡು ಕುಟುಂಬ. ಹುಡುಗನ ಮೂವರು ಚಿಕ್ಕಪ್ಪಂದಿರು, ಅವರ ಸಂಸಾರ, ಮಕ್ಕಳು ಮರಿಮಕ್ಕಳು" ಸುಬ್ಬಪ್ಪಯ್ಯರ ಸ್ವರ ನಿಧಾನಕ್ಕೆ ತಗ್ಗಿತು. ಯಾವುದೋ ಕಾಣದ ಭೂತದಂತಹ ಅರಮನೆಯಲ್ಲಿ ತಮ್ಮ ಪುಟ್ಟ ಮೊಮ್ಮಗಳನ್ನು ನಿಲ್ಲಿಸಿ ಅಳೆದು ಸುರಿದು ನೋಡಿ ಹಿತವಾಗಲಿಲ್ಲ,

"ಮನೆ ಜೇನುಗೂಡು ಅಲ್ಲವಾ. ಅಲ್ಲಿ ಹಿರಿ ಸೊಸೆ ಈ ಪುಟ್ಟ ಕೂಸು. ಈ ಪಟ್ಟದ ಜೊತೆ ಜವಾಬ್ದಾರಿಯ ನೊಗ ಹೆಗಲಮೇಲೆ." ಅನುಭವದ ಮಾತು ಹೇಳಿದಳು ಸುಶೀಲಚಿಕ್ಕಿ. "ಆದ್ರೆ ಈಗ ಶಾರದಾ ಕಾನೂನು ಮಾಡ್ತದಂತೆ ಬ್ರಿಟಿಷ್ ಸರಕಾರ. ಅದರ ಪ್ರಕಾರ ಮದಿ ಮಾಡೂದಕ್ಕೆಹುಡುಗಿಗೆ ಹದಿನಾಲ್ಕು ವರ್ಷ ಆಯೆಕ್ಕು. ಹುಡುಗರಿಗೆ ಹದಿನೆಂಟು. ಆ ಲೆಕ್ಕ ಕಂಡರೆ ಗೌರಿಗೆ ಇನ್ನೂ ಹನ್ನೊಂದು."

"ಆ ಕಾನೂನು ನಂಬಿಕಂಡ್ರೆ ನಾವು ಮದಿ ಮಾಡ್ದಾಂಗೆ. ಬಿಡು, ಅಲ್ಲವೇ ಸುಶೀಲಾ, ನಮ್ಮ ದೇಶದವರಿಗೆ ಮದುವೆಗೂ ಒಂದು ಕಾನೂನು ಬೇರೆಯವರು ಮಾಡೆಕ್ಕಾ?

"ನೀ ಹೇಳಿದ್ದು ಸರಿ ಅಣ್ಣಯ್ಯ, ಆದ್ರೆ ಆಡಳಿತ ಬೇರೆ ದೇಶದವರದು. ಅವರು ಎಚ್ಚರಿಸಿದರೂ ಕೇಳದಿದ್ದರೆ ಕಾನೂನು ತರಲೇ ಬೇಕಲ್ಲದ?ನಮ್ಮ ದೇಶದ ಉತ್ತರಭಾರತ, ಬಂಗಾಲದ ಹಲವು ಭಾಗದಲ್ಲಿ ತೊಟ್ಟಿಲು ಶಿಶುಗಳಿಗೆ ಮದುವೆ ಮಾಡ್ತವು. ಮಕ್ಕಳ ಆಟಿಕೆ ಗೊಂಬೆಗಳ ಮದುವೆಯಂತೆ. ಇದೆಂತ ಸರಿಯಾ?"

"ಆದರೆ ಕಾನೂನು ತಂದರೂ ಜನ ಎಚ್ಚತ್ತು ಕೊಳ್ಳದಿದ್ದರೆ ಅವು ಜಾರಿಗೆ ಬರುವುದು ಸುಲಭದ ಮಾತಲ್ಲ.ಅದನ್ನೇ ನಿನ್ನ ಕೇಳ್ತೆ, ಕಾನೂನು ಎಂತಕ್ಕೆ? ನಮ್ಮ ರೀತಿ ರಿವಾಜು ನಮ್ಮದೇ. ನಮ್ಗೆ ಆಗ್ತಾ ಇಲ್ಲದಾ ಕಂಡರೆ ಸಾಕು"

"ಸಮಾ ಹೇಳಿದ್ರಿ ಅಣ್ಣಯ್ಯ, ನಾನು, ಕಮಲಿ ಅಂಥವ್ರು ಸಣ್ಣದರಲ್ಲೇ ಮದಿ ಆಗಿ ಸುಖ ಗೋರಿಕಂಡದ್ದು ಸಾಕು. ಗೌರಿ ಚೂರು ದೊಡ್ಡ ಆಗಲಿ. ಶಾಲೆಗೆ ಹೋಗಿ ಬರಲಿ, ವಿದ್ಯೆ ಕಲಿಯಲಿ.ಆಮೇಲೆ ಕಂಡರಾಯ್ತು ಮದ್ವೆ ಮಾಣಿಯನ್ನು"

ಆದರೆ ಇತ್ತ ಅಜ್ಜಮ್ಮನಿಗೆ ಸಂಬಂಧ ಬಿಡುವ ಮನಸ್ಸಿಲ್ಲ. ಅವಳದು ಒಂದೇ ರಾಗ, "ಹುಡುಗಿಯರ ಮದುವೆ ವಯಸ್ಸು ಕಾಂಬಕಾಗ. ಸುಶೀಲ ಹೇಳಿದಾಂಗೆ ಮೊದಲೆಲ್ಲ ತೊಟ್ಟಿಲು ಶಿಶುಗಳಿಗೆ ಮದಿ ಮಾಡ್ತಿದ್ದವು. ನಮ್ಮ ಹುಡುಗಿಗೆ ಹನ್ನೊಂದು ಅಂದ್ರೆ ಸಣ್ಣ ವಯಸ್ಸಾ? ವಯಸ್ಸು ಲೆಕ್ಕಾಚಾರ ಎಂತಕ್ಕೇ? ಹುಡುಗ ಗಂಡುಗೋವಿ ಹಂಗಿದ್ರೆ ಸಾಕು. ಕೂಸಿನದು ಸುಖವಾದ ಬದುಕು, ಬಾಳ್ವೆ!"

ಒಳಕೋಣೆಯಿಂದ ಗೌರಿಯ ಖಿಲ್ ಖಿಲ್ ನಗುವ ಸದ್ದು. ಶಾರದತ್ತೆಯ ಬದಲು ತನಗೆ ಮದುವೆ! ಹೊಸಸೀರೆ ತೆಗೀತಾರೆ. ಅಜ್ಜಮ್ಮನ ಚಿನ್ನದ ಒಡವೆಗಳಿಂದ ಅಲಂಕಾರ ಮಾಡ್ತಾರೆ. ತಲೆ ಬಾಚಿ ಉದ್ದದ ಜಡೆ ಹಾಕಿ ಹೂವಿನ ಜಲ್ಲಿ ಕಟ್ತಾರೆ. ಕಾಲಿಗೆ ಗೆಜ್ಜೆ, ಕೈ ತುಂಬ ಬಳೆ. ಈ ಬಾರಿ ನನಗೆ ಬೇಕಾದ ಬಣ್ಣದ ಬಳೆ ತೊಡಿಸಲು ಚಕ್ರಿ ಅಮ್ಮಮ್ಮನ ಊರಿನ ಬಳೆಗಾರನಿಗೆ ಮೊದಲೇ ಹೇಳಬೇಕು. ಆಯಿ ಅಪ್ಪಯ್ಯನಿಗೆ ಹೇಳಿದರೆ ಸಾಕು ಎಲ್ಲಾ ಕೊಡ್ತಾರೆ ಅಲ್ಲದ? ಹಾಡು, ವಾಲಗ ಏನು ಗಮ್ಮತ್ತು. ಮತ್ತೆ ಮದುವೆ ಮಂಟಪಕ್ಕೆ ನನ್ನನ್ನು ಎತ್ತಿಕೊಂಡು ಹೋಗುವುದು ಯಾರು? ಗಂಪತಿ ಮಾವನಾ? ಅಪ್ಪೂ ಮಾವನಾ? ದೇವರನ್ನು ಎತ್ತಿದಂಗೆ ನನ್ನನ್ನೂ ಎತ್ತಿಕೊಂಡು ಹೋಗ್ತಾರಲ್ಲದ?

"ಅಕ್ಕ, ನಿನಗೆ ಮದುವೆಯಂತೆ. ಮದುವೆಯಾದರೆ ನಮ್ಮನ್ನು ಬಿಟ್ಟು ನೀ ಗಂಡನ ಮನೆಗೆ ಹೋಗ್ತಿಯಂತೆ. ಶಾರದತ್ತೆ ಅಲ್ತಾ ಹೇಳಿದಳು. ಹೌದಾ?"ನಾಣಿ ಕೇಳಿದ ಅನುಮಾನದಲ್ಲಿ.

"ಬಿಡೋ, ಮದುವೆಯಾಗಿ ಗಂಡನ ಮನೆಗೆ ಹೋಪದಾ? ಲೊಟ್ಟೆ, ನಾವು ಚಕ್ರೀ ಅಮ್ಮಮ್ಮನ ಮನೇಲಿ ಎಷ್ಟು ಬಾರಿ ಮದುವೆ ಆಟ ಆಡ್ಲಿಲ್ಲ?" ನೆನಪಿಸಿದಳು ಗೌರಿ. ಆ ಅಮ್ಮಮ್ಮನಲ್ಲಿ ಇವರಿಗಿಂತ ಹಿರಿಯ ಕಿರಿಯರ ಮಕ್ಕಳಿಗೆ ಮದುವೆ ಆಟವೆಂದರೆ ಬೇರೆಲ್ಲ ಆಟಕ್ಕಿಂತ ಹೆಚ್ಚು ಪ್ರಿಯ. ಒಂದು ಹುಡುಗ ಒಂದು ಹುಡುಗಿ ಗಂಡ ಹೆಂಡತಿ ಮಾಡಿ ಜೋಡಿಗೆ ಕೂರಿಸಿ ದೊಡ್ಡವರ ಅನುಕರಣೆ ಮಾಡ್ತಾ ಏನು ಮಜ!ಕೆಲವೊಮ್ಮೆ ಮಕ್ಕಳ ಬದಲು ಬಾಳೆದಿಂಡಿನ ಗಂಡು ಹೆಣ್ಣಿನ ಗೊಂಬೆಗಳಿಗೆ ಮದುವೆ ಮಾಡುವುದು. ಬಾಳೆದಿಂಡನ್ನು ಭಾಗ ಮಾಡಿ ಕೈಕಾಲು ಮಾಡಿ ಕಣ್ಣು ಮೂಗು ಬಾಯಿ ಬಿಡಿಸಿದರೆ ಗೊಂಬೆಗಳು ಸಿದ್ಧ. ಗಂಡು ಗೊಂಬೆಗೆ ಮಸಿಕೆಂಡದಿಂದ ಬರೆದ ಮೀಸೆ, ಹೆಣ್ಣು ಗೊಂಬೆಗೆ ಹಣೆಗೆ ಕುಂಕುಮ. ಅವನ್ನು ನಿಲ್ಲಿಸಲು ಉದ್ದದ ಎರಡು ಹಿತ್ತಾಳೆ ಲೋಟಗಳು. ಹಾಗೇ ಬಾಳೇದಿಂಡಿನ ಹೊರಗಿನ ಹಾಳೆ ತೆಗೆದು ಹದ ಹಾಳಿತದಲ್ಲಿ ಕತ್ತರಿಸಿ ನಾಲ್ಕು ಬದಿಗಳಿಗೆ ಉದ್ದದ ಬಾಳೆನಾರಿನ ಹಗ್ಗ ಕಟ್ಟಿದರೆ ತೂಗು ತೊಟ್ಟಿಲು ಆಯಿತು. ಬಾಳೆದಿಂಡಿನದೇ ಮಗು. ಹೆಣ್ಣು ಗಂಡಿಗೆ ಮದುವೆ ಅನಂತರ ತೊಟ್ಟಿಲಲ್ಲಿ ಬಾಳೆ ದಿಂಡಿನ ಮಗುವನ್ನಿಟ್ಟು ತೂಗುವುದು. ಜೋಗುಳದ ಲಾಲಿ ಹಾಡುವುದು.ತಾಯಿ ತಂದೆ ಮಗು. ಇದು ಮಕ್ಕಳ ಮದುವೆ ಆಟದಲ್ಲಿ ಸಾಕಾರಗೊಳ್ಳುತ್ತದೆ. ಮದುವೆ ಊಟ ಇನ್ನೂ ಮಜ. ಬಾಳೆಕೀತಿನಲ್ಲಿ ಕಲ್ಲು, ಮಣ್ಣು, ಎಲೆ, ಕಿಸ್ಕಾರ ಹೂವು, ಕಾಯಿ ಊಟಕ್ಕೆ. ಆ ತಿನ್ನುವ ಜೋರು ಕಂಡರೆ ಥೇಟ್ ಮದ್ವೆದೇ ಊಟ ಉಂಡಂತೆ. ತಮ್ಮೆಲ್ಲರ ಬೊಬ್ಬೆ ಸೂರು ಮುಟ್ಟುವಾಗ ಒಳಗಿನಿಂದ ಊಟಕ್ಕೆ ಕರೆ. ಬಾಳೆದಿಂಡು, ತೊಟ್ಟಿಲು, ಇನ್ನೆಲ್ಲ ಕಸ ಮೂಲೆಗೊತ್ತಿ ಓಡಿದರೆ ಅವನ್ನು ತೆಗೆಯಲು ಚಕ್ರೀ ಅಮ್ಮಮ್ಮನೇ ಬರಬೇಕು. ಅಂತಹದೇ ಮದ್ವೆ ಅಲ್ಲವಾ ಇದು? ಮತ್ತೆ ನಾಣಿ ಯಾಕೆ ಅಳ್ತಿದ್ದ? ಅವ ಹೇಳಿದಂತೆ ಮದ್ವೆ ಅಂದರೆ ಗಂಡನ ಮನೆಗೆ ಹೋಪದಾ?

ಅದು ಬೇಜಾರು, ಅಪ್ರಿಯ ಸಂಗತಿ. ಮುಂದಿನ ಯಾವ ಯೋಚನೆ ಮಾಡದಷ್ಟು ಬಾಲಿಷವಾಗಿತ್ತು ಅವಳ ಮನಸ್ಸು. ಸ್ವಲ್ಪಹೊತ್ತಿನಲ್ಲಿ ಪರದೆ ಆಚೆ ಆಪ್ಪಯ್ಯ, ಆಯಿಯ ಪಿಸಿ ಪಿಸಿ ಮಾತುಗಳು. ಅವು ಗೌರಿ ಮದುವೆಗೆ ಸಂಬಂಧಿಸಿದ್ದೇ.ಆಯಿಗೆ ತಾನಾಗಿ ಬಂದ ಸಂಬಂಧದಲ್ಲಿ ಹುಡುಗ ಸಣ್ಣ ಪ್ರಾಯದವ, ಓದಿದವ, ಘನಾ ಹೆಸರು ಇದ್ದ ಮನೆ, ಶ್ರೀಮಂತ, ಹಾಲು ತುಪ್ಪದಲ್ಲಿ ಕೈ ತೊಳಿಬಹುದು ಎಂದೆಲ್ಲ ಲೆಕ್ಕಹಾಕಿ ಸುಮ್ಮನೆಬಿಡಲು ಮನಸ್ಸಿಲ್ಲ. ಅಪ್ಪಯ್ಯನಿಗೆ ಮಗಳನ್ನು ಕೂಡು ಕುಟುಂಬಕ್ಕೆ ಕಲ್ಲು ಕಟ್ಟಿದಂತೆ ಕೊಡಲು ಮನಸ್ಸಿಲ್ಲ. ಒಂದೆಡೆ ಮದುವೆ ಜವಾಬ್ದಾರಿ, ಇನ್ನೊಂದೆಡೆ ಪ್ರೀತಿ, ವ್ಯಾಮೋಹದ ಸಂಕೋಲೆ. ವಯಸ್ಸಿಗೆ ಬಂದ ಶಾರದೆಯನ್ನು ಬಿಟ್ಟು ಎಳೆ ಬಾಲೆಯ ಮದುವೆ ಮಾಡುವುದು ಧರ್ಮ ಸಮ್ಮತವಲ್ಲ. ಇನ್ನೆರಡು ವರ್ಷ ಕಳೆಯಲಿ ಎಂದವನ ಆಲೋಚನೆ.

"ಇನ್ನೊಂದು ವರ್ಷದಲ್ಲಿ ಅದು ಮೈನೆರೆದರೆ ಎಂತ ಮಾಡ್ತೀರಿ?"ಆಯಿಗೆ ಹೆದರಿಕೆ. ಹುಡುಗಿ ಮೈನೆರೆಯುವ ಮೊದಲೇ ಮದುವೆ ಮಾಡುವ ಸಂಪ್ರದಾಯವಿದ್ದ ಕಾಲ ಅದು. ಮದುವೆ ಆಗದೆ ಮೈ ನೆರೆದರೆ ಆ ಮನೆಗೆ ಬಹಿಷ್ಕಾರ ಹಾಕುವುದೂ ಇತ್ತು. ಆದರೀಗ ಬದಲಾಗುತ್ತಿರುವ ಕಾಲದಲ್ಲಿ ಶಾರದೆಗೆ ಹದಿನೇಳು ದಾಟದ್ದರೂ ದೊಡ್ಡ ಪ್ರಮಾದ ಆದದ್ದಿಲ್ಲ. ಸಂಬಂಧ ಕೂಡದೆ ಮುಂದೆ ಹೋದದ್ದು ನಿಜ.

"ಹೀಗೆ ಹೇಳಿ ಕಮಲಿಯನ್ನ ಅವಸರದಲ್ಲಿ ಮದ್ವೆ ಮಾಡಿ ಎಂತಾತು ಅದರ ಹಣೆಬರಹ? ಮೈ ನೆರೆವ ತನಕ ಮನೇಲಿ ಇಟ್ಕಂಡು ಆಮೇಲೆ ಪ್ರಸ್ತ ಮಾಡ್ವ ಅಂದೆವಲ್ಲ, ಆಯ್ತಾ? ಕುತ್ತಿಗೆಗೆ ತಾಳಿ ಬಿದ್ದದ್ದು ಬಿಟ್ಟರೆ ಹುಡುಗಿ ಏನು ಸುಖ ಗೋರಿಕೊಂಡ್ಲು? ವಿಧಿ, ದುರ್ವಿಧಿ"

ಆಯಿ ಕುಸು ಕುಸು ಮಾಡಿದಳು. ಗೌರಿ ಉಸಿರು ಬಿಗಿ ಹಿಡಿದಳು. ಪಾಪ, ಕಮಲತ್ತೆ ಗಂಡನ ಮನೆಗೆ ಹೋಗಲೇ ಇಲ್ಲ. ಯಾವ ಪಾಪಕ್ಕೆ ಮದುವೆಯ ಶಿಕ್ಷೆ? ನನಗೂ ಹಾಂಗೆ ಆಗದಂತೆ ಅಪ್ಪಯ್ಯನ ಕಾಳಜಿ.ಹೇಳುತ್ತಿದ್ದಾನೆ, "ಒಳ್ಳೆ ಸಂಬಂಧ ಅಂದ್ರೂ ಅವಸರ ಮಾಡಲಾಗ. ನಾ ಕಮ್ತಿಯವರಿಗೆ ಹೇಳಿಬಿಡ್ತೇನೆ, ಅವರಿಗೆ ಸರಿಯಾದ ಜೋಡಿ ನಮ್ಮ ಶಾರದೆಯೇ. ಅವಳನ್ನು ಬೇಡ ಅಂದರೆ ನಮಗೂ ಈ ಸಂಬಂಧ ಊಹೂಂ"

"ಮಗಳಿಗೆ ಒಂದು ಶ್ರೀಮಂತ ಮನೆ ತಪ್ಹೋಯ್ತಲ್ಲ. ಇನ್ನು ಬೇಕೆಂದರೂ ಇಂತ ಮನೆ ಹುಡುಗ ಸಿಕ್ಕ." ಆಯಿ ಮಾತು, "ಗೌರಿಯನ್ನು ಒಂದು ಮಾತು ಕೇಳ್ಬೇಡ್ವಾ?"

ಅಪ್ಪಯ್ಯನ ನಗು ಕೇಳಿತು, "ಅವಳನ್ನು ಕೇಳಲು ಇದು ಬೊಂಬೆ ಮದುವೆ ಅಲ್ಲ ಶರಾವತಿ, ನಿಜ ಮದುವೆ.ಅದರ ಕಾಲಗೆಜ್ಜೆ ಸಪ್ಪಳ ಇನ್ನಷ್ಟು ಕಾಲ ನಮ್ಮ ಮನೆ ಒಳಗೆ ಹೊರಗೆ ಕೇಳ್ತಾ ಇರ್ಲಿ"

"ನಾನು ಚಕ್ರೀ ಮನೆಗೆ ಹೋಗಿ ಅಮ್ಮನಲ್ಲಿ ಒಂದು ಮಾತು ಕೇಳ್ಕಂಡು ಬರ್ಲಾ?"

"ನಿನ್ನ ಅಮ್ಮನ ಹತ್ರ ನೀ ಹತ್ತು ಮಾತು ಕೇಳಿದ್ರೂ ನನ್ನದು ಒಂದೇ ಮಾತು ಶರಾವತಿ. ಬ್ಯಾಡ ಅಂದ್ರೆ ಬ್ಯಾಡ. ಸ್ವಲ್ಪ ಅರ್ಥಮಾಡ್ಕೋ. ನಿರಾಶೆ ಎಂತಕ್ಕೆ? ಭರವಸೆ ಇರಲಿ ಮುಂದಿನ ಜೀವನದಲ್ಲಿ. ಮಕ್ಕಳ ಜೀವನ ನಮ್ಮಿಂದ ಹಾಳಾಗೂಕಾಗ. ಅದಕ್ಕೇ ಹೇಳಿದ್ದು ಈ ಮಳೆಗಾಲ ಕಳೆದ್ಮೇಲೆ ಅವಳೂ, ನಾಣಿಯೂ ನಿನ್ನ ಅಪ್ಪನ ಮನೆಯಿಂದಲೇ ಶಾಲೆಗೆ ಹೋಗಲಿ"

"ಇಬ್ಬರನ್ನೂಅಲ್ಲಿ ಶಾಲೆಗೆ ಕಳಿಸಿದ್ರೆ ಅಲ್ಲಿದ್ದವರ ಕಣ್ಣಲ್ಲಿ ನಾವು ಸಸ್ಸಾರ ಆಗೂದು."ಆಯಿಯ ನಿಟ್ಟುಸಿರು ಪರದೆ ಸೀಳಿ ಬಂತು.

"ಹಾಂಗಾ? ಮಳೆಗಾಲ ಕಳೆದ್ಮೇಲೆ ಸಾಸ್ತಾನದಲ್ಲೇ ಇಬ್ಬರಿಗೂ ಒಂದು ವ್ಯವಸ್ಥೆ ಮಾಡೋಣ? ನಮ್ಮೂರಲ್ಲೇ ಶಾಲೆ ಇದ್ದಿದ್ದರೆ ಈ ಗೋಟಾಳಿ ಇರ್ತಿರಲಿಲ್ಲ, ಮಗಳೂ ನಾಲ್ಕನೇ ಇಯತ್ತೆ ತನ್ಕ ಓದ್ತಿತ್ತು."

ನಿಜವೇ.ತಾನು ನಾಣಿ ಶಾಲೆಗೆ? ಹಾಗಾದರೆ ನನಗೆ ಮದುವೆ ಇಲ್ಲ. ಸೀರೆ, ಚಿನ್ನದ ಒಡವೆಗಳ ಅಲಂಕಾರ, ಮಾವಂದಿರು ನನ್ನನ್ನು ಹೊತ್ತುಕೊಂಡು ಮದುವೆ ಮಂಟಪಕ್ಕೆ ಬರುವುದು, ಅಲ್ಲಿ ಎಲ್ಲರ ಮುಂದೆ ಗಮ್ಮತ್ತಿನಲ್ಲಿ ಕುಳಿತುಕೊಳ್ಳುವ ಸಂಭ್ರಮ ಏನೂ ಇಲ್ಲ. ಹೌದಲ್ಲ ನಾಣಿ, ನಿನ್ನನ್ನು ಬಿಟ್ಟು ನಾನೆಲ್ಲಿಗೂ ಹೋಗಲಾರೆ. ನಿನ್ನ ಜೊತೆಯೇ ಇರ್ತೇನೆ ಪುಟ್ಟ! ಗೌರಿಗೆ ಯಾಕೋ ಬಿಕ್ಕಳಿಕೆ ಬಂದಂತೆ, ದುಃಖದಿಂದಲೋ, ಖುಷಿಯಿಂದಲೋ!

***

## ಅಧ್ಯಾಯ 4

ಸುಬ್ಬಪ್ಪಯ್ಯ ತಮ್ಮ ಮಗಳ ಬದಲು ಮೊಮ್ಮಗಳಿಗಾದರೆ ಸೈ, ಸಂಬಂಧ ಒಪ್ಪಿಕೊಳ್ಳಿ ಎನ್ನುತ್ತಿದ್ದಾರೆ.ಆದರೆ ಅಪ್ಪಯ್ಯನದು ಗೌರಿಗಾದರೆ ಬೇಡವೇ ಬೇಡ ಎಂದು ಖಚಿತ ಅಭಿಪ್ರಾಯ. ಆಯಿಗೆ ಸಮಾಧಾನವಿಲ್ಲ. ಒಪ್ಪುವುದೇ? ಬಿಡುವುದೇ? ಮನಸ್ಸು ಡೋಲಾಯಮಾನ. ನಾಳೆ ನಾಡಿದ್ದರಲ್ಲಿ ಆಯಿ ಮತ್ತು ಮಕ್ಕಳಿಬ್ಬರೂ ಚಕ್ರಿಮನೆಗೆ ಹೋಗಿ ಅಮ್ಮಮ್ಮನನ್ನೇ ಕೇಳಿ ಬರುವುದೆಂದು ಬೆಳಿಗ್ಗೆಯೇ ನಿಶ್ಚಯವಾಗಿತ್ತು. ಆದರೆ ಮಧ್ಯಾನ್ಹದ ಹೊತ್ತಿಗೆ ಹೇಳಿ ಕಳುಹಿಸಿದಂತೆ ದಿಢೀರ್‌ನೆ ಅವರಲ್ಲಿಗೇ ಬಂದಿಳಿದಳು ಚಕ್ರಿ ಅಮ್ಮಮ್ಮ. ಬಂದದ್ದು ಒಬ್ಬಳೇ. ಪರಿಚಯದ ದೋಣಿಯವ. ನೀಯತ್ತಿನಲ್ಲಿ ದಡ ತಲುಪಿಸಿದ್ದು ಮಾತ್ರವಲ್ಲ, ಅವಳ ಹಿಂದಿನಿಂದಲೇ ಮನೆತನಕ ಬಂದು ಭಾರದ ಒಂದು ಚೀಲ ಒಳಗಿಟ್ಟ.

"ಹ್ವಾಯ್, ನೀನು ನಾಡಿದ್ದು ಬೆಳಿಗಿನ ದೋಣಿ ಇತ್ತ ತಂದರೆ ನಾನು ಚಕ್ರಿ ಮನೆಗೆ ಹಿಂದೆ ಹ್ವಾಪದು. ಬತ್ತೆಯಾ?" ಕೇಳಿದಳು.

"ಬತ್ತೆ ಅಮ್ಮ, ನಾಡಿದ್ದು ಸೂರ್ಯ ಮೇಲೆ ಬಪ್ಪ ಮೊದಲೇ ಮೊದಲನೇ ದೋಣಿ ಇತ್ಲಾಗೇ ತತ್ತೆ" ನಾಲ್ಕು ಕಾಸು ಪಡೆದ ದೋಣಿಯವ ಹೊರಟುಹೋದ.

ಅಮ್ಮಮ್ಮ ಬಂದದ್ದು ಆಯಿಗೆ, ಗೌರಿಗೆ ತಡೆಯಲಾರದ ಸಂತೋಷ. ಬೆಳಿಗ್ಗೆಯಿಂದ ಕಾಗೆ ಕಾವ್ ಕಾವ್ ಸ್ವರ ತೆಗೆದಾಗಲೇ ಗೌರಿ, ಅಜ್ಜಮ್ಮ ಭವಿಷ್ಯ ಹೇಳಿಯಾಗಿತ್ತು, ಇವತ್ತು ಯಾರೋ ಬರ್ತಾರೆ, ಅನ್ನಕ್ಕೆ ಒಂದು ಮುಷ್ಟಿ ಅಕ್ಕಿ ಜಾಸ್ತಿಯೇ ಇರಲಿ

ಎಂದು. ಇದೀಗ ಸರಿಹೋಯ್ತು. ಶ್ಯಾಮಿಗೆ, ಬಾಳೇಹಣ್ಣಿನ ರಸಾಯನ ರಾತ್ರೆ ಮಾಡುವುದೆಂದೂ ಲೆಕ್ಕ ಹಾಕಿಯಾಯ್ತು.

"ನಾ ಎಂತ ದೂರದ ಕುಳವೇ? ಮನೆಯವಳೇ? ಎಂತದೂ ಬೇಡ. ಗಂಜಿ,ಅಪ್ಪೆಮಿಡಿ ಉಪ್ಪಿನಕಾಯಿ ಇದ್ದರೆ ಅದೇ ಯಥೇಷ್ಟ ಆಯ್ತು"ಅಮ್ಮಮ್ಮ ತಾನು ತಂದ ಚೀಲದಿಂದ ಉಪ್ಪಿನಕಾಯಿ, ಹಲಸಿನ ಮತ್ತು ಉದ್ದಿನ ಹಪ್ಪಳ,ಸಂಡಿಗೆ, ಬಾಳಕ, ಮಾವಿನಹಣ್ಣಿನ ಮಾಂಬಳ, ಹಲಸಿನ ಸಿಹಿ ಹಪ್ಪಳ, ಜೇನು ಇನ್ನೂ ಏನೇನೋ ಹೊರ ತೆಗೆಯುವಾಗ ಗೌರಿ, ನಾಣಿ ಕುಕ್ಕುರುಗಾಲಲ್ಲಿ ಕುಳಿತು ಕಣ್ಣರಳಿಸಿದ್ದು ನೋಡಬೇಕು, ಹಸಿದು ಬಂದ ಪರದೇಸಿಯಂತೆ. ಹಪ್ಪಳ ಕಚ್ಚಿಯಾಯ್ತು, ಮಾಂಬಳ ಎಳೆದು ಚೂರು ಬಾಯಿಗೆ ಹಾಕಿ ಚಪ್ಪರಿಸಿಯಾಯ್ತು. ಮಳೆಗಾಲದಲ್ಲಿ ಸಿಗುವ ಹೊಳೆಮಾವಿನಕಾಯಿಯನ್ನೂ ಬದಿಗೆ ಇಟ್ಟಾಯ್ತು. ಮಕ್ಕಳಿಗೆ ಸಿಹಿ ತಿಂಡಿ ತಂದದ್ದು ಅಮ್ಮಮ್ಮ ತೆಗೆ ತೆಗೆದು ನೀಡಿದಳು. "ಇನ್ನು ಆಷಾಢ ಮಾಸ ಶುರುವಾದರೆ ನನಗೂ ನಿಮಗೂ ನಾಲ್ಕು ಮೈಲು ದೂರ ದೋಣಿಯಲ್ಲಿ ಹೋಗಿ ಬಪ್ಪದು ಕಷ್ಟ. ಬಿರುಗಾಳಿ, ತೂಫಾನು ದೋಣಿಯವರೂ ಸಮ, ಮಳೆಗಾಲದಲ್ಲಿ ಗಾಳಿ ಮಳೆ ಹವಾಮಾನ ನೋಡ್ಕಂಡೆ ದೋಣಿ ನೀರಿಗಿಳಿಸ್ತೋ.ನಾವು ಹೇಳಿದಾಂಗೆ ಹೋಪಕಿಲ್ಲೆ, ಬಪ್ಪಕಿಲ್ಲೆ. ಅದಕ್ಕೆ"

"ಲಾಯಕ್ಕಾಯ್ತು. ಆದರೆ ನಾನೂ ಹಪ್ಪಳ ಸಂಡಿಗೆ ಎಲ್ಲ ಮಾಡಿದ್ದೆ ಅಮ್ಮ, ನೀನ್ಯಾಕೆ ಕಷ್ಟದಲ್ಲಿ ಹೊತ್ತು ತಂದೆ?" ಆಯಿ  ಅಕ್ಷೇಪಿಸುತ್ತಲೇ ಅವನ್ನು ಜೋಡಿಸಿಟ್ಟಳು, "ಒಂದು ಹೊರೆ ತಂದಿದ್ದಿ. ಎಂತ ಅಲ್ಲಿ ಮೊಮ್ಮಕ್ಕಳಿಗೂ ಚೂರು ಪಾರು ಇಟ್ಟಿದ್ದಿಯಾ?"

"ಅವಕ್ಕೆ ಉಳಿಸಿಯೇ ತಂದದ್ದು. ಮಾಂಬಳ ನಮ್ಮ ಗೌರಿಗೆ, ಖಾರದ ಹಲಸಿನ ಹಪ್ಪಳ ನಮ್ಮ ಮುದ್ದು ಕೃಷ್ಣನಿಗೆ?" ಮೊಮ್ಮಕ್ಕಳನ್ನು ತನ್ನ ಮೊಟ್ಟೆಗೆ ಎಳೆದುಕೊಂಡಳು ಅಮ್ಮಮ್ಮ. ಎಂತಹ ಅಸೀಮ ಪ್ರೀತಿ ಅವಳದು! ಆ ಪ್ರೀತಿಯ ಆಳ ಅರಿಯದ ನಾಣಿ ಚಕ್ರಿ ಮನೆಯಿಂದಶಾಲೆಗೆ ಹೋಗಲು ಒಪ್ಪದೆ ಒಬ್ಬನೇ ದೋಣಿ ಹತ್ತಿ ಹೊಳೆಬಾಗಿಲಿಗೆ ಬಂದಾಗಲೇ ಗೌರಿ ಅವನ ಕಿವಿ ಹಿಂಡಿದ್ದಳು. "ಮೂರು ಹೊತ್ತು ಚಕ್ರಿಮನೆ ಜಪ ಮಾಡುವವ ಅಲ್ಲೇ ಉಳಿಲಿಕ್ಕೆ ಏನಾಗಿತ್ತು ಧಾಡಿ? ನಾ ಬೇಕಾ ಜೊತೆಗೆ?"

"ಹೌದಕ್ಕಾ, ಶಾಲೆಯಲ್ಲಿ ಕಲಿವದು ಎಂತಾ ಮಣ್ಣು ಇಲ್ಲೆ. ಎಲ್ಲ ನಮ್ಮ ಅಜ್ಜಯ್ಯ ನಮ್ಗೆ ಹೇಳಿಕೊಟ್ಟದ್ದೇ. ನಂಗೆಲ್ಲ ಗೊತ್ತು. ಪಾಟಿ ಚೀಲ ಹೊತ್ಕೊಂಡು ಹೋಪದು ಹೊರೆ ಭಾರ"

"ದೊಡ್ಡಸ್ತಿಕೆ ನೋಡು. ಅದೇನು ಮಣಗಟ್ಟಲೆ ಭಾರವಾ? ನಾ ಶಾಲೆಗೆ ಹೋಗ್ತೆ ಅಂದ್ರೆ ಆಯಿ ಒಪ್ತಿಲ್ಲೆ. ಚಕ್ರಿ ಅಮ್ಮಮ್ಮನ ಮನೇಲಿ ಗಮ್ಮತ್ತು ಅಲ್ಲದಾ?" ಹೇಳುವಾಗ ಗೌರಿ ಕಣ್ಣುಗಳಲ್ಲಿ ಮಿನುಗು. ಅವಳಿಗೆ  ಕಲಿಕೆ ಮುಖ್ಯವಲ್ಲ, ಅಮ್ಮಮ್ಮನ ಸಾಮಿಪ್ಯ,

ಅವಳ ಅಗಾಧ ಪ್ರೀತಿ, ಉಪಚಾರದಲ್ಲಿ ಆ ಜೀವ ಕೊಡುವ ಹಿತವಾದ ಸ್ಪರ್ಶ ಬೇಕು. ಇವತ್ತು ಅವಳೇತಮ್ಮ ಮನೆಯಲ್ಲಿ! ಆ ಜೀವಸ್ಪರ್ಶಕ್ಕೆ ಹಾತೊರೆದಂತೆ ಚಕ್ರಿ ಮನೆಯಲ್ಲೇ ಮನಸ್ಸು ಓಡಿ ಅಲ್ಲಿ ತಾನು ಇದ್ದಂತೆ ಆ ಭಾವ ಒರತೆಯಲ್ಲಿ ಅಮ್ಮಮ್ಮನ ಮುಖ ನೋಡಿದಳು.

ಈ ಚಕ್ರಿ ಅಮ್ಮಮ್ಮ ನಾರ್ಣಜ್ಜನ ಎರಡನೇ ಹೆಂಡತಿ. ಮೊದಲನೇಯವಳು ಹೆರಿಗೆಯಲ್ಲಿ ಮಗು ಸಮೇತ ತೀರಿಕೊಂಡ ನಾಲ್ಕು ತಿಂಗಳಲ್ಲಿ ನಾರ್ಣಜ್ಜನ ಮನೆ ತುಂಬಿದಒಂಬತ್ತರ ಬಾಲೆ ಪರಮೇಶ್ವರಿ ಮರಳಿ ಅಪ್ಪನ ಮನೆಗೆ ಹೋಗಲೇ ಇಲ್ಲವಂತೆ. ಏನು ಕಾರಣವೋ? ಹದಿನೆಂಟು ಮೊಳದ ಸೀರೆಯುಟ್ಟು ಕೂಡು ಕುಟುಂಬಕ್ಕೆ ಕಿರಿಯ ಸೊಸೆಯಾದ ಅವಳನ್ನು ಎಲ್ಲರೂ ಕರೆಯುವ ಹೆಸರು ಪಾತೂ. ಮಕ್ಕಳಿಗೆ ಅಮ್ಮಮ್ಮ. ಅವಳಿಗೆ ಆಯಿ ಒಬ್ಬಳೇ ಮಗಳಲ್ಲ. ನಾಲ್ವರು ಗಂಡುಮಕ್ಕಳಿದ್ದಾರೆ. ಗಂಪತಿ ಮಾವ, ಶಂಕರಿ ಅತ್ತೆ, ಮತ್ತು ಅಪ್ಪೂಮಾವ, ಸುಭದ್ರ ಅತ್ತೆ ಮನೆಯಲ್ಲಿ, ಇನ್ನಿಬ್ಬರು ಬೇರೆ ಬೇರೆ ಊರುಗಳಲ್ಲಿ. ಒಟ್ಟೂ ಹತ್ತು ಮೊಮ್ಮಕ್ಕಳು. ಅವರೆಲ್ಲರಿಗೂ ಅಮ್ಮಮ್ಮನಿಂದ ಸಿಗುವ ಪ್ರೀತಿಗೆ ಬರವಿಲ್ಲ. ಆದರೂ ಅಮ್ಮಮ್ಮನಿಗೆ ಗಂಡುಮಕ್ಕಳಿಗಿಂತ ಮಗಳ ಮೇಲೆ ಪ್ರೀತಿ ಜಾಸ್ತಿ. ಗೌರಿ, ನಾಣಿಯೆಂದರೆ ಒಂಚೂರು ಇನ್ನೂ ಜಾಸ್ತಿಯೇ ಮೋಕೆ.ಅವರು ಬಂದರೆ ಸಾಕು, ಅವಳ ಮೋರೆಯಲ್ಲಿ ಸಂಭ್ರಮದ ಕಳೆ. ಬೂರಲು ಹತ್ತಿಯ ಮೆತ್ತನೆ ಹಾಸಿಗೆ, ಕಬ್ಬಿಣದ ಪೆಟ್ಟಿಗೆಯಲ್ಲಿ ನುಸಿಗುಳಿಗೆಯಲ್ಲಿ ಮಡಿಚಿಟ್ಟ ಹಾಸು ಹೊದಿಕೆಗಳು ಹೊರ ಬರುತ್ತವೆ. ಅವು ಹೊದಿಕೆಗಳಲ್ಲ. ಅಮ್ಮಮ್ಮನ ಹಳೆ ಸೀರೆಗಳು. ಅವುಗಳನ್ನು ಹಾಸಿ ಹೊದೆಯಿಸಿ ತಾನೂ ಅವರ ಬದಿಗೆ ಚಾಪೆ ಹಾಸಿ ಮಲಗಿ ಇಬ್ಬರ ಬೆನ್ನ ಮೇಲೆ ಮೃದುವಾಗಿ ತಟ್ಟುತ್ತ... ಹೌದಲ್ಲ, ತನಗೆ ಆ ಸೀರೆಗಳ ಬೆಚ್ಚಗಿನ ನವಿರಾದ ಸ್ಪರ್ಶದಲ್ಲಿ,ಆ ಕಂಪಿನಲ್ಲಿ ಜೋಗುಳ ಹಾಡಿದಂತೆ! ಏಳು ಮಲ್ಲಿಗೆ ತೂಕದ ರಾಜಕುಮಾರಿ ಹಂಸತೂಲಿಕಾಪಲ್ಲಂಗದಲ್ಲಿ ಮಲಗಿದಂತೆ ಯಾವಾಗಲೋ ನಿದ್ರೆಗೆ ಜಾರಿ.... ಅಮ್ಮಮ್ಮನಿಗೆ ಆಗ ಎಷ್ಟು ಮಾತು ಮಾತು. ಮಾತು. ಎಲ್ಲೆಲ್ಲಿಯದೋ ಹಳೆ ಕಥೆಗಳು ಕತ್ತಲಿನ ಗರ್ಭ ಸೀಳಿ ಹೊರಬರುತ್ತವೆ ರಂಜನೀಯವಾಗಿ. ತನ್ನ ಪ್ರೀತಿ ವಾತ್ಸಲ್ಯ, ಬೇಸರ, ಆಕ್ರೋಶ, ಕಷ್ಟ ನಿಷ್ಟುರಗಳ, ಸುಖ ದುಃಖದ ಮೂಟೆ ಬಿಚ್ಚಿ ಉಣಬಡಿಸುತ್ತಾಳೆ ಮಕ್ಕಳ ಮುಂದೆ. ಅಜ್ಜಯ್ಯ ಹೇಳುವ ರಾಜ ರಾಣಿಗಳ ಕಥೆಗಿಂತ ಅಮ್ಮಮ್ಮನ ಕಥೆಗಳನ್ನು ಕೇಳಲು ಇಬ್ಬರಿಗೂ ಖುಷಿ.ಅಮ್ಮಮ್ಮ ಚಕ್ರೀಮನೆಯಲ್ಲಿ ಸೋಮಾರಿತನವಿಲ್ಲದೆ ಗೈಯ್ದರೂ ಗಂಡುಬೀರಿ, ಸಿಡಿಗುಂಡು, ದೊಂಡೆಬಾಯಿ, ಕೋಪಿಷ್ಟೆ ಒಂದೇ ಎರಡೇ ಅಬ್ಬಬ್ಬ, ಏನೆಲ್ಲ ಬಿರುದುಗಳು! "ನಾನಾದುದಕ್ಕೆ ಈ ಮನೇಲಿ ಏಗಿ ಎಲ್ಲಾ ಸೈಸಿಕೊಂಡೆ. ಬೇರೆ ಜನ ಆಗಿದ್ರೆ ಚಕ್ರಿ ಹೊಳೆಗೆ ಹಾರಿಕೊಳ್ತಿದ್ದರು" ಎಷ್ಟು ಬಾರಿ ಹೇಳುವಳೋ.

ಹೆಚ್ಚಿನ ಕಷ್ಟಗಳನ್ನು ಕಾಣದಿದ್ದ ಅಮ್ಮಮ್ಮ ಬಿಸುಸುಯ್ಯುತ್ತ ಹಾಗೆ ಹೇಳುವುದು ವಾಡಿಕೆ ಮಾತು. ನಾರ್ಣಜ್ಜನ ಮೇಲೆ ಸ್ವಲ್ಪ ಅಸಮಾಧಾನ ಇರಬಹುದು. ಎಷ್ಟಾದರೂ ನಾರ್ಣಜ್ಜನ ಎರಡನೇ ಹೆಂಡತಿ. ಮದುವೆಗೆ ಮೊದಲು ಅಮ್ಮಮ್ಮನಿಗೆ ಎಲ್ಲರೂ ಗುಟ್ಟು ಮಾಡಿದ್ದು ಯಾಕೋ. ಎಂಟರ ಬಾಲೆಗೆ ಹದಿನೆಂಟು ಮೊಳದ ಸೀರೆ ಉಡಿಸಿದ್ದರಂತೆ. ಮೈ ತುಂಬ ಭಾರ ಆಗುವಷ್ಟು ಚಿನ್ನದ ಒಡವೆಗಳು. ಅವಳ ಅಪ್ಪನ ಮನೆಯಲ್ಲಿ ಯಾರೂ ನಿರೀಕ್ಷಿಸದಷ್ಟು! ಸಿರಿವಂತರ ಮನೆ. ಹಿರಿಯರು ಗೇಣಿಗೆ ಕೊಟ್ಟ ಸುಮಾರು ಹತ್ತಾರು ಎಕರೆ ಭತ್ತದ ಗದ್ದೆಗಳು, ತೆಂಗಿನ ಮರಗಳಿಂದ ಬರುತ್ತಿರುವ ಉತ್ಪತ್ತಿಗೆ ಪಾಲುದಾರರು ನಾರ್ಣಜ್ಜನೂ ಸೇರಿ ಐವರಿದ್ದರು. ಆಯಿ ಹುಟ್ಟಿದ ಮೇಲೆ ಕುಟುಂಬ, ಜಮೀನು ಪಾಲಾಗಿ ನಾರ್ಣಜ್ಜನಿಗೆ ಚಕ್ರಹೊಳೆಯ ಎಡಭಾಗದ ದಂಡೆಯ ಮೇಲಿನ ಜಾಗ ಸಿಕ್ಕಿತು. ನಾರ್ಣಜ್ಜ ಕಷ್ಟಪಟ್ಟು ದುಡಿಯುವ ಕುಳ. ಪಾಲಿಗೆ ಬಂದದ್ದು ಅಲ್ಲದೆ ಸ್ವಲ್ಪ ಕಾಡು ಕಡಿದು ಗದ್ದೆ ಮಾಡಿಸಿದ್ದು, ತೆಂಗು ಕೃಷಿ ಹೆಚ್ಚಿಸಿದ್ದು, ಕಬ್ಬಿನ ಬೆಳೆಗೆ ಕೈಹಾಕಿದ್ದು ಎಲ್ಲಾ ಹಳೆ ಸಂಗತಿ. ಅಮ್ಮಮ್ಮನಿಗೆ ಸ್ವತಂತ್ರ ಬದುಕು ಸಿಕ್ಕಿತ್ತು. ಇದೆಲ್ಲ ಆಯಿ ಹುಟ್ಟಿದ ಗಳಿಗೆ ಕಾರಣವೆಂಬ ನಂಬಿಕೆ.

"ನಿನ್ನ ಅಮ್ಮ ಮಹಾಲಕ್ಷ್ಮಿ. ಸಾಕ್ಷಾತ್ ಲಕ್ಷ್ಮಿ ಸ್ವರೂಪಳು. ಮಹಾಲಕ್ಷ್ಮಿ ಹೆಸರಿಡುವ ಎಂದರೆ ನಿನ್ನ ಅಜ್ಜ ಶರಾವತಿ ಹೆಸರೇ ಆಗಬೇಕೆಂದರು. ನನ್ನ ಮಾತೆಲ್ಲಿ ಕೇಳ್ತಾರೆ?ಹೂಂ ಅಂದೆ. ಹೇಳು ಗೌರಿ, ಮಹಾಲಕ್ಷ್ಮಿ, ಶರಾವತಿ ಇದರಲ್ಲಿ ಯಾವ ಹೆಸರು ಚೆಂದ?"

"ನನಗೆ ಆಯಿ ಹೆಸರು ಚೆಂದ" ಮೂಗೇರಿಸಿದ್ದ ನಾಣಿ.

"ಆಯಿಯೋ, ನಾಯಿಯೋ! ಗೌರಿ ಹುಟ್ಟಿದ ನಂತರ ಅಮ್ಮ, ಅಬ್ಬೆ ಬದಲು ಆಯಿ ಆದ್ಲು"

"ಅದು ಹೇಗೆ?"

"ನಮ್ಮ ಮನೆ ಹಾಡಿಯಾಚೆ ಸೊನಗಾರನ ಸಂಸಾರ ಇತ್ತಲ್ದ, ಅವರ ಮನೆ ಬದಿಗೆ ಗೋವಾ ಕಡೆಯ ಒಂದು ಸಾರಸ್ವತ ಕುಟುಂಬ ಇತ್ತು. ಅವು ಈಗ ಆ ಜಾಗ ಬಿಟ್ಟು ಹೋಗಿ ಎಷ್ಟೋ ವರ್ಷ ಆತು. ಅವರ ಮನೆ ಮಕ್ಕಳು ತಮ್ಮ ತಾಯಿಗೆ ಆಯಿ ಅಂತಿದ್ದರು. ನಮ್ಮ ಶರಾವತಿ ಸಣ್ಣ ಹುಡುಗಿ. ಆಯಿ ಹೆಸರು ಹೆಚ್ಚು ಹಿಡಿಸಿತ್ತು. ನಿಮಗೂ ಆ ಹೆಸರನ್ನು ಅಭ್ಯಾಸ ಮಾಡ್ಸಿದಳು. ನಾ ಬ್ಯಾಡ ಅಂದ್ರೆ ಅದು ಕೇಳುತ್ತಾ? ಪ್ರೀತಿ ವಾತ್ಸಲ್ಯದ ಕರೆಗೆ ಯಾವ ಹೆಸರಾದರೆ ಏನಾತು?

ಗಂಪತಿ ಮಾವ, ಅಪ್ಪೂಮಾವನ ಮಕ್ಕಳು ಗಿರಿಧರ, ವಿನಾಯಕ, ವೆಂಕಟಲಕ್ಷ್ಮಿ, ದುರ್ಗಾಲಕ್ಷ್ಮಿ ಈ ಮೊಮ್ಮಕ್ಕಳ ವಯಸ್ಸಿನವರೆ. ಆದರೂ ಆಗೀಗ ಮಾತು ಕೃತಿಯಲ್ಲಿ

ಅವಳ ಪ್ರೀತಿ, ವಾತ್ಸಲ್ಯ ಈ ಮೊಮ್ಮಕ್ಕಳನ್ನೇ ಹೆಚ್ಚು ತೂಗುವುದು ಅಂಗೈ ಕನ್ನಡಿಯಂತೆ ಸ್ಪಷ್ಟ. ಗಿರಿಧರ ಮೂದಲಿಸುತ್ತಾನೆ.

"ಅವರೇನು ದೇವಲೋಕದಿಂದ ಇಳಿದು ಬಂದವರಾ?" ವೆಂಕಟಲಕ್ಷ್ಮಿ ಮುಖ ಸಿಂಡರಿಸಿ, "ಆಟಕ್ಕೆ, ತಿಂಡಿಗೆ, ಸ್ನಾನಕ್ಕೆ ಹೋಗ್ಲಿ ತಲೆ ಬಾಚೂದಕ್ಕೂ ಅಮ್ಮಮ್ಮನಿಂದ ಅವಕ್ಕೆ ಮೊದಲ ಉಪಚಾರ. ತಿಂಡಿ ಕಾಣು, ಅಡಗ್ಸಿ ಹುಗ್ಗಿಸಿ ಗುಟ್ಟಾಗಿ ಕೊಡ್ತುಳು. ಕೇಳೀರೆ ಪಾಪ ಅಂತೆ" ಎನ್ನುವಳು. ವಿನಾಯಕ ಕೆಲವೊಮ್ಮೆ ಮಾತೇ ಆಡುವುದಿಲ್ಲ. ಒಮ್ಮೆ ಎಲ್ಲ ಮಕ್ಕಳೂ ಸೇರಿ ಎರಡು ಕೊತ್ತಳಿಗೆ ಸೇರಿಸಿ ಕಟ್ಟಿ ಅದರಲ್ಲಿ ಒಬ್ಬ ಕುಳಿತು ಉಳಿದವರು ಅವನನ್ನು ಎಳೆಯುವ ಆಟ. ನಾಣಿಯ ಹೊರತಾಗಿ ಒಬ್ಬೊಬ್ಬರೇ ಕುಳಿತು ಎಲ್ಲರೂ ಎಳೆದಾಯ್ತು. ಉಳಿದವನು ನಾಣಿ ಒಬ್ಬನೇ. ಗಿರಿಧರನಿಗೆ ಆಟ ಸಾಕೆಂದು ಓಡಿಹೋದ. ಉಳಿದವರೂ ಓಡಿದರು ಅವನ ಹಿಂದೆ. ನಾಣಿ ಅಳುತ್ತ ಅಮ್ಮಮ್ಮನ ಬಳಿ ದೂರು ತಂದು ಅವಳು ಎಲ್ಲರನ್ನೂ ಗದರಿಸಿ ಮನೆ ರಂಪ. ಇನ್ನೊಮ್ಮೆ ಇದನ್ನೇ ನೆಪ ಮಾಡಿದ ಗಿರಿಧರ ನಾಣಿಯ ಕಿವಿ ಹಿಂಡಿ ಹೊಡೆದದ್ದು ಅಮ್ಮಮ್ಮನಿಗೆ ಗೊತ್ತಾಗಿ ಅವಳು ಸವುದೆ ತುಂಡಿನಿಂದ ಗಿರಿಧರನಿಗೆ ಬಾಸುಂಡೆ ಬರುವಂತೆ ಬಾರಿಸಿ, ಈಗಲೂ ನೆನಪಿದೆ ಗೌರಿಗೆ. ಪಾಪ, ಎರಡು ದಿನ ಮೈಕೈ ನೋವು.ಜ್ವರ. ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಹಚ್ಚುವ, ಮಗನ ಮಕ್ಕಳು ಮಗಳ ಮಕ್ಕಳೆಂದು ಭೇದ ತೋರುವ ಅಮ್ಮಮ್ಮನ ಸ್ವಭಾವ ಶಂಕರಿ ಅತ್ತೆಗೆ, ಸುಭದ್ರ ಅತ್ತೆಗೆ ನುಂಗಲಾರದ ಬಿಸಿ ತುಪ್ಪದಂತೆ. ಹಿರಿಯರಿಗೆ ಎದುರು ಹೇಳುವ ಧೈರ್ಯವಿಲ್ಲ.

"ನಮ್ಮ ಮಕ್ಕಳಿಗೆ ಸವುದೆ ತುಂಡು ಎತ್ತುವ ಅತ್ತೆ ಗೌರಿ, ನಾಣಿಯನ್ನು ಅದರಲ್ಲೇ ಹೊಡೀಲಿ ಕಾಂಬಾ? ಒಂದು ಹೂವಿಂದಲೂ ಪೆಟ್ಟ ಹಾಕೀರೆ ಕೇಳು" ಅವರಲ್ಲೇ ಗುಸು ಗುಸು ಮಾತಾಡಿದ್ದು ಅಮ್ಮಮ್ಮನ ಕಿವಿ ತಲುಪಿ ಅದಿನ್ನೊಂದು ರಾಧಾಂತ.

ಇದೆಲ್ಲಕ್ಕಿಂತ ಪ್ರಾಣಾಪಾಯ ಆದದ್ದು ಇನ್ನೊಂದು ಸಂಗತಿ. ನೆಲ ಮಟ್ಟದಲ್ಲಿರುವ ಚಕ್ರಿ ಮನೆ ಭಾವಿಯಲ್ಲಿ ಧಾರಾಳ ನೀರು. ಮಳೆಗಾಲದಲ್ಲಿ ಕೆಲವೊಮ್ಮೆ ಭಾವಿ ತುಂಬಿ ನೀರು ಹೊರ ಚೆಲ್ಲಿ ಹರಿಯುತ್ತದೆ. ಬೇಸಿಗೆಯಲ್ಲಿ ಬತ್ತುವುದಿಲ್ಲ. ಆದರೆ ಈ ಭಾವಿಗೆ ಮೇಲೆ ಕಟ್ಟೆಯಿಲ್ಲ. ನೀರು ಎಳೆದುಕೊಳ್ಳುವ ಭಾಗಕ್ಕೆ ಜೋಡಿಸಿ ಇಟ್ಟ ನಾಲ್ಕು ಅಡಿಕೆಮರದ ತುಂಡುಗಳು. ಅದರ ಮೇಲೆ ನಿಂತು ಸೊಂಟ ಬಗ್ಗಿಸಿ ಕೊಡಪಾನಕ್ಕೆ ಹಗ್ಗ ಕಟ್ಟಿ ಕೆಳಗಿಳಿಸಿ ನೀರೆಳೆಯಬೇಕು. ಕೊಡಪಾನ ಕೆಳಗಿಳಿಯುವಾಗ, ಮೇಲೆ ಎಳೆಯುವಾಗ ಎಚ್ಚರ ಬೇಕು. ಎಚ್ಚರ ತಪ್ಪಿದರೆ ಗುಳುಂ ಭಾವಿ ಒಳಗೆ! ಮನೆ ಎದುರಿನ ತೆಂಗಿನ ತೋಟಕ್ಕೆ ನೀರು ಬಿಡಲು ಏತ ಇದೆ. ಏತದ ಒಂದು ತುದಿಗೆ ಭಾರದಕಲ್ಲು. ಮತ್ತೊಂದು ತುದಿಗೆ ಉದ್ದದ ಕವಂಗ ತರಹದ ಹಿತ್ತಾಳೆಯ ಪಾತ್ರೆ. ಪಾತ್ರೆಯನ್ನ ಕೆಳಗಿಳಿಸುವಾಗ

ಕಲ್ಲು ಮೇಲಕ್ಕೇರುತ್ತದೆ. ನೀರು ತುಂಬಿದ ಪಾತ್ರೆ ಮೇಲಕ್ಕೆ ಬರುವಾಗ ಕಲ್ಲು ಕೆಳಗಿಳಿಯುತ್ತದೆ. [ಜೊಟ್ಟೆ ಎಂದರೆ ಇದೇ] ಮನೆಖರ್ಚಿಗೆ ಜೊಟ್ಟೆ ನೀರು. ಅಡಿಗೆಗೆ ಮಾತ್ರ ಎಳೆದು ತರುವ ನೀರು. ಅದೇನಾಯಿತೋ, ಒಂದುದಿನ ವಿನಾಯಕ ಮತ್ತು ಗಿರಿಧರನ ಕಿತಾಪತಿಯಿಂದ ಗೌರಿಗೆ ಸಿಟ್ಟು ಬಂದು ಜೊಟ್ಟೆಯಲ್ಲಿ ನೀರು ಎಳೆಯಲು ಸಿದ್ಧಳಾಗಿ, ಅಲ್ಲ, ಈಗಲೂ ಗೌರಿಗೆ ಭಾವಿ ಎಂದರೆ ಹೆದರಿಕೆ ನಿಂತಿಲ್ಲ. ಆದಿನ ಇನ್ನೂ ಜೊಟ್ಟೆ ಕೆಳಗಿಳಿದಿಲ್ಲ, ಅಡಿಕೆ ಮರದ ಅಂಚಿನಿಂದ ಜಾರಿ ಅವಳು ಸೀದಾ ಜೊಟ್ಟೆ ಒಳಗೆ ಬಿದ್ದು ಅದು ಭಾವಿ ನೀರಿನಲ್ಲಿ ಮುಳುಗಿಯಾಯ್ತು. ಪೂರಾ ತಳ ಮುಟ್ಟಿದ ಜೊಟ್ಟೆ ಅವಳ ಸಮೇತ ಒಮ್ಮೆ ಮೇಲೆ ಬಂದು ಪುನಃ ಮುಳುಗಿ ಆಮೇಲೆ ಏನಾಯಿತೋ ಗೌರಿಗೆ ನೆನಪಿಲ್ಲ. ಎಚ್ಚರವಾದಾಗ ಅವಳು ಜಗಲಿಯಲ್ಲಿ ಮಲಗಿದ್ದಾಳೆ. ಸುತ್ತಲೂ ಜನವೇ ಜನ. ಆಯಿ ಅಳುತ್ತಿದ್ದಾಳೆ ದೊಡ್ಡದಾಗಿ. ಆಮೇಲೆ ತಿಳಿಯಿತು, ಅವಳು ಜೊಟ್ಟೆ ಸಮೇತ ಭಾವಿಗೆ ಬಿದ್ದಳೆಂದು ವಿನಾಯಕ ಬೊಬ್ಬೆ ಹಾಕಿ ತೋಟದಲ್ಲಿದ್ದ ಚಕ್ರಿಅಜ್ಜ ಧಾವಿಸಿ ಬಂದು ಸಮಯಪ್ರಜ್ಞೆಯಿಂದ ಅವಳನ್ನು ಮೇಲೆ ಎಳೆದಿದ್ದ, ಹೊಟ್ಟೆ ಸೇರಿದ ನೀರನ್ನು ತೆಗೆದಿದ್ದ. ಸುಭದ್ರತ್ತೆ, ಶಂಕರಿ ಅತ್ತೆ ತಮ್ಮ ಮಕ್ಕಳಿಗೆ ಎಷ್ಟು ಗದರಿಸಿದರೋ. "ಕಂಟಕ ಇತ್ತು, ಕಳೀತು" ಸಮಾಧಾನ ಎಲ್ಲರಿಗೂ.

ವಿನಾಯಕನಿಗೆ ಪಶ್ಚಾತ್ತಾಪವಾಗಿತ್ತು. ಅವನು, ಗಿರಿಧರ ಸದಾಕಾಲ ಅವಳ ಎರಡು ಜಡೆ ಹಿಡಿದು "ಕರೆಗಂಟೆ ಒಮ್ಮೆ ಹೊಡೆದರೆ ಸಾಕು" ಹಾಡುತ್ತ ಓಡುವಾಗ ನಗುತ್ತಿದ್ದಳು ಪುಟ್ಟಗೌರಿ. ಅವಳ ಆ ಎರಡು ಜಡೆ ಎಂದರೆ ನಾಣಿಗೆ ಮಹಾ ಪ್ರೀತಿ. ಯಾವಾಗಲೂ ಆಯಿಯೇ ಕೂದಲಿಗೆ ಎಣ್ಣೆ ಹಚ್ಚಿ ಮರದ ಹಣಿಗೆಯಿಂದ ನಿಧಾನಕ್ಕೆ ನೋವಾಗದಂತೆ ಬಾಚುವಳು. ಗುಂಗುರು ಕೂದಲು, ಬಾಚಿದಂತೆ ಕೆದರಿ ಹರಡಿಕೊಳ್ಳುತ್ತದೆ. ಒಮ್ಮೊಮ್ಮೆ ನಾಣಿ ತಾನೂ ಅವಳ ತಲೆ ಬಾಚಿ ಜಡೆ ಹಾಕಲು ನೋಡುತ್ತಿದ್ದ. ಪುಟ್ಟ ಕೈಗಳಲ್ಲಿ ಕೂದಲು ಹಿಡಿಯಲಾರದೆ ಇವನು ಎಳೆಯುವಾಗ "ಅಯ್ಯೋ ಬಿಡು ನನ್ನ ಕೂದಲು, ತಲೆ ನೋಯ್ತಿದೆ" ಎಂದರೂ ಅವನ ಚೇಷ್ಟೆ ಅವಳಿಗಿಷ್ಟವೇ.ಆದರೆ ದೊಡ್ಡವಳಾದಂತೆ ನಾಣಿಯ ಹೊರತಾಗಿ ಬೇರೆಯವರು ಖುಷಾಲಿಗೂ ಜಡೆ ಮುಟ್ಟಬಾರದು. ಆದರೆ ವಿನಾಯಕ,ಗಿರಿಧರನಿಗೆ ಅವಳ ಜಡೆ ಎಳೆಯುವುದೇ ಒಂದು ಪಾಡು. ಆಗೆಲ್ಲ ಜಡೆಕೂದಲು ತಲೆಬುಡದಿಂದ ಕಿತ್ತು ನೋಯುವಾಗ ಗೌರಿ ಕಣ್ಣುಗಳಲ್ಲಿ ಧಾರಾಕಾರ ನೀರು. ಇವರಿಗೋ ನಗು, ನಗು. ಇವತ್ತು ತಮ್ಮ ಚೇಷ್ಟೆಯಿಂದ ಅವಳು ಭಾವಿಗೆ ಬಿದ್ದು ಉಳಿದದ್ದೇ ಪುಣ್ಯ.

"ಗೌರಿ, ನಾ ಬೇಕೆಂದೇ ಮಾಡ್ಲಿಲ್ಲೆ. ನೀ ಜೊಟ್ಟೆ ಹಿಡೀವಾಗ ಗಿರಿ ನಿನ್ನ ಜಡೆ ಎಳೆದ, ನಾ ಹಪ್ ಹೇಳಿದ್ದು ಅಷ್ಟೇ. ಅಷ್ಟಕ್ಕೆ ಭೂತ ಕಂಡಂತೆ ಹೆದರೂದಾ? ತಪ್ಪಾತು ಗೌರಿ, ಎಲ್ಲಿ ಒಂದ್ಸಲ ನಗು ಕಾಂಬ?"

ಬೆಣ್ಣೆ ಸವರುವ ಮಾತಾಗಿತ್ತೇ? ಅಲ್ಲವಾದರೆ ಶಂಕರಿ ಅತ್ತೆ ತಮ್ಮ ಹುಡುಗಿಯರಿಗೆ ತಂದ ತರಹದ್ದೇ ಗೌರಿಗೂ ಸ್ವಲ್ಪ ಸಣ್ಣ ಗೊಂಬೆ ತಂದಿದ್ದಳು. ಜರಿ ಅಂಗಿ, ಕೆಂಚುಕೂದಲಿನ ಗೊಂಬೆ ಮುದ್ದಾಗಿತ್ತು. ದಿನ ರಾತ್ರೆ ಅವಳ ಜೊತೆಗೇ ಆ ಗೊಂಬೆ. ಅದನ್ನು ಎತ್ತಿ ಮುದ್ದಿಸಿದರೆ ವೆಂಕಟಲಕ್ಷ್ಮಿಗೆ ಕೊಂಕು ನಗೆ. "ಇದು ನನ್ನಮ್ಮ ತಂದದ್ದು. ಚೆಂದ ಇಟ್ಕಾ. ತುಂಡು ಮಾಡಿದ್ರೆ ತಿರಗಾ ಬೇರೆ ಸಿಕ್ಕಾ" ಎನ್ನುವ ಗರ್ವಿಷ್ಠೆ. ಆದರೆ ಕೊನೆಗೂ ಹಾಗೇ ಆಯ್ತು. ಚಕ್ರಿ ಮನೆಯಿಂದ ಹೊರಟಾಗ ನೋಡುತ್ತಾಳೆ ಗೊಂಬೆಯ ಕೈಕಾಲು ಮುರಿದು ಅಂಗಿ ಹರಿದು......ಅವಳ ಚೀಲದಲ್ಲಿ ಇಟ್ಟದ್ದು ಇವನೇ. ಚೆಂದದ ಗೊಂಬೆಗೆ ಆದ ಸ್ಥಿತಿ ಕಂಡು ಅಳುತ್ತಿದ್ದ ಗೌರಿಗೆ ಶಂಕರಿ ಅತ್ತೆ ತನ್ನ ಮಗಳ ಗೊಂಬೆ ಕೊಟ್ಟಾಗ ಆಯಿ ಹಿಂದಕ್ಕೆ ಕೊಟ್ಟಿದ್ದಳು,"ಗೊಂಬೆ ಹಾಳಾದ್ದು ಅವಳದ್ದು. ಬದಲಿಗೆ ನಿನ್ನ ಮಗಳದ್ದು ಕಿತ್ತು ಕೊಡ್ಬೇಡ." ಎಂದಳಲ್ಲದೆ ಗೌರಿಯನ್ನು ಸಂತೈಸಿದ್ದಳು ದೋಣಿ ಏರಿ ಹಿಂದಿರುಗುವ ದಾರಿಯಲ್ಲಿ.

ಅಮ್ಮೋ! ಚಕ್ರಿಮನೆಯ ಗಂಡುಮಕ್ಕಳ ಸಹವಾಸವೇ ಸಾಕು, ಇನ್ನು ಹೋಗುವುದು ಬೇಡ. ಮನಸ್ಸು ನೊಂದು ಹೇಳಿದರೂ ಅಮ್ಮಮ್ಮನ ಅಸೀಮ ಪ್ರೀತಿಯ ಸ್ಪರ್ಶಕ್ಕೆ ಮನದ ನೋವು ಮಾಸುವ ಗುಣವಿತ್ತು. ಅವಳ ದುಃಖ ನೋಡಿಯೇ ಅಪ್ಪಯ್ಯ ಗುಟ್ಟಾಗಿ ಯಾರ ಮುಖಾಂತರವೋ ತಂದುಕೊಟ್ಟಿದ್ದ ಪಿಳಿ ಪಿಳಿ ಕಣ್ಣು ಬಿಡುವ ಚೆಂದದ ಗೊಂಬೆಯನ್ನು.

"ಮಿಣ್ಣಗಿದ್ದ ಅಣ್ಣನ ಬಣ್ಣ ಬೇರೆಯೇ" ವಿನಾಯಕನನ್ನು ನೋಡಿಯೇ ಮಾಡಿದ ಗಾದೆ. ಇವನಿಗಿಂತ ಗಿರಿಧರ ವಾಸಿ. ನಾಣಿ ಹಳೆ ಸೈಕಲ್ ಚಕ್ರವನ್ನು ಕೋಲಿನಿಂದ ದೂಡುತ್ತ ಚಕ್ರಿಮನೆ ಅಂಗಳದಲ್ಲಿ ಆಡುತ್ತಿದ್ದಾಗ ಬಿದ್ದು ಕಾಲಿಗೆ ದೊಡ್ಡ ಗಾಯ ಆಗಿ ಹೋ, ಆಗ ಅವನನ್ನು ಕೂಡಲೆ ತನ್ನ ಸೈಕಲ್‌ನಲ್ಲಿ ಎದುರು ಕುಳ್ಳಿರಿಸಿ ಸರಕಾರಿ ದವಾಖಾನೆಗೆ ಕರೆದೊಯ್ದು ಡಾಕ್ಟರರಿಂದ ಹೊಲಿಗೆ, ಬ್ಯಾಂಡೇಜ್ ಮಾಡಿಸಿ ಕರೆ ತಂದವ ಗಿರಿಧರ. ಗಾಯ ಮಾಯುವ ತನಕ ಉಪಚಾರ ಅವನದೇ. ಅಲ್ಲಿ ಕೃತ್ರಿಮ ಇರಲಿಲ್ಲ. ಈಗೀಗ ನಾಣಿಯನ್ನು ತನ್ನ ಸೈಕಲ್‌ನಲ್ಲಿ ಕುಳ್ಳಿರಿಸಿ ಚಕ್ರಿ ಊರಲ್ಲಿ ತಿರುಗಿಸುವ. ಗೌರಿ ಆಸೆ ಕಣ್ಣಲ್ಲಿ ನೋಡಿದರೆ, "ಬರ್ತಿಯೇನೇ, ಹಿಂದಿನ ಸೀಟಲ್ಲಿ ಕೂತ್ಕಾ ಆಚೀಚೆ ಕಾಲು ಹಾಕಿ. ನಂಗೆಂತ ಹೆದರಿಕೆ ಇಲ್ಲೆ." ಎನ್ನುವ ದೊಡ್ಡ ಮಾರಾಯನಾಂಗೆ. ಒಮ್ಮೆ ಕೂತಿದ್ದಳು ಸೀಟಿನ ಹಿಂದೆ ಒಂದೇ ಬದಿಗೆ ಎರಡೂ ಕಾಲು ಇಳಿಬಿಟ್ಟು. ಅವಳ ಗ್ರಹಚಾರ, ಸೈಕಲ್ ಸ್ವಲ್ಪದೂರ ಹೋಗಿತ್ತು, ಆಗ ಅವಳ ಉದ್ದದ ಪರಕಾರ ಸೈಕಲ್ ಚೈನಿನಲ್ಲಿ ಸುತ್ತಿ ತಿರುಗಿ ಸೈಕಲ್ ಸಮೇತ ಇಬ್ಬರೂ ಧರೆಗೆ ಉರುಳಿ. ಛೀ, ಪರಕರ ಸೈಕಲ್ ಚೈನಿನಿಂದ ಬಿಡಿಸಲಾಗದೆ ಪೂರಾ ಹರಿದು ಗಿರಿಧರನ ಮುಖ ಸುಟ್ಟ

ಬದನೆಕಾಯಿ. "ಅಮ್ಮಮ್ಮನಿಗೆ ಹೇಳಿ ನಿಂಗೆ ಹೊಸ ಪರಕರ ಹೊಲಿಸಿ ಕೊಡುವ. ಮೊಣಕೈ ಅಂಗೈ ತರಚಿ ರಕ್ತ ಬರ್ತಿದೆ. ಇರು, ಔಷಧ ಹಚ್ತೇನೆ"

ಅದಕ್ಕೇ ಆಯಿ ಹೇಳಿದ್ದು ನಿಜವೇ, "ಎಲ್ಲಾ ಬಾಲ ಇಲ್ಲದ ಕಪಿಗಳು. ಈ ಚೇಷ್ಟೆ ಇನ್ನೊಂದಷ್ಟು ಕಾಲ. ದೊಡ್ಡವರಾಗಲಿ, ಸರಿಹೋಗ್ತಾವೆ."

ಸುಭದ್ರ ಅತ್ತೆಗೆ ಹೂವಿನ ಹುಚ್ಚು. ಮಲ್ಲಿಗೆ, ಜಾಜಿ, ಪಾರಿಜಾತ, ಸೇವಂತಿಗೆ ಏನೆಲ್ಲ ಬೆಳೆಸಿದ್ದಾಳೆ.ಗೌರಿ ಬಂದರೆ ತಲೆ ತುಂಬ ಹೂ ಮುಡಿ ಎನ್ನುವವಳು. ಅಮ್ಮಮ್ಮ ಪ್ರತಿದಿನ ತಾನೇ ಅವಳ ತಲೆ ಬಾಚಿ ಬಿಗಿಯಾಗಿ ಎರಡು ಜಡೆ ಹೆಣೆದು ತುದಿಗೆ ರಿಬ್ಬನ್ ಬಿಗಿದು, ಕೆಲವೊಮ್ಮೆ ಒಂದೇ ಜಡೆ ಹಾಕಿ ಅದಕ್ಕೆ ಪೇಟೆಯಿಂದ ತಂದ ಚೌರಿ ಸೇರಿಸಿ, ಆ ಹೆಣೆದ ಜಡೆಗೆ ಮಲ್ಲಿಗೆಯ ಜಲ್ಲಿ ಬಿಟ್ಟು ಆಂ! ಆಗೆಲ್ಲ ಅಕ್ಕನ ಜಡೆಯ ಚೆಂದಕ್ಕೆ ನಾಣಿಯ ಕುಣಿದಾಟ. "ಅತ್ತೆ, ನಿಮ್ಮ ಮೊಮ್ಮಗನಿಗೂ ಒಂದು ಜುಟ್ಟು ಕಟ್ಟಿ ಮಲ್ಲಿಗೆ ಮಾಲೆ ಮುಡಿಸಿ" ಎನ್ನುವಳು ಸುಭದ್ರ ಅತ್ತೆ. ಒಂದು ಸಂಜೆ ನಾಣಿ ಅಕ್ಕನಿಗಾಗಿ ಮಲ್ಲಿಗೆ ಮೊಗ್ಗುಗಳನ್ನು ಬಿದಿರು ಶಿಬ್ಬಲು ತುಂಬಾ ಕುಯ್ದು ತಂದಿದ್ದ. ಆ ಮೊಗ್ಗುಗಳಲ್ಲಿ ಹೆಚ್ಚಿನವು ನಾಡಿದ್ದು ಅರಳಬೇಕಾದ ಎಳೆ ಮೊಗ್ಗುಗಳು. ಅಮ್ಮಮ್ಮ ರಾತ್ರೆ ಅರಳುವ ಮೊಗ್ಗುಗಳನ್ನು ಮಾತ್ರ ಬೇರೆ ಮಾಡಿ ಎಳೆತನ್ನು ಬದಿಗಿಟ್ಟಳು.

"ನಾಣಿ, ಎಳೆ ಮೊಗ್ಗು ಕುಯ್ದರೆ ಅವು ಅರಳುವುದೇ ಇಲ್ಲ. ಇಂತಾದ್ದು ದೇವರಿಗೂ ಸಲ್ಲ. ಜಡೆಗೆ ಮುಡಿಸಲೂ ಆಗ್ತಿಲ್ಲೆ. ಗಿಡವೂ ಅಳುತ್ತದೆ ಗೊತ್ತೇನೋ?"

"ಅಮ್ಮಮ್ಮ, ನಾಣಿಯಂತೆ ಗಿಡ ಅಳುತ್ತದಾ?"ಮುಗ್ಧನಾಗಿ ಕೇಳಿದ್ದ ನಾಣಿ.

"ಹೂಂ, ನಾಣಿಗಿಂತ ಹೆಚ್ಚು" ಅವನ ಕೆನ್ನೆ ಸವರಿ, "ತನ್ನ ಮೈಮೇಲೆ ಹೂ ಅರಳುವಾಗ ಪ್ರತಿ ಗಿಡವೂ ಸಂತೋಷದಲ್ಲಿ ನಗುತ್ತವಂತೆ. ಅದ್ಕೇ ಅಲ್ಲದಾ, ಹೂ ಕುಯ್ಯುವಾಗ ಪೂರಾ ಗಿಡ ಸಪಾಟ ಮಾಡೂದಲ್ಲ. ಹೂವು ಮತ್ತು ಮೊಗ್ಗುಗಳಲ್ಲಿ ಕೆಲವನ್ನು ಅದರಲ್ಲೇ ಬಿಡೆಕ್ಕು. ಮಲ್ಲಿಗೆ, ಜಾಜಿ ರಾತ್ರೆ ಅರಳುವ ಹೂಗಳು. ಅವುಗಳ ಅಂದಿನ ಮೊಗ್ಗು ತೆಗೆಯಕ್ಕಲ್ಲದೆ ನೀ ಕುಯ್ದಂಗೆ ನಾಡಿದ್ದು ಅರಳುವ ಮೊಗ್ಗಲ್ಲ" ಹೇಳಿದ ಅಮ್ಮಮ್ಮ ಒಂದು ಅಡಿಕೆ ಹಾಳೆ ತಂದು ಎಳೆ ಮೊಗ್ಗುಗಳನ್ನು ಹರಡಿ ನೀರು ತಳೆದು "ತುಳಸಿ ಕಟ್ಟೆ ಬದಿಗೆ ಇಟ್ಟು ಬಾ" ಎಂದಳು. ಆ ಮೊಗ್ಗುಗಳು ಎರಡು ದಿನ ಸಂದರೂ ಅರಳದೆ ಮುರುಟಿ ತುಳಸಿ ಗಿಡದ ಕೆಳಗೆ ಗೊಬ್ಬರವಾಗಿ, ಪಾಪ, ನಾಣಿ ಮುಖ ನೋಡಬೇಕು.

ಈ ಅಜ್ಜಿಯರೆಲ್ಲ ಒಂದೇ. ಅಜ್ಜಮ್ಮನಂತೆ ಈ ಅಮ್ಮಮ್ಮನೂ ಇದರಲ್ಲಿ ನಿಸ್ಸೀಮಳು. ಆದರೆ ಅಜ್ಜಮ್ಮನಿಗಿಂತ ಅಮ್ಮಮ್ಮನ ಕರಾಮತ್ತು ಇನ್ನೂ ಹೆಚ್ಚಿಗೆ.ಚಕ್ರಿ ಮನೆಯಿಂದ ತುಸು ದೂರದಲ್ಲಿ ಹರಿಯುವ ಚಕ್ರ ಹೊಳೆಯಲ್ಲಿ ಅಮ್ಮಮ್ಮ ಈಜುವುದನ್ನು ಕಣ್ಣಾರೆ

ನೋಡಬೇಕು. ಸೀರೆಯನ್ನು ಕಚ್ಚೆಯಂತೆ ಕಟ್ಟಿ ಮೀನಿನಂತೆ ಲೀಲಾಜಾಲವಾಗಿ ಈಜಬಲ್ಲಳು. ನಾಣಿ, ಗಿರಿಧರ, ವಿನಾಯಕ ಎಲ್ಲ ಮಕ್ಕಳಿಗೂ ಈಜು ಕಲಿಸಿದ್ದು ಅವಳೇ. ಗೌರಿ ಒಬ್ಬಳೇ ಬಾಕಿ.

"ಶರಾವತಿಯಂತೆ ನೀನು ಪುಕ್ಕಲು. ನೀರು ಕಂಡ್ರೆ ಮಾರುದೂರ. ಹೊಳೆ ದಡದಲ್ಲಿದ್ದ ನಮಗೆ ಈಜು ಬರದಿದ್ದರೆ ಜನ್ಮ ವ್ಯರ್ಥ. ಒಂದು ತಮಾಷಿ ಹೇಳ್ತೆ, ನಿನ್ನ ಅಜ್ಜಯ್ಯನಿಗೆ ಎಷ್ಟು ಬೇಡಿಕಂಡ್ರೂ ನನಗೆ ಈಜಲು ಕಲಿಸಲಿಲ್ಲೆ. ನಾನೆಂತ ಮಾಡ್ದೆ ಗೊತ್ತ?"ಹೇಳುವಾಗ ಅವಳ ಕಣ್ಣಲ್ಲಿ ನಕ್ಷತ್ರದ ಮಿನುಗು. ಅಮ್ಮಮ್ಮನ ನೆನಪು ಜಾರುತ್ತದೆ ತನ್ನ ಬಾಲ್ಯಕಾಲಕ್ಕೆ. "ದಿನಾ ಚಕ್ರಹೊಳೆ ಬದಿಯಲ್ಲಿ ಮನೆಯವರ ಕೊಳೆ ಅರಿವೆಗಳನ್ನು ತೊಳೆದು ತಪ್ಪದು ನನ್ನ ಮತ್ತು ನನ್ನ ಕೊನೆ ಮೈದುನನ ಹೆಂಡತಿ ಈಶ್ವರಿಯ ಕೆಲ್ಸ. ಆಗ ನಾವು ಹೆಚ್ಚೆಂದರೆ ಹದಿನಾರು ವರ್ಷದ ಹುಡುಗೀರು. ಅಂಟವಾಳದ ಹುಡಿಯಲ್ಲಿ ನೆಂದ ಅರಿವೆಗಳನ್ನು ಹೊಳೆ ಕಲ್ಲಲ್ಲಿ ಹಾಕಿ ಗಸ್ ಗಸ್ ತಿಕ್ಕಿ ಒಗೆವದು ನನ್ನ ಕೆಲ್ಸ. ಈಶ್ವರಿ ಅದನ್ನು ಹರಿವ ನೀರಲ್ಲಿ ಹಾಕಿ ಆಚೀಚೆ ಎತ್ತಿ ತೆಗ್ದು ಜಾಲಿಸಿ ಹಿಂಡುವುದು. ಆ ಹೊತ್ತಿನಲ್ಲಿ ದಿನಾ ನಾ ಎಂತ ಮಾಡ್ತಿದ್ದೆ ಗೊತ್ತಾ? ಹೊಳೆ ದಂಡೆ ಬದಿಯ ಕಲ್ಲನ್ನು ಎರಡೂ ಕೈಗಳಿಂದ ಒತ್ತಿಹಿಡಿದು ಮುಖ ಮಾತ್ರ ಮೇಲೆತ್ತಿ ದೇಹ ಪೂರಾ ನೀರಿಗಿಳಿಸಿ ಕಾಲುಗಳನ್ನು ಹೀಂಗೆ ನೀರಲ್ಲಿ ಬಡೀತಾ ಬಡೀತಾ ಹೋ, ಒಂದು ದಿನ ದುಡುಂ ನೀರಿಗೆ ಬಿದ್ದದ್ದೇ. ಹರಿವ ನೀರು. ಮುಳ್ಕ್ ಹಾಕಿ ಮುಳುಗಿ ಎದ್ದು ಮತ್ತೆ ಮುಳುಗಿ ನೀರಲ್ಲಿ ಅಷ್ಟು ದೂರ ಬಳ್ಕಂಡ್ ಹೋದೆ. ಈಶ್ವರಿ ಬೊಬ್ಬೆ ಕೇಳ್ತಿತ್ತು, ಅಕ್ಕ ಮುಳುಗಿದ್ಲು. ನಾ ಹಾಂಗೆ ಕೈ ಕಾಲು ಹೊಡೀತಾ ದೂರ ಹೋದವಳೂ ತಿರಗಾ ದಡ ಮುಟ್ದೆ. ಗೌರಿ, ಯಾವ ಮಾಯೆಯಲ್ಲಿ ಈಜಿ ಮೇಲೆ ಬಂದ್ನೋ. ಈಶ್ವರಿಗೆ ಮನೇಲಿ ಹೇಳ್ಬೇಡ ಅಂದಿದ್ದೆ. ಹರಕು ಬಾಯಿ ಹೇಳದ್ದು ಪುಣ್ಯ. ನಾಲ್ಕು ದಿನದಲ್ಲಿ ಲಾಯಕ್ಕಾಗಿ ಈಜುದಕ್ಕೆ ಬಂತು. ಆದರೆ ನಿನ್ನ ಅಜ್ಜಯ್ಯ ಒಂದಿನ ಹೊಳೆಯಲ್ಲಿ ನಾನು ಈಜುವುದ ಕಂಡು ಹುಣಿಸೆ ಅಡರು ಹಿಡ್ಕಂಡು,"ನೀರಲ್ಲಿ ಸಾಯ್ತಿಯೇನೇ? ಮೇಲೆ ಬಾ. ನಾಲ್ಕು ಬಾರಿಸ್ತೆ ನೋಡು" ಬೊಬ್ಬೆ ಹಾಕಿದರು. ಹೆದರ್ತಾ ದಡ ಮುಟ್ಟಿ ಮೇಲೆ ಬಂದಾಗ"

ಹೇಳುತ್ತ ಭಾವುಕಳಾಗುತ್ತಾಳೆ ಅಮ್ಮಮ್ಮ. ಅಜ್ಜಯ್ಯ ಹುಣಿಸೇ ಅಡರು ಬಿಸಾಕಿ, "ಪಾಚೂ, ಒಬ್ಬಳು ಹೆಂಡತಿಯನ್ನು ಕಳ್ಕೊಂಡೆ. ನೀನೂ ಹೊಳೆಗೆ ಬಿದ್ದು ಗೊಟಕ್ ಅಂದ್ರೆ ನಂಗ್ಯಾರು ಗತಿ?" ಹೆಣ್ಣಿನಂತೆ ಅತ್ತನಂತೆ. ಆಮೇಲೆ ದಿನಾ ಸಂಜೆ ಗಂಡ ಹೆಂಡತಿ ಇಬ್ಬರೂ ಒಟ್ಟಿಗೆ ಹೊಳೆಯಲ್ಲಿ ಈಜ್ತಿದ್ದರಂತೆ. "ನಾವು ಹೆದರಿದಷ್ಟೂ ನೀರು ನಮ್ಮನ್ನು ಹೆದರಿಸ್ತು. ನೀರಿನಲ್ಲಿ ಮುಳುಗಿದಷ್ಟೂ ನಮ್ಮನ್ನು ಇಷ್ಟ ಪಡುತ್ತು. ಹೆದರುಪುಕ್ಕಲು ನಿನ್ನ ಆಯಿ, ಈಜಲು ಕಲಿಯಲೇ ಇಲ್ಲ. ನಿನಗೆ, ನಾಣಿಗೆ ಕಲಿಸಲೂ ಬಿಡಲಿಲ್ಲ.ಇಬ್ಬರೇ

ಮಕ್ಕಳು ಅಂತ ಮೋಹವೋ, ವಾತ್ಸಲ್ಯವೋ ತಿಳಿದು. ಆಯಿಗೆ ಹೇಳ್ಬೇಡ, ಈಸಲ ವೈಶಾಖ ಮಾಸದಲ್ಲಿ ಹೊಳೆ ಶಾಂತ ಇದ್ದಾಗ ನೀ ಈಜು ಕಲೀಬೇಕು ತಿಳೀತಾ?"

ಅಮ್ಮಮ್ಮ ಹೇಳುವುದರಲ್ಲಿ ಹೆಚ್ಚು ರೋಚಕ ಸಂಗತಿ ಅವಳು ಗಾಂಧೀಜಿಯನ್ನು ನೋಡಿದ್ದು. ಅವಳ ಸ್ಮರಣೆಯಲ್ಲಿ ನಿತ್ಯ ಗಾಂಧೀಜಿ ಕಾಣಿಸಿಕೊಂಡಂತೆ ಹೇಳಿದಷ್ಟು ಸಾಲದು. ದೇಶಕ್ಕೆ ಸ್ವಾತಂತ್ರ್ಯ ಸಿಗಬೇಕೆಂಬ ಹೋರಾಟದ ಕಾಲದಲ್ಲಿ ಗಾಂಧೀಜಿ ಪ್ರಥಮಬಾರಿ ಮಂಗಳೂರಿಗೆ ಆಗಮಿಸಿದ್ದರು. ಆ ಸಮಯ ಉಡುಪಿ ಸಮೀಪದ ಹಳ್ಳಿಯಲ್ಲಿದ್ದ ತನ್ನ ಅಕ್ಕನ ಮನೆಗೆ ಎರಡು ದಿನಕ್ಕೆ ಬಂದಿದ್ದಳು ಅಮ್ಮಮ್ಮ. ಅಕ್ಕನ ಗಂಡ ಅನಂತಯ್ಯ ಕಟ್ಟಾ ದೇಶಭಕ್ತ, ಸ್ವಾತಂತ್ರ್ಯ ಹೋರಾಟಗಾರ. ಹಿಂದೂ ಸಂಘಟನೆಯ ಪ್ರಮುಖ ವ್ಯಕ್ತಿ. ಗಾಂಧೀಜಿಯವರ ಕಾರ್ಯಕ್ರಮಕ್ಕೆ ಈ ಭಾವಅಕ್ಕನ ಜೊತೆ ಅಮ್ಮಮ್ಮನೂ ಹೋಗಿದ್ದಳು. ಇದೊಂದು ಗಾಂಧೀಜಿಯನ್ನು ನೋಡುವ ಆಕಸ್ಮಿಕ ಯೋಗ.

ಉಡುಪಿಯ ಸೀತಾ ನದಿ ದಾಟಿ, ಇನ್ನೂ ಕಿರು ಹೊಳೆಗಳನ್ನು ದೋಣಿಯಲ್ಲಿ ದಾಟಿ ಮಂಗಳೂರಿಗೆ ಬಂದದ್ದು, ಅಲ್ಲಿ ವಿಶಾಲ ಬಯಲಿನಲ್ಲಿ ಗಾಂಧೀಜಿಯವರನ್ನು ತೀರ ಸಮೀಪದಿಂದ ನೋಡಿದ್ದು,ಅವರು ದೇಶದ ದಾಸ್ಯತ್ವ, ಸ್ವತಂತ್ರ ಭಾರತದ ಕಲ್ಪನೆ ಕೊಟ್ಟದ್ದು, ಜನರಲ್ಲಿ ದೇಶ ಪ್ರೇಮ ಹೆಚ್ಚುವಂತೆ ಮಾತನಾಡಿದ್ದು ಅಮ್ಮಮ್ಮನನ್ನು ಪ್ರಭಾವಿಸಿಬಿಟ್ಟವು. ರಾಷ್ಟ್ರೀಯ ಸ್ವಾತಂತ್ರ್ಯ ನಿಧಿಗೆ ಧನ ಸಹಾಯ ಹರಿದು ಬಂದಿತು. ಹಾಗೇ ಅನೇಕ ಹೆಂಗಸರು ಚಿನ್ನಾಭರಣ ಸಮರ್ಪಿಸಿದರು. ಆ ಗಳಿಗೆ ಅಮ್ಮಮ್ಮ ಭಾವುಕಳಾಗಿ ತನ್ನ ಕೈಯ್ಯಲ್ಲಿದ್ದ ದಪ್ಪದ ಚಿನ್ನದ ಕಡಗ ತೆಗೆದು ಸಹಾಯ ನಿಧಿಗೆ ಅರ್ಪಿಸುವಾಗ ಏನು ಧನ್ಯತೆಯ ಭಾವ! ದೇಶದ ಬಗ್ಗೆ ಸ್ವಲ್ಪ ಅರಿವು ಸಿಕ್ಕಿದ್ದು ಆಗಲೇ. ಯಾಕೆಂದರೆ ಚಕ್ರೀ ಮನೆಗೆ ಪತ್ರಿಕೆ ಬರುತ್ತಿರಲಿಲ್ಲ. ನಾರ್ಣಪ್ಪನಿಗೆ ಓದುವ ಆಸಕ್ತಿ ಇಲ್ಲ, ಅಮ್ಮಮ್ಮ ಅನಕ್ಷರಸ್ಥೆ.

ಉಡುಪಿಗೆ ಬಂದ ನಂತರ ಅನಂತಯ್ಯ ಅಸಮಾಧಾನದಲ್ಲಿ, "ಇಂತಹ ಸಭೆಯಲ್ಲಿ ನೀನು ಕೊಟ್ಟ ಆಭರಣದ ಮೌಲ್ಯ ಫಂಡ್‌ಗೆ ಹೋದರೆ ಸೈ. ಇಲ್ಲವಾದರೆ ಯಾರು ಗುಳುಂ ಮಾಡ್ತಾರೋ ದೇವರೇ ಬಲ್ಲ"ಎನ್ನಬೇಕೇ?

"ನಿನ್ನ ಅಜ್ಜನೂ ಮೂರುಕಾಸಿನ ಬೆಲೆ ಗೊತ್ತಿಲ್ಲದವಳೇ, ಅದೇನು ನಿನ್ನ ಅಪ್ಪನ ಮನೆ ಗಂಟಾ ಕೈಯ್ಯಿಂದ ಕಳಚಿ ಕೊಡೂಕೆ?ಚಿನ್ನ ಕಲ್ಲಿನ ತುಂಡು ಅಂತ ತಿಳಕಂಡ್ಯಾ?. ಹೇಳಿ ನನ್ನನ್ನು ಕೆಟ್ಟದಾಗಿ ಬೈದು ಬಿಟ್ಟರು.ಯಾರು ಎಂತ ಹೇಳ್ಲಿ. ಒಮ್ಮೆ ಕೊಟ್ಟ ಮೇಲೆ ಪಶ್ಚಾತ್ತಾಪ ಮಾಡೂ ಜಾಯಮಾನ ನನ್ನದಲ್ಲ. ನನ್ನ ವಸ್ತು ಕೊಟ್ಟೆ, ಶುದ್ಧ ಮನಸ್ಸಿಂದ ಕೊಟ್ಟೆ. ಅಹಂಕಾರ ಇಲ್ದೇ ಕೊಟ್ಟೆ. ಇನ್ನೆಂತರ ಬೈಯ್ಯಲಿ ನಂಗೆಂತ?"

"ಆಮೇಲೆ ನೀ ಗಾಂಧೀಜಿಯನ್ನು ಕಾಣಲೇ ಇಲ್ವ?" ಗೌರಿಯ ಪ್ರಶ್ನೆ.

"ಇಲ್ಲ, ವಿದೇಶಿ ವಸ್ತುಗಳನ್ನು ಸುಟ್ಟು ಹಾಕಬೇಕೆಂದು ಬಸ್ರೂರಲ್ಲಿ ದೊಡ್ಡ ಸಭೆ ಗಲಾಟೆ, ದೊಂಬಿ ಎಲ್ಲಾ ಆಯ್ತಂತೆ. ನಮ್ಮ ಅನಂತಯ್ಯ ಆ ಸಭೆಗೆ ಹೋಗುವವನು ನಮ್ಮಲ್ಲಿಗೂ ಬಂದಿದ್ದ, ನನಗೆ ಅವನ ಸಂಗಡ ಹೋಪ ಮನಸ್ಸಿತ್ತು, ಆದರೆ ನಿನ್ನ ಅಜ್ಜಯ್ಯ ಬಿಟ್ಟರಲ್ಲವೇ? ಹೆಂಗಸರ ಜಾಗ ಹೊಸ್ತಿಲು ಒಳಗಂತೆ. "ಕಾಲು ಹೊರಗೆ ಹಾಕೀರೆ ಕಾಣು, ಎಂತ ಮಾಡ್ತೆ." ಥೇಟ ದೂರ್ವಾಸಮುನಿ. ಅನಂತಯ್ಯನ ಎದುರು ಉತ್ತರ ಕೊಡಲಿಲ್ಲ ನಾನು. ಅವನೂ ಬಾಯ್ಮುಚ್ಚಕಂಡ ಹೋದ. ಅಲ್ಲ ಗೌರಿ, ನಂಗೊಂದು ತಿಳೀದು, ಮಂಗಳೂರು ಕಾರ್ಯಕ್ರಮಕ್ಕೆ ಎಷ್ಟು ಹೆಮ್ಮಕ್ಕಳು! ನನ್ನ ಹಾಗೆ ಹದಿನೆಂಟು ಮೊಳ ಸೀರೆ ಉಟ್ಟವರು, ಸೆರಗುತಲೆಗೆ ಹೊದ್ದವರು, ತಲೆ ಬೋಳಿಸಿಕೊಂಡವರು ಬಂದ್ರಲ್ಲ. ಅವರೆಲ್ಲ ಹೊಸಿಲು ದಾಟಿ ಬಂದ ಹೆಂಗಸರೇ ಅಲ್ವಾ? ಮಕ್ಕಳು ಮರಿ ಇದ್ದವರೇ ಅಲ್ಲದಾ? ನಮಗ್ಯಾಕೆ ಈ ಕಟ್ಟು ಪಾಡು? ಕಾಲಿಗೆಂತಕ್ಕೆ ಸರಪಣಿ? ಬಸಿರು ಬಾಂಣತನ, ಬರೀ ಒಲೆ ಮುಂದೆ ಬೇಯ್ಸು, ಕಲ್ಲಲ್ಲಿ ಅರಿ, ಮಡಿಕೆ ತಿಕ್ಕು, ಸಾರಿಸು, ಮೂರು ಹೊತ್ತು ಇದೊಂದೆಯಾ?"

ಕಣ್ಣೀರು ತುಂಬುತ್ತಿತ್ತು ಪ್ರತಿಬಾರಿ ಈ ವಿಷಯ ಹೇಳುವಾಗ. ಯಾವುದೋ ಅತೃಪ್ತ ಭಾವ ಹೊಗೆ ಆಡುತ್ತಿತ್ತು ಒಳಗಿನಿಂದ. ಆದರೂ ಈ ಅಮ್ಮಮ್ಮ ಗಟ್ಟಿಗಿತ್ತಿ. ಈಜುವುದರ ಜೊತೆಗೆ ಮರ ಹತ್ತುವುದು ಅವಳ ಪ್ರಿಯ ಕೆಲಸ. ತನಗೆ ಬೇಕಾದ ನುಗ್ಗೆ ಕೋಡು ಕುಯ್ಯುವುದು, ಹುಣಿಸೆ ಮರ ಹತ್ತಿ ಹುಳಿಕೋಡು ಬೀಳಿಸುವುದು, ಮಾವು, ಪೇರಲೆಕಾಯಿ ಮಾತ್ರವಲ್ಲ ಕೆಲಸದವ ಸಿಗದಿದ್ದರೆ ಸಣ್ಣ ಮರಗಳಿಂದ ಹಲಸಿನ ಕಾಯಿ ಕುಯ್ದು ತರುವುದು ಅವಳೇ. ಕೊಡಲಿಯಿಂದ ದೊಡ್ಡ ಹಲಸಿನ ಕಾಯಿ ಭಾಗ ಮಾಡಿ ಕತ್ತಿಯಿಂದ ಚಕ ಚಕ ಕತ್ತರಿಸಿ! ಹಾಂ, ತೆಂಗಿನ ಮರಕ್ಕೆ ಒಮ್ಮೆ ಅರ್ಧ ಹತ್ತಿ ಇಳಿದಿದ್ದಳಂತೆ. ಮತ್ತೆ ಆ ಸಾಹಸ ಮಾಡಲಿಲ್ಲ. ಒಟ್ಟಾರೆ ಯಾರನ್ನೂ ಯಾವ ಹೊತ್ತಿಗೂ ಕಾಯುವವಳಲ್ಲ. ಅಬ್ಬಬ್ಬ, ಒಂದು ಗಂಡಾಳಿನ ಶಕ್ತಿಯುತ ಹೆಣ್ಣು. "ನೀನೊಬ್ಬಳು ಗಂಡುಬೀರಿ!" ನಾರ್ಣಜ್ಜನ ಕೆಣಕು ಮಾತಿಗೆ ಲೆಕ್ಕವಿಲ್ಲ"

"ಹೌದು, ನೀವು ಬಳೆತೊಟ್ಟ ಹೆಣ್ಣಾದರೆ ನಾನು ಗಂಡುಬೀರಿ. ಏನೀಗ?" ಝಾಡಿಸಿ ಉತ್ತರಿಸುವ ಅಮ್ಮಮ್ಮ ಮತ್ತು ನಾರ್ಣಜ್ಜನ ಮಧ್ಯೆ ಒಂದು ಚೆನ್ನೆಮಣೆ ಆಟ ಕೊನೆತನಕ ಅವರ ವೈಮನಸ್ಸಿಗೆ ಕಾರಣವಾಗಿ ಛೇ, ಆ ನೆನಪು ಬಂದರೆ ಸಾಕು, ಕಹಿ ಗುಳಿಗೆ ಚಪ್ಪರಿಸಿದಂತೆ. ಅಮ್ಮಮ್ಮನ ಮಡಿಲಲ್ಲಿ ತಲೆ ಇಟ್ಟ ಗೌರಿಗೆ ನೆನಪುಗಳದೇ ಮಂಪರು.

ಕತ್ತಲೆ ಇಣುಕುವಾಗ ಬಾಳೆಹಣ್ಣು ರಸಾಯನ, ನೀರುಮಾವಿನಕಾಯಿ ಖಾರದಗೊಜ್ಜು ಮಾಡಿಯಾಗಿತ್ತು. ಬೇಯಿಸಿದ ಅಕ್ಕಿಹಿಟ್ಟಿನ ಉಂಡೆಯನ್ನು ಶ್ಯಾಮಿಗೆ

ಮುಟ್ಟಿನಲ್ಲಿ ಒತ್ತುವುದು ಬಾಕಿ. ಸುಶೀಲಚಿಕ್ಕಿ ಮುಟ್ಟು. ಅಟ್ಟದಿಂದ ಇಳಿದಿರಲೇ ಇಲ್ಲ. ಶ್ಯಾಮಿಗೆ ಒತ್ತಲು ಸುಬ್ಬಪ್ಪಯ್ಯ ಮತ್ತು ಕಮಲತ್ತೆ. ತಮ್ಮ ಎಂಬತ್ತೆರಡರ ಪ್ರಾಯದಲ್ಲೂ ಸುಬ್ಬಪ್ಪಯ್ಯ ಶ್ಯಾಮಿಗೆ ಒತ್ತಲು ಗಟ್ಟಿ ಜನವೇ. ಶ್ಯಾಮಿಗೆ ಮೆಲ್ಲಲು ಇನ್ನೂ ಹುಷಾರು. ಒತ್ತಿ ಬೀಳುವ ಎಳೆ ಎಳೆ ಶ್ಯಾಮಿಗೆಯನ್ನು ಅಡಿಯಲ್ಲಿ ಅಡಿಕೆಹಾಳೆಗೆ ಹಾಕಿ ತೆಗೆಯಲು ಆಯಿ. ಅವರ ಆ ಕೆಲಸದ ಹೊತ್ತಿನಲ್ಲಿ ನಾಣಿ, ಗೌರಿ ತಮ್ಮ ಕೋಣೆಗೆ ಬಂದರು. ಅಪ್ಪಯ್ಯ ಇಲ್ಲದ ದಿನ. ಆಯಿ ಬದಿಯಲ್ಲಿ ಅವಳಿಗೂ ಚಾಪೆ ಹಾಸಿದರು. ಬೂರಲು ಹತ್ತಿಯ ಹಾಸಿಗೆ ಇದ್ದರೂ ಅಮ್ಮಮ್ಮನಿಗೆ ಚಾಪೆಯೇ ಬೇಕು. ಕೋಣೆ ಪರದೆ ಈಚೆ ಸರಿಸಿ ತಮ್ಮ ಹಾಸಿಗೆ ಎಳೆದು ತಂದಿಟ್ಟರು. "ಅಮ್ಮಮ್ಮ ಇಲ್ಲೇ ಉಳಿದರೆ ಗಮ್ಮತ್ತು ಅಲ್ಲದಾ?" ಹೇಳಿಕೊಂಡರು.

ಅವರ ಆ ಕೆಲಸದ ಹೊತ್ತಿನಲ್ಲಿ ನಾಳೆ ಹೊರಡಲಿರುವ ಅಮ್ಮಮ್ಮನ ಚೀಲ ಹುಗ್ಗಿಸಿಟ್ಟು ಗೌರಿ, ನಾಣಿ "ಅಮ್ಮಮ್ಮ ಹೋಪದು ನಾಡಿದ್ದೇ. ಇಬ್ಬರೂ ಹಠ ಮಾಡ್ವ" ಎನ್ನುತ್ತ ತಮ್ಮ ಕೋಣೆಗೆ ಬಂದರು. ಅಪ್ಪಯ್ಯ ಇಲ್ಲದ ದಿನ. ಆಯಿ ಬದಿಯಲ್ಲಿ ಅವಳಿಗೂ ಚಾಪೆ ಹಾಸಿದರು. ಬೂರಲು ಹತ್ತಿಯ ಹಾಸಿಗೆ ಇದ್ದರೂ ಅಮ್ಮಮ್ಮನಿಗೆ ಚಾಪೆಯೇ ಬೇಕು. ಕೋಣೆ ಪರದೆ ಈಚೆ ಸರಿಸಿ ತಮ್ಮ ಹಾಸಿಗೆ ಎಳೆದು ತಂದಿಟ್ಟರು. "ಅಮ್ಮಮ್ಮ ಇಲ್ಲೇ ಉಳಿದರೆ ಗಮ್ಮತ್ತು ಅಲ್ಲದಾ?" ಹೇಳಿಕೊಂಡರು.

ರಾತ್ರೆ ಗಡದ್ದಾದ ಶ್ಯಾಮಿಗೆ ಊಟ. ಅಮ್ಮಮ್ಮ ಮಾವಿನಕಾಯಿ ಗೊಜ್ಜಿಗೆ ಎರಡು ಸಂಡಿಗೆ ಮೆಣ್ಸು ನುರಿದು ನೆಕ್ಕಿ ತಿಂದು ತೃಪ್ತಿಯಿಂದ ಎಲ್ಲರ ಮುಖ ನೋಡಿದಳು. ಸುಬ್ಬಪ್ಪಯ್ಯ ಒಬ್ಬರು "ಗದ್ದೆ ಹೂಟೆ ಮಾಡಿ ಆತಾ? ಮೊನ್ನೆ ಮಳೆಗೆ ನೇಜಿ ನೆಟ್ಟಾತಾ? ಈ ಸಲ ಉದ್ದಿನ ಧಾರಣೆ ಏರಿದ್ದು ಅಲ್ಲದಾ? ದನ ಎಷ್ಟಿದ್ದು ಕರೆವಲೆ?" ವ್ಯವಹಾರಿಕ ಮಾತು. ಆಯಿ ಬಿಮ್ಮನೆ ಇದ್ದಳು. ಯಾವಾಗಲೂ ಪಟಪಟ ಹರಟುವ ಅಜ್ಜಮ್ಮ, ಶಾರದೆ ಬಾಯಿ ಬೀಗ ಹಾಕಿದ್ದು ಯಾಕೋ. ತಾನು ಬಂದ ಹೊತ್ತು ಸರಿಯಿಲ್ಲವೇ? ಇದಕ್ಕೆಲ್ಲ ಉತ್ತರ ಸಿಕ್ಕಿದ್ದು ರಾತ್ರೆ ಆಯಿ ಮನೆಕೆಲಸ ಮುಗಿಸಿ ಮಲಗಲು ಬಂದಾಗಲೇ.

ತಮ್ಮ ಹಾಸಿಗೆಗೆ ಒತ್ತಿಮಲಗಿದ್ದ ಮಕ್ಕಳಿಗೆ ನಿದ್ರೆ ಬಂದಿದೆ ಎಂದು ಖಚಿತ ಪಡಿಸಿಯೇ ಆಯಿ ಮೊನ್ನೆ ಬಂದ ಹುಡುಗನ ವಿಷಯ ಎತ್ತಿದಳು. ಆದರೆ ಮುಸುಕು ಹೊದ್ದು ನಿದ್ದೆ ಬಂದಂತೆ ನಟಿಸಲು ಗೌರಿ ಹುಷಾರು. ಅದರಲ್ಲೂ ತನ್ನ ಮದುವೆ ವಿಷಯ, ಅಮ್ಮಮ್ಮನ ಅಭಿಪ್ರಾಯ ಆದೀತೇ? ಇಲ್ಲವೇ? ತಿಳಿಯುವ ಕುತೂಹಲ. ಎಚ್ಚರವಿದ್ದೂ ನಿದ್ದೆಯ ನಾಟಕ!. ಆಯಿ ಸಣ್ಣ ಸ್ವರದಲ್ಲಿ ಹುಡುಗ ಶಾರದೆಯನ್ನು ಬಿಟ್ಟು ಗೌರಿಯನ್ನು ಒಪ್ಪಿದ್ದು, ಅತ್ತೆ, ಮಾವ ತಾನು ಎಲ್ಲರೂ ಗೌರಿಗೆ ಬಾಸಿಂಗ್ ಬಲ ಬಂತೆಂದು ಖುಷಿ ಪಟ್ಟಿದ್ದು ಹೇಳುತ್ತ, "ಅವಳ ಅಪ್ಪನಿಗೆ ಈಗ ಮದ್ವೆ ಮಾಡೂಕೆ

ಮನಸ್ಸಿಲ್ಲೆ. ನೀ ಎಂತ ಹೇಳ್ತೆ? ಬಂದ ಸಂಬಂಧ ಕಾಲಲ್ಲಿ ಒದ್ದು ಕೂತರೆ ನಾಳೆ ಇಂತಾದ್ದೆ ಎಲ್ಲಿ ಸಿಕ್ಕಗು"

"ಅದಿನ್ನೂ ಸಣ್ಣಮಗು. ನಾ ಎಂತ ಹೇಳ್ಲಿ?"

"ಸಣ್ಣ ಮಗು? ಬುದ್ದಿ ಬೆಳೆದಿತ್ತು ಬಿಡು. ಮದುವೆ, ಮಕ್ಕಳು ವಿಚಾರದಲ್ಲಿ ತಲೆ ಚುರುಕು."

ಗೌರಿ ಮುಸುಕಿನಲ್ಲೇ ಅರ್ಧ ಕಣ್ಣು ತೆರೆದಳು. ಆಯಿ ಮಾತಿನ ಹಿಂದೆ ಆವತ್ತು ತಾನು ಕೇಳಿದ ಪ್ರಶ್ನೆಯೇ ಕಾರಣವೇ? ಇರಬೇಕು. ಈ ಚೈತ್ರ ಮಾಸದಲ್ಲಿ ಚಕ್ರಿ ಮನೆಯಲ್ಲಿ ಪೂಜೆಗೆ ತಾವಿಬ್ಬರೂ ಆಯಿಯೂ ಹೋದಾಗ ರಾತ್ರೆ ಎಂದಿನಂತೆ ಬಾಣಂತಿ ಕೋಣೆಯ ಬದಿಕೋಣೆಯಲ್ಲಿ ಮಲಗಿದ ಸಮಯ. ಅಮ್ಮಮ್ಮ ಮೆತ್ತಗೆ ಆಯಿಯನ್ನು ಕೇಳಿದ್ದಳು, "ಶರಾವತಿ, ನಿನಗ್ಯಾಕೆ ಎರಡೇ ಮಕ್ಕಳು? ನಾಣಿ ನಂತರ ಗರ್ಭ ಕಟ್ಟಲೇ ಇಲ್ಲವೇ?"

ಇನ್ನೂ ಎಚ್ಚರದಲ್ಲಿದ್ದ ಗೌರಿಯ ಕಿವಿ ನಿಮಿರಿತು. ಆಯಿಯ ಕಿಸಕ್ಕನೆ ನಗು. "ಗೊತ್ತಿಲ್ಲ ಅಮ್ಮಾ"

"ನನಗೆ ಏಳು ಮಕ್ಕಳು. ಎರಡು ಗರ್ಭ ಹೋಗಿ ಉಳಿದವು ಐದು. ಮತ್ತೆ ಬಸಿರು ಬಾರದಂತೆ ನಿನ್ನ ಅಪ್ಪನನ್ನು ನನ್ನ ಮಗ್ಗಲಿಗೆ ಬಾರದಂತೆ ದೂರ ಇಟ್ಟಿದ್ದೆ. ಅದಕ್ಕೇ ಕೇಳ್ತೆ, ನಿಮ್ಮಿಬ್ಬರಲ್ಲಿ ಎಂತಾ ಕಥೆ? ದೂರ ಇದ್ರಾ? ಜಗಳವಾ?"

"ಏನೂ ಇಲ್ಲೆ. ಅವರಿಗೆ ಹೆಚ್ಚು ಮಕ್ಕಳು ಬ್ಯಾಡವಂತೆ. ದೊಡ್ಡ ಸಂಸಾರ ಕಂಡು ಸಾಕಾಗಿದೆ ಅಂತಿದ್ರು."

"ಹಾಂಗಾರೆ ಇಬ್ಬರದೂ ಸನ್ಯಾಸಿ ಸಂಸಾರವಾ? ಒಟ್ಟಿಗೆ ಅಪ್ಪಿಕೊಂಡು ಮಲಗತಿಲ್ಯಾ?"

"ಹೋಗಮ್ಮಾ, ಎಂತಾದ್ರೂ ಕೇಳ್ತೇ ನಾಚ್ಕೆ! ನಮ್ಮಿಬ್ಬರಲ್ಲಿ ಜಗಳ, ದೂರ ಸರಿದು ಮನಿಕಂಬದ್ದು [ಮಲಗುವುದು] ಇಲ್ಲೆ. ಹತ್ರಾನೇ ಇದ್ದೋ. ಏನೋ ಆಗ್ಲಿಲ್ಲೆ."

ಹುರ್ರೇ! ಹಾರಿ ಬೀಳುವ ಖುಷಿ! ಈ ಮೊದಲೇ ಗೊಂಬೆ ಮದುವೆ ಆಟದಲ್ಲಿ ನಾಣಿಯನ್ನು ಕೇಳಿದ್ದಳು, "ತಮ್ಮ, ಮಕ್ಕಳು ಹೇಗೆ ಆಗ್ತಾವೆ?"ಅವನಿಗೇನು ಗೊತ್ತು? ಅವನೂ ಸಣ್ಣವನೇ. ಇವತ್ತು ಆಯಿ, ಅಮ್ಮಮ್ಮನ ಮಾತನ್ನು ಉಸಿರುಗಟ್ಟಿ ಕೇಳಿ ಬಹುವಾದ ಆಶ್ಚರ್ಯದಲ್ಲಿ ಹೊಸತನ್ನು ಕಂಡಂತೆ, ಹೆಣ್ಣು ಗಂಡಿನ ಪ್ರಕ್ರಿಯೆಯ ಒಗಟು ಬಿಡಿಸಿದಂತೆ ತನ್ನದೆ ಶರಾ ಬರೆದಿದ್ದಾಳೆ, ಅಪ್ಪ ಅಮ್ಮ ಒಟ್ಟಿಗೆ ಮಲಗಿದರೆ ಮಕ್ಕಳಾಗುತ್ತವೆ. ಇಶ್ಶೀ, ಇದೂ ಗೊತ್ತಿಲ್ಲ ನನ್ನ ದಡ್ಡ ಮಂಡೆಗೆ. ತನ್ನ ಕಿವಿ ಕೇಳಿದ್ದನ್ನು

ತಮ್ಮನ ಕಿವಿಗೆ ಊದಿದ್ದಳು. ಮತ್ತೆ ಸುಮ್ಮನಿರದೆ ಆವತ್ತು ಚಕ್ರಿ ಮನೆಯಿಂದ ಹಿಂದಿರುಗಿ ಹೊಳೆಬಾಗಿಲಿಗೆ ದೋಣಿಯಲ್ಲಿ ಬರುವಾಗ ಗೌರಿ ಮಾತು ತೆಗೆದಿದ್ದಳು, "ಆಯಿ, ನಮಗೆ ಒಬ್ಬ ತಮ್ಮನೋ ತಂಗಿಯೋ ಬೇಕಲ್ಲದ? ಯಾವಾಗ ಬತ್ತು?"

ಆಯಿ ಕಣ್ಣರಳಿಸಿ ಹೊಳೆನೀರಿನ ತೆರೆಯಲ್ಲಿ ಕೈಯ್ಯಾಡಿಸುತ್ತ, "ಎಂತದೇ ನಿನ್ನ ಪ್ರಶ್ನೆ? ಯಾವಾಗ ಬತ್ತು ಅನ್ನಲು ಅದೇನು ಆಕಾಶದಿಂದ ಉದುರುತ್ತಾ? ಹುಚ್ಚಿ,ಇಂತಹ ಪ್ರಶ್ನೆ ಕೇಳೂ ವಯಸ್ಸು ನಿಂದಲ್ಲ.ನಿನಗೆ ಮದಿ ಆದ್ಮೇಲೆ ತಿಳೀಗು ಎಲ್ಲಾ"

ತಾವು ಗೊಂಬೆ ಮದುವೆ ಮಾಡುವುದು, ಗೊಂಬೆ ಮಗುವನ್ನು ತೊಟ್ಟಿಲಲ್ಲಿಟ್ಟು ತೂಗುವುದು, ಅದರಾಚೆ ಒಂದಕ್ಕೊಂದು ಸಂಬಂಧ ಎಲ್ಲ ನಿಗೂಢ. ಹೇಳುವವರು ಯಾರೂ ಇಲ್ಲ, ಬಾಲಿಶ ಮನಸ್ಸು ಹಲವು ಎಳೆಗಳನ್ನು ಜೋಡಿಸುತ್ತದೆ ಯಾಕೋ? ಇದೇ ಕಾರಣಕ್ಕೇ ಆಯಿ ಹೇಳಿದ್ದು, ಗೌರಿ ತಲೆ ಮದುವೆ ಮಕ್ಕಳ ವಿಚಾರದಲ್ಲಿ ಚುರುಕು! ವ್ಯವಹಾರಸ್ಥೆ ಅಮ್ಮಮ್ಮ. ಮದುವೆಗೆ ಅವಸರ ಏನಿದೆ? ತಿಂದುಣ್ಣುವಷ್ಟು ಆಸ್ತಿಪಾಸ್ತಿ, ಸಂಪತ್ತು. ಹಿರಿಮಗನ ಜವಾಬ್ದಾರಿ. ಈ ನಡುವೆ ಮಗುವಿನ ಬಾಳು ಉರುಳು ಗುಂಡಾಗದಂತೆ ಎಚ್ಚರದಲ್ಲಿ, "ಸ್ವಲ್ಪ ವರ್ಷ ಕಳೆಯಲಿ ಶರಾವತಿ, ಅವಳನ್ನು ಶಾಲೆಗೆ ಕಳುಹಿಸು, ಚೆನ್ನಾಗಿ ಓದಲಿ. ನನ್ನ ಯೋಚ್ನೆ ಅಂದರೆ ಈ ವರ್ಷವೇ ಅವಳು ಶಾಲೆಗೆ ಹೋಗಲಿ. ಕಲಿಯಲಿ. ಮದ್ವೆ ಚಿಂತೆ ಮತ್ತಿನದು"

ಮರುದಿನ ಹಿರಿಯರಲ್ಲಿ ಇದೇ ಮಾತು, ಮಾತು, ಮಾತು. ಅಮ್ಮಮ್ಮ ಸುಶೀಲಚಿಕ್ಕಿಯ ಅಭಿಪ್ರಾಯ ಗೌರಿಗೆ ಮದುವೆ ಮಾಡಬೇಕೇ ಬೇಡವೇ? ಬೇಡವೆಂದು ಅಮ್ಮಮ್ಮ, ಸುಶೀಲಚಿಕ್ಕಿಯ ಅಭಿಪ್ರಾಯ. ಅಜ್ಜಮ್ಮನಿಗೂ ಪುಟ್ಟ ಹುಡುಗಿಯನ್ನು ಮದುವೆ ಮಾಡಿ ಕಳುಹಿಸಿದರೆ ಕಷ್ಟವೆಂದು ತಲೆಗೆ ಹೋಗಿದೆ. ಗೌರಿಯನ್ನು ಯಾರೂ ಕೇಳಲಿಲ್ಲ. ಆರ ಅವಶ್ಯಕತೆ ಇರಲಿಲ್ಲ. ಅಪ್ಪಯ್ಯ ಸಾಸ್ತಾನದಿಂದ ಬರುವುದಕ್ಕೆ ಇನ್ನೂ ಮೂರು ದಿನಗಳಿವೆ. ಆ ತನಕ ಕಾಯದೆ ಸುಬ್ಬಪ್ಪಯ್ಯ ಗಂಡಿನ ಕಡೆಯವರಿಗೆ "ತಮಗೆ ಶಾರದೆ ಒಪ್ಪಿಗೆಯಾದರೆ ಸಂತೋಷದಿಂದ ಧಾರೆ ಎರೆದು ಕೊಡ್ತೇವೆ. ಬೇಡವಾದರೆ ಮುಂದೆ ಈ ಸಂಬಂಧ ಮುಂದುವರಿಸುವ ಇಚ್ಛೆ ನಮಗಿಲ್ಲ" ಎಂದು ಒಂದು ಕಾಗದ ಬರೆದು ಲಕೋಟೆಯಲ್ಲಿಟ್ಟು ಗೋಂದು ಹಚ್ಚಿ ಮುಚ್ಚಿದರು. ಹಾಗೇ ಮಗನಿಗೂ ಒಂದು ಕಾಗದದಲ್ಲಿ "ಗೌರಿಯ ವಿಷಯದಲ್ಲಿ ನಿನ್ನಿಚ್ಚೆಯಂತೆ ನಡೆದುಕೊಂಡಿದ್ದೇವೆ. ನಾನು ಕೊಟ್ಟ ಈ ಲಕೋಟೆಯನ್ನು ಕಮ್ತಿಯವರ ಮೂಲಕ ಗಂಡಿನವರಿಗೆ ತಲುಪಿಸುವುದು" ಬರೆದು ಎರಡನ್ನೂ ಮಠ ಸಾಸ್ತಾನಕ್ಕೆ ಹೋಗಲಿರುವ ದೋಣಿಯವನ ಕೈಯ್ಯಲ್ಲಿ ಕೊಟ್ಟು ಕಳುಹಿಸಿದರು.

ಅಂದೇ ಸಂಜೆ ಬರುವ ದೋಣಿಯಲ್ಲಿ ಕಮ್ತಿಯವರ ಉತ್ತರದ ಕಾಗದವೂ

ಬಂದು ಮುಟ್ಟಿತು "ನಿಮ್ಮ ಅಭಿಪ್ರಾಯದ ಕಾಗದ ಗಂಡಿನಕಡೆಯವರಿಗೆ ತಲುಪಿಸಿದ್ದೇನೆ. ನಿರಾಶೆ ಬ್ಯಾಡ. ಬೇರೆ ಸಂಬಂಧ ಶಾರದೆಗೆ ನೋಡುವ"

ಅಲ್ಲಿಗೆ ಏನೂ ಆಗದವರಂತೆ ಎಲ್ಲರೂ ನಿರಾಳರಾದರು. ಗೌರಿ, ನಾಣಿಗೆ ವಿಷಯದ ಗಂಭೀರತೆ ತಲೆಗೆ ಹೋಗಲೇ ಇಲ್ಲ. ಆ ಸಂಜೆ ಅಮ್ಮಮ್ಮನನ್ನು ಕರೆದುಕೊಂಡು ಇಬ್ಬರೂ ಹೊಳೆ ಹತ್ತಿರ, ಕಾಡು ಹಾಡಿಯಲ್ಲಿ ತಿರುಗಿದರು ರೆಕ್ಕೆ ಬಿಚ್ಚಿದ ಹಕ್ಕಿಗಳಂತೆ.ಅದೋ ನಾಣಿಯ ಕೈಯ್ಯಲ್ಲೊಂದು ಕೋಲು. ವೀರಾಧಿವೀರನಂತೆ ಅಮ್ಮಮ್ಮನ ಮುಂದೆ ಹೋಗುತ್ತಿದ್ದರೆ ನೋಡಬೇಕು ಅವನ ಆವೇಶ, ನಗು. "ಭಲ್ಲಿರೇನಯ್ಯ, ನಾನ್ಯಾರು ಎಂದು? ನಾನು ವೀರಾಧಿವೀರ ಸುಬ್ಬಪ್ಪಯ್ಯಜ್ಜನ ಆಸ್ತಾನದ ದೊರೆಮಗ.!" ಅಮ್ಮಮ್ಮ ನಗೆಯೋ ನಗೆ. ಅವಳಿಗೆ ನಾಣಿಯನ್ನು ಎಷ್ಟು ಮುದ್ದಿಸಿದರೂ ಸಾಲದು. ಹೊಳೆಯಲ್ಲಿ ಕಾಲು ಮುಳುಗಿಸಿ ಕಾಲಿನಿಂದ ಅಮ್ಮಮ್ಮನ ಮೈತುಂಬ ನೀರು ಚಿಮ್ಮಿಸಿ ನಕ್ಕರು. ಬಾಯಮ್ಮನ ಮನೆಗೂ ಹೋಗಿ ಬಂದರು. ಅಲ್ಲಿಂದ ಅಬ್ಬಲಿಗೆ, ದುಂಡುಮಲ್ಲಿಗೆಯ ರಾಶಿ ತಂದರು.ಮನೆ ಸಮೀಪವೇ ಗೋವೆ ಮರದ ಬಾಗಿದ ಗೆಲ್ಲು.ಅದನ್ನು ಕಾಣುವಾಗ ಅಮ್ಮನಿಗೆ ತನ್ನ ಮೊಮ್ಮಕ್ಕಳಿಗೆ ಇಲ್ಲಿ ಜೋಕಾಲಿ ಇಲ್ಲವಲ್ಲ, ಕಟ್ಟಿದರೆ ಪಾಪ ದಿನಾ ತೂಗಿಕೊಳ್ಳುತ್ತವೆ. ಎಂದೆನಿಸಿದ್ದೇ ತಡ. ಸುಬ್ಬಪ್ಪಯ್ಯನವರ ಕಿವಿಗೆ ಸುದ್ದಿ ತಲುಪಿಯಾಯ್ತು. ಸಪುರದ ಭಾವಿ ಹಗ್ಗ ತಂದದ್ದೇ ಇತ್ತು ಕೊಟ್ಟಿಗೆಯಲ್ಲಿ. ಲಿಂಗಪ್ಪನನ್ನು ಕರೆದರು. ಹೊರಗೆ ಗೋವೆ ಮರದ ಬದಲು ಅಂಗಳದ ಮೂಲೆ ಜಾಗದಲ್ಲಿ ಎರಡು ಗಟ್ಟಿ ಕಂಭಗಳನ್ನು ಹುಗಿದು ಮೇಲೆ ಅಡ್ಡಕ್ಕೆ ಇನ್ನೊಂದು ಕಂಭ ಜೋಡಿಸಿ ಅದಕ್ಕೆ ಎರಡು ಹಗ್ಗ ಕಟ್ಟಿದರು. ಇಳಿಬಿಟ್ಟ ಹಗ್ಗಕ್ಕೆ ಕೆಳಗೆ ಕಾಲು ನೀಕುವಷ್ಟು ಎತ್ತರದಲ್ಲಿ ಕುಳಿತುಕೊಳ್ಳಲು ಮತ್ತೊಂದು ಸಣ್ಣ ಹಲಗೆ. ಅದರ ಮೇಲೆ ಆಯಿಯ ಹಳೆಸೀರೆ ಮಡಿಕೆ ಮಾಡಿ ಇಟ್ಟರೆ ಜೋಕಾಲಿ ಅರ್ಧ ಗಂಟೆಯಲ್ಲಿ ಸಿದ್ದ. ರಪರಪನೆ ಮುಗಿಯಿತು ಕೆಲಸ. ನಾಣಿ ಅಲ್ಲೆಲ್ಲ ಹರಡಿದ್ದ ಸಣ್ಣ ಸಣ್ಣ ಬೆಣಚು ಕಲ್ಲುಗಳನ್ನು ಹೆಕ್ಕಿ ದೂರ ಎಸೆದ. ಗೌರಿ ಆ ಭಾಗದ ನೆಲ ಗುಡಿಸಿದಳು, ಈಗ ನೋಡಬೇಕು ಅಮ್ಮಮ್ಮನ ನಗುವನ್ನು! ಅಮ್ಮಮ್ಮ ನಾಣಿ, ಗೌರಿಯನ್ನು ಅದರಲ್ಲಿ ಕುಳ್ಳಿರಿಸಿ, "ತೂಗಿರೆ ರಂಗನ್ನ, ತೂಗಿರೆ ಕೃಷ್ಣನ್ನ, ತೂಗಿ ಪಾಡಿರೆ ಮುಕುಂದನನ್ನ" ಹಾಡುತ್ತ ತಾನೇ ತೂಗಿದಾಗ ಮಕ್ಕಳ ಸಂಭ್ರಮ ಮುಗಿಲು ಮುಟ್ಟಿತ್ತು. ಎಷ್ಟು ಒಳ್ಳೆಯವಳು ನಮ್ಮ ಚಕ್ರಿ ಅಮ್ಮಮ್ಮ! ಕಾಲ ಬೆರಳಿನಿಂದ ನೆಲವನ್ನೂ ನೂಕಿ ನೂಕಿ ಜೋಕಾಲಿ ತೂಗ್ತಾ ಮರದೆತ್ತರಕ್ಕೆ ಏರಿ ಇಳಿಯುವಾಗ ಏನು ಖುಷಿ, ಏನು ಸಂಭ್ರಮ!

"ಆಯಿ, ನೀನೂ ಬಾ, ಜೋಕಾಲಿಯಲ್ಲಿ ಕೂತ್ಕೋ. ನಾ ತೂಗ್ತೆ ನಿನ್ನ" ಗೌರಿ ಕೇಕೆ ಹಾಕಿದಳು.

"ಕಮಲತ್ತೆ, ಶಾರದತ್ತೆ, ಬನ್ನಿ, ಸುಶೀಲ ಚಿಕ್ಕಿ ಎಲ್ಲಿದ್ದಿ? ಎಲ್ಲರೂ ಬನ್ರೋ. ಜೋಕಾಲಿ ತೂಗ್ರೋ"ನಾಣಿ ಜೋಕಾಲಿ ಜೀಕಿದ, ಹೋ, ಹೋ, ಹೋ.

"ನಾನು ರಾಧೆ, ನಾಣಿ .ಕೃಷ್ಣ, ಆಹಾ, ತಮ್ಮ, ಒಂದು ಹಾಡು ಹೇಳು"

ಗೌರಿಯ ಮುಖ ಅರಳಿತ್ತು.ಆಮೇಲೆ ತಾವು ಇಳಿದು ಅಮ್ಮನನ್ನು ಜೋಕಾಲಿಯಲ್ಲಿ ಕುಳ್ಳಿರಿಸಿ ತೂಗಿದರು.ಅಂಗಳದ ಹೊರ ಒಳಗೆ ತುಂಬಿತ್ತು ಮಕ್ಕಳ ಹರ್ಷೋಲ್ಲಾಸ. ತಾವು ಈ ಮೊದಲೇ ಮಕ್ಕಳಿಗೆ ಜೋಕಾಲಿ ಕಟ್ಟಬೇಕಿತ್ತು ಎನಿಸಿತು ಸುಬ್ಬಪ್ಪಯ್ಯರಿಗೆ. ಆಯಿ ಬಿಟ್ಟ ಕಣ್ಣುಗಳಿಂದ ನೋಡಿದಳು ತಾಯಿಯನ್ನು, ತನ್ನ ಅಮ್ಮನ ಉತ್ಸಾಹ ಮಕ್ಕಳಿಗಿಂತ ಹೆಚ್ಚು. ಅವಳೂ ಮಗುವಾಗಿದ್ದಾಳೆ! ಅದಕ್ಕೆ ಇವೆರಡೂ ಅವಳನ್ನು ಹಚ್ಚಿಕೊಂಡಿವೆ. ಅದೇನು ಜೀವನೋತ್ಸಾಹ.

ಮರುದಿನ ಬೆಳಿಗ್ಗೆ ಮೊಮ್ಮಕ್ಕಳು ಹಠ ಮಾಡಿದರೂ ಕೇಳದೆ ಅವು ಹುಗ್ಗಿಸಿ ಇಟ್ಟ ತನ್ನ ಚೀಲ ಕಾಣದೆ ಅಮ್ಮಮ್ಮ ಹಾಗೇ ಬೆಳಗಿನ ದೋಣಿಗೆ ಹೊರಟು ನಿಂತಾಗ ನಾಣಿ ಅಳುತ್ತಲೇ ಚೀಲ ತಂದುಕೊಟ್ಟ. "ಶ್ರಾವಣ ಮಾಸದಲ್ಲಿ ಮಳೆ ಕಮ್ಮಿ. ದೋಣಿಯವರೂ ಆಚೆ ಈಚೆ ಬತ್ತಾ ಇರ್ತೋರ್. ಗುರ್ತಿನ ದೋಣಿಯಲ್ಲಿ ನೀವಿಬ್ಬರೇ ಮಕ್ಕಳು ಬನ್ನಿ ಹೆದರಿಕೆ ಇಲ್ಲೆ. ತಿರಗಾ ಗಂಪತಿ ಮಾವ ನಿಮ್ಮನ್ನು ಇಲ್ಲಿ ತಂದು ಬಿಡ್ತಾ" ತಲೆ ನೇವರಿಸಿದ ಅಮ್ಮಮ್ಮನ ಹಸ್ತದಲ್ಲಿ ಅದೇನು ಪ್ರೀತಿಯ ಮಾಯಾದಂಡವೋ! ಗೌರಿ, ನಾಣಿ ಹೊಳೆ ತನಕ ಅಮ್ಮಮ್ಮನ ಜೊತೆಗೂಡಿದರು. ಮೊನ್ನೆ ಬಂದ ದೋಣಿಯವ ಆಗಲೇ ಬಂದು ನಿಂತು ಕಾಯುತ್ತಿದ್ದ. ಅಮ್ಮಮ್ಮ ಮೊಮ್ಮಗಳನ್ನು ಅಪ್ಪಿಕೊಂಡಳು,

"ಮದುವೆ ಬಗ್ಗೆ ತಲೆ ಕೆಡ್ಸಿಕೊಳ್ಳಬ್ಯಾಡ. ಶಾರದೆಯನ್ನು ಬಿಟ್ಟು ನಿಂಗೆ ಮದ್ವೆ ಮಾಡುವ ಮನಸ್ಸು ಯಾರಿಗೂ ಇಲ್ಲೆ. ನಿನ್ನ ಅಪ್ಪಯ್ಯನಿಗೆ ಹೇಳಿ ಸಾಸ್ತಾನದಿಂದ ಪೇಪರು, ಕಥೆ ಪುಸ್ತಕ, ಗಾಂಧೀಜಿಯ ಬರಹ ತರಿಸಿ ಓದು. ಆಯಿಗೂ ಹೇಳಿದ್ದೆ. ಸುಶೀಲಚಿಕ್ಕಿ ಘನಾ ತಿಳಕಂಡವಳು. ಇಂಗ್ಲೀಷು ಬತ್ತು ಅದಕ್ಕೆ. ನಿಂಗೆ ಕಲಸುಗು. ಮನೇಲೇ ಕಲಿರಿ ನೀನೂ, ನಾಣಿಯೂ. ಹೋಗಿ ಬರ್ಲ್ಯಾ?"

ದೋಣಿ ಅಮ್ಮಮ್ಮನನ್ನು ಹತ್ತಿಸಿಕೊಂಡು ಎರಡು ಮುಗ್ಧ ಜೀವಿಗಳ ಕಣ್ಣೀರಲ್ಲಿ ವಿದಾಯ ಹೇಳುತ್ತ ಗಂಗೊಳ್ಳಿ ಹೊಳೆಯಲ್ಲಿ ಸಾಗಿ ತಿರುವಿನಲ್ಲಿ ಕಣ್ಮರೆ ಆಯಿತು.

* * *

## ಅಧ್ಯಾಯ-5

ಆಷಾಡ ಮಾಸ ಬಂದರೆ ಸಾಕು, ಗಂಗಾವತರಣ ಎಲ್ಲ ಕಡೆಗೂ. ಮನೆಯಿಂದ

ತಲೆ ಹೊರಗೆ ಹಾಕದಂತೆ ಇಪ್ಪತ್ನಾಕು ಗಂಟೆಯೂ ಜಡಿಮಳೆ. ಮಿಂಚು ಗುಡುಗಿನ ಅಬ್ಬರ. ಬೀಸು ಗಾಳಿಯ ಅವಾಂತರ, ಧರಾಶಾಹಿಯಾಗಿ ಬೀಳುವ ಮರ ಗಿಡಗಳು. ಕುಸಿಯುವ ಗುಡ್ಡ ಬರೆಗಳು, ಮನೆಗಳು. ಗಂಗೊಳ್ಳಿ ಹೊಳೆ ಉಕ್ಕಿ ಉಕ್ಕಿ ಬಂದಂತೆ ಎಲ್ಲೆಲ್ಲೂ ನೀರು ನೀರು. ಕೆಲವೊಮ್ಮೆ ಬಿಸಿಲಿನ ಛಾಯೆಯಿಲ್ಲದೆ ಕಪ್ಪಾಗಿ ಕಾಣುವ ಹೊಳೆಯ ಅಲೆಯಲ್ಲಿ ದೋಣಿಗಳ ಓಡಾಟವೂ ಕಡಿಮೆ. ಅಲ್ಲಲ್ಲಿ ಗದ್ದೆ ಹುಣಿಗಳಲ್ಲಿ ಹೊಳೆತೀರದಲ್ಲಿ ತುಂಬುವ ಕೆರೆ, ನಾಲೆಗಳಿಂದ ನೆಲ ನೀರು ಒಂದಾಗಿ ಏನೂ ಕಾಣದ ಸ್ಥಿತಿ.

ಎರಡು ವರ್ಷಗಳ ಹಿಂದೆ ಇಂತಹದೇ ಆಷಾಢ ಮಾಸದ ಒಂದು ಸಂಜೆ ಸುಶೀಲಚಿಕ್ಕಿ ಹೊಳೆಬಾಗಿಲು ಮನೆಗೆ ಬಂದಿದ್ದಳು ತೀರ ಅನಿರೀಕ್ಷಿತವಾಗಿ. ಉಡುಪಿಯ ಅನಂತಯ್ಯ ಕರೆದುಕೊಂಡು ಬಂದಿದ್ದ. ಮನೆ ಮಂದಿಗೆ ಸುಶೀಲಚಿಕ್ಕಿಯ ವಿವರ ಒದಗಿಸಿ ಅವಳಿಗೆ ಬೇರೆಡೆಗೆ ವಾಸದ ವ್ಯವಸ್ಥೆ ಆದಮೇಲೆ ಕರೆದೊಯ್ಯುವೆ ಎಂದು ಎಲ್ಲರನ್ನೂ ಒಪ್ಪಿಸಿ ಹೋಗಿದ್ದ. ದಿಕ್ಕಿಲ್ಲದ ಮಕ್ಕಳುಮರಿ ಇಲ್ಲದ ಹೆಣ್ಣುಮಕ್ಕಳಿಗೆ ಈ ತರಹ ನೆರವು ನೀಡಿ ಅವರಿಗೆ ಭದ್ರತೆ ಒದಗಿಸುವ ವಿಶ್ವಾಸಾರ್ಹ ವ್ಯಕ್ತಿಗೆ ಇಲ್ಲ ಎನ್ನುವುದು ಹೇಗೆ? ಸಮಾಜಕಾರ್ಯದಲ್ಲಿ ಇಳಿದವರಿಗೆ ಇವೆಲ್ಲ ಮಾಮೂಲು. ಇವಳು ದಿಕ್ಕಿಲ್ಲದ ಮಕ್ಕಳುಮರಿ ಇಲ್ಲದ ಹೆಣ್ಣುಮಗಳು. ಐವತ್ತು ವರ್ಷವಾಗಿದೆ. ಆದರೆ ಗುರುತು ಪರಿಚಿತಳಲ್ಲ. ಬಂಧುವಲ್ಲ, ರಕ್ತ ಸಂಬಂಧಿಯಲ್ಲ. ಅನಂತಯ್ಯನ ಅಕ್ಕನ ಮಗಳ ಗಂಡನ ತಮ್ಮನ ಇನ್ನೂ ಹೀಗೆ ಎಲ್ಲೆಲ್ಲೋ ಎಳೆದ ದೂರದ ಬಾದರಾಯಣ ಸಂಬಂಧ. ಒಂಟಿ ಹೆಣ್ಣಿನ ಕಷ್ಟಕಾಲಕ್ಕೆ ಮರುಗಿ ಆಶ್ರಯ ಕೊಡಲು ಒಪ್ಪಿದ್ದರು. ದುಂಡು ಮುಖ, ಸಾತ್ವಿಕ ಕಳೆ, ಹಂಸದಂತೆ ಬಿಳಿಸೀರೆ, ಕಾಲಲ್ಲಿ ಹವಾಯ್ ತರಹದ ಚಪ್ಪಲಿ. ಮನೆಯವರ ಗಮನ ಸೆಳೆಯುವ ಆಕರ್ಶಕ ನಿಲುವು. ನಾಣಿ, ಗೌರಿ ದಂಗು ಬಡಿದಂತೆ ಅಡಿಯಿಂದ ಮುಡಿ ತನಕ ಅವಳನ್ನು ನೋಡಿದ್ದೇ ನೋಡಿದ್ದು. ಈ ತನಕ ಇಂತಹ ಮೊಗದ ಹೆಂಗಸನ್ನು ಕಂಡದ್ದಿಲ್ಲ. ಕಂಡರೂ ದೇವಸ್ಥಾನಗಳಲ್ಲಿ, ಧರ್ಮಶಾಲೆಯಲ್ಲಿ, ಕೆಲವರ ಮನೆ ಅಂಗಳದ ಎದುರಲ್ಲಿ ಕೆಂಪು ಸೀರೆಯುಟ್ಟು ತಲೆಮೇಲೆ ಸೆರಗು ಹೊದ್ದವರು. ಅಷ್ಟಾಗಿ ಹೆಚ್ಚು ಗಮನ ಇಟ್ಟಿಲ್ಲ. ಇವಳೂ ಅವರಂತೆ! ನಾಣಿ ಅಕ್ಕನ ಕಿವಿಯಲ್ಲಿ ಪಿಸಿಗುಟ್ಟಿದ,

"ಅಕ್ಕಾ, ನಮ್ಮ ಅಂಚೆ ಮಾಸ್ತರರ ಅಮ್ಮ ಇದ್ದಾರಲ್ಲ, ಧಡೂತಿ ಬೋಳುಮಂಡೆ? ಅವರ ಹಾಗೆ ಇವಳೂ ಪೂರಾ ಬೋಳು ಮಂಡೆ!"

"ದೊಡ್ಡದಾಗಿ ಹೇಳಬೇಡ್ವೋ. ಎಷ್ಟು ಸಾಮಾನು ಇದೆ ಕಾಣು. ಎಲ್ಲಿದ್ದಾರೆ? ಅಕಾ, ಅಟ್ಟದಲ್ಲಿ ಇಡ್ತಾ ಇದ್ದಾನೆ ಅಪ್ಪಯ್ಯ."

ಹೀಗೆ ಬಂದವಳಿಗೆ ಕಮಲತ್ತೆ ಕೋಣೆಯಲ್ಲಿ ವ್ಯವಸ್ಥೆ ಮಾಡಿದ್ದರೂ ಅವಳು ಅಟ್ಟದ ಮೂಲೆ ಆರಿಸಿದ್ದಳು. ಏಕಾಂತ ಬಯಸುವ ಜೀವ. ಮಾತಿಗಿಂತ ಮೌನ ಜಾಸ್ತಿ. ಬೋಳು ಕೈ, ಕುಂಕುಮ ಇಲ್ಲದ ಹಣೆ, ಬಿಸಿಲಿಗೆ ಮಿಂಚುವ ಬೋಳು ಮಂಡೆ. ಬಿಳಿಸೀರೆ. ಗೌರಿಗೆ ಈ ವೇಷದ ಅರ್ಥವಾದದ್ದು ಕೆಲ ಸಮಯದ ನಂತರವೆ. ಅಟ್ಟದ ಸಾಮಾನುಗಳ ಬದಿಗೆ ಒಂದು ಮಾಸಿದ ಫೋಟೋ. "ಇದ್ಯಾರದ್ದು?" ಸುಶೀಲಚಿಕ್ಕಿ ಕಣ್ಣೀರು ತುಂಬಿದ್ದಳು ಗೌರಿಯ ಪ್ರಶ್ನೆಗೆ. ಆಮೇಲೆ ಆಯಿಯೇ ಹೇಳಿದಳಲ್ಲ, "ಅದು ಅವಳ ಗಂಡನದು. ಮದುವೆಯಾಗಿ ಕೆಲವು ವರ್ಷ ಸಂಸಾರ ಮಾಡಿದ್ದಳಂತೆ. ಚೆನ್ನಾಗಿಯೇ ಇದ್ದರಂತೆ, ಪ್ಲೇಗ್ ಜ್ವರದಲ್ಲಿ ಗಂಡ ಹೋಗಿಬಿಟ್ನಂತೆ. ಪಾಪ"ಮುಂದೆ ಆಯಿ ವಿವರ ಹೇಳುವುದಿಲ್ಲ. ವಿವರ ಬೇಕಿಲ್ಲ. ವೇಷ ಭೂಷಣದಿಂದ ಆಗಲೇ ಅರ್ಥವಾಗಿತ್ತು.

ಆವತ್ತು ಇನ್ನೂ ಒಂದು ಪ್ರಶ್ನೆಯ ವಿವರ ಬೇಕಿತ್ತು ಗೌರಿಗೆ. ಆಯಿ ಹೇಳಿದಳಲ್ಲ, ಪ್ಲೇಗ್ ಹೆಸರನ್ನು. ಅದರ ಹೆಸರು ಕೇಳಿದ್ದೇ ಆದಿನ. ಒಂದು ವಿಷಯ ಅರ್ಥವಾಗದಿದ್ದರೆ ಗೌರಿಗೆ ಹತ್ತು ಪ್ರಶ್ನೆ ಕೇಳಲೇಬೇಕು. ಉತ್ತರ ಸಿಗುವ ತನಕ ಪ್ರಶ್ನೆಗಳು. "ನಿನಗೆ ಗೌರಿ ಹೆಸರಿನ ಬದಲಿಗೆ ಪ್ರಶ್ನಾಸುಂದರಿ ಅಂತ ಹೆಸರು ಇಡಕ್ಕಿತ್ತು." ಆಯಿ ಗೊಣಗುತ್ತಿದ್ದಳು. ಅವಳಿಗೆ ಪ್ಲೇಗ್ ಹೆಸರು ಹೇಳುವುದಕ್ಕೂ ಹೆದರಿಕೆ. ಅದೊಂದು ಇಲಿಗಳಿಂದ ಬರುವ ಸಾಂಕ್ರಮಿಕ ರೋಗ. ರೋಗ ಬಂದ ಇಲಿಗಳು ಮನುಷ್ಯನಿಗೆ ಕಚ್ಚಿದರೆ ಸಾಕು, ಒಬ್ಬರಿಂದ ಇನ್ನೊಬ್ಬರಿಗೆ, ಮನೆ ಮನೆ, ಊರು ಊರಿಗೇ ಹಬ್ಬುವ ಕೆಟ್ಟ ರೋಗ. ಕಂಕುಳಲ್ಲಿ, ಕುತ್ತಿಗೆ ಹಿಂದೆ, ತೊಡೆ ಸಂದುಗಳಲ್ಲಿ ಗಡ್ಡೆ ಎದ್ದು ಜ್ವರ ಕಾಣಿಸಿ ನಾಲ್ಕಾರು ದಿನಗಳಲ್ಲಿ ಜೀವ ತೆಗೆಯುವ ಮಾರಿ. ಆ ರೋಗಕ್ಕೆ ಔಷಧಿ ಕಂಡು ಹಿಡಿಯುವ ಮೊದಲು ಮಕ್ಕಳು ದೊಡ್ಡವರೆನ್ನದೆ ಸತ್ತವರ ಸಂಖ್ಯೆ ಅಸಂಖ್ಯ. ಹೊಳೆಬಾಗಿಲು ಸಣ್ಣ ದ್ವೀಪ. ಹೊರಗಿನವರು ಬರುವವರು ಕಮ್ಮಿ, ಅಲ್ಲಿರುವ ಮಂದಿ ಹೊರಗೆ ಸುತ್ತುವುದೂ ಕಮ್ಮಿ. ಇದರಿಂದ ಬಚಾವ್! ಸುಶೀಲಚಿಕ್ಕಿಯ ಗಂಡ ಯಾವ ಗ್ರಾಮಕ್ಕೆ ತಿರುಗಲು ಹೋಗಿದ್ದನೋ ಅದರ ಪ್ರಸಾದ ತಂದಿದ್ದ. ಔಷಧಿ ಮಾಡಿಸುವ ಮೊದಲೇ ಬಲಿಯಾದ. ಅವನ ಕುಟುಂಬಲ್ಲಿ ಬೇರೆ ಇಬ್ಬರಿಗೆ ಪ್ಲೇಗ್ ಜ್ವರ ಕಾಣಿಸಿದಾಗ ಊರ ಹೊರಗಿಟ್ಟರಂತೆ. ಹತ್ತಿರದ ಸರಕಾರಿ ದವಾಖಾನೆಯಲ್ಲಿ ಸೂಜಿಮದ್ದು ಕೊಡಿಸಿ ಗುಣ ಆಯ್ತಂತೆ.

ಅಂತೂ ಪ್ಲೇಗು ಮಾರಿಯ ಬಗ್ಗೆ ತಿಳಿದ ಲಾಗಾಯ್ತು ಗೌರಿ, ನಾಣಿಗೆ ತಮ್ಮ ಕಂಕುಳು, ತೊಡೆ ಸಂದು ನೋಡಿಕೊಳ್ಳುವುದೇ ಆಯ್ತು. ಸಣ್ಣ ಉರಿ ಕಚ್ಚಿ ತುರಿಕೆಯಲ್ಲಿ ಕೆಂಪಾಗಿ ಗುಳ್ಳೆ ಬಂದರೆ ಸಾಕು, ಪ್ಲೇಗ್ ಬಂತೆಂದು ಬೊಬ್ಬೆ. ಅದೇನೇ ಇರಲಿ, ಸುಶಿಲಚಿಕ್ಕಿಯ ಬಗ್ಗೆ ಇಬ್ಬರಿಗೂ ಪಾಪ ಎನಿಸುತ್ತಿತ್ತು. ಕಮಲತ್ತೆ ಹಾಗೆ ಇವಳೂ. ಆದರೆ ಬೋಳು ಮಂಡೆ ಯಾಕೆ? ಕಮಲತ್ತೆ ತರಹ ಕೂದಲು ಇಟ್ಟುಕೊಳ್ಳಬಾರದೆ?

ಪ್ರಶ್ನಿಸಿದ್ದಳು ಆಯಿಯನ್ನು. "ಇಂತಾದ್ದೆಲ್ಲ ಕೇಳಿ ನನ್ನ ತಲೆ ತಿನ್ನಬೇಡ." ಗದರಿದ್ದಳು ಆಯಿ.

ಪ್ರತಿ ಮೂರುತಿಂಗಳಿಗೆ ಅವರ ಮನೆಗೆ ತಪ್ಪದೆ ಬರುತ್ತಿದ್ದ ಹಜಾಮ ಹಣುಮ. ಸುಮಾರು ಐವತ್ತು ಅರ್ವತ್ತು ಇದ್ದೀತು. ವರ್ಷದ ಲೆಕ್ಕ ಅವನಿಗಿಲ್ಲ. ಹೆಂಡತಿ ಮಕ್ಕಳು ಸಂಸಾರ ಇದೆ. ಹೊಳೆಬಾಗಿಲು ಮನೆಯ ಕಾಲು ಹಾದಿಯಲ್ಲಿ ಹೊಳೆಗುಂಟ ಒಂದು ಮೈಲು ನಡೆದರೆ ಅವನ ಗುಡಿಸಲು. ಈ ಊರಿನ ಆಸುಪಾಸು ಮನೆಗಳ ಗಂಡಸರ,ಗಂಡು ಮಕ್ಕಳ ತಲೆಗೂದಲ ಕುಚ್ಚು ತೆಗೆಯಲು ಇರುವವನು ಒಬ್ಬನೇ.ಹಿರಿಯರಿಂದ ಬಂದ ವೃತ್ತಿ. ಅವನದೇ ಪ್ರತ್ಯೇಕ ಅಂಗಡಿ ಇಲ್ಲ. ಪಂಚಾಯತ ಕಟ್ಟಡದ ಸಮೀಪ ಅರಳಿಮರದ ಕೆಳಗೆ ವಾರದಲ್ಲಿ ಎರಡುದಿನ ತನ್ನ ಹಜಾಮತಿಸಾಮಾನು ಸಮೇತ ಕುಳಿತುಕೊಳ್ಳುತ್ತಾನೆ. ತನಗೊಂದು ಮಣೆ, ತನ್ನೆದುರು ಕುಳಿತುಕೊಳ್ಳುವವರಿಗೆ ಒಂದು ಮಣೆ. ಗಂಡಸರು ಹೆಚ್ಚು ಇದ್ದದಿನ ಅರಳಿಕಟ್ಟೆ ಹರಟೆ ಕಟ್ಟೆ. ಹಣುಮನಿಗೂ ಉಮೇದು. ಕಟ್ಟೆ ಬಳಿ ಬಾರದವರಿಗೆ, ದೂರದವರಿಗೆ, ಕೆಲವೊಮ್ಮೆ ದೋಣಿ ನಡೆಸುವವರಿಗೆ ಅವರಿದ್ದಲ್ಲಿಗೇ ಹೋಗುತ್ತಾನೆ. ಎರಡು ಕಾಸು ಹೆಚ್ಚು ಸಂಪಾದನೆ. ಸುಬ್ಬಪ್ಪಯ್ಯರ ಮನೆಯಿಂದ ಕರೆ ಬಂದರೆ ಸಾಕು, ಅವ ಹಾಜರು. ಬೆಳಿಗ್ಗೆ ಬಂದು ಅಂಗಳದ ಎದುರಿನ ನೇರಳೆಮರದ ಕೆಳಗೆ ತಂದೆ, ಮಗ, ಮೊಮ್ಮಗನ ಕೂದಲು ತೆಗೆದ ಮೇಲೆ ಅಲ್ಲೇ ಮಧ್ಯಾಹ್ನ ಉಂಡು ಹಣ ತಕ್ಕೊಂಡು ಹೋಗುವ. ಸುಶೀಲಚಿಕ್ಕಿ ಬಂದ ಎರಡು ತಿಂಗಳಿಗೆ ಹಣುಮನಿಗೆ ಕರೆ ಹೋಗಿತ್ತು. ಆ ದಿನವನ್ನು ನೆನಪಿಸಿಕೊಳ್ಳುತ್ತಾಳೆ ಗೌರಿ. ಅದೊಂದು ಮರೆಯದ ದಿನ.

ಎಂದಿನಂತೆ ಬಂದವನು ಮೊದಲು ಆಯಿಯನ್ನು ಮಾತನಾಡಿಸಿ, ಒಂದು ಸೇರು ಹುರಿದ ಗೋವೆ ಬೀಜ ಕೊಟ್ಟು ತನ್ನ ಹಿರಿಮಗಳಿಗೆ ನಿನ್ನೆ ಕೂಡಿಕೆ ಸಂಬಂಧ ಬಂದು ಮದುವೆಯಾದ ಸುದ್ದಿ ಹೇಳುತ್ತ ಹುಡುಗ ಮರವಂತೆಯಲ್ಲಿ ಸೋಡಾ ಅಂಗಡಿ ಇಟ್ಟುಕೊಂಡದ್ದನ್ನೂ ವರದಿ ಮಾಡಿ, "ನಿಮ್ಮ ಮನೆ ತಲೆ ಕೆಲ್ಸ ಮುಗಿಸಿ ಇವತ್ತು ಬೈಸಾರಿಗೆ ನಾ ಹೋಯ್ಕು ಅಲ್ಲಿಗೆ." ಎಂದ ಖುಷಿಯಲ್ಲಿ.

ದೊಡ್ಡಮಗಳ ಗಂಡ ಕಳೆದವರ್ಷ ಅವಘಡಕ್ಕೆ ತುತ್ತಾಗಿ ಸತ್ತು ಅವಳು ತವರು ಮನೆಗೆ ಬಂದಿದ್ದಳು. ಇನ್ನೂ ವರ್ಷ ಕಳೆದಿತ್ತು, ಆಗಲೇ ಮದುವೆಯೂ ಆಯಿತು! ಪುಣ್ಯಾತ್ಮ ಹಣುಮ. ಆಯಿ ಅವನಿಗೆ ಆಸರು ನೀಡಿ, "ಒಂದು ಹೊಸ ಸೀರೆ ಇತ್ತು. ಹೋಪಾಗ ಕೊಡ್ತೆ. ಮಗಳಿಗೆ ಕೊಡು. ಹಾಂಗೆ ಗೌರಿ ಅಪ್ಪಯ್ಯ ಹೆಚ್ಚು ಕಾಸು ಗೀಸು ಕೊಡ್ಗು. ಅದೂ ಮಗಳಿಗೆ ಕೊಡು." ಎಂದಳು.

ಹಣುಮ ನೇರಳೆ ಮರದಡಿ ಸರದಿಯಂತೆ ಸುಬ್ಬಪ್ಪಯ್ಯ, ರಾಮಪ್ಪಯ್ಯ, ನಾಣಿಯ

ತಲೆಕೂದಲು ತೆಗೆದ ಮೇಲೆ ಇನ್ನೇನು ಕೂದಲು ಕಸ ಗುಡಿಸಬೇಕು, ಸುಬ್ಬಪ್ಪಯ್ಯ ಸುಶೀಲ ಚಿಕ್ಕಿಯನ್ನು ಕರೆ ತಂದು ಕಣ್ಸನ್ನೆಯಲ್ಲಿ ಇವಳಿಗೂ ಎಂದರು. ಮೌನವಾಗಿ ಮಣೆ ಏರಿ ತಲೆತಗ್ಗಿಸಿ ಕುಳಿತ ಹೆಣ್ಣುಮಗಳನ್ನು, ಅವಳ ಕುರುಚಲು ಕೂದಲಿನ ಮಂಡೆಯನ್ನೂ ಕಂಡ ಹಣುಮ ಎರಡು ಹೆಜ್ಜೆ ಹಿಂದೆ ಸರಿದ. ವಿಷಯ ಏನೆಂದು ಸ್ಪಷ್ಟವಾದಂತೆ ಕಣ್ಣುಗಳು ಹನಿಗೂಡಿದ್ದವು. ಸುಬ್ಬಪ್ಪಯ್ಯನವರ ಮನೆತನ, ರೀತಿ ರಿವಾಜು, ಸಂಪ್ರದಾಯ, ಮಡಿಮೈಲಿಗೆ ಸ್ವಲ್ಪ ಮಟ್ಟಿಗೆ ತಿಳಿದವ ಈ ಹೆಣ್ಣುಮಗಳ ತಲೆಗೆ ಬಾಳು ಮುಟ್ಟಿಸಲು ಥಟ್ಟನೆ ಹಿಂಜರಿದ. ಈವರೆಗೂ ಅವನೆಂದೂ ಹೆಣ್ಣುಮಕ್ಕಳ ಕೂದಲು ತೆಗೆದವನಲ್ಲ. ಅವನ ವೃತ್ತಿಯಲ್ಲಿ ಒಮ್ಮೆಯೂ ಈ ಪ್ರಸಂಗ ಬಂದಿಲ್ಲ. ಹೆಣ್ಣುಮಕ್ಕಳೆಂದರೆ ಅಪಾರ ಗೌರವ. ತನ್ನ ಈ ಇಳಿವಯಸ್ಸಿನಲ್ಲಿ ಇದೊಂದು ಅನ್ಯಾಯ ಮಾಡಲಾರೆ ಎನ್ನುವಂತೆ ದೇಹ ಹಿಡಿ ಮಾಡಿ, "ಒಡೆಯಾ! ನನ್ನ ಕೈಲಿ ಈ ಕೆಲಸ ಸಾಧ್ಯ ಇಲ್ಲೆ. ಧರ್ಮ ಸಂಕಟ ನನ್ನ ಎದೆ ಸೀಳುತ್ತು. ಬ್ಯಾಡ ಒಡೆಯಾ" ಬೇಡಿಕೊಂಡ.

"ಇದು ನಮ್ಮ ರೀತಿ ರಿವಾಜು. ಅವಳಿಗೆ ನಿನ್ನ ಕೆಲ್ಸ ಹೊಸತಲ್ಲ. ಮೂವತ್ತು ವರ್ಷ ಆತು ಇದೇ ಹಣೆಬರಹ." ಸುಬ್ಬಪ್ಪಯ್ಯನವರ ಸ್ವರ ಭಾರವಾಗಿತ್ತು.

"ಇಲ್ಲ ಒಡೆಯಾ, ನನ್ನ ಕೈಲಿ ಬಾಳು ಎತ್ತ್‌ಕೆ ಆತಿಲ್ಲೆ. ಹಾಂಗೆ ಇದ್ಕಳ್ಳಿ. ನಾ ಬತ್ತೆ." ಹೇಳುತ್ತ ಕೂದಲ ಕಸ ತೆಗೆದು ತೆಂಗಿನ ಮರದ ಕೆಳಗೆ ಚೆಲ್ಲಿ ಅವರ ಉತ್ತರಕ್ಕೆ ಕಾಯದೆ ಹೊರಟೇಹೋದ. ಕಾಸು, ಊಟ ಭಕ್ಷೀಸು ಊಹೂಂ ಬೇಡವೇ ಬೇಡ. ಸುಶೀಲಚಿಕ್ಕಿ ನಿರ್ಲಿಪ್ತಳಂತೆ ಎದ್ದು ಒಳಬಂದಳು.ಹಣುಮ ಹೋದನೆಂದು ಒಳಗೆ ಅವಳದೇ ಮಾತುಗಳು. ತಮಗೆ ಬೇಕಿಲ್ಲ ಅವಳ ಸುದ್ದಿ. ಆದರೆ ಮಾನವೀಯತೆ, ಕರುಣೆ ಎಲ್ಲಕಿಂತ ದೊಡ್ಡದು. ಅದು ಸಂಪ್ರದಾಯ ವಿಧಿಗಳನ್ನೂ ಧಿಕ್ಕರಿಸುತ್ತದೆ. ಸುಬ್ಬಪ್ಪಯ್ಯ ಕಮಲಿಯನ್ನು ನೆನಪಿಸುತ್ತ ಚಿಕ್ಕಿಗೆ ತಿಳಿ ಹೇಳಿದ್ದರು,

ಇದೆಲ್ಲ ಸಂಪ್ರದಾಯ ಪಾಲಿಸಲು, ಅಧಿಕಾರ, ದರ್ಪ ಹೇರಲು ಇಲ್ಲಿಯಾರೂ ಇಲ್ಲ. ಕಮಲಿಗೆ ಮದಿ ಆದದ್ದು ಹದಿನೈದರ ವಯಸ್ಸಿಗೆ. ಶೋಭನ, ಪ್ರಸ್ತ ಆಗೋ ಮುಂಚೆನೇ ಗಂಡ ಹೋಗ್ಬಿಟ್ಟ. ಅವನ ಹನ್ನೆರಡನೇ ದಿನಕ್ಕೆ ಅವಳ ತಲೆಕೂದಲು ತೆಗೀಬೇಕು ಅಂದ್ರು ಗಂಡನ ಕಡೆಯವರು. ನಾನು, ರಾಮಪ್ಪಯ್ಯ ಇಬ್ಬರೂ ಖಡಾಖಂಡಿತ ವಿರೋಧಿಸಿದೆವು. ಇದೊಂದು ಕ್ರಮ ಬ್ಯಾಡಾ ಅಂತ ಇನ್ನಿಲ್ಲಂತೆ ಬೇಡ್ಕಂಡರೂ ಕೇಳಲಿಲ್ಲ ಯಾರೂ. ಎಲ್ಲಿಂದ ಧೈರ್ಯ ಬಂತೋ, ಸೀದಾ ಕಮಲಿಯ ಕೈ ಹಿಡಿದು ಎಳೆದುಕೊಂಡು ಬಂದ್ಬಿಟ್ಟೆವು ಹೊಳೆಬಾಗಿಲಿಗೆ. ನಮ್ಮ ಗುರುಗಳಿಗೆ ದೂರು ಕೊಡ್ತೇವೆ ಅಂದ್ರು. ಗುರುಗಳ ಕಡೆಯಿಂದ ಇಬ್ಬರು ಬಂದ್ರು. ಅವರಿಗೆ ತಿಳಿ ಹೇಳಿಕಳ್ಸಿಯಾಯ್ತು. ಮನೆಗೆ ಬಹಿಷ್ಕಾರ ಹಾಕ್ತೋ ಅಂತ ಹೆದರಿಸಿದ್ದೋ. ಹಾಕಲಿ ಅಂದೆವು.

"ಒಂದಷ್ಟು ಕಾಲ ವಿಷಯ ಹೊಗೆ ಆಡ್ತಾ ಆಮೇಲೆ ತಣ್ಣಗಾತು. ಹೊಳೆಬಾಗಿಲು ಸಣ್ಣ ಊರು. ಬಂದು ಹೋಪವು ಕಮ್ಮಿ. ಇದೂ ಒಳ್ಳೇದಾತು. ನಿಂಗೂ ಹೇಳ್ತೆ, ನೀಇಲ್ಲಿ ಇಪ್ಪಷ್ಟು ದಿನ ಖುಷಿಯಾಗಿರು. ಜೀವನ ಅಂದ್ರೆ ಇದೇ ಅಲ್ಲದ, ಹೋಪವು ಹೋದವು, ಇಪ್ಪವು ಸರಿಯಾಗಿ ಇರೆಕ್ಕು. ಸಂತೋಷದಲ್ಲಿ ಇರೆಕ್ಕು."

ಸುಬ್ಬಪ್ಪಯ್ಯರದು ಸರಿಯಾದ ಮಾತು ನಿಜವೇ. ಆದರೆ ತನ್ನಿಂದ ಎಷ್ಟೋ ಕಾಲದ ನಂತರ ಹುಟ್ಟಿದ ಹುಡುಗಿ ಕಮಲಿ. ಜನ ಈಗ ಕಟು ಸತ್ಯವನ್ನು ಒಪ್ಪಿಕೊಂಡಿದೆ. ಧರ್ಮವೂ ವಿರೋಧಿಸುತ್ತಿಲ್ಲ. ಆದರೂ ಒಮ್ಮೆ ಒಪ್ಪಿಕೊಂಡು ಪಾಲಿಸಿದ ಸಂಪ್ರದಾಯ. ತಾನು ಉಲ್ಲಂಘಿಸಿ ಸುಮ್ಮನೆ ಬಿಡುವುದುಂಟಾ? ಬಲವಂತದಿಂದ ತಲೆ ಕೊಟ್ಟಾಗಿದೆ. ಮನಸ್ಸು ಹೋಳಾಗಿದೆ. ಹೃದಯದ ಮೃದು ಕೋಮಲ ಭಾವನೆಗಳು ಮರಗಟ್ಟಿವೆ. ಇನ್ನು ಕೂದಲು ತೆಗೆದರೇನು, ಬಿಟ್ಟರೇನು? ಸುಶೀಲ ಚಿಕ್ಕಿ ಸ್ನಾನ ಮುಗಿಸಿ ಅಟ್ಟ ಏರಿದ್ದಳು.

ಅವಳ ಕುರುಚಲು ತಲೆಗೂದಲನ್ನು ತೆಗೆವ ಸಂಭ್ರಮ ನೋಡಲು ಕುಕ್ಕುರುಗಾಲಲ್ಲಿ ಕುಳಿತ ಗೌರಿಯೂ ಎದ್ದು ಒಳ ನಡೆದಳು. ಎಂತದೋ ಪ್ರಶ್ನೆ, ಗಂಟಲು ಕಟ್ಟಿದಂತೆ, ಪಾಪ ಚಿಕ್ಕಿ, ನಿನ್ನೆಯಿಂದ ಅತ್ತು ಕೆಂಪಾಗಿವೆ ಕಣ್ಣುಗಳು. ಪ್ರತಿಬಾರಿ ಕೂದಲು ತೆಗೆಯುವಾಗ ಸಂಕಟವಂತೆ. ಯಾರು ಮಾಡಿದರೋ ಈ ಅನಿಷ್ಟ ಪದ್ಧತಿಯನ್ನು? ಕಮಲತ್ತೆಯಂತೆ ಇವಳೂ ಇರಬಾರದೇ? ಗೌರಿ ಮನದಲ್ಲಿ ನೂರೆಂಟು ಪ್ರಶ್ನೆಗಳು. ಗಂಡ ಸತ್ತ ಹೆಣ್ಣುಮಕ್ಕಳ ಪ್ರಾಯ ನೋಡದೆ ಅವರ ತಲೆ ಕೂದಲು ತೆಗೆಸಬೇಕು. ಧುತ್ತೆಂದು ಎದುರಾಯಿತು ಇನ್ನೊಂದು ಅನುಮಾನ. ಚಿಕ್ಕಿಯ ತಲೆಗೆ ಹಚ್ಚಲು ಅರಸಿನಕದಡಿದ ಎಣ್ಣೆ ಮಿಳ್ಳೆ ಹಿಡಿದಿದ್ದ ಅವಳು "ಆಯೀ, ನನಗೂ ಮದುವೆಯಾಗಿ ಗಂಡ ಸತ್ತರೆ ಹೀಗೆ ತಲೆ ಬೋಳಿಸ್ಬೇಕಾ? ಕಮಲತ್ತೆಯಂತೆ ಬೋಳು ಹಣೇಲಿ ಇರ್ಬೇಕಾ?" ಕೇಳಿದಳು.

"ಎಂತ ಅಪದ್ದ ಮಾತಾಡ್ತಿಯೇ. ಇರೂದು ಚೋಟುದ್ದ, ದೊಡ್ಡಮಾತು!" ಹಿಂದಿನಿಂದ ಅಜ್ಜಮ್ಮ ಗೊಣಗಿದಳು "ಹಾಂಗೆ ಹೇಳಲಾಗ. ಮೇಲೆ ಅಶ್ವಿನಿ ದೇವತೆಗಳು ನಮ್ಮ ಮಾತು ಕೇಳಿ ಅಸ್ತು ಅಸ್ತು ಅಂತಾರೆ. ಬಿಟ್ತು ಅನ್ನು!"

ಎಳೆ ಚಿಗುರು ಪ್ರಬುದ್ಧವಾಗಿ ಬೆಳೆಯುತ್ತಿದೆ. ಅದರ ಮುಂದೆ ಇಂತದ್ದು ನಾವು ದೊಡ್ಡವರು ಆಡಬಾರ್ದು. ಆಯಿ ಮಗಳ ತಲೆ ಸವರಿ ಸಮಾಧಾನ ಹೇಳಿದಳು.ಈ ಆಯಿಗೆ ವಿಧವೆಯರ ಮೇಲೆ ಕನಿಕರ ಜಾಸ್ತಿ. ಚಕ್ರಿ ಊರಲ್ಲಿ ಗತಿಯಿಲ್ಲದ ಅರ್ವತ್ತು ವರ್ಷ ಮೀರಿದ ಕೆಂಪು ಸೀರೆಯ ಇಬ್ಬರು ದಿಕ್ಕಿಲ್ಲದ ಪರದೇಸಿ ವಿಧವೆಯರಿದ್ದಾರೆ.ತಮ್ಮದೇ ಕುಟುಂಬದಿಂದ ತಿರಸ್ಕೃತರಾದ ಮಕ್ಕಳಿಲ್ಲದವರು. ಒಬ್ಬಳು ತೀರಾ ಬಡವಳು. ಇನ್ನಿಬ್ಬರಿಗೆ ಕುಟುಂಬದ ಅಶನಾರ್ಥ ಬರಬೇಕಿದ್ದರೂ ಕೊಡದೆ ಹೊರಗೆ ದಬ್ಬಿಸಿಕೊಂಡವರು.

ಅಡಿಗೆಗೆ, ಬಾಣಂತಿ ಮಗುವಿನ ಕೆಲಸಕ್ಕೆ, ಮದುವೆ ಮುಂಜಿಯಾದರೆ ಸಹಾಯಕ್ಕೆ ಕರೆದವರ ಊರುಗಳಿಗೆ, ಮನೆಗಳಿಗೆ ಹೋಗುತ್ತಾರೆ.ಮಡಿ ಹುಡಿಯ ಕೆಲಸಗಳು. ನಾಲ್ಕು ಕಾಸು ಸಂಪಾದನೆ. ಕೆಲಸ ಇಲ್ಲದ ದಿನಗಳಲ್ಲಿ ಪ್ರತಿ ಸಂಜೆ ತಮ್ಮ ಸಣ್ಣ ಮನೆ ಮುಂದೆ ಕುಳಿತು ಆಕಾಶ ದಿಟ್ಟಿಸಿ ನೋಡುತ್ತಾ ಇರುತ್ತಾರಂತೆ ಎಂದು ಹೇಳುವ ಆಯಿ ಚಿಕ್ಕಿ ಊರಿಗೆ ಹೋಗುವಾಗ ಅವರಿಗೆ ಬಟ್ಟೆ, ಕೆಂಪು ಸೀರೆ, ತಿಂಡಿ ತಿನಿಸು ಒಯ್ದು ಕೊಟ್ಟು ಅವರ ಸುಖದುಃಖ ವಿಚಾರಿಸುತ್ತಾಳೆ. ಅವರುಗಳ ಬೋಳು ಮಂಡೆ, ಇರುವಿಕೆಯ ಕ್ರಮ ಅರಿಯದ ಗೌರಿಗೆ ಕಮಲತ್ತೆಯ ಸ್ಥಿತಿ ಕಾಣುವಾಗ ಇನ್ನೂ ಸಣ್ಣವಳಿದ್ದಳು. ಆದರೆ ಯಾವಾಗ ಸುಶೀಲಚಿಕ್ಕಿ ಈ ಮನೆಗೆ ಬಂದಳೋ ಆಗಿನಿಂದ ವಿಧವೆಯರ ಸತ್ಯದರ್ಶನ ಆದಂತೆ ತನಗೂ ಹೀಗಾದರೆ? ಹೆದರಿಕೆ ಆದದ್ದು ಸಹಜವೇ. ಆ ಅನುಮಾನದಲ್ಲಿ ಥಟ್ಟನೆ ಪ್ರಶ್ನೆ ಕೇಳಿದ್ದು ಸಹಜವಾಗಿತ್ತು. ಅಷ್ಟಕ್ಕೆ ಅಜ್ಜಮ್ಮನಿಂದ ಬೈಸಿಕೊಂಡು ಮುಖ ಊದಿಸಿ ಎಣ್ಣೆಮಿಳ್ಳೆಯೊಂದಿಗೆ ತಾನೂ ಅಟ್ಟ ಏರಿದಳು.

ಕೂದಲು ತೆಗೆಯದಿದ್ದರೂ ಚಿಕ್ಕಿ ತಲೆ ತಂಪಿಗೆ ಎಣ್ಣೆ ಹಚ್ಚಬೇಕು.ತಲೆ ಉರಿ ಆದಾಗಲೆಲ್ಲ ಅರಸಿನ ಕದಡಿದ ಎಣ್ಣೆ ಹಚ್ಚುತ್ತಿದ್ದಳು ಗೌರಿ. ಅದರಿಂದ ಕಣ್ಣುಗಳೂ ತಂಪಾಗುತ್ತವಂತೆ. ಆವತ್ತು ಒಂದು ದಿನ ಗೌರಿ ಜೊತೆ ಅಟ್ಟದ ಕಿಟಕಿಯಿಂದ ದೂರದಲ್ಲಿ ಕಾಣುವ ಗಂಗೊಳ್ಳಿ ಹೊಳೆ ನೋಡುತ್ತ ನೆನಪು ಬಿಚ್ಚಿದ್ದಳು ಸುಶೀಲಚಿಕ್ಕಿ, "ಅವರು ಹೋಗುವಾಗ ನನಗಿನ್ನೂ ಇಪ್ಪತ್ತು. ಕೆಂಪು ಸೀರೆ ಉಡ್ಸಿ ಅಂದರು ಹಿರಿಯರೆಲ್ಲ ಸೇರಿ. ನನಗೆ ಕೆಂಪು ಕಂಡರಾಗದು ಗೌರಿ, ಅದೊಂದು ಬ್ಯಾಡ. ಅತ್ತೆ ಮಾವನ ಕಾಲಿಗೆ ಬಿದ್ದಿದ್ದೆ, ಮಗಳಂತೆ ಕಾಂಬ ಅತ್ತೆ ತಾವೂ ಅಳುತ್ತ ಬಿಳಿಸೀರೆ ಸುತ್ತಿಸಿದ್ರು. ಬಿಳಿ ಬಿಳಿ ಸೀರೆ. ಹಾಲು ಬಿಳಿ ಸೀರೆ. ಅದರೊಳಗೆ ಪ್ರೀತಿ, ವಿರಹ, ಪ್ರೇಮ ಕಾಮ ತುಂಬಿ ಯಾರ ಕಣ್ಣಿಗೆ ಬೀಳದೆ ಜೀವನದ ಬಣ್ಣ ಬಣ್ಣದ ಕಾರಂಜಿಗಳು ಆವಿಯಾಗಿ...."

ಅವಳ ಮಾತು ನೆನಪಿಸುತ್ತ ಮಹಡಿ ಹತ್ತಿ ಬರುವಾಗ ಕನ್ನಡಿಯಲ್ಲಿ ಮುಖ ನೋಡುತ್ತ ಚಿಕ್ಕಿ ಮುಖ ಓರೆ ಮಾಡುವುದು ಕಂಡಿತು. ಇತ್ತ ನಾಣಿ ಕಳ್ಳ ಹೆಜ್ಜೆಯಿಟ್ಟು ಆಗಲೇ ಮೇಲೆ ಬಂದಿದ್ದ. ಯಾವಾಗಲೂ ದೂರದಲ್ಲಿ ನಿಂತು, "ಬೋಳು ಮಂಡೆ ಚಿಕ್ಕಿ ಡುಂ ಡುಂ" ಎನ್ನುವವ ಇಂದು ಕೆನ್ನೆಗೆ ಕೈಯ್ಯಿಟ್ಟು ಬಿರುಗಣ್ಣು ಬಿಟ್ಟು ಅವಳನ್ನೇ ನೋಡುತ್ತ ಕುಳಿತಿದ್ದ. ಗೌರಿ ಚಿಕ್ಕಿ ತಲೆಗೆ ಮೆತ್ತಗೆ ಎಣ್ಣೆ ಸವರಿದಳು. ಆ ಬಾಲಹಸ್ತದ ಸ್ಪರ್ಷಕ್ಕೆ ಎದೆಯಾಳದಿಂದ ಅಳು ಒತ್ತರಿಸಿ ಬಿಕ್ಕಳಿಕೆ ಬಂದು ಚಿಕ್ಕಿ ಅವಳನ್ನು ಬಾಚಿ ತಬ್ಬಿಕೊಂಡಳು, ನಾಣಿಯೂ ಅವಳ ಮೊಳಿಯಲ್ಲಿ ತಲೆ ಇಟ್ಟ, "ಚಿಕ್ಕಿ, ಚಿಕ್ಕಿ" ಮುಂದೆ ಸ್ವರ ಹೊರಡಲಿಲ್ಲ.

ರಭಸದಲ್ಲಿ ಹರಿಯುವ ಗಂಗೊಳ್ಳಿ ಹೊಳೆ ನಿಧಾನಕ್ಕೆ ಶಾಂತ ಆಗುವಂತೆ ಸುಶೀಲ

ಚಿಕ್ಕಿ ಸೆರಗಿನಲ್ಲಿ ಮಕ್ಕಳ ಕಣ್ಣು ಒರಸಿ ನಕ್ಕಳು, "ನಿಮಗೆಂತ ಆತು? ಈ ತಲೆಕೂದಲಿಗಾಗಿ ಈ ಪಾಟಿ ಅಳು? ಹುಚ್ಚು. ಎಂತದೂ ಗೊತ್ತಿಲ್ಲದ ಗುಗ್ಗುಗಳಲ್ಲ ನೀವು? ಕೂದಲು ತೆಗೆಸಲು ನೂರಾರು ಕಾರಣ ಇತ್ತಲ್ದ. ತಿರುಪತಿಗೆ ಹೋದ್ರೆ ದೇವರಿಗಾಗಿ ಗಂಡಸರು ಹೆಂಗಸರು ಮುಡಿ ಕೊಡ್ತೋ. ಅದು ದೇವರಲ್ಲಿ ನಾವಿಡುವ ಭಕ್ತಿ ಶ್ರದ್ಧೆಗಾಗಿ. ನಾವೂ ಗಂಡನಿಗಾಗಿ ಮುಡಿಕೊಟ್ಟದ್ದು ಅಂತ ನೆನಸಿಕಂಡ್ರೆ ಬ್ಯಾಸರ, ದುಃಖ ಎಲ್ಲಿದ್ದು? ಅದು ಸಂಪ್ರದಾಯ." ಮಾಗಿ ಹಣ್ಣಾದ ಅನುಭವಿ ಚಿಕ್ಕಿ ಸಮಾಧಾನ ಹೇಳುತ್ತ ಕೆಲವು ವರ್ಷಗಳ ಹಿಂದೆ ತಾನು ಮಥುರೆಗೆ ಹೋಗಿ ಬಂದದ್ದು ನೆನಪಿಸಿದ್ದಳು.

ಮನೆ ಮಂದಿ ಜೊತೆ ಉತ್ತರಭಾರತ ಪ್ರವಾಸ ಹೋದ ಸಂದರ್ಭ, ಮಥುರಾಕ್ಕೂ ಹೋಗಿದ್ದಳು. ಮಥುರಾ ದೇವಾಲಯ ನೋಡಲು ಆಕರ್ಶಕ, ಭಕ್ತಿ ಭಾವ ತುಂಬುವ ಪುಣ್ಯ ಸ್ಥಳ. ರಾಧಾ ಮಾಧವನ ಲೀಲಾವಿನೋದದ ಹಲವು ಚಿತ್ರಣ, ಕೃಷ್ಣನ ಅವತಾರದ ಉದ್ದೇಶ ಕಾಣಸಿಗುತ್ತದೆ. ಒಂದುತರಹದ ಧನ್ಯತಾಭಾವ. "ಎಲ್ಲವೂ ಚೆಂದ, ಕಣ್ಗಳಿನ್ಯಾತಕೋ ಕಾವೇರಿ ರಂಗನ ನೋಡದಾ? ಕಸ್ತೂರಿ ರಂಗನ ಕಾಣದಾ" ದಾಸರ ಹಾಡನ್ನು ರಾಗವಾಗಿ ಹೇಳಿ ಇಬ್ಬರನ್ನೂ ನಗಿಸಿ ಕೆನ್ನೆ ಹಿಂಡಿದಳು, "ಅಲ್ಲಿ ಇನ್ನೊಂದು ಸಂಗ್ತಿ ನೋಡೆಕ್ಕು. ಸಣ್ಣ ಪ್ರಾಯದ ಬೋಳುತಲೆ ಹೆಣ್ಣುಮಕ್ಕಳು, ಹೆಂಗಸರು, ಮುದುಕಿ ವಿಧವೆಯರದೇ ದೊಡ್ಡ ಗುಂಪು. ತಾಳ ಹಾಕ್ತಾ ಕೃಷ್ಣ ಭಜನೆ ಮಾಡ್ತಾ ಎಷ್ಟು ಖುಷ್ ಖುಷಿಯಾಗಿ ಇತ್ರೋರ್. ಅವರ ಭಜನೇಲಿ ಕರುಣಾರಸ ಜಾಸ್ತಿ, ಕೇಳುವಾಗ ನಮ್ಮ ಹೊಟ್ಟೆಲಿ ಒಂತರಹ ಸಂಕಟ. ನಂಗೆ ನೋಡೂಕೂ ಆಗ್ಲಿಲ್ಲೆ."

"ಅವೆಲ್ಲ ಯಾರು? ಯಾಕೆ ಅಲ್ಲಿತ್ರೋರ್?" ಗೌರಿ ಮುಗ್ಧಳಾಗಿ ಕೇಳಿದಳು.

"ಯಾಕೆಂದ್ರೆ ಗಂಡ ಸತ್ತ ಹೆಮ್ಮಕ್ಕಳು ಒಲೆಬೂದಿಗೂ ಬ್ಯಾಡ. ಕೆಲವರು ತಾವೇ ಮಥುರಾಕ್ಕೆ ಹೋಗ್ತೋ. ಇನ್ನು ಕೆಲವರನ್ನು ಮನೆ ಜನಗಳೇ ತಂದು ಬಿಡ್ತೋ. ನಿರ್ಗತಿಕ, ಅನಾಥ ಹೆಣ್ಣುಮಕ್ಕಳನ್ನು ದಾನಿಗಳು ನೋಡಿಕೊಳ್ತಾರಂತೆ."

"ನೀನು ಮಥುರಾದಲ್ಲಿ ಕೆಲವು ತಿಂಗಳು ಇದ್ದೆಯಂತೆ, ಕಮಲತ್ತೆ ಹೇಳ್ತಿದ್ದಳು."

"ಕಳ್ಳಿ! ಕಮಲತ್ತೆ, ಆಯಿ, ಅಜ್ಜಮ್ಮನ ಮಾತು ಕೇಳ್ಸಕಂಡ್ಯಾ?ನಿಂಗೆಲ್ಲ ಗೊತ್ತಿದ್ದು.?"

ಸುಶೀಲ ಚಿಕ್ಕಿಗೆ ಮಥುರಾ ಇಷ್ಟವೇ. ಅಲ್ಲಿ ಉಳಿಯುವುದು? ಛೀ! ಆ ವೈರಾಗ್ಯ ಬಂದದ್ದೇ ಇಲ್ಲ. ಸದಾನಂದ ಇದ್ದಿದ್ದರೆ ದೊಡ್ಡ ಕುಟುಂಬದ ರಾಣಿಯಪ್ಪ ಯೋಗವಿತ್ತು. ಅಪ್ಪ ಹರಿಕಥೆ ದಾಸ. ಹರಿಕಥೆ ಮಾಡುತ್ತ ಸಂಸಾರದ ಹೊಣೆ ಇಲ್ಲದೆ ಊರೂರು ಅಲೆತ. ಆದರೂ ಮಗಳಿಗೆ ಶಿವಮೊಗ್ಗ ಸಮೀಪದ ಶ್ರೀಮಂತ ಕುಟುಂಬಕ್ಕೆ ಎಂಟನೇ ವರ್ಷಕ್ಕೆ ಮದುವೆ ಮಾಡಿಕೊಟ್ಟು ಎಲ್ಲರಿಂದ ಸೈ ಅನ್ನಿಸಿಕೊಂಡ. ಸದಾನಂದನ ಬಾಳಸಂಗಾತಿಯಾಗಿ ಸುಶೀಲಚಿಕ್ಕಿ ಬಾಳ್ವೆ ನಡೆಸಿದ್ದು ತನ್ನ ಹದಿನಾಲ್ಕರ ಪ್ರಾಯದಲ್ಲಿ.ದೊಡ್ಡ

ಕೂಡು ಕುಟುಂಬ. ತಂದೆ, ದೊಡ್ಡಪ್ಪ, ಚಿಕ್ಕಪ್ಪ ಅವರ ಸಂಸಾರಗಳು, ಸದಾನಂದನ ಒಂಬತ್ತು ಅಣ್ಣ ತಮ್ಮಂದಿರು, ಅವರ ಹೆಂಡಿರು ಮಕ್ಕಳು, ಇಬ್ಬರು ಅಕ್ಕ ತಂಗಿಯರು ಮಕ್ಕಳು ಮರಿಗಳು ಚಿಳ್ಳೆ ಪಿಳ್ಳೆಗಳು ಬಂದು ಹೋಗುವ ನೆಂಟರಿಷ್ಟರು, ಆಳು ಕಾಳುಗಳು. ಅಂತೂ ಮನೆಯಲ್ಲಿ ಜನವೋ ಜನ. ಗಂಡಸರಿಗೆ ತೋಟ ಗದ್ದೆಗಳ ಉಸ್ತುವಾರಿ, ಅಡಿಕೆ ಮಂಡಿಯ ವಹಿವಾಟು, ವ್ಯಾಪಾರದ ಭರಾಟೆ, ಹೆಂಗಸರಿಗೆ ಮನೆ ಒಳಗೆ ಅಡಿಗೆ ಮಾಡು, ಬಡಿಸು, ಶುಚಿಗೊಳಿಸು, ದನಕರುಗಳ ಮೇಲ್ತನಿಕೆ ಎಲ್ಲರಿಗೂ ಕೈತುಂಬ ಕೆಲಸ. ಬಸಿರು ಬಾಣಂತನ ಇಲ್ಲಿ ಖಾಯಂ. ಬಾಣಂತಿಗಳ ಆರೈಕೆ, ಒಂದಲ್ಲ ಒಂದು ಶಿಶು ತೊಟ್ಟಿಲಲ್ಲಿ ಇರುತ್ತಿತ್ತು. ಆಳು ಕಾಳುಗಳಿಗೂ ಬಿಡುವಿಲ್ಲದ ಕೆಲಸ. ಹಿರಿಯರಿಗೆ ತಂಬಾಕು ಕವಳ, ನಸ್ಯ ಸೇದುವ ಹವ್ಯಾಸ. ಹೊರಜಗಲಿಯಲ್ಲಿ ತಾಂಬೂಲ ಪೆಟ್ಟಿಗೆ ಖಾಲಿ ಆದದ್ದೇ ಇಲ್ಲ. ಹೊಸತಲೆ ಮಕ್ಕಳು ಕದ್ದು ಮುಚ್ಚಿ ಬೀಡಿ ಸೇದುವುದೂ ಇತ್ತು. ಇಸ್ಪೀಟಾಟ, ಪಗಡೆ ಆಟ ಮಾಮೂಲಿ. ಹಿರಿ ಕಿರಿಯರು ಸೇರಿ ತಾಳಮದ್ದಳೆ, ಯಕ್ಷಗಾನದ ಕುಣಿತ, ಭಾಗವತಿಕೆ ನಡೆಸುವ ಗೌಜು. ಮೂರು ನಾಲ್ಕು ತಾಸುಗಳ ತಾಳಮದ್ದಳೆ. ಹೊತ್ತಿನ ಪರಿವೆಯಿಲ್ಲ. ಎಲ್ಲರಿಗೂ ಆಗಾಗ ಕುಡಿಯಲು ಹಾಲಿನ ಕಷಾಯ. ಕೆಲವೊಮ್ಮೆ ಮಾತಿನ ಭರಾಟೆಯಲ್ಲಿ ಪಾತ್ರಧಾರಿಗಳಲ್ಲೇ ವಾಗ್ಯುದ್ಧ, ಜಗಳ, ಹೊಯ್ ಕೈ ತಾರಕಕ್ಕೇರಿ ಹಿರಿಯರು ಮಧ್ಯ ಬಂದು, ಅದೆಲ್ಲ ಮಾಮೂಲಿ. ಸ್ವಲ್ಪ ವಿಲಾಸಿ ಜೀವನ. ಹೆಂಗಸರಿಗೆ ಸೀರೆ, ಚಿನ್ನಾಭರಣ, ಮಕ್ಕಳಿಗೆ ಬಟ್ಟೆ ತೆಗೆಯುವುದು ಮನೆ ಯಜಮಾನರು. ಹೆಚ್ಚು ಕಡಿಮೆ ಅಸಮಾಧಾನದ ಪ್ರಶ್ನೆ ಇಲ್ಲ. "ದೇವರ ರಾಜ್ಯದಲ್ಲಿ ಯಾರಿಗೂ ಅನ್ಯಾಯ ಆಗ್ಬಾರದು. ಇದು ನಮ್ಮ ಶಿಸ್ತಿನ ಜೀವನ ರೀತಿ, ಜೀವನ ತತ್ವ" ಎಂಬ ಗರ್ವ ಬೇರೆ.

"ಕಾಲ ಒಂದೇ ರೀತಿ ಇರ್ತಿಲ್ಲೆ ಗೌರಿ, ದೊಡ್ಡಮನೆ ಸಂಸಾರಗಳು ಬೆಳೀತಾ ಬಂದಾಂಗೆ ಆದಾಯಕ್ಕಿಂತ ಖರ್ಚು ಹೆಚ್ಚು. ಸಾಲದ ಹೊರೆ ಸುರುವಾತು. ತೋಟ ಗದ್ದೆ ಒಂದೊಂದಾಗಿ ಕೈ ಬಿಟ್ಟವು. ಆಸ್ತಿ ಪಾಸ್ತಿದೂ ಪಾಲಾತು. ಈ ವೇಳೆಗೆ ಕಾಲ ಹ್ಯಾಂಗೆ ಸರೀತು ನೋಡು. ಸದಾನಂದನಿಲ್ಲದೆ ಇಪ್ಪತ್ತು ವರ್ಷಕಳೆದಿತ್ತು. ಎಲ್ಲ ಹಿರಿಯರು, ನನ್ನ ಮಾವನೂ ಮೇಲೆ ಹೋಗಾತು. ಮುಂದೆ ಆರೇಳು ವರ್ಷದಲ್ಲಿ ದೊಡ್ಡ ಮನೆ, ಉಳಿದ ಜಾಗ ಅಬ್ಬಬ್ಬ, ಎಲ್ಲಾ ಸಾಲ ತಿಂದು  ನೊಣೆಯಿತು. ಹಣೆಬರಹ. ನನಗೆ ಗಂಡ, ಮಕ್ಕಳಿಲ್ಲದ ನೆಪ, ಆಸ್ತಿ ಪಾಲು ಕೊಡಲಿಲ್ಲೆ. ಪಾಲು ಕೊಡದೆ ಸಾಲದ ಹೊರೆ ನನ್ನ ತಲೆ ಮೇಲೆ ಹಾಕೂಕಾಗ ಅಂತ ಅತ್ತೆ ಗಟ್ಟಿಗೆ ನಿಂತರು. ಬಚಾವು! ಅಶನಾಂಶವೂ ಸೊನ್ನೆ. ಅತ್ತೆಗೆ ಶಿವಮೊಗ್ಗದ ಹೊರಗೆ ಗುಲಗುಂಜಿಯಷ್ಟು ಜಾಗ ಇತ್ತು. ಅವರಪ್ಪ ಕೊಟ್ಟದ್ದು. ಅದೊಂದೇ ಉಳಿದದ್ದು. ಅಲ್ಲಿಗೇ ಬಾ. ಇಬ್ಬರೂ ಒಟ್ಟಿಗೆ ಗಂಜಿಯೋ ತಿಳಿಯೋ ಕುಡ್ದು ಇರೋಣ ಅಂದ್ರು. ನಾ ತವರುಮನೆಗೆ ಬಂದೆ. ಅದು ಅಮ್ಮ ಇಲ್ಲದ ಮನೆ. ಹರಿದಾಸ ಅಪ್ಪ ಹಾಸಿಗೆ ಹಿಡಿದಿದ್ದ. ಒಂದು ವರ್ಷ ಸೇವೆ ಮಾಡಿ ಅವರ

ಋಣ ಕಳ್ಚಕಂಡೆ. ಅಣ್ಣ ತಮ್ಮಂದಿರ ಸಂಸಾರವಿತ್ತು. ಇಲ್ಲೆ ಇರು ಅಂದ್ರು, ಕರುಳಕುಡಿಯ ಪ್ರೀತಿ ತೋರ್ಸಿದ್ರು. ಆದರೂ ಗೌರಿ, ತಾಯಿಯಿಲ್ಲದ ಮನೇಲಿ ತಬ್ಬಲಿ ಭಾವ. ಮರಳಿ ಶಿವಮೊಗ್ಗಕ್ಕೆ ಬಂದೆ. ಅತ್ತೆಯ ಒಂಟಿ ಜೀವಕ್ಕೆ ನನ್ನ ಜೊತೆ ಆತು. ಗಂಜಿ ತಿಳಿಯ ಬದಲು ಹಾಲು ಮೊಸರು ಸಿಕ್ತು. ಅತ್ತೆಯ ಪ್ರೀತಿ ಬಟ್ಟಲಲ್ಲಿ ತಾಯ ಮಮತೆಯಿತ್ತು. ಕೆಲವು ವರ್ಷದ ಬದುಕು. ಒಂದು ದಿನ ರಾತ್ರೆ ಅತ್ತೆ ನಿದ್ದೆಯಲ್ಲೇ ಹೋಗಿಬಿಟ್ಟರು. ಮತ್ತೆ ನೆಲೆ ತಪ್ಪಿದ ಬದುಕು, ಅನಿಶ್ಚಯದ ಭವಿಷ್ಯ. ಅನಂತಯ್ಯ "ಉಡುಪಿಗೆ ಬಾ, ದೊಡ್ಡ ಊರು. ನಿಂಗೆ ಕೆಲ್ಸ ಸಿಕ್ಕಿಗು." ಅಂದ. ಅವನ ಹಿಂದೆ ಹೋದೆ. ಎಂತದೋ ನಾ ಕಾಣೆ. ಅವನ ಹೆಂಡತಿ ಸಂಶಯದ ಹುಳ. ಅವನಲ್ಲಿ ಹೋದ ಆರೇ ತಿಂಗಳಲ್ಲಿ ಸವಾರಿ ಇಲ್ಲಿಗೆ ಬರುವಂತೆ ಆತು. ಇಲ್ಲಿಂದ ಇನ್ನೆಲ್ಲಿಗೋ ನಾ ಕಾಣೆ"ಸುಶೀಲ ಚಿಕ್ಕಿಯ ನೆನಪು ಅಲ್ಲಿಗೇ ನಿಂತಿತ್ತು.

"ನೀ ಎಲ್ಲಿಗೂ ಹೋಗ್ಬೇಡ ಸುಶೀಲಚಿಕ್ಕಿ." ಮೃದುವಾಗಿ ತಬ್ಬಿದ್ದರು ಆ ಎಳೆಯರು.

***

## ಅಧ್ಯಾಯ 6

ಆದಿನ ಹಿಂದೆ ಹೆಜ್ಜೆ ಇಟ್ಟ ಹಣುಮ ಮತ್ತೆಂದೂ ಅವಳ ತಲೆಗೆ ಬಾಳು ಮುಟ್ಟಿಸಲಿಲ್ಲ. ಈ ಎರಡು ವರ್ಷದಲ್ಲಿ ಸೊಂಪಾಗಿ ಕೂದಲು ಬಂದು ಸುಶೀಲಚಿಕ್ಕಿಯ ಮೋರೆಯ ಕಳೆ ಬೇರೆಯೇ. "ಬೋಳುಮಂಡೆ ಚಿಕ್ಕಿ, ಡಾಂ ಡೂಮ್" ಹೇಳುವ ನಾಣಿ, ಕುತೂಹಲ ಮಿಶ್ರಿತ ಅರಳುಗಣ್ಣು ತೆರೆಯುವ ಗೌರಿ ಅವಳಿಗೆ ಹತ್ತಿರವಾದಂತೆ ಪ್ರೀತಿ, ವಾತ್ಸಲ್ಯ, ಸ್ನೇಹ ಭಾವದ ಎಳೆಯೊಂದು ಬಿಗಿಯಾಗಿ ಸುತ್ತಿಕೊಂಡಿತು ಮರವನ್ನು ಅಪ್ಪುವ ಬಳ್ಳಿಯ ತರದಲ್ಲಿ. ಚಿಕ್ಕಿಯ ಠಿಕಾಣಿ ಹೆಚ್ಚಾಗಿ ಅಟ್ಟದಲ್ಲೇ. ಮದುವೆ ಮುಂಜಿಯಿಂದಲೂ ದೂರ. "ಮೂಡುಭೂತ" ಅಜ್ಜಮ್ಮ ಇಟ್ಟ ಹೆಸರು. "ಮೌನಗೌರಿ" ಆಯಿಯ ನಲ್ಮೆಯ ಬಿರುದು. ಗೌರಿಗೆ ಮಾತ್ರ ಅವಳ ಪ್ರತ್ಯೇಕತೆಯಲ್ಲಿ ಏನೋ ಯಕ್ಷಿಣಿ ಇದ್ದಂತೆ. ತನ್ನದೇ ವೈಭವದ ದಿನಗಳು, ಸಾಮ್ರಾಜ್ಯದ ಹೊಂಗನಸು, ಕರಾಳ ತುಂಬಿದ ದಿನಗಳು, ಭವಿಷ್ಯದ ಯಾತನೆ ಅವಳು ಹೇಳಲು ಹೊರಟರೆ ಮುಗಿಯದ ಅನುಭವ ಕಥನಗಳು. ಗಂಗೊಳ್ಳಿ ಹೊಳೆಯ ಮೇಲೇರಿ ಬರುವ ಅಲೆಗಳನ್ನು ನೋಡುತ್ತ, ಗಜ್ಜುಗದ ಆಟ ಆಡುತ್ತ, ಚೆನ್ನೆಮಣೆ, ಪಗಡೆ ಆಟದಲ್ಲಿ ಜೈಕಾರ ಮಾಡುತ್ತ ಮೂಡುಭೂತ ಮಾತನಾಡುತ್ತದೆ ಗೌರಿಯ ಮುಂದೆ. ಮೌನದ ಮೊಟ್ಟೆ ಒಡೆಯುತ್ತದೆ ನಾಣಿಯ ಸಾಮಿಪ್ಯದಲ್ಲಿ. ಆ ಸಮಯದಲ್ಲಿ ಅವಳು ದೇಶದ ಸಮಸ್ಯೆ, ಗಾಂಧೀಜಿಯ ಸತ್ಯಾಗ್ರಹದ

ಹೋರಾಟ. ದೇಶದ ಸ್ವಾತಂತ್ರ್ಯದ ಬಗ್ಗೆಮೂಟೆ ಬಿಚ್ಚುತ್ತಾಳೆ. ಭಾರತದ ಭೂಪಟದಲ್ಲಿ ಗಾಂಧೀಜಿಯ ಸಾಬರಮತಿ ಆಶ್ರಮ ತೋರಿಸುತ್ತ ಅದರ ಕಾರ್ಯ ವಿವರಿಸುವಾಗಅವಳ ಕಥನಗಳು ಥೇಟ್ ಚಕ್ರಿ ಅಮ್ಮಮ್ಮನಂತೆ. ಮಕ್ಕಳಲ್ಲೂ ಗರಿಗೆದರುವ ಕುತೂಹಲ ಬೆಳೆಸುವ ಗಟ್ಟಿಗಿತ್ತಿ. ಗೌರಿ, ನಾಣಿಗೆ ನೂರು ಪ್ರಶ್ನೆ ಕೇಳಬೇಕು. ಅಪ್ಪಯ್ಯನಿಗೂ ತಿಳಿಯದ ಹಲವು ವಿಷಯ ಚಿಕ್ಕಿಗೆ ತಿಳಿದಿದೆ ಎನ್ನುವಾಗ ಇಬ್ಬರ ಮನಸ್ಸು ಇನ್ನಷ್ಟು ಕಥೆ ಕೇಳಲು ಕಾತರಿಸುತ್ತಿದ್ದವು.

ಒಂದು ದಿನ ಜಲಿಯನ್‌ವಾಲ್ ಬಾಗ್‌ನ ಘಟನೆ ವಿವರಿಸಿದ್ದಳು. ಬ್ರಿಟಿಷರ ಗೋಲಿಬಾರಿಗೆ ನೂರಾರು ಸಂಖ್ಯೆಯಲ್ಲಿ ಬಲಿಯಾಗಿದ್ದರು ದೊಡ್ಡವರು, ಮಕ್ಕಳು, ಹೆಂಗಸರು. ಅದೊಂದು ಭೀಕರ ಹತ್ಯಾಕಾಂಡ. ದೇಶಿ ಚಳವಳಿ ವಿವರಿಸಿದ್ದಳು. ಮತ್ತೊಂದು ದಿನ ಉಪ್ಪಿನ ಸತ್ಯಾತ್ಯಗ್ರಹ ಹೇಳುವಾಗ ಸುಶೀಲ ಚಿಕ್ಕಿಯಲ್ಲಿ ಆವೇಶ ಬಂದಿತ್ತು. "ಗೌರಿ ನಾನು ಆಗ ಅತ್ತೆ ಸಂಗಡ ಶಿವಮೊಗ್ಗದಲ್ಲಿದ್ದೆ. ನೀನಿನ್ನೂ ಹುಟ್ಟಿರಲಿಲ್ಲ. ಗಾಂಧೀಜಿ ಉಪ್ಪಿನ ಸತ್ಯಾಗ್ರಹ ನಡೆಸಲು ಕಾರಣ ಎಂತ ಗೊತ್ತಾ?" "ಹೇಳು ಚಿಕ್ಕಿ" ಮಕ್ಕಳಿಬ್ಬರೂ ಆತುರ ತೋರುವಾಗ ಸುಶೀಲ ಚಿಕ್ಕಿಗೆ ಕಣ್ಣಮುಂದೆ ಈ ಘಟನೆ ನಡೆಯುತ್ತಿದೆ ಎನ್ನುವಂತೆ ಮೈಮರೆತಿದ್ದಳು.

ಬ್ರಿಟಿಷ್ ಸರಕಾರ ಜನಸಾಮಾನ್ಯರು ಸುಲಭದಲ್ಲಿ ಬಳಸುವ ಉಪ್ಪಿನ ಮೇಲೆ ತೆರಿಗೆ ವಿಧಿಸಿದ್ದರು. ಉಪ್ಪನ್ನು ತಯಾರಿಸುವ ಮತ್ತು ಮಾರುವ ಕಾಯಕಕ್ಕೆ ನಿರ್ಬಂಧ ಹೇರಿದ್ದರು. ನಮ್ಮದೇ ನೆಲ, ನಮ್ಮದೇ ಸಮುದ್ರದ ನೀರು, ಬಹು ಸುಲಭದಲ್ಲಿ ತಯಾರಿಸುವ, ಬಡವರಿಗೂ ಕಡಿಮೆ ಬೆಲೆಯಲ್ಲಿ ದೊರೆಯುವ ಉಪ್ಪು ಬ್ರಿಟಿಷರ ಧೋರಣೆಯಿಂದ ದುಬಾರಿ ಬೆಲೆ ತೆತ್ತು ಕೊಂಡುಕೊಳ್ಳಬೇಕಿತ್ತು. ಇದು ಗಾಂಧೀಜಿಯ ಗಮನಕ್ಕೆ ಬಂದಿತು. ತಮ್ಮ ಸ್ವಾತಂತ್ರ್ಯ ಚಳುವಳಿಗೆ ಇದನ್ನೇ ಪ್ರಮುಖ ಅಸ್ತ್ರ ಮಾಡಿ ಅವರ ಕಾನೂನು ಮುರಿಯಬೇಕು, ನಾವು ತಯಾರಿಸಿದ ಉಪ್ಪನ್ನು ನಾವೇ ಮಾರಬೇಕೆಂದು ಹೋರಾಟಕ್ಕೆ ಸಜ್ಜಾದರು. ಈ ಹೋರಾಟಕ್ಕೆ ಅವರು ಆಯ್ದುಕೊಂಡದ್ದು ಸಾಬರಮತಿ ಆಶ್ರಮದಿಂದ ಇನ್ನೂರಿಪ್ಪತ್ತು ಮೈಲು ದೂರದ ದಾಂಡಿ ಎನ್ನುವ ಸಮುದ್ರ ಕಿನಾರೆಯನ್ನು. ಕಾಲ್ನಡಿಗೆಯಲ್ಲಿ ಒಂದು ತಿಂಗಳು ಬೇಕು ದಾಂಡಿಗೆ ತಲುಪಲು. ಎಪ್ಪತ್ತಕ್ಕೂ ಹೆಚ್ಚು ಸತ್ಯಾಗ್ರಹಿಗಳು ಗಾಂಧಿ ಜೊತೆ ಸೇರಿದ್ದರು. ಹೋಗುವ ದಾರಿಯಲ್ಲಿ ಸಿಗುವ ಊರು, ಹಳ್ಳಿಗಳಲ್ಲಿ ನೂರಾರು ಜನರು ಜೊತೆಗೂಡಿದರು. ಎಲ್ಲರಲ್ಲೂ ಚಳುವಳಿಯ ಕಿಚ್ಚು ತುಂಬುತ್ತಿತ್ತು. ದಾಂಡಿ ತಲುಪಿದ ನಂತರ ಸಮುದ್ರ ದಂಡೆಯಲ್ಲಿ ಒಲೆಗಳನ್ನು ಹೂಡಿ ಬೆಂಕಿ ಉರಿಸಿ ದೊಡ್ಡ ದೊಡ್ಡ ಪಾತ್ರೆ, ಮಡಕೆಗಳಲ್ಲಿ ಸಮುದ್ರದ ನೀರು ತುಂಬಿಸಿ ಕುದಿಸಿ ಮೊದಲಬಾರಿ ಉಪ್ಪು ತಯಾರಿಸಿದಗಾಂಧೀಜಿ ಬ್ರಿಟಿಷರು

ಉಪ್ಪಿನ ಮೇಲೆ ಹೇರಿದ್ದ ನಿರ್ಬಂಧವನ್ನು ಮುರಿದರು. ಜನರು ಉತ್ಸಾಹದ ಜಯಕಾರ ಮಾಡಿದರು. ಆ ದಿನವೇ ಗಾಂಧೀಜಿ ದೇಶದ ಜನತೆಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಉಪ್ಪು ತಯಾರಿಸುವಂತೆ ಕರೆ ನೀಡಿದರು. ಕರಪತ್ರ ಹಂಚಿದರು. ಪತ್ರಿಕೆಯಲ್ಲಿ ಪ್ರಕಟಿಸಿದರು. ಇದೇ ದಾಂಡಿ ಸತ್ಯಾಗ್ರಹ ಯಾತ್ರೆ ಎಂದು ಪ್ರಸಿದ್ಧಿ ಪಡೆಯಿತು. ಕಾನೂನು ಮುರಿದ ಈ ಸತ್ಯಾಗ್ರಹ ಅನಂತರ ದೇಶದ ಸಮುದ್ರ ತೀರದ ದೊಡ್ಡ ನಗರ, ಹಳ್ಳಿ ಪ್ರದೇಶಗಳಲ್ಲಿ ಉಪ್ಪು ತಯಾರಿಸುವ ಮತ್ತು ತಾವೇ ಜನತೆಗೆ ಮಾರುವ ಉಗ್ರ ಚಳುವಳಿಗೂ ಪ್ರೇರಣೆಯಾಯಿತು.

"ನಮ್ಮೂರ ಬದಿಯಲ್ಲಿ ಬ್ರಿಟಿಷರ ವಿರೋಧ, ಲಾಠಿ ಏಟು, ಜೈಲು ಶಿಕ್ಷೆ ಲೆಕ್ಕಿಸದೆ ಗೋಕರ್ಣ, ಅಂಕೋಲಾ, ಕುಂದಾಪುರ, ಬೈಂದೂರು, ಮರವಂತೆ ಎಲ್ಲೆಲ್ಲಿ ಸಮುದ್ರ ಇದೆಯೋ ಅಲ್ಲೆಲ್ಲ ಉಪ್ಪು ತಯಾರಿಸಿ ತಾವೇ ಸ್ಥಳಿಯರಿಗೆ ಮಾರುವ ಕೆಲಸ ಜೋರಾಗಿ ನಡೆದವಂತೆ." ಸುಶೀಲ ಚಿಕ್ಕಿ ನೆನಪಿಸುತ್ತ ಅರ್ಧ ಕಣ್ಣುಮುಚ್ಚಿದ್ದಳು, "ಗಾಂಧೀಜಿ ಆಗ ನಮ್ಮ ದೇಶದ ಎಲ್ಲ ಹೆಣ್ಣುಮಕ್ಕಳೂ ಸತ್ಯಾಗ್ರಹದಲ್ಲಿ ಭಾಗವಹಿಸಲು ಕರೆ ನೀಡಿದ್ದರು. ನಂಗೂ ಹೋಪ ಮನಸ್ಸಿತ್ತು. ಅತ್ತೆ ಬ್ಯಾಡ ಅಂದ್ರು. ಎಲ್ಲ ಕಡೆ ದೊಡ್ಡವು ಎಲ್ಲಿ ಕೇಳ್ತ? ಕೂಪದಂತೆ ಇಪ್ಪ ನಮ್ಮವರು ತಾವೂ ಹೋಗಲಿಲ್ಲ, ಮನೆ ಹೆಮ್ಮಕ್ಕಳನ್ನೂ ಕಳಿಸಲಿಲ್ಲ. ಸತ್ಯಾಗ್ರಹದ ಸಮಯದಲ್ಲೇ ನನ್ನ ಅಪ್ಪ ಹರಿಕಥೆಗೆ ಹೋದವ ಬ್ರಿಟಿಷರ ಲಾಠಿ ಏಟಿನಿಂದ ಪೆಟ್ಟಾಗಿ ಮೂಳೆ ಮುರಿಯದ್ದು ಅವನ ಪುಣ್ಯ."

ಉಪ್ಪಿನ ಸತ್ಯಾಗ್ರಹ! ಆ ಘಟನೆ ಕೇಳಿ ಗೌರಿ, ನಾಣಿಯ ನೆನಪಲ್ಲಿ ಉಳಿದದ್ದು ಒಂದೇ, ಮಡಿಕೆಯಲ್ಲಿ ಸಮುದ್ರ ನೀರು ಕುದಿಸಿ ಉಪ್ಪು ಮಾಡುವುದು! ಹುರ್ರೇ! ಮಕ್ಕಳ ತಲೆಯಲ್ಲಿ ಒಂದು ವಿಷಯ ಬಂದರೆ ಅದನ್ನು ಪೂರ್ಣ ಮಾಡಲೇಬೇಕು. ಇವರಿಗೆ ತಾವೂ ಉಪ್ಪು ತಯಾರಿಸುವ ಉಮೇದು ಬಂದುಬಿಟ್ಟಿತು. "ಮಡಕೆಯಲ್ಲಿ ನೀರು ಕಾಯಿಸಲು ಇಟ್ಟರೆ ಉಪ್ಪು ಸಿಕ್ಕುಗು ಅಂದೆಯಾ ಚಿಕ್ಕಿ? ಒಂದು ಸಣ್ಣ ಮಡಕೆಯಲ್ಲಿ ಎಷ್ಟು ಉಪ್ಪು ಸಿಕ್ಕುಗು?" ಗೌರಿಗೆ ಆತುರ.

"ಕಾಯಿಸಿ ನೋಡಿದರೆ ಗೊತ್ತಕ್ಕು" ಸುಶೀಲಚಿಕ್ಕಿಗೆ ಉಪ್ಪು ತಯಾರಿಕೆಯ ಅಳತೆ ಪಳತೆ ತಿಳಿಯದು. ನಾಣಿ ಗೌರಿಯ ತಲೆ ಚುರುಕಾಗಿ ಓಡಿತು. ತಮ್ಮ ಮನೆಗೆ ಬೇಕಾದ ಉಪ್ಪನ್ನು ತಾವೇ ಗುಟ್ಟಿನಲ್ಲಿ ಕಾಯಿಸಿ ಆಯಿ ಅಪ್ಪಯ್ಯನಿಗೆ ತೋರಿಸಬೇಕು. ಆ ಉಮೇದಿನಲ್ಲಿ ಮುಂದೆ ಎರಡೇ ದಿನದಲ್ಲಿ ಸಂಜೆ ಹೊತ್ತು ದನದ ಹಟ್ಟಿಯಲ್ಲಿಟ್ಟ ಹಳೆ ಮಡಿಕೆ, ಗೆರಟೆಯಲ್ಲಿ ಬಚ್ಚಲೊಲೆಯ ಬೆಂಕಿ ಕೆಂಡಗಳನ್ನು ತುಂಬಿಸಿ ಯಾರಿಗೂ ಕಾಣದಂತೆ ಹೊಳೆ ಬದಿಗೆ ಹಾಜರಾದರು. ದಂಡೆ ಬದಿಯಲ್ಲಿ ಮೂರು ಕಲ್ಲಿಟ್ಟು ಪುರುಳೆ, ಒಣ ಕಸಕಡ್ಡಿ, ತೋರದ ಮರದ ಗೆಲ್ಲು ಹಾಕಿ ಒಲೆ ಉರಿಸಿ ಹೊಳೆನೀರು

ತುಂಬಿಸಿದ ಮಡಿಕೆಯನ್ನು ಕುದಿಯಲು ಇಟ್ಟರು. ಅದನ್ನು ಕದಡಿಸಲು ಒಣಗಿದ ತುಂಡು ಕೋಲು. ಇನ್ನೇನು ಸ್ವಲ್ಪ ಹೊತ್ತಿನಲ್ಲಿ ಉಪ್ಪು ತಯಾರಾಗಿ, ಮನೆಮಂದಿಗೆ ತೋರಿಸಿ, ಚಿಕ್ಕಿಯಿಂದ ಬೆನ್ನು ತಟ್ಟಿಸಿಕೊಂಡು! ನಾವೂ ಸತ್ಯಾಗ್ರಹಿಗಳೇ ತೋರಿಸಬೇಕು..

"ತಮ್ಮಾ, ಇನ್ನೊಮ್ಮೆ ಗಾಂಧೀಜಿ ಕರೆ ಕೊಡುವ ಚಳುವಳಿ ಸಾಸ್ತಾನದಲ್ಲಿ ಇದ್ದರೆ ನಾವಿಬ್ಬರೂ ಹೋಪನಾ? ಜೈ ಭಾರತಮಾತೆ ಅಂತ ನಾವೂ ಜಯಕಾರ ಹಾಕ್ತಾ.. .. ಅಮ್ಮಮ್ಮ, ಎಂತ ಗಮ್ಮತ್ತು!"

"ನಮ್ಮ ಸಂಗಡ ಸುಶೀಲಚಿಕ್ಕಿ, ಚಕ್ರೀಅಮ್ಮಮ್ಮ ಬಂದ್ರೆ ಗಮ್ಮತ್ತು?"

"ಚಕ್ರಿ ಅಮ್ಮಮ್ಮನನ್ನು ಅಜ್ಜಯ್ಯ ಎಲ್ಲಿ ಬಿಡ್ತ? ನಾಣಿ, ನಾವು ಸುಶೀಲಚಿಕ್ಕಿ ಸಂಗ್ತಿಗೆ ಹೋಪ"

ಅಷ್ಟರಲ್ಲಿ ಹೊಳೆಯಲ್ಲಿ ಮೀನು ಹಿಡಿಯುತ್ತಿದ್ದ ಪರಮನ ಮಗ ಚಾನು, ಹಣುಮನ ಮೊಮ್ಮಗ  ಬಸ್ಯಾ ಈ ಕಡೆ ಬರುವುದು ಕಾಣಿಸಿತು. ಇಬ್ಬರಿಗೂ ನಾಣಿಯದೇ ವಯಸ್ಸು. ಹೊಳೆ ಹೆದರಿಕೆ ಇಲ್ಲದೆ ಬಲೆ ಬೀಸಿ ಮೀನು ಹಿಡಿಯಬಲ್ಲರು, ತೆಪ್ಪದಲ್ಲಿ ಹೊಳೆತುಂಬ ಸುತ್ತಬಲ್ಲರು. ಮೀನಿನಂತೆ ಈಜ ಬಲ್ಲರು. ಹಾಗಂತ ಯಾವ ಗಳಿಗೆಯಲ್ಲಿ ಗೌರಿ ನಾಣಿ ಆಟಕ್ಕೆ ಕರೆದರೂ ಬರುವವರು. ಆಟದ ಜೊತೆ ಆಯಿ ಕೊಡುವ ತಿಂಡಿಯದೂ ಆಸೆ. ಚಾನು ಒಲೆ,ಬೆಂಕಿ, ಮಡಿಕೆ ಕಂಡು ಮೀನಿನ ಬಲೆ ಹೆಗಲಿನಿಂದ ಇಳಿಸಿದ. ಬಸ್ಯಾ ಬುಟ್ಟಿಯನ್ನು ಬದಿಗಿರಿಸಿದ. ಅವರಿಗೂ ಕುತೂಹಲ. ದೊಡ್ಡ ಮನೆ ಮಕ್ಕಳು. ಮನೆ ಆಟ ನಡೆದಿದೆ ಎಂದೆಣಿಸಿ ತಾವೂ ಜೊತೆಗೂಡಲು ಸಿದ್ಧರಾದಾಗ ಉಪ್ಪು ತಯಾರಿಸಲು ಕುಳಿತದ್ದು ತಿಳಿಯಿತು. ತಾವೂ ಕುಕ್ಕುರುಗಾಲಲ್ಲಿ ಅವರಿಂದ ತುಸು ದೂರದಲ್ಲಿ ಕುಳಿತು ಚಿಕ್ಕಿ ಹೇಳಿದ ಉಪ್ಪಿನ ಸತ್ಯಾಗ್ರಹದ ಕಥೆ ಕೇಳುತ್ತ .. ..  .. "ಹೌದಲ್ಲ, ನಾವೂ ಹೀಗೆ ಉಪ್ಪು ಮಾಡಿದ್ರೆ ಕಾಸು ಖರ್ಚಿಲ್ಲೆ" ಎಂದರು.

ಗೌರಿ ಕಣ್ಣರಳಿತು. "ನಾವು ನಾಲ್ಕು ಜನ ಸೇರಿದರೆ ಎಲ್ಲರ ಮನೆಗೆ ಆಗುವಷ್ಟು ಉಪ್ಪು ತಯಾರು ಮಾಡೂದು ದೊಡ್ಡ ಲೆಕ್ಕನಾ?"

ನಾಲ್ವರೂ ಜೊತೆಯಾಗಿ ನಕ್ಕರು. ಗೌರಿ ಬೆಂಕಿಗೆ ಮತ್ತಷ್ಟು ಒಣ ಕಡ್ಡಿಗಳನ್ನು ತುಂಬಿದಳು. ದೊಡ್ಡಕ್ಕೆ ಬೆಂಕಿ ಉರಿದು ಸ್ವಲ್ಪ ಹೊತ್ತಿನಲ್ಲಿ  ನೀರು ಆರಿ ಆವಿಯಾಯಿತು. ನಾಲ್ವರೂ ಮಡಿಕೆಯೊಳಗೆ ಬಗ್ಗಿದರೆ ಅಲ್ಲೇನಿದೆ? ಬುಡದಲ್ಲಿ ಸಿಕ್ಕಿದ್ದು ಉಪ್ಪಿನ ಬದಲಿಗೆ ಮಣ್ಣು, ಹುಡಿಕಲ್ಲುಗಳು! "ಎಂತಾತೇ ಅಕ್ಕ?" ನಾಣಿಯ ಮೋರೆ ಬಾಡಿ ಉತ್ಸಾಹ ಟುಸ್ ಪುಸ್. ಬಸ್ಯಾ ಖೊಖ್ ಎಂದ. "ಸಣ್ಣ ಒಡತಿ, ನೀವ್ ಹೇಳಿದ್ದು ಸಮುದ್ರ ನೀರು ಅಲ್ಲದಾ? ಈ ಹೊಳೆಯ ಹರಿವ ನೀರಲ್ಲಿ ಉಪ್ಪು ಇಲ್ಲೆ." ಚಾನು ತಾನೂ ನಕ್ಕ. ಸಮುದ್ರದಿಂದ ಬಹಳ ದೂರದಲ್ಲಿ ಈ ದಡದಲ್ಲಿ ಹರಿಯುತ್ತಿದ್ದ ಸೌಪರ್ಣಿಕಾ ನದಿ

ನೀರು ಬೊಗಸೆಯಿಂದ ಕುಡಿವಷ್ಟು ಸಿಹಿ.ಹೌದಲ್ಲ, ತಮಗೆ ಉತ್ಸಾಹದ ಭರದಲ್ಲಿ ಚಿಕ್ಕಿ ಸಮುದ್ರದ ಉಪ್ಪು ನೀರು ಹೇಳಿದ ಆ ಅಂಶ ಮರೆತೇ ಹೋಗಿತ್ತು. ಗೌರಿ ಪೆಚ್ಚಾಗಿ ಮಡಕೆಯನ್ನು ಎತ್ತಿ ಒಡೆದುಹಾಕಿ ಬಿರ ಬಿರನೆ ಹೊರಟು ಹೋದಳು.ಜಾರುವ ಚಡ್ಡಿ ಏರಿಸುತ್ತ ನಾಣಿ ತಾನೂ ಹೊರಟ.

"ಸಣ್ಣ ಒಡ್ತಿಗೆ ಬೇಸ್ರ ಆತು ನಾಣಪ್ಪ, ನನ್ನ ಅಪ್ಪ ತೆಪ್ಪ ತಕ್ಕಂಡ್ ಮರವಂತೆಗೆ ಹೋಪಕಿದ್ರೆ ನಿಮಗೆ ಒಂದು ಬಾಟ್ಲಿ ಸಮುದ್ರ ನೀರು ತಪ್ಪಕ್ ಹೇಳ್ತೋ. ನಾವು ಇಲ್ಲೇ ಕಾಯ್ಸಿ ಉಪ್ಪು ಮಾಡ್ವ"

ಚಾನು ಹೇಳಿದಂತೆ ಸಮುದ್ರ ನೀರು ಬರಲಿಲ್ಲ. ಗೌರಿ, ನಾಣಿಗೂ ಉಪ್ಪು ಮಾಡುವ ಉಮೇದು ಆವಿಯಾಗಿ ಹೋಗಿತ್ತು.

♣♣♣

ಆ ಒಂದು ದಿನ ಹುಯ್ಯೋ ಮಳೆ. ತಲೆ ಹೊರಹಾಕದಂತೆ, ಬಾನಲ್ಲಿ ಸೂರ್ಯನಿಗೇ ಥಂಡಿ ಹಿಡಿದು ಮೋಡಗಳ ಮರೆಗೆ ಸರಿದು ಮಳೆಯೋ ಮಳೆ. ನೋಡಲು ಚಂದ, ಅಷ್ಟೇ ಭೀಕರ. ಮಳೆ ಅಬ್ಬರ ನಿಂತ ನಂತರ ಅಂಗಳ ದಾಟಿ ಹಾಡಿ ತಿರುವಿನ ರಸ್ತೆಗೆ ಬಂದು ಹೊಳೆಯಂಚಿಗೆ ಹೋಗಲು ಗೌರಿಗೆ ಎಲ್ಲಿಲ್ಲದ ಖುಷಿ. ಅವಳು ನಾಣಿಯು ಮಣ್ಣು ನೆಲದಮೇಲೆ ನಿಂತ ನೀರನ್ನು ಕಾಲಲ್ಲಿ ತುಳಿಯುತ್ತ ಗಿಡ ಮರಗಳ ಕೆಳಗೆ ಎಲೆಯಿಂದ  ಹನಿಯುವ ನೀರಿನ ಪರಿಮಳ ಮೂಸುತ್ತ, ಅದೋ ಕಾಡು ಹಕ್ಕಿಗಳ ಕರಕರ ಕಲರವ, ಗೊರವಂಕನ ಗುಟ್ ಗುಟ್, ಅಳಿಲುಗಳ ಸರಸರ ಸದ್ದು ಕೇಳುತ್ತ ಹಾಗೇ ನಡೆದುಹೋದರೆ ಕನಸಿನ ಸಾಮ್ರಾಜ್ಯಕ್ಕೆ ಲಗ್ಗೆ ಇಟ್ಟಂತೆ. ಆದರೆ ಯಾರೂ ಅವರನ್ನು ಈ ಮಳೆಯಲ್ಲಿ ಹೊರಬಿಡುವುದೇ ಇಲ್ಲ. ಮಳೆಯಲ್ಲಿ ನೆಂದು ಥಂಡಿ, ಜ್ವರ ಬಂದೀತೆಂಬ ಭಯಕ್ಕಲ್ಲ, ಯಾವಹೊತ್ತಿಗೂ ಗಾಳಿ ಮಳೆ ಹೆಚ್ಚಿ ಒಮ್ಮೆಲೆ ಹೊಳೆ ಉಕ್ಕೇರಿ ದಂಡೆ ದಾಟಿ ಮೇಲಕ್ಕೇರಬಹುದು. ಈ ಮಂಗಗಳಿಗೆ ಹೊತ್ತು ಗೊತ್ತಿನ ಪರಿವೆಯಿಲ್ಲ. ಹೊಳೆ ಬಳಿಗೇ ನಿಲ್ಲುತ್ತವೆ. ನೀರಲ್ಲಿ ಬಳಕೊಂಡು ಹೋದ್ರು ನಮಗೆ ಈಜು ಬತ್ತು. ಚಿಕ್ಕಿ ಅಮ್ಮಮ್ಮ ಕಲಿಸಿದ್ದು ಎನ್ನುವ ಗರ್ವ ನೀರಿನಲ್ಲಿ ದಡ ಚುಂಬಿಸಿ ಹೋಗುವ ಮೀನುಗಳು, ನೀರು ಹಾವುಗಳು, ಯಾರೋ ಸೌಪರ್ಣಿಕಾ ನದಿಗೆ ಬಾಗಿನ ಕೊಟ್ಟ ಹೂವು ಹಾರ, ಎಲೆಗಳು, ಇನ್ನೆಲ್ಲೋ ಹೊಳೆದಂಡೆ ಮೇಲಿದ್ದ ತೆಂಗಿನ ಮರಗಳಿಂದ ಬಿದ್ದ ಕಾಯಿಗಳುತೇಲಿ ಬರುವುದು ನಿಂತು ನೋಡುವುದೇ.  ದಡದಲ್ಲಿ ಕೈಗೆ ಸಿಗುವಂತೆ ತೇಲಿ ಬರುವ ತೆಂಗಿನಕಾಯಿಯನ್ನು ದೋಂಟಿಯಲ್ಲಿ ಎಳೆಯುವುದೂ ಸಾಹಸವೇ. ಕಳೆದವರ್ಷ ಹೀಗೆ ಕಾಯಿ ಹಿಡಿಯಲು ಹೋಗಿ ಅಲೆಯ ರಭಸಕ್ಕೆ

ಕೊಚ್ಚಿ ಹೋದ ಯುವಕ ಇನ್ನೂ ನಾಪತ್ತೆ. ಇವು ಮರ್ಕಟಗಳು. ಕಣ್ರೆಪ್ಪೆಯಂತೆ ನೋಡಿಕೊಳ್ಳುವ ಆಯಿ, ಅಜ್ಜಮ್ಮನ ಮಾತು ಕೇಳಿದರಲ್ಲವೇ.

ಹುಯ್ಯೋ ಎಂದು ಸುರಿವ ಮಳೆಯಲ್ಲಿ ತಲೆ ಹೊರ ಹಾಕದಂತೆ ಕುಳಿತು ಉದಾಸೀನಳಾದ ಗೌರಿಗೆ ಹಠಾತ್ತನೆ ಅಟ್ಟದಲ್ಲಿ ಭದ್ರವಾಗಿ ಒಪ್ಪವಾಗಿಟ್ಟ ಸುಶೀಲ ಚಿಕ್ಕಿಯ ಮೂರು ಕೈಚೀಲಗಳು, ಬೀಗ ಹಾಕಿದ ಟಿನ್ನಿನ ಟ್ರಂಕು, ಇನ್ನೊಂದು ಉದ್ದದ ಪೆಟ್ಟಿಗೆ ನೆನಪಾಗಿ, "ಅಟ್ಟದಲ್ಲಿಟ್ಟ ಚಿಕ್ಕಿಯ ಸಾಮಾನಿನಲ್ಲಿ ಏನಿರಬಹುದು ನಾಣಿ?" ಕೇಳಿದಳು.

"ನಂಗೊತ್ತಿಲ್ಲ. ಹೋಗಿ ತೆರೆದು ನೋಡೋಣ್ವಾ?"

"ಬೇಡ. ಆಯಿ ಹೇಳ್ತಾಳೆ, ಯಾರ ವಸ್ತುವೂ ಕದ್ದು ನೋಡೂಕಾಗ. ಅದು ಪಾಪವಂತೆ."

"ಚಿಕ್ಕಿಯನ್ನೇ ಕೇಳೋಣ"

ಅದೇ ಸಮಯ ಅಟ್ಟ ಏರಿ ಸುಶೀಲಚಿಕ್ಕಿ ಬಂದೇ ಬಿಟ್ಟಳು. ಮಕ್ಕಳ ಕುತೂಹಲ ತಿಳಿದು. ತನ್ನ ಎರಡು ಕೈಚೀಲ ಎದುರಿಗಿಟ್ಟಳು. ಗೌರಿಗೆ ಪುಕು ಪುಕು. ಆವತ್ತು ಒಂದುದಿನ ಹೀಗೆ ಕುತೂಹಲ ತಡೆಯದೆ ಚಿಕ್ಕಿ ಇಲ್ಲದ ಹೊತ್ತಿನಲ್ಲಿ ಅಟ್ಟಕ್ಕೆ ಬಂದವಳು ಒಂದು ಚೀಲ ಬಿಚ್ಚಿದ್ದಳು ಗುಟ್ಟಾಗಿ. ಅದರಲ್ಲಿ ಇರುವುದೆಲ್ಲ ಹೆಂಗಸರಿಗೆ ಬೇಕಾದ ವಸ್ತುಗಳು.ಬಣ್ಣ ಬಣ್ಣದ ನೂಲು, ಕ್ರೋಷಾ ಕಡ್ಡಿ, ಅರ್ಧ ಹೆಣೆದ ಸ್ವೆಟರ್, ಕೈಕಸೂತಿ ಹಾಕಿದ ಬಟ್ಟೆಗಳು, ಗೋಣಿಹಾಸಿನ ಮೇಲೆ ಬಿಡಿಸಿದ ಚಿತ್ರಗಳು, ತಾಮ್ರದ ತೂತು ಬಿಲ್ಲೆಗಳನ್ನು ಕ್ರೋಷಾ ಕಡ್ಡಿಯಿಂದ ಬಣ್ಣದ ನೂಲಿನಲ್ಲಿ ಹೊಲಿದದ್ದು ಎಷ್ಟು ವಿಧಗಳು! ನೋಡಿ ಅಚ್ಚರಿ. ಮತ್ತೆ ಅದನ್ನು ಹಾಗೇ ಇಟ್ಟು ಕೆಳಗಿಳಿದು ಬಂದು ಆಯಿಗೆ ಹೇಳಿದಾಗಲೇ ಅಲ್ಲವೇ ಆಯಿ ಹಾಗೆಲ್ಲ ಇನ್ನೊಬ್ಬರ ವಸ್ತು ನೋಡುವುದು ಪಾಪ ಎಂದದ್ದು? ಚಿಕ್ಕಿಗೆ ಗೊತ್ತಾಗದ್ದು ತನ್ನ ಪುಣ್ಯ.

ಅವಳು ನೋಡಿದ ಚೀಲ ಬಿಟ್ಟು ಇನ್ನೊಂದು ಚೀಲ ಹೊರ ತೆಗೆದಿದ್ದಳು ಚಿಕ್ಕಿ. ಅದರಲ್ಲಿ ಬಣ್ಣದ ಸುತ್ತುಕಟ್ಟಿದ ಬಿಲ್ಲೆಗಳಿಂದ ತಯಾರಿಸಿದ ಬಾಗಿಲು ಪಟ್ಟಿಯ ಪರದೆ, ಕೈಚೀಲ, ಮರದ ಸ್ಟೂಲಿಗೆ ಮೇಲು ಹೊದಿಕೆ, ಮಣಿಗಳಿಂದ ತಯಾರಿಸಿದ ಬಳೆ, ಸರ, ಕಿವಿಯೋಲೆ ಏನಿದು? ಕೈಕುಶಲತೆಯ ವಸ್ತುಗಳಿಂದ ತುಂಬಿವೆ! ಇನ್ನೊಂದುಚೀಲದಲ್ಲಿ ಬಣ್ಣದ ಪೆನ್ಸಿಲುಗಳು, ಬಣ್ಣದ ಕಲರ್ ಬಾಕ್ಸು, ಕುಂಚ, ಕಡುಬಣ್ಣದ ಹಲವು ಬಾಟಲಿಗಳು ನೋಡಿದರೆ ಅವೆಲ್ಲ ಕಾಗದದಲ್ಲಿ ಬರೆಯುವ ಚಿತ್ರಕ್ಕೆ ಬೇಕಾದ ಸಾಮಗ್ರಿಗಳು. ಈ ಹಿಂದೆ ಗೋವಾಕ್ಕೆ ಹೋದಾಗ ಸೀತುದೊಡ್ಡಪ್ಪನ ಮಕ್ಕಳಲ್ಲಿ ಇಂತವನ್ನೇ ನೋಡಿದ್ದಳು. ಕಾಗದದ ಮೇಲೆ ಬಹು ಗರ್ವದಲ್ಲಿ ಆ ಮಕ್ಕಳು ಚಿತ್ರ ಬಿಡಿಸಿದ್ದು ತೋರಿಸಿ, ತನಗೂ

ಬೇಕೆಂದಾಗ ಕೈ ತೋರಿಸಿ ಲೊಟ್ಟೆ ಎಂದದ್ದು. ಹೌದಲ್ಲ, ಅವೇ ಇವು ಚಿಕ್ಕಿಯಲ್ಲಿವೆ! ಅಕಾ, ಪೆನ್ಸಿಲ್‌ನಿಂದ ಬಿಡಿಸಿದ ಗಣೇಶ ಮತ್ತು ಕೃಷ್ಣನ ಎರಡು ಚಿತ್ರಗಳು! ಏನು ಚೆಂದ.

"ಇಲ್ನೋಡು ನಾಣಿ, ನಾನೂ ನೀನೂ ಹೀಂಗೆ ಬಿಡಿಸಲಕ್ಕು ಅಲ್ಲದಾ? ಅಪ್ಪಯ್ಯನಿಗೆ ಹೇಳಿ ಬಣ್ಣದ ಪೆನ್ಸಿಲು ತರಿಸಿ" ಆದರೆ ತನಗೋ ಒಂದು ರಂಗೋಲಿ ಹಾಕಲು ತಿಳಿಯದು. ಚಿಕ್ಕಿ ಚಿತ್ರ ಬಿಡಿಸುತ್ತಾಳೆ, ರಂಗೋಲಿ ಹಾಕುತ್ತಾಳೆ. ಹೊಲಿಯುತ್ತಾಳೆ. ಕಮಲತ್ತೆಯೂ ಕೈಯ್ಯಲ್ಲಿ ತನ್ನ ರವಿಕೆ ಹೊಲಿದದ್ದು ಉಂಟು. ಆದರೆ ಚಿಕ್ಕಿಯದು ಏನು ನೀಟು! ಅಚ್ಚರಿ ಮೇಲಚ್ಚರಿ. ಮತ್ತೆ ಈ ಟ್ರಂಕಿನಲ್ಲಿ ಚಿಕ್ಕಿಯ ಬಟ್ಟೆಗಳು. ಅದರ ಮೇಲೆ ಏನಿದು? ಬಣ್ಣ ಮಾಸಿದ ಒಂದು ಅಂಗಿ, ಪಂಚೆ. ಗೋಡೆ ಬದಿಗೆ ಇಟ್ಟ ಫ಼ೋಟೋದ ಇನ್ನೊಂದು ಪ್ರತಿ? ಇದನ್ನೇ ಅಲ್ಲವೇ ಚಿಕ್ಕಿ ಪ್ರತಿದಿನ ಸ್ನಾನದ ನಂತರ ಕೈಗೆತ್ತಿ ಹಣೆಗೆ ಮುಟ್ಟಿಸಿ ಮತ್ತೆ ಪೆಟ್ಟಿಗೆಯಲ್ಲಿ ಇಡುತ್ತಾಳೆ. ಪಾಪ, ಚಿಕ್ಕಿ. ಈಗಲೂ ಫ಼ೋಟೋ ಸವರಿ ಇಟ್ಟು ಮತ್ತೊಂದು ಚೀಲ ಬಿಚ್ಚಿದಳು. ಅದರ ತುಂಬ ಏನಿದು ಬರೀ ಹಳೆ ಪೇಪರುಗಳ ರಾಶಿ. ಹಲವು ಇಂಗ್ಲೀಷ, ಕನ್ನಡ ಪುಸ್ತಕಗಳು. ಪ್ರತಿದಿನ ಕಿಟಕಿ ಬದಿ ಕುಳಿತು ಪುಸ್ತಕ ಓದುವುದನ್ನು ಗೌರಿ ಗಮನಿಸಿದ್ದಾಳೆ. ಇಂಗ್ಲೀಷನ್ನು ತುಂಬ ತಿಳಿದುಕೊಂಡವಳು ಚಿಕ್ಕಿ. ತನಗೆ ನಾಣಿಗೆ ಕನ್ನಡ ಬರಹ, ಓದು ಹೊರತಾಗಿ ಬೇರೆ ಸೊನ್ನೆ. ಅದೂ ಸಾಲದು ಎನ್ನುವಾಗ ಹಿತವಾಗಲಿಲ್ಲ. ಚಿಕ್ಕಿಯಿಂದ ನಾವೇ ಪಾಠ ಹೇಳಿಸಿಕೊಂಡರೆ ಹೇಗೆ? ಪಾಟಿ ಬಳಪ ಇದೆ.

"ನಮಗೂ ಕಲಿವಾಸೆ. ಹೇಳಿಕೊಡ್ತಿಯಾ ಚಿಕ್ಕಿ?" ಗೌರಿ ಭಾಷೆ ಬಾರದ ಪುಸ್ತಕದ ಮೇಲೆ ಕೈ ಇಟ್ಟಳು.

"ನಂಗೂ ಮಹಾ ಬತ್ತಿಲ್ಲೆ. ಎ.ಬಿ.ಸಿ.ಡಿ ಅಕ್ಷರ ಹೇಳಿ ಕೊಡ್ತೆ. ಈ ವಾರ ಅಪ್ಪಯ್ಯ ಬಂದ್ರೆ ಮಕ್ಕಳ ಇಂಗ್ಲೀಷ ಪುಸ್ತಕ ಬಣ್ಣ ಬಣ್ಣದ್ದು ಸಿಕ್ಕಿದ್ರೆ ತಪ್ಪಕೆ ಹೇಳು."

ಅಪ್ಪಯ್ಯ ಈ ವಾರ ಬರುವುದು ಕಷ್ಟವೇ. ಗಾಳಿ ಮಳೆ ಜೋರಾದರೆ ದೋಣಿ ನೀರಿಗಿಳಿಯುವುದು ಕಷ್ಟ. "ತೂಫ಼ಾನ್ ಬರುವ ಅಂದಾಜಿದ್ದರೆ ನೀನು ಸಾಸ್ತಾನದಿಂದ ಬರೂದು ಬೇಡ."ಸುಬ್ಬಪ್ಪಯ್ಯ ಎಚ್ಚರಿಕೆ ಕೊಟ್ಟಿದ್ದರು. ಒಮ್ಮೆ ಹೀಗೆ ಮಳೆ ಅಬ್ಬರ, ಮೋಡ ಮುಸುಕಿದ್ದು ಇಲ್ಲವೆಂದು ಅಪ್ಪಯ್ಯ ಸಾಸ್ತಾನದಿಂದ ಹೊರಟಿದ್ದ. ಅರ್ಧದಾರಿ ಎತ್ತುವಾಗ ಬಿರುಗಾಳಿ ತೂಫ಼ಾನ್ ಬಂದು ದೋಣಿ ಆಚೀಚೆ ಓಲಾಡಿ ಮುಂದಕ್ಕೆ ಹೋಗಲಾಗದೆ ಹಿಂದಕ್ಕೂ ಬರಲಾಗದೆ, ಆದಿನ ನಾಲ್ಕು ಜನ ಇದ್ದರಂತೆ ದೋಣಿಯಲ್ಲಿ. ದೋಣಿಯವನಿಗೆ ಸುಸ್ತಾಗಿ ಹೇಗೋ ದೋಣಿಯನ್ನು ಹಿಂದಿರುಗಿಸಿ ಸಾಸ್ತಾನಕ್ಕೆ ತಂದಿದ್ದ. ಅಪ್ಪಯ್ಯ ಬಾರದೆ ಮನೆಯಲ್ಲಿ ಎಲ್ಲರೂ ಗಾಬರಿ.

"ಮಳೆರಾಯನೇ, ಮಳೆರಾಯನೇ, ಮಳೆ ನಿಲ್ಲಿಸು. ಅಪ್ಪಯ್ಯ ಈ ವಾರ ಮನೆಗೆ

ಬರಲಿ." ಆ ದಿನ ನಾಣಿ ಅಳುತ್ತ ಕೈ ಮುಗಿದು ಬೇಡಿಕೊಂಡಿದ್ದ. ಮರು ದಿನ ಬೆಳಿಗ್ಗೆ ನಾಲ್ಕು ಜನರಿದ್ದ ದೋಣಿ ಹಿಂದಿನ ಸಂಜೆ ಮುಳುಗಿದೆಯೆಂದು ವರ್ತಮಾನ ಬಂದು ಸುಬ್ಬಪ್ಪಯ್ಯ ಹೈರಾಣಾಗಿ ಹೊಳೆ ವಾತಾವರಣ ತಿಳಿ ಆದಮೇಲೆ ಮಧ್ಯಾಹ್ನದ ದೋಣಿಯಲ್ಲಿ ಸಾಸ್ತಾನಕ್ಕೆ ಹೊರಟಿದ್ದ. ಆಗ ಮುಳುಗಿದ್ದು ಇನ್ನಾರೋ ಮೀನು ಹಿಡಿಯುವವರ ಬೇರೊಂದು ದೋಣಿಯೆಂದು ಸುದ್ದಿ ಸಿಕ್ಕಿ ಎಲ್ಲರೂ ನಿರಾಳ.

"ಚಿಕ್ಕಿ, ಇನ್ನೊಂದು ಚೀಲ? ಆ ಟಿನ್ನಿನ ಟ್ರಂಕು? ಏನಿದೆ ಅದರಲ್ಲಿ?" ಗೌರಿಗೆ ಆತುರ.

"ನಿನ್ನ ಮುಂದೆ ಟಿನ್ನಿನ ಬೀಗ ತೆಗೆದರೆ ಆಗೇ ಹೋಯ್ತು. ನಾನಿಲ್ಲದಾಗ ಇದರ ಬೀಗ ತೆಗಿಬ್ಯಾಡ ಮಹರಾಯ್ತಿ. ವಿಶ್ವಾಸ ಇಡಲಾ? ಮತ್ತೆ ಆ ಚೀಲ ಹೊಲಿಗೆಯದು ನೀನು ನೋಡಿಯಾಗಿದೆ. ಕಳ್ಳಿ! ನಂಗೆ ಗೊತ್ತು"

ಗೌರಿ ಕಳ್ಳಿ! ಸಿಕ್ಕಿಬಿದ್ದಳು ಸುಶೀಲಚಿಕ್ಕಿಯ ಎದುರಲ್ಲೇ! ಕೈ ಜೋಡಿಸಿದಳು, "ತಪ್ಪಾಯ್ತು ಚಿಕ್ಕಿ. ಎಂತ ಇದ್ದು ನೋಡ್ದೆ. ಕದಿವ ಬುದ್ಧಿ ನನ್ನದಲ್ಲ. ಬೇಕಿದ್ದರೆ ಆಯಿ, ನಾಣಿಯನ್ನು ಕೇಳು."

"ಖುಷಾಲು ಮಾಡ್ದೆ. ಬ್ಯಾಸರ ಆಯ್ತಾ? ನೀ ಯಾವ ಚೀಲಕ್ಕೆ ಕೈ ಹಾಕಿದರೂ ಮಹಾ ವಸ್ತು ಏನಿದ್ದು? ಕಂಡ್ಯಲ್ಲ. ನಿಂಗೆ ಕಲಿವ ಮನಸ್ಸಿದ್ದರೆ"

"ಇದ್ದು ಚಿಕ್ಕಿ, ನಿಂಗೆ ಎಂತೆಲ್ಲ ಗೊತ್ತು ಎಲ್ಲ ನಂಗೂ ಹೇಳಿಕೊಡೆಕ್ಕು. ನಂಗೆ ಎಲ್ಲ ಕಲಿಯಕ್ಕು ಹೊಲಿಗೆ, ಕಸೂತಿ, ಚಿತ್ರ ಬಿಡಿಸಲು, ಇಂಗ್ಲೀಷ ಬರೆಯಲು ಎಲ್ಲಾ ಅಂದ್ರೆ ಎಲ್ಲಾನೂ"

"ಹೇಳಿಕೊಡಲು ಕಷ್ಟ ಇಲ್ಲೆ. ನೀ ಜಾಣೆ. ನನ್ನ ಒಟ್ಟಿಗೆ ಇದ್ದು ಅಭ್ಯಾಸ ಮಾಡಿದ್ರೆ ಸೈ"

ಸುಶೀಲಚಿಕ್ಕಿ ಹೇಳಿದ್ದು ನಿಜ, ಅಭ್ಯಾಸಕ್ಕೆಂದು ಒಂದೆರಡು ದಿನ ಅಟ್ಟದಲ್ಲಿ ಕಸೂತಿ, ಹೊಲಿಗೆ, ಅದೂ ಇದು ಕಾಲ ಕಳೆದ ಗೌರಿಗೆ ಏಕೋ ಹತ್ತು ಬಾರಿ ತುಂಬ ಆಕಳಿಕೆ.ಆ ನಾಜೂಕು ಹೊಲಿಗೆ, ಚಿತ್ತಾರದ ಕೆಲಸದಲ್ಲಿ ಕೈ ಓಡುವುದಿಲ್ಲ. ಚಿತ್ತ ಇನ್ನೆತ್ತಲೋ.ಆದಿನವೂ ಧಾರಾಕಾರ ಮಳೆ. ಅದು ನಿಲ್ಲುವ ಹೊತ್ತಿಗೆ ನಾಣಿ ಬಾಲ ಸುಟ್ಟ ಬೆಕ್ಕಿನಂತೆ, ಕೂತು ಕೂತು ಕಾಲು ಕೆರೆಯಿತು ಎನ್ನುವಂತೆ,

"ಅಕ್ಕ, ನಡಿಯೇ, ಅಂಗಳದಲ್ಲಿ ಹರಿವ ನೀರಿಗೆ ಕಾಗದದ ದೋಣಿ ಬಿಡೋಣ? ಆರು ದೋಣಿ ಮಾಡಾತು. ನಿಂಗೆ ಮೂರು, ನಂಗೆ ಮೂರು. ಯಾರ ದೋಣಿ ಜೋರಾಗಿ ಓಡ್ತು ಕಾಂಬ"

ಗೌರಿಗೂ ಅದೇ ಬೇಕಿತ್ತು. ಇಬ್ಬರೂ ಅಂಗಳಕ್ಕಿಳಿದು ಸ್ವಲ್ಪ ಹೊತ್ತು ನೀರಿನಲ್ಲಿ ದೋಣಿ ಬಿಟ್ಟು ಅದೂ ಬೇಸರವಾಗಿ ಮೈ ಮುರಿದರು. ನನ್ನದು ದೋಣಿ ಮುಂದೆ, ನಿನ್ನದು ಮಗುಚಿತು ಎಂದು ಹುಯ್ಲೆಬ್ಬಿಸಿ ಒಬ್ಬರಿಗೊಬ್ಬರು ಠೂ ಬಿಟ್ಟು ರಾಜಿಯಾಗಿ ಅಲ್ಲವೇ ಮತ್ತೆ? ಮಕ್ಕಳ ಜಗಳ ಒಂದು ನಿಮಿಷದ್ದು. ಅಗೋ, ಮಳೆ ಬಂದು ನಿಂತ ಮೇಲೆ ಬಿಸಿಲಿನ ಕೋಲು ಎಷ್ಟು ಚೆಂದಕ್ಕೆ ಬಿದ್ದಿದೆ. ತೋಟದೊಳಗೆ ಅದರಾಚೆ ಆಗತಾನೇ ಜೀವ ತಳೆಯುತ್ತಿದ್ದ ಹಸಿರು ಭತ್ತದ ಪೈರು ನಗುತ್ತಿವೆ. ಹಸಿರು ಹಳದಿ ಕಂದು ಬಣ್ಣದ ಚಿಟ್ಟೆಗಳಿಗೆ ಏನು ಅವಸರವೋ ಕಣ್ತಪ್ಪಿಸುತ್ತ ಹಾರುತ್ತಿವೆ. ಎಲ್ಲ ಕಡೆಗೂ ಗಿಜಿಗಿಜಿ ಕೆಸರು ಮಣ್ಣು. ಆ ಪುಟ್ಟ ಪಾದಗಳಿಗೆ ಅದು ಕೊಳಕು ಅಲ್ಲ, ಹೇಸಿಗೆಯೂ ಅಲ್ಲ. ಮಣ್ಣಲ್ಲಿ ಕುಣಿವ ಆಸೆ. ಮೋತಿ ಜೊತೆ ರೆಂಬೆ ಕೊಂಬೆ, ನೆಲದ ಮೇಲೆ ಅರಳಿದ ಬಿಳಿಮತ್ತು ನಸು ಹಳದಿಯ ಅಣಬೆಗಳು, ನೋಡುತ್ತ ಕಾಡು ಹೂವಿನ ಸುಗಂಧ ಹೀರುತ್ತ ಗೌರಿ, ನಾಣಿಮುಕ್ತವಾಗಿ ನಕ್ಕರು. ಈ ಬಾಲರ ನಗುವಿಗೆ ಸಾಕ್ಷಿ ಎನ್ನುವಂತೆ ಸೂರ್ಯ ಇನ್ನೂ ಮೇಲೇರಿದ್ದ. ಸೃಷ್ಟಿಕರ್ತ ಈಗಲೇ ಪ್ರಕೃತಿಯ ಸಮಸ್ತ ಸೊಬಗನ್ನು ತೆರೆದಿಟ್ಟಾಗ ತಾಯಿ ಜೋಗುಳದಂತೆ ಸಂಗೀತ ಆಲಾಪನೆ ಮಾಡುತ್ತದೆ. ಕೃತಾರ್ಥಳಾದ ವನದೇವತೆಯ ಸ್ವರ್ಣ ಮುಕುಟವೂ ಹೆಮ್ಮರವನ್ನು ತಬ್ಬಿದ ಲತೆಯಿಂದ ಒಡಗೂಡಿ ಪಾದದ ಕೆಳಗೆ ಮುಟ್ಟಿದರೆ ಮುನಿಯುವ ನಾಚಿಗೆ ಮುಳ್ಳು ಇನ್ನಿತರ ಸಸಿಗಳಿಂದ, ಅವುಗಳ ಸಣ್ಣ ಸಣ್ಣ ಹೂವುಗಳಿಂದ ಅಲಂಕೃತಗೊಂಡಿವೆ. ಜರ್ಜರಿತವಾದ ಒಣರೆಂಬೆ ಕೊಂಬೆಗಳು, ಎಲೆ ಬಳ್ಳಿಗಳು ಗಾಳಿಯ ಸಮರದಲ್ಲಿ ನೆಲಕ್ಕುರುಳಿ ಎಳೆ ಚಿಗುರು ಹೂವುಗಳಿಗೆ ಹೊಸ ಜೀವ ತುಂಬುತ್ತಿದೆ. ಮಕ್ಕಳ ಕೋಮಲ ಹೃದಯದಲ್ಲಿ ಇದೇನಿದು? ಎಲ್ಲೆಲ್ಲೂ ಆನಂದಮಯ ಕೋಲಾಹಲ.

ಇಬ್ಬರೂ ವಾಡಿಕೆಯಂತೆ ಹೊಳೆದಡಕ್ಕೆ ಬಂದರು. ಹೊಳೆ ಶಾಂತವಾಗಿ ಹರಿಯುತ್ತಿತ್ತು. ನೀರು ದಡದಿಂದ ಕೆಳಗಿಳಿದು ಸುಮ್ಮನೆ ಹ೦ದುಹೋಗುತ್ತಿತ್ತು. ದಡಕ್ಕೆ ಒರಗಿನಿಂತಿತ್ತು ಸಣ್ಣ ಎರಡು ದೋಣಿ ಗಳು. ಮೀನು ಹಿಡಿಯಲು ಒಯ್ಯುವಂತವು. ಇನ್ನೆರಡು ಬಿದುರಿನ ತೆಪ್ಪಗಳು. ಆರಡಿ ಉದ್ದದ ನಾಲ್ಕು ಗಟ್ಟಿ ಬಿದುರನ್ನು ಜೋಡಿಸಿದ ಆ ತೆಪ್ಪಗಳನ್ನು ನಡೆಸುವ ಅಗಲ ಕೈ ಹರಗೋಲು ಇತ್ತು. ಒಂದು ತೆಪ್ಪ ಪರಮನದು. ಇನ್ನೊಂದು ಯಾರದೋ ತಿಳಿಯದು. ಪರಮ ಮೀನು ಹಿಡಿಯಲು ಹೊಳೆಗಿಳಿಯುವುದು ಅದರಲ್ಲೇ. ಆಗಾಗ ಗ್ರಾಮದ ಜನರಿಗೆ ಅಗತ್ಯವಿದ್ದರೆ ಅದೇ ತೆಪ್ಪದಲ್ಲಿ ಕರೆದೊಯ್ಯುವವ.

"ನಾಣಿ, ನಾವಿಬ್ಬರೆ ಪರಮನ ತೆಪ್ಪ ಕಟ್ಟಿ ಹೊಳೆಯಲ್ಲಿ ಒಂದು ಸುತ್ತು ಹಾಕಿದರೆ ಮಜ ಇತ್ತಲ್ವಾ?"ಗೌರಿ ರೆಕ್ಕೆಯಂತೆ ಎರಡೂ ಕೈ ಚಾಚಿ ಸುತ್ತು ಸುತ್ತು ತಿರುಗಿದಳು.

"ಇಬ್ಬರೇನಾ? ಮುಳುಗಿದರೆ?"

"ಹ್ಯಾಗೆ ಮುಳಗ್ತೇವೆ? ಬಿದಿರಿನ ತೆಪ್ಪ ಮುಳಗ್ತಿಲ್ಲೆ. ನಾವೇ ಹುಟ್ಟು ಹಾಕೂದು. ಹೊಳೆದಂಡೆ ಬದೀಗೇ ಹ್ವಾದರೆ ತೆಪ್ಪ ಮುಳುಗಿದ್ರೂ ನಡೆದು ಬಪ್ಪಲಕ್ಕು"

"ಅಪ್ಪಯ್ಯ ಆಯಿ ಬೆನ್ನು ಮುರಿವಂಗೆ ಹೊಡಿತ್ರು. ನಾನೇ ಹೇಳ್ತೆ ಕಾಣು. ಮೊನ್ನೆ ಬೇಸಿಗೆಯಲ್ಲಿ ನಾವಿಬ್ಬರೂ ತೆಪ್ಪದಲ್ಲಿ ಹೋಗಿ ಕುಂಡೆಗೆ ಬಾಸುಂಡೆ ಬಪ್ಪ ಹಾಂಗೆ ಪೆಟ್ಟು ಸಿಕ್ಕಿದ್ದು, ಆಯಿ ನಮ್ಮಿಂದ ದೇವರ ಪ್ರಮಾಣ ಮಾಡ್ಸಿದ್ದು ನೆನಪಿಲ್ಯಾ?"

ನೆನಪಿಲ್ಲದೆ ಏನು? ಮೊನ್ನೆ ಬೇಸಿಗೆಯಲ್ಲಿ ನೀರು ಕಡಿಮೆ ಹರಿಯುವ ಸಮಯದಲ್ಲೇ ಒಂದು ಮಧ್ಯಾನ್ಹ ಪರಮನ ಮಗ ಚಾನು ಜೊತೆ ತೆಪ್ಪದಲ್ಲಿ ಇಬ್ಬರೇ ಹತ್ತಿದ್ದು, ಆ ಮೂವರೂ ಹಾಯಿಗೋಲಿನ ಸಹಾಯದಿಂದ ತೆಪ್ಪ ನಡೆಸಿದ್ದು ನೆನಪಿದೆ.ಚಾನು ಬುದ್ಧಿವಂತ. ತೆಪ್ಪ ನಡೆಸುವ ಚುರುಕಿನ ಹುಡುಗ. ಗೌರಿ ನಾಣಿಯ ಕೈಗೆ ಒಂದೊಂದು ಹರಗೋಲು ಕೊಟ್ಟು ತೆಪ್ಪದ ಒಂದು ಬದಿಗೆ ಅವಳನ್ನು, ಮಧ್ಯ ನಾಣಿಯನ್ನು ಕುಳ್ಳಿರಿಸಿದ್ದ.ಅವರಿಂದ ಮೊದಲೇ ಚಂಗನೆ ನೆಗೆದು ತೆಪ್ಪ ಹತ್ತಿದ ಮೋತಿ ನಾಣಿಯ ಬಳಿ ಕುಳಿತಾಗಿತ್ತು. ನಾಯಿ ಬುದ್ಧಿ ಗೊತ್ತಲ್ಲ. ಹೊಳೆ ನಡುವೆ ಕುಂಯಿಗುಟ್ಟು ತೆಪ್ಪದಲ್ಲಿ ಹಾರಿ ಜಿಗಿದರೆ ತೆಪ್ಪ ಮುಳುಗೀತೆಂದು ಚಾನು ಅದನ್ನು ನೀರಿಗೆ ದೂಡಲು ಹೇಳಿದಾಗ ನಾಣಿ "ನನ್ನ ಮಾತು ಕೇಳ್ತು. ಪಾಪದ್ದು" ಎದೆಗವಚಿಕೊಂಡಿದ್ದ. ಚಾನು ಕಲ್ಲಿನ ಗೂಟದಲ್ಲಿ ಕಟ್ಟಿದ ಹಗ್ಗ ಬಿಡಿಸಿ ತೆಪ್ಪವನ್ನು ನೀರಿಗೆ ದೂಡಿ ತಾನು ಹಾರಿ ಅದರ ಮೇಲೇರಿ ಗೌರಿಗೆ ಎದುರಾಗಿ ಇನ್ನೊಂದು ತುದಿಗೆ ಕುಳಿತಿದ್ದ.ತೆಪ್ಪ ನಿಧಾನವಾಗಿ ಚಲಿಸಿತ್ತು ಮುಂದಕ್ಕೆ. "ಸಣ್ಣ ಒಡೆಯಾ, ಚೂರೂ ನೀರಿಗೆ ಹಣಕಿ ನೋಡೂಕಾಗ, ಮೈ ಕುಣಿಸುಕಾಗ. ನಾಯಿನೂ ಗಟ್ಟಿ ಹಿಡ್ಕಳಿ. ಸಣ್ಣ ಒಡ್ತಿ, ನೀವೂ ಹಾಂಗೆ, ನೀರಿನ ವಿರುದ್ಧ ದಿಕ್ಕಿಗೆ ಹರಗೋಲಿಂದ ಹುಟ್ಟು ಹಾಕೆಕ್ಕು" ಎಂದವನು ಅದನ್ನು ಹೇಗೆ ಆಚೀಚೆ ತಿರುಗಿಸಬೇಕು ಹೇಳಿ ಕೊಡುತ್ತ ತೆಪ್ಪವನ್ನು ದಂಡೆಯ ಬದಿಯಲ್ಲೇ ನಡೆಸುತ್ತ ಆಮೇಲೆ ನೀರು ಆಳವಾದ ಕಡೆ ಮುನ್ನಡೆಸಿದ. ಗೌರಿ ಹುಟ್ಟು ಹಾಕಿದಳು.

ಎಷ್ಟು ಸುಲಭ! ಗೌರಿ ನಾಣಿಗೆ ಈಜು ತಿಳಿಯದು. ಆದರೆ ಈ ದಡದ ಉದ್ದಕ್ಕೂ ನೀರು ಕಡಿಮೆಯೇ. ತೆಪ್ಪ ಹಾಗೆಲ್ಲ ಮಗುಚಿಕೊಳ್ಳುವುದಿಲ್ಲ. ಹರಗೋಲು ಸರಿಯಾಗಿ ನೀರಿನಲ್ಲಿ ಹಿಂದೆ ತಳ್ಳಬೇಕು. ಆಗ ತೆಪ್ಪ ಮುಂದಕ್ಕೆ ಚಲಿಸುತ್ತದೆ. ನೋಡಿ ಗೊತ್ತಿದೆ. ತಾವೇತೆಪ್ಪ ನಡೆಸುವುದು ಇದೇ ಮೊದಲು. ಚಾನು ಎಷ್ಟು ಧೈರ್ಯದ ಹುಡುಗ. ಗೌರಿಗಿಂತ ಎರಡು ಮೂರು ವರ್ಷಕ್ಕೆ ದೊಡ್ಡವನಾದರೂ ತೆಪ್ಪ ನಡೆಸುವುದರಲ್ಲಿ ಭಲೇ ಹುಷಾರು. ಎಷ್ಟು ಆಳ ನೀರಿನಲ್ಲೂ ಈಜಬಲ್ಲ. ಅವನ ಧೈರ್ಯ ಅವಳಲ್ಲೂ ತುಂಬಿತು. ಅವಳ ಧೈರ್ಯ ನಾಣಿಗೂ ಹುರುಪು ತಂದಿತ್ತು. ಅಲ್ಲವೇ ಮತ್ತೆ? ಹುಚ್ಚು

ಧೈರ್ಯ ಅಂದರೆ ಇದೇ. ಅಕ್ಕ ಜೊತೆಗಿದ್ದರೆ ಪಾತಾಳದ ಆಳದ ನೀರಿಗೂ ಅವ ಅಂಜಲಾರ. ತೆಪ್ಪ ಮುಂದಕ್ಕೆ ಹೋದಂತೆ ಬಾನಾಡಿಯಂತೆ ಮಧ್ಯಾನ್ಹದ ಬಿಸಿಲಿನಲ್ಲಿ ಇಬ್ಬರ ಮನಸ್ಸು ಕುಣಿಯಿತು. ಅದೋ ದೂರದಲ್ಲಿ, ದಡವೇ ಕಾಣದ ಹೊಳೆಯ ಆಚೆ ನೀಲಸಾಗರದ ಅಂಚಿನುದ್ದಕ್ಕೂ ಹೋಗಬೇಕು ಹಾಗೇ, ಹೋಗುತ್ತಲೇ ಇರಬೇಕು. ವಿಶಾಲವಾದ ಸಮುದ್ರದ ಆಚೆಏನಿದೆ? ಚಿಕ್ಕಿ ಸಮುದ್ರದ ಕಥೆ ಹೇಳುವಾಗ ಬೇರೆ ದೇಶಗಳಿಗೆ ಹೋಗಲು ದೊಡ್ಡ ಹಡಗುಗಳು ಇವೆಯೆಂದು, ಸಣ್ಣ ದೋಣಿಯ ಬದಲಿಗೆ ದೊಡ್ಡ ಹಡಗಿನಲ್ಲಿ ಹೋಗಬೇಕೆಂದೂ ಭೂಪಟದಲ್ಲಿ ಅರಬ್ಬಿ ಸಮುದ್ರ, ಅದರಾಚೆ ಕಾಣುವ ಬೇರೆ ದೇಶಗಳನ್ನು ತೋರಿಸುತ್ತಿದ್ದಳು. ಏಳು ಸಮುದ್ರಗಳ ದಾಟಿ ಹೋಗುವ ರಾಜಕುಮಾರನ ಶೌರ್ಯದ ಕಥೆ ಹೇಳುತ್ತಿದ್ದಳು.ತಾವು ದೊಡ್ಡವರಾದ ಮೇಲೆ ಹೀಗೆ ನೀರಿನಲ್ಲಿ, ಸಮುದ್ರದಲ್ಲಿ ಜಗತ್ತಿನ ಎಲ್ಲ ಕಡೆಗೂ  ತಿರುಗಾಡಬೇಕು. ನಾನು ನಾಣಿ ಇಬ್ಬರೇ! ಕೈ ಕೈ ಹಿಡಿದು ಅಲೆಯಬೇಕು.ಆ ಕಲ್ಪನೆಯಲ್ಲಿ ಇಬ್ಬರೂ ಹಾಡಿದರು, ಕೇಕೆ ಹಾಕಿದರು. ನೀರಿನ ಹನಿಗಳು ತುಷಾರದಂತೆ ಹಾರುತ್ತಿದ್ದವು ಮೈಮೇಲೆ. ಏರುವ ಬಿಸಿಲಿನ ಮೋಡಿಯಲ್ಲಿ ನೀರ ಅಲೆಗಳ ಮೇಲೆ ಹರಡಿದ ಕಾಂತಿಯಲ್ಲಿ ತೆಪ್ಪದ ಆಚೆ ಈಚೆ ಧಾವಿಸುವ  ಸಣ್ಣ ದೊಡ್ಡಮೀನುಗಳೂ ನುಲಿಯುತ್ತಿದ್ದವು.

"ಚಾನೂ, ಬಲೆ ಹಾಕ್ತಿಲ್ಲೆಯಾ? ಅಲ್ಲಿ ಕಾಣು ಎಷ್ಟು ಮೀನುಗಳು! ಒಂದು ಬುಟ್ಟಿ ಸಿಕ್ಕಗು" ನಾಣಿ ಚಪ್ಪಾಳೆ ತಟ್ಟಿದ, "ನೀ ಬಲೆ ಕೊಟ್ಟರೆ ನಾನೇ ಹಿಡಿತೆ" ಪಾಪ, ಅವನಿಗೆ ತನ್ನ ಇರಿವು ಮರೆತು ಸಂತೋಷದಲ್ಲಿ ಕೇಕೆ ಹಾಕಿದ. ಕುಳಿತಲ್ಲೆ ತಾನೂ ಮಿಸುಕಿದ ಮೀನಿನಂತೆ. ಮೋತಿಯೂ ವವ್ ವವ್ ಎಂದಿತು. ತೆಪ್ಪ ಸ್ವಲ್ಪ ಕುಲುಕಾಡಿತು.

"ಸರಿ ಕೂಕಣಿ ಸಣ್ಣ ಒಡೆಯಾ." ಚಾನು ಸ್ವಲ್ಪ ಅಂಜಿದಂತೆ ಕಂಡ. ನಾಣಿಯ ಕುಲುಕಾಟದಲ್ಲಿ ತೆಪ್ಪದ ಒಂದು ಭಾಗ ನೀರೊಳಗೆ ಇಳಿದು ಮೇಲೆ ಬಂದಿತು. ಮತ್ತೊಮ್ಮೆ ಕೆಳಗೆ ವಾಲಿ ಮೇಲೆದ್ದಿತು. ತೆಪ್ಪದ ಒಂದು ಭಾಗ ನೀರಿಗಿಳಿದರೂ ಸಾಕು, ಸರಿಯಾಗಿ ಹುಟ್ಟು ಹಾಕದಿದ್ದರೆ ಆಯ ತಪ್ಪುತ್ತು ಎಂದು ಅವನಪ್ಪ ಹೇಳಿಕೊಟ್ಟ ಮೊದಲಪಾಠ. ಆಗಲೇ ದಡದಿಂದ ದೂರ ಬಂದಾಗಿದೆ.  ನಾಯಿ ಅಂಡು ಸುಟ್ಟಂತೆ ಮೈ ನೀರನ್ನು ಕೊಡವಿಕೊಳ್ಳುತ್ತಿದೆ. ಅದರ ಚಾಷ್ಟಿ, ಸಣ್ಣ ಒಡೆಯರ ಅಲುಗಾಟದಲ್ಲಿ ತನಗೂ ಹುಟ್ಟು ಹಾಕಲು ಕಷ್ಟ. ಚಾನು ಕೂಗಿ ಗದರಿಸಿದ ನಾಣಿಯನ್ನು. ತೆಪ್ಪ ಮುಳುಗಿದರೆ ತನಗೆ ಈಜು ಬತ್ತು. ಆದರೆ ಸಣ್ಣ ಒಡತಿ, ಸಣ್ಣ ಒಡೆಯಂಗೆ? ಇಬ್ಬರಿಗೂ ಈಜು ಬತ್ತಿಲ್ಲೆ.

"ಹ್ವಾಯ್,ಸಣ್ಣ ಒಡತಿ, ಸ್ವಲ್ಪ ಜೋರಾಗಿ ಹುಟ್ಟು ಹಾಕಿ. ಸಣ್ಣ ಒಡೆಯಾ, ಹಿಂದೆ ಜರಗಿ  ಕೂಕಳ್ಳಿ. ನಾಯಿನ ಗಟ್ಟಿ ಹಿಡ್ಕಳಿ. ನಮ್ಮ ಭಾರಕ್ಕೆ ತೆಪ್ಪ ಬದಿಗೆ ವಾಲ್ತಾ ಇದ್ದು. ಹಿಂತಿರುಗಿ ದಡಕ್ಕೆ ಹೋಪಾ. ಸಣ್ಣ ಒಡತಿ, ಈ ಬದಿಗೆ ಕೈ ತಂದು ಬಗ್ಗಿ ಹುಟ್ಟನ್ನೂ

ನೀರಲ್ಲಿ ದೂಡಿ. ಬೇಗ, ಬೇಗ" ಅವಸರಿಸುತ್ತ ಸ್ವರ ಏರಿಸಿದ ಚಾನು ತೆಪ್ಪವನ್ನು ಅಡ್ಡಕ್ಕೆ ತಿರುಗಿಸಿದ. ತೆಪ್ಪ ಈಗ ಬಲಭಾಗಕ್ಕೆ ವಾಲಿತು, ಮತ್ತೆ ಸರಿಯಾಗಿ ಮುಂದೆ ಹೋಗುವ ಮೊದಲೇ ಆಯ ತಪ್ಪಿ ತೆಪ್ಪ ಬುಡಮೇಲಾಯಿತು. ಮುಂದಿನಕಥೆ ಕೇಳುವುದೇ ಬೇಡ.

ಗೌರಿ ನಿಂತಲ್ಲೇ ತಮ್ಮನನ್ನು, ತೆಪ್ಪ, ಹೊಳೆಯನ್ನೂ ನೋಡಿದಳು. ಅಂದು ತೆಪ್ಪ ದಡ ಸೇರಲು ಒಂದೆರಡು ಮಾರು ದೂರ ಇರುವಾಗಲೇ ಮಗುಚಿ ಮೋತಿ ಸಮೇತ ಉಳಿದ ಮೂವರೂ ನೀರುಪಾಲು. ಕಾಲಿಗೆ ನೆಲ ಸಿಕ್ಕದು, ತಲೆ ಎತ್ತಲಾಗದು. ಉಸಿರು ಕಟ್ಟುತ್ತಿತ್ತು. ಈ ಸ್ಥಿತಿಯಲ್ಲಿ ಚಾನು ತಾನು ಈಜುತ್ತ ಮೊದಲು ನಾಣಿಯನ್ನು ಹಿಡಿದು ದಡಕ್ಕೆ ತಂದು ಹಾಕಿದ್ದ. ಮೋತಿ ನೀರಲ್ಲಿ ಮುಳುಗಿ ಏಳುತ್ತ ಮುಂದೆ ಹೋದದ್ದು ಗೌರಿಯನ್ನು ಕಂಡು ಗುರ್‌ಗುರ್ ಮಾಡಿ ತಾನೇ ಹಿಂದೆ ಹೊರಳಿತು. ಅವಳ ಬಟ್ಟೆಯನ್ನು ತನ್ನ ಹಲ್ಲಿನಲ್ಲಿ ಕಚ್ಚಿ ಎಳೆದು ಎಳೆದು ದಡ ಮುಟ್ಟಿದಾಗ ಚಕ್ರಿ ಮನೆಯ ಬಾವಿಗೆ ಬಿದ್ದಂತೆ ಗೌರಿಗೆ ಎಚ್ಚರವಿಲ್ಲದ ಸ್ಥಿತಿ. ಮೋತಿ ಸ್ವಲ್ಪ ನಿಧಾನಿಸಿದ್ದರೂ ಅಂದೇ ಮುಗಿಯುತ್ತಿತ್ತು ಅವಳ ಕಥೆ. ಮನೆಯಲ್ಲಿ ಈ ರಂಪಾಟ ತಿಳಿದು ತೆಪ್ಪದ ಸಾಹಸದಲ್ಲಿ ಬದುಕುಳಿದ ಮಕ್ಕಳನ್ನು ಹಿರಿಯರು ಅಪ್ಪಿ ಮುದ್ದಾಡಿ ಕಣ್ಣೀರು ಹಾಕಿದ್ದರು. ಆದರೂ ಅಪ್ಪಯ್ಯ ಹುಣಿಸೇಅಡರಿನಿಂದ ಗೌರಿ ಒಬ್ಬಳಿಗೆ ಕುಂಡೆಗೆ ಬರೆ ಬರುವಂತೆ ಬಾರಿಸಿದ್ದ,

"ಕುದುರೆ ಹಾಗೆ ಬೆಳೆದಿದ್ದಿ ಕೂಸೂ.ತಲೆ ಎಲ್ಲಿಟ್ಕಂಡಿದ್ದಿ? ಇನ್ಮೇಲೆ ಹೇಳದೆ ತೆಪ್ಪದ ಸುದ್ದಿಗೆ ಹ್ವಾದರೆ ಕಾಲು ಮುರ್ದು ಕೈಗೆ ಕೊಡ್ತೆ. ಹೊಳೆಬದಿಗೂ ಹುಷಾರು!"

ಕುಂಡೆಗೆ ಸಿಕ್ಕಿದ ಪೆಟ್ಟಿನ ನೋವು ಎರಡೇ ದಿನಕ್ಕೆ. ಆದರೆ ಅಪ್ಪಯ್ಯನ ಕರುಣೆ ತುಂಬಿದ ಆ ಏಟುಗಳು ಜೀವನಕ್ಕೆ ಕಲಿಸಿತ್ತು ದೊಡ್ಡ ಪಾಠ. ಇನ್ನು ಮೇಲೆ ಹೊಳೆಬಳಿ ಹೋದರೂ ನೀರಿಗಿಳಿಯದಂತೆ ಆಯಿಯೇ ದೇವರ ಮುಂದೆ ಪ್ರಮಾಣ ಮಾಡಿಸಿದ್ದಳು. ತಾನು ತುಂಬ ದೊಡ್ಡವಳಂತೆ. ಪೆಟ್ಟು ತನಗೆ ಮಾತ್ರ, ನಾಣಿಗೆ ಇಲ್ಲ!ಅವಳು ತಮ್ಮನನ್ನು ನೋಡಿದಳು. ಅಪ್ಪಿ ಹಿಡಿದು ಹೊಳೆಗೆ ಕೈ ಮುಗಿದು, ಬಿದಿರು ತೆಪ್ಪ ನಡೆಸುವ ಚೆಂದದ ಕಲ್ಪನೆಯಲ್ಲಿ ನಗುತ್ತ, "ತೆಪ್ಪ ಬಿದ್ಕಲ್ಲಿ. ಅದರ ಉಸಾಬರಿ ಬ್ಯಾಡ. ಬಾ, ನಾವು ಚಕ್ರಿ ಅಮ್ಮಮ್ಮನಿಂದ ಈಜು ಕಲ್ತ ಮೇಲೆ ತೆಪ್ಪ ನೋಡ್ವ, ನಡಿ, ಖಾರೆ ಹಣ್ಣು ಕುಯ್ಕಂಡು ಅತ್ತ ಹೋಪಾ"ದೊಡ್ಡಕ್ಕೆ ಸಿಳ್ಳು ಹಾಕಿದಳು.

ಇಬ್ಬರ ನಗು ಪ್ರತಿಧ್ವನಿಸಿತು ಹೊಳೆಯನೀರಿನಲ್ಲಿ. ಅದೇ ವೇಳೆ ಮೋತಿ ತನ್ನದೇ ಭಾಷೆಯಲ್ಲಿ ಊ ಊ ಎನ್ನುವಾಗ ನಾಣಿ ಅಕ್ಕನ ಕೈಹಿಡಿದು ಸಣ್ಣ ಚೀತ್ಕಾರದಲ್ಲಿ ಅಷ್ಟೆತ್ತರ ಹಾರಿ ಮಾರು ದೂರ ಹಿಂದೆ ಸರಿದಾಗಿತ್ತು. ಆಗ ದೃಷ್ಟಿಗೆ ಗೋಚರಿಸಿದ್ದು ಹತ್ತಾರು ಮಾರು ದೂರದಲ್ಲಿ ಎರಡು ಹಾವುಗಳು ಒಂದಕ್ಕೊಂದು ಹೆಣೆದುಕೊಂಡು ಎತ್ತರಕ್ಕೇರಿ ನಿಂತುಬಿಟ್ಟಿವೆ! ಬಿಸಿಲು ಕೋಲಿನಲ್ಲಿ ಫಳ ಫಳ ಹೊಳೆಯುವ ಅವುಗಳ

ಮೈ ಹಿಂದೆ ಮುಂದೆ ಓಲಾಡುತ್ತಿವೆ. ನೋಡಿದಷ್ಟೂ ಸಾಲದು ಅವುಗಳ ನರ್ತನ. ನಾಣಿ ಅವುಗಳನ್ನು ಓಡಿಸಲು ಕಲ್ಲು ಎತ್ತಿಕೊಂಡ. ತಡೆದಳು ಗೌರಿ,

"ಬಿಡೋ, ಅವುಗಳ ಪಾಡಿಗೆ ಹಾಗೇ ಇರಲಿ. ನಮಗೆ ಉಸಾಬರಿ ಬ್ಯಾಡ. ಆಯಿಯನ್ನು ಕೇಳು, ಜೋಡಿಯಾದ ಹಾವುಗಳನ್ನು ನಾವು ಮನುಷ್ಯರು ಕಾಂಬಕಾಗ ಅಂತೆ. ಹೊಡೆದು ಓಡ್ಸೂಕೂ ಆಗದಂತೆ. ಒಬ್ಬಾತ ಹೀಂಗೆ ಜೋಡಿ ನಿಂತ ಹಾವುಗಳನ್ನು ಹೊಡ್ದು ಆ ರಾತ್ರೆ ಅವೆರಡೂ ಅವನ ಮನೆ ಮುಂದೆ ಬಂದಿದ್ವಂತೆ. ಮತ್ತೆನೂ ಎರಡು ದಿನ ಅವ ಹೋಪಲ್ಲಿ ಹಿಂದೆ ಬತ್ತಿದ್ವಂತೆ. ಖರೆ[ನಿಜ]ನೋ ಸುಳ್ಳೋ"

ಈ ಮಾತು ಸತ್ಯವೇ ಹೌದು. ಮಳೆಗಾಲದಲ್ಲಿ ಕುದ್ರುವಿನಲ್ಲಿ ಹಾವಿನ ಕಾಟ ಜಾಸ್ತಿ. ರಭಸದಲ್ಲಿ ಉಕ್ಕಿ ಹರಿಯುವ ಹೊಳೆಯಲ್ಲಿ ದಡದತ್ತ ಹರಿದುಬರುವ ಹಾವು ಹರಣೆ, ವಿಷಜಂತುಗಳು ದಡವೇರಿ, ಮರವೇರಿ, ಬಿಲ ನೂರಿ, ಸೂರು ಪಾರಿನಲ್ಲಿ ಅಡಗಿ ಚುರುಟಿ ಕುಳಿತುಬಿಡುತ್ತವೆ. ಕೈ ಕಾಲುಗಳ ಎಚ್ಚರ ಮನುಷ್ಯರಿಗಿದ್ದರೆ ಅವು ಪಾಪದವು. ಹೊಳೆನೀರು ಇಳಿದ ನಂತರ ತಮ್ಮ ಪಾಡಿಗೆ ಹೊರಟು ಹೋಗುತ್ತವೆ. ಒಮ್ಮೆ ಬಾಯಮ್ಮನ ಕೊನೆ ಮಗ ಹೆಡೆ ಎತ್ತಿದ ಸರ್ಪಕ್ಕೆ ಕಲ್ಲು ಹೊಡೆದು ಅದನ್ನು ಅಟ್ಟಿಸಿಕೊಂಡು ಹೋಗಿದ್ದ. ಅದು ಮೂರುದಿನ ಅವರ ಮನೆ ಪಾಗಾರದಾಚೆ ಅವನಿಗಾಗಿ ಕಾದು ಕುಳಿತು ಹೊರ ಬಂದರೆ ಕಚ್ಚುವೆ ಎಂಬಂತೆ ಭೀತಿ ಹುಟ್ಟಿಸಿತ್ತಲ್ಲ. ಹಾವು ಅಂತ ಒಂದೇ ಅಲ್ಲ, ಬಿಸಿಲಿಗೆ ಹಾಕಿದ ತೆಂಗಿನಕಾಯಿಗೆ ಕಾಗೆ ಹಿಂಡು ಬಂದಿತೆಂದು ಲಿಂಗಪ್ಪ ಕಲ್ಲು ದೊಣ್ಣೆ ಬೀಸಿ ಒಂದು ಕಾಗೆಯನ್ನು ಕೊಂದಿದ್ದ. ಅದೆಲ್ಲಿತ್ತೋ ಇನ್ನೊಂದು ಕಾಗೆ? ಒಂದಷ್ಟು ದಿನ ಅವನು ಹೋದಲ್ಲೆಲ್ಲ ಹಿಂಬಾಲಿಸಿ ಅವನ ಸುತ್ತಮುತ್ತ ತಿರು ತಿರುಗಿ ಮಂಡೆಗೇ ಕುಕ್ಕುತ್ತಿತ್ತು. ಅದರಿಂದ ತಪ್ಪಿಸಿಕೊಳ್ಳಲು ಮುಂಡಾಸುಕಟ್ಟಿ ಹರಸಾಹಸ ಮಾಡುತ್ತಿದ್ದ. ಮಾತು ಬರದಿದ್ದರೂ ಭಾವ ಇದೆಯಲ್ಲ.

ಇದೆಲ್ಲ ನೆನಪಿಗೆ ಬಂದು ಹಾವನ್ನು ಹೊಡೆಯಲು ಎತ್ತಿದ ಕಲ್ಲನ್ನು ನಾಣಿ ಕೆಳಗೆಸೆದ. ಮೋತಿ ತಾನೂ ವಿಶೇಷ ಕಂಡಂತೆ ಬಾಯಿ ನೋಯುವಷ್ಟು ಬೊಗಳಿ ಹಿಂದೆ ಸರಿದು ಇವರನ್ನು ಮೂರು ಸುತ್ತು ಬಂದಿತು. ಆ ದಿನವೆಲ್ಲ ಮನೆಯಲ್ಲಿ ಹಾವುಗಳದೇ ಸುದ್ದಿ. ಈ ಕಾಲದಲ್ಲಿ ಹಾವುಗಳು ಜೋಡಿಯಾಗುವುದು ಕಡಿಮೆ. ಸಾಮಾನ್ಯವಾಗಿ ಮೊಟ್ಟೆ, ಮರಿ ಇಡುವ ಸಮಯ. ಇವಕ್ಕೆ ಅಕಸ್ಮಾತ್ ಕಾಣಲು ಸಿಕ್ಕಿದೆ. ಸಧ್ಯ ತಂಟೆ ಮಾಡದೆ ಬಂದರಲ್ಲ. "ಇನ್ಮೇಲೆ ಮಳೆ ತಗ್ಗು ತನಕ ಹೊಳೆ ತೋಟ ಗದ್ದೆಗೆ ಹ್ವಾಪಾಗ ಚೂರು ಜಾಗ್ರತೆ ಮಾಡ್ಕಳಿ." ಅಜ್ಜಮ್ಮ ಗದರಿದಳು.

ಅಕ್ಕನತ್ತ ಕಣ್ಣು ಹೊಡೆದ ನಾಣಿ, "ಹೆಬ್ಬಾವು ಬಂದರೆ?"

ಅಜ್ಜಮ್ಮ ತಲೆಗೆ ಮೊಟಕಿದಳು, "ನಿನ್ನನ್ನೇ ನುಂಗಿ ಬಿಡುಗು ಮೂರ್ಕಾಸಿನ ಹುಡುಗಾ!"

ಹೆಬ್ಬಾವು ಎನ್ನುವಾಗ ಕೆಲವು ಸಮಯದ ಹಿಂದೆ ತಮ್ಮ ಬಚ್ಚಲುಮನೆಯ ಸವುದೆ ರಾಶಿಯಲ್ಲಿ ದೊಡ್ಡ ಗಾತ್ರದ ಮೊಟ್ಟೆಗಳು ಕಾಣಸಿಕ್ಕಿದ್ದು ನೆನಪಿಗೆ ಬಂತು. ಒಂದೆರಡಲ್ಲ, ರಾಶಿ ಮೊಟ್ಟೆಗಳು. ಮೊಟ್ಟೆ ಇದ್ದಲ್ಲಿ ಹಾವು ಇರಬೇಕಲ್ಲ? ಸುಬ್ಬಪ್ಪಯ್ಯ ಉಪ್ಪುಂದದ ಒಬ್ಬ ಹಾವು ಹಿಡಿಯುವವನ್ನು ಕರೆಯಿಸಿದ್ದರು.ಅವು ಹೆಬ್ಬಾವಿನ ಮೊಟ್ಟೆಗಳೆಂದು ಗುರುತಿಸಿದ ಅವನು ಬಹಳ ಹೊತ್ತು ಸವುದೆ ರಾಶಿ, ಬಚ್ಚಲಿನ ಹಿಂದೆ ಮುಂದೆ ಹುಡುಕಿದರೂ ಹೆಬ್ಬಾವನ್ನು ಕಾಣದೆ ಕೊನೆಗೆ ಎಲ್ಲಾ ಮೊಟ್ಟೆಗಳನ್ನು ತೆಕ್ಕೊಂಡು ಹೋಗಿದ್ದ.ಹೆಬ್ಬಾವು ಇಲ್ಲೇ ಹತ್ರ ನಮ್ಗೆ ಕಾಣದಾಂಗೆ ಚುರುಟಿ ಮಲಗಿಕ್ಕು. ಅನುಮಾನ ಬಂದ ಅಜ್ಜಮ್ಮ ಅದೇ ದಿನ ಬಚ್ಚಲುಮನೆಯಲ್ಲಿ ಪೇರಿಸಿಟ್ಟ ಸವುದೆ ರಾಶಿಯನ್ನು ಬೇರೆ ಕಡೆ ಒತ್ತರಿಸಿಟ್ಟಿದ್ದಳು. ಅವು ಪೂರಾ ಮರಿಯಾಗಿ ಹೊರ ಬಂದಿದ್ದರೆ? ಈಗ ನೆನಪಿಸಿದರೆ ಅಕ್ಕ ತಮ್ಮನಿಗೆ ಭಯದಿಂದ ಮೈಯ್ಯಲ್ಲಿ ಚಳಿಯ ನಡುಕ. ಸುಮ್ಮನೆ ಹೇಳ್ಲಿಲ್ಲ ಅಜ್ಜಮ್ಮ, ಯಾರದೋ ಮನೆಯ ಅಂಗಳಕ್ಕೆ ಬಂದ ಹೆಬ್ಬಾವು ಆಡಿನ ಮರಿಯನ್ನೇ ನುಂಗಿದ ಕಥೆಯನ್ನು.

"ಹೆಬ್ಬಾವು, ಹಾವುಗಳನ್ನು, ಸರ್ಪಗಳನ್ನು ನಾವು ಕೆಣಕದಿದ್ದರೆ ಅವು ಎಂತ ಮಾಡೂದು ಇಲ್ಲೆ. ಪ್ರಕೃತಿಯಲ್ಲಿ ಬದುಕುವ ಹಕ್ಕು ನಮ್ಮಂತೆ ಅವಕ್ಕೂ ಇವೆ" ಎನ್ನುವ ಆಯಿ ಕೊಂಬೆಚೇಳು, ಜರಿಚೇಳು, ಹಲ್ಲಿ ಕಂಡಲ್ಲಿ ಕೊಲ್ಲದೆ ಹೊರಗೆ ಬಿಟ್ಟುಬಿಡ್ತಾಳೆ. ಹೊಳೆಬದಿಯ ಬದುಕಲ್ಲಿ ಇವೆಲ್ಲ ಮಾಮೂಲು. ಇದೇ ಅಲ್ಲವೆ ಜೀವನ ಪ್ರೀತಿ!

❋❋❋

## ಅಧ್ಯಾಯ –7

ಅಜ್ಜಮ್ಮ ಮಲಗುವ ಕೋಣೆಯ ಮಂಚದ ಕೆಳಗೆ ಚೆನ್ನಾಗಿ ಬಟ್ಟೆಯಲ್ಲಿ ಸುತ್ತಿಟ್ಟ ಒಂದು ಹಾರ್ಮೋನಿಯಮ್ ಪೆಟ್ಟಿಗೆಯಿದೆ. ಇತ್ತೀಚೆಗೆ ಹಲವಾರು ವರ್ಷಗಳಿಂದ ಯಾರೂ ಉಪಯೋಗಿಸದೆ ಮೂಲೆ ತಳ್ಳಿದ ಹಾರ್ಮೋನಿಯಮ್ ಪೆಟ್ಟಿಗೆ ಅದು. ಬಾರಿಸುವವರು ಇಲ್ಲದೆ ಯಾರ ಸ್ಪರ್ಶಕ್ಕೆ ಸಿಗದೆ, ಯಾರ ಗೌರವಕ್ಕೆ ಪಾತ್ರವಾಗದೆ ತೀರ ಅನಾಥವಾಗಿ ಮುದುರಿಕೊಂಡಿದೆ. ಯಾವಾಗಲೋ ಒಂದುದಿನ ಗೌರಿ ನಾಣಿ ಹುಗ್ಗಾಟ ಆಡುವ ಸಂದರ್ಭದಲ್ಲಿ ಮಂಚದಡಿ ಅವಿತುಕೊಂಡ ನಾಣಿಗೆ ಬಟ್ಟೆಯಲ್ಲಿ ಸುತ್ತಿದ ಪೆಟ್ಟಿಗೆ ಕಂಡು ಹೊರ ಎಳೆದು ಬೆಳಕಿಗೆ ತಂದಿಟ್ಟು ಅದರ ಮುಸುಕು ತೆಗೆದಿದ್ದ.

ಅದೇನೆಂದು ಅಕ್ಕ ತಮ್ಮ ಪರೀಕ್ಷೆಯ ನೋಟ ಬೀರುವಾಗ ಸುಬ್ಬಪ್ಪಯ್ಯ ತಾವೇ ನೆಲದ ಮೇಲೆ ಚಕ್ಕಳಮುಕ್ಕಳ ಹಾಕಿ ಕೂತು ಹಾರ್ಮೋನಿಯಂ ಬಾರಿಸಿ ತೋರಿಸಿದ್ದರು. ಇದೊಂದು ವಾದ್ಯ. ಚೆಂದ ಇದ್ದು! ಬಾರಿಸಲು ಖುಷಿ ಅಲ್ಲದಾ? ಮತ್ತೆ ಕೇಳಬೇಕೇ? ಆ ಪೆಟ್ಟಿಗೆ ಕೋಣೆಯಿಂದ ಹೊರ ಮುಖಮಂಟಪಕ್ಕೆ ಬಂದಿತು. ರಾತ್ರೆ ಹಗಲು ಎನ್ನದೆ ಮಕ್ಕಳ ಕೈಗೊಂಬೆಯಾಗಿ ಅವರ ಬೆರಳತುದಿಯ ಸ್ಪರ್ಷದಲ್ಲಿ ಏನೇನೋ ಸ್ವರ ಹೊರಡಿಸುತ್ತ ಹೊಸಜೀವದ ಮೆರಗು ಪಡೆದು ಹಾರ್ಮೋನಿಯಮ್ ವಿಜ್ರಂಭಿಸಿತು. ಮಕ್ಕಳ ಕುತೂಹಲ, ಸುಬ್ಬಪ್ಪಯ್ಯರಿಗೆ ಪ್ರಾಯದ ಉತ್ಸಾಹ. ಅದನ್ನು ಹೇಗೆ ಬಾರಿಸಬೇಕೆಂದು ತೋರಿಸಿಕೊಟ್ಟರು. ನಂತರ ಇಬ್ಬರೂ ತಮಗಿಚ್ಚೆ ಬಂದಂತೆ ಹಾರ್ಮೋನಿಯಂ ಪೆಟ್ಟಿಗೆ ಮೇಲೆ ಬೆರಳು ಒತ್ತಿ ಒತ್ತಿ ಬಾರಿಸಿದ್ದೇ ಬಾರಿಸಿದ್ದು. ಸುಸ್ವರವೋ, ಅಪಸ್ವರವೋ ಹೇಳುವವರು ಯಾರು?

ಆದರೆ ಆಗ ಹೊರಗೆ ಕಟ್ಟಿಹಾಕಿದ ಮೋತಿ ವಿಕಾರ ಸ್ವರದಲ್ಲಿ ಕುಂಯ್ ಕುಂಯ್ ಅರಚುತ್ತಿತ್ತು. ಅದಕ್ಕಿಂತ ಹೆಚ್ಚಾಗಿ ಹಾರ್ಮೋನಿಯಮ್ ಸ್ವರ ಕೇಳಿದಾಕ್ಷಣ ಕಮಲತ್ತೆಯ ಬೊಬ್ಬೆ."ನರಿನಾಯಿ ಊಳಿಟ್ಟಂತೆ ಇದೆಂತದು? ನಿಲ್ಲಿಸಿ" ಕಮಲತ್ತೆ ಎರಡೂ ಕೈಗಳಿಂದ ಕಿವಿ ಮುಚ್ಚುವಾಗ ನಿಲ್ಲಿಸಲೇಬೇಕು. ಪ್ರತಿದಿನ ಇವರು ಬಾರಿಸುವುದು, "ಚೋಟುದ್ದ ಪೋರರಿಗೆ ಪೊಗರು!." ಅವಳು ಕೀರಲು ಸ್ವರದಲ್ಲಿ ತಡೆಯುವುದು.ಎಷ್ಟು ದಿನ ಹೀಗೆ? ಅವಳು ತಡೆದಷ್ಟೂ ಗೌರಿ, ನಾಣಿಗೆ ಬಾರಿಸುವ ಉಮೇದು. ರಾಗಜ್ಞಾನ ಇಲ್ಲದಿದ್ದರೇನಂತೆ, ಸಾ, ಪಾ, ಧಾ ಇನ್ನೂ ಏನೇನೋ ಸ್ವರ ಬರುತ್ತದಲ್ಲ ಸಾಕು ಅಷ್ಟೇ. ಚಕ್ರಿ ಅಮ್ಮಮ್ಮನ ಮನೆಗೆ ಹೋದಾಗ ಜಾತ್ರೆ ಸಮಯ ದೇವಸ್ಥಾನದಲ್ಲಿ ಕೆಲವು ಹಾಡುಗಾರರು ಇಂತಹದೇ ವಾದ್ಯಪೆಟ್ಟಿಗೆ ಹಿಡಿದು ಹಾಡುವುದನ್ನು ನೋಡಿದ್ದಾರೆ. ತಮ್ಮ ಪ್ರಾಯದ ಪೋರರು ಆ ಪೆಟ್ಟಿಗೆ ಭುಜಕ್ಕೇರಿಸಿ ಕೈಬೆರಳಲ್ಲಿ ಬಾರಿಸುತ್ತ ಮನೆ ಮನೆಗೂ ಹಾಡುತ್ತ ಬಂದರೆ ಕೇಳಿದವರು ಒಂದೆರಡು ಕಾಸು ಕೊಡುತ್ತಾರೆ. ಅಂತಹ ಜಾದೂ ಪೆಟ್ಟಿಗೆ ಬೆರಳಿನಿಂದ ಮುಟ್ಟಿದರೆ ಸ್ವರ ತೆಗೆಯುವ ಪೆಟ್ಟಿಗೆ ನಮ್ಮ ಮನೆಯಲ್ಲಿದೆ! ಈ ತನಕ ಒಬ್ಬರೂ ಬಾರಿಸಿದ್ದು ಕೇಳಿಯೇ ಇಲ್ಲ. ಕಮಲತ್ತೆಗೆ ಚೇಳು ಕಚ್ಚಿದಂತೆ ಅಸಹನೆ?ಒಂದು ದಿನ ನಿಜವಾಗಿಯೂ ಕಮಲತ್ತೆ, "ನನ್ನ ಮುಂದೆ ನುಡಿಸಿದರೆ ಎತ್ತಿ ತೋಡಿಗೆ ಬಿಸಾಕ್ತೆ" ಎಂದು ಹಾರ್ಮೋನಿಯಮ್ ಹಿಡಿದೆಳೆದಾಗ ಆಯಿ ಗದರಿದಳು,

"ಗೌರಿ, ನಿಂಗೂ ಎಂತಕ್ಕೆ ಹಠ? ಕತ್ತೆ ರಾಗದಲ್ಲಿ ನೀ ಬಾರಿಸಿದ್ರೆ ನಮ್ಮ ಕೆಮಿಯೂ ಕೆಪ್ಪಾಗ್ತು. ತೆಗೆದು ಒಳಗಿಡು"

ಸಿಟ್ಟು ಮಾಡಿದ ಆಯಿಗೆ ಅನಂತರ ಬಹಳ ಬೇಜಾರಾಗಿತ್ತು. ಗೌರಿಯನ್ನು ತಬ್ಬಿದ ಆಯಿಯಲ್ಲಿ ಹೇಳಲಾಗದ, ಚೋಟುದ್ದ ಪೋರಿಗೆ ಹೇಳಲೇಬೇಕಾದ ಅದೆಷ್ಟೋ

ಸಂಗತಿಗಳಿದ್ದವು. ಯಾವ ರಾಯನ ಕಾಲದಿಂದಲೋ ಈ ಮನೆತನದ ಅಮೂಲ್ಯ ಸೊತ್ತು ಹಾರ್ಮೋನಿಯಮ್.ಸುಬ್ಬಪ್ಪಯ್ಯನ ಅಪ್ಪ, ಅವರ ತಂದೆ ಎಲ್ಲರೂ ಹಾರ್ಮೋನಿಯಮ್ ಕಲಿತವರೇ. ಸಂಗೀತದ ರಾಗಜ್ಞಾನ ಇದ್ದವರು, ಇಲ್ಲದವರು ಎಲ್ಲರೂ ಬಾರಿಸುವವರು. ಹಿಂದಿನ ಆದಿನಗಳಲ್ಲಿ ಹಾರ್ಮೋನಿಯಮ್ ಇದ್ದರೆ ಮನೆತನಕ್ಕೂ ಶೋಭೆ. ಸುಬ್ಬಪ್ಪಯ್ಯರೂ ಚೆನ್ನಾಗಿ ಬಾರಿಸುವವರು. ತಮ್ಮ ಮಕ್ಕಳಿಗೂ ಆಸ್ಥೆಯಿಂದ ಕಲಿಸಲು ಇಚ್ಚಿಸಿದರೆ ಕಮಲತ್ತೆಯ ಹೊರತಾಗಿ ಉಳಿದವರು ಹಾರ್ಮೋನಿಯಮ್‌ನಲ್ಲಿ ಆಸಕ್ತಿ ತೋರಿಸಲೇ ಇಲ್ಲ. ಕಮಲತ್ತೆ ತನ್ನ ಐದರ ಪ್ರಾಯದಿಂದಲೇ ತಂದೆಯಿಂದ ದಾಸರ ಪದಗಳನ್ನು, ಭಜನೆ ಹಾಡುಗಳನ್ನು ಕಲಿಯುತ್ತ ಸುಶ್ರಾವ್ಯವಾಗಿ ಹಾರ್ಮೋನಿಯಮ್ ಬಾರಿಸುತ್ತಿದ್ದಳು. ಪ್ರತಿದಿನ ಸಂಜೆ ದೇವರ ಭಜನೆ ಮಾಡುವಾಗ ಸುಬ್ಬಪ್ಪಯ್ಯರ ಹಾಡು, ಕಮಲಿಯ ಹಾರ್ಮೋನಿಯಮ್ ಜೊತೆಯಾದರೆ ಒಂದು ತರಹ ಭಕ್ತಿ ವಾತಾವರಣ.ಸುಬ್ಬಪ್ಪಯ್ಯರಿಗೆ ತಾಳಮದ್ದಳೆ ಹುಚ್ಚು ಇತ್ತು. ಆ ಊರಲ್ಲಿ ನಡೆಯುವ ತಾಳಮದ್ದಳೆಗೆ ಅವರ ಹಾರ್ಮೋನಿಯಮ್‌ನದೇ ಬಳಕೆ. ಸುಬ್ಬಪ್ಪಯ್ಯ ಭಾಗವತರ ಜೊತೆಗೇ ಕುಳಿತು ಬಾರಿಸುತ್ತಿದ್ದರು ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಪ್ರತಿ ನವರಾತ್ರೆಯ ಒಂಬತ್ತು ದಿನಗಳು, ರಥೋತ್ಸವ ಸಂದರ್ಭ, ವಿಶೇಷ ಪೂಜಾ ಕಟ್ಟಳೆಗಳು ಇರುವಾಗ ಸಂಜೆ ಭಕ್ತಿಗೀತೆಗಳಿಗೆ ಹಾರ್ಮೋನಿಯಮ್ ಸೇವೆ ಸುಬ್ಬಪ್ಪಯ್ಯರದು. ಹೆಚ್ಚಾಗಿ ದಾಸರ ಪದಗಳೇ ಇರುತ್ತಿತ್ತು. ಕಮಲತ್ತೆಗೆ ಹಾರ್ಮೋನಿಯಮ್ ಚೆನ್ನಾಗಿ ಅಭ್ಯಾಸ ಆದನಂತರ ತಂದೆಯ ಜೊತೆ ದೇವಸ್ಥಾನದಲ್ಲಿ ಬಾರಿಸುವುದು ಖಾಯಂ ಆಯಿತು. ಆವಾಗ "ಇವಳು ನನ್ನ ಮಗಳು" ಎಂದು ಎಲ್ಲರಿಗೂ ಪರಿಚಯಿಸಲು ಸುಬ್ಬಪ್ಪಯ್ಯರಿಗೆ ಬಹಳ ಹೆಮ್ಮೆ.

ಇವೆಲ್ಲ ಆಯಿಯಿಂದ ಗೌರಿಗೆ ತಿಳಿದ ಸಂಗತಿಗಳು. ಕಮಲತ್ತೆಗೆ ಮದುವೆ ಎಂಟರ ಪ್ರಾಯದಲ್ಲಿ ಆಗಿತ್ತು. ಆದರೆ ಮೈ ನೆರೆದು ಪ್ರಸ್ತವಾಗದೆ ಗಂಡನ ಮನೆಗೆ ಹೋಗುವಂತಿಲ್ಲ. ಅವಳು ಹೊಳೆಬಾಗಿಲು ಮನೆಯಲ್ಲೇ ಉಳಿದಳು.ಆ ನಂತರ ಅವಳ ಹಾರ್ಮೋನಿಯಮ್ ಬಾರಿಸುವಿಕೆ ಇನ್ನೂ ರಂಗೇರಿತು. ಕೆಂಪು ಪಟ್ಟೆದಾರದ ತಾಳಿಯ ಜೊತೆ ಚಿನ್ನದ ಕರಿಮಣಿ, ಕಿವಿಗೆ ಕುತ್ತಿಗೆಗೆ ಚಿನ್ನದ ಹೊಸ ಆಭರಣಗಳು, ಮದರಂಗಿ ಹಚ್ಚಿದ ಕಾಲ್ಗಳಿಗೆ ಗೆಜ್ಜೆ, ಚೆಂದದ ಸೀರೆಯುಟ್ಟು ದೇವಸ್ಥಾನದಲ್ಲಿ ಕುಳಿತರೆ ಸಾಕ್ಷಾತ್ ಅನ್ನಪೂರ್ಣೇಶ್ವರಿದೇವಿಯೇ!"ಇನ್ನೂ ಚಿಕ್ಕ ಬಾಲೆ, ಎಂತ ಲಾಯಕ್ ಬಾರ್ಸುತ್ತಳು. ಕಾಂಬಕೂ ಚೆಂದ. ಮೊಗ್ಗು ಬಿರಿದಾಂಗೆ ನಗು ಕಾಣು, ತಲೆಬಾಗಕ್ಕು ನಾವು" ಎನ್ನುತ್ತಿದ್ದರು ನೆರೆದ ಭಕ್ತರು. ಸುಬ್ಬಪ್ಪಯ್ಯ ಅಲ್ಲದೆ ಬೇರೆ ಹಾಡುವವರು ಬಂದು ಕುಳಿತರೆ ಅವರ ಸ್ವರಕ್ಕೂ ಶೃತಿ ಸರಿಪಡಿಸಿ ಬಾರಿಸುವಾಗ ಶ್ರೋತೃಗಳು ತಲೆದೂಗುತ್ತಿದ್ದರು."ಸೌಭಾಗ್ಯವತೀ

ಭವ" ಮುಖ್ಯ ಅರ್ಚಕರು ಆಶೀರ್ವದಿಸಿ ಫಲ ಮಂತ್ರಾಕ್ಷತೆ ಕೊಡುವಾಗ ಸುಬ್ಬಪ್ಪಯ್ಯರಿಗೆ ಧನ್ಯತಾಭಾವ.

ಈ ಸಂತೋಷದಲ್ಲಿ ಐದಾರು ವರ್ಷಗಳು ಕಳೆದ ನಂತರ ಕಮಲತ್ತೆ ಗಂಡನ ಮನೆಗೆ ಹೋದವಳು ಕೇವಲ ಎರಡೇ ತಿಂಗಳಲ್ಲಿ ತವರಿಗೆ ಹಿಂದಿರುಗಿದ್ದು ವಿಧಿಯಾಟ. ಮೊದಲಿನಂತೆ ಮನೆ ಭಜನೆಯಲ್ಲಿ ಹಾರ್ಮೋನಿಯಂ ಬಾರಿಸುವುದು ನಿಂತು ಹೋಯಿತು. ಗಂಡನ ವರ್ಷಾಂತಿಕ ಮುಗಿದ ನಂತರ ಅವಳು ಹಾಡುವ, ಹಾರ್ಮೋನಿಯಮ್ ಬಾರಿಸುವ ನಿರೀಕ್ಷೆ ಇತ್ತು ಸುಬ್ಬಪ್ಪಯ್ಯರಿಗೆ. ಆದರೆ ಅವಳು ಅತ್ತ ಕಣ್ಣೆತ್ತಿಯೂ ನೋಡಲಿಲ್ಲ. ಒಮ್ಮೆ ಸುಬ್ಬಪ್ಪಯ್ಯ ಹಾರ್ಮೋನಿಯಂ ಪೆಟ್ಟಿಗೆ ಅವಳ ಮುಂದಿಟ್ಟು ಬಗ್ಗಿದ್ದ,"ದೇವರ ನಾಮ ಹಾಡು ಮಗಳೇ. ಬೇರೆಯವರಿಗೆ ಅಲ್ಲ, ನಿನ್ನ ನೋವು, ದುಃಖ ಮರೆಯೂದಕ್ಕೆ"

ತಂದೆಯ ಬಲವಂತಕ್ಕೆ ಹಾರ್ಮೋನಿಯಂ ಹಿಡಿದು, "ಕರುಣಾಕರ ನೀನೆನ್ನುವುದೇತಕೋ। ಭರವಸೆ ಇಲ್ಲವೆನಗೆ।" ಹಾಡುತ್ತ ಬಾರಿಸುತ್ತ ಕಣ್ಣು ತುಂಬಾ ನೀರು. ಅರ್ಧಕ್ಕೆ ನಿಲ್ಲಿಸಿ ಬಿಕ್ಕಿ ಬಿಕ್ಕಿ ಅಳು. ಅಂದೇ ಕೊನೆ, ಕಮಲತ್ತೆಗೆ ಅದನ್ನು ಕಂಡರೆ ಸಾಕು, ಮೈ ಉರಿ. ಈಗ ದೇವಸ್ಥಾನದ ಕಾರ್ಯಕಟ್ಟಳೆಯಿಂದ ದೂರ ಉಳಿದ ಸುಬ್ಬಪ್ಪಯ್ಯರೂ ಮೌನಿ. ಪ್ರಧಾನ ಅರ್ಚಕರು ಮನೆ ತನಕ ಬಂದು, "ಸುಬ್ಬಪ್ಪಯ್ಯನವರೆ, ನಿಮ್ಮ ಹಾಡು, ಕಮಲಿಯ ಹಾರ್ಮೋನಿಯಂ ಸೇವೆಯಾದರೆ ಅನ್ನಪೂರ್ಣೇಶ್ವರಿ ದೇವಿಗೂ ತೃಪ್ತಿ. ಇಲ್ಲ ಅನ್ನಬೇಡಿ. ತಾಯೀ, ನೀನು ಮರೆಯಲ್ಲಿ ಕುಳಿತು ಹಾರ್ಮೋನಿಯಂ ಬಾರ್ಸು. ಜನ ಕೇಳ್ತಾರೆ. ಇಲ್ಲ ಅನ್ನಬೇಡ"ಕೈಮುಗಿದು ಕಮಲಿಯನ್ನೇ ಬೇಡಿಕೊಂಡರು.

ಅವರ ಬೇಡಿಕೆ ವ್ಯರ್ಥವಾಯಿತು. ಇದಕ್ಕೆಲ್ಲ ಸಾಕ್ಷಿಯಾದ ಅಪ್ಪಯ್ಯ, ಸೀತು ದೊಡ್ಡಪ್ಪ, ರಘು ದೊಡ್ಡಪ್ಪ ತಾವೂ ಮೌನ ತಳೆದರು. ಹೋಗಲಿ, ಇನ್ನಾದರೂ ಮನೆತನದ ಪ್ರತಿಷ್ಠೆ ಉಳಿಸಲು ಹಾರ್ಮೋನಿಯಂ ಸ್ವಲ್ಪ ಅಭ್ಯಾಸ ಮಾಡಬಹುದಿತ್ತು. ದೂರದ ಊರುಗಳಲ್ಲಿ ಇದ್ದರೇನಂತೆ, ನವರಾತ್ರೆ, ರಥೋತ್ಸವಕ್ಕೆ ಒಂದು ದಿನದ ಪ್ರಸಾದ ಸ್ವೀಕಾರಕ್ಕೆ ಬಂದಾಗ ಈ ವಾದ್ಯದ ಸೇವೆ ಮಾಡಿದರಾಯ್ತು. ಅಪ್ಪಯ್ಯ ಒಬ್ಬ ಇದ್ದ, ಅವನಿಗೂ ವಾದ್ಯ ಮಾರುದೂರ. ಈ ಎಲ್ಲ ಕಾರಣಗಳಿಂದ ಹಾರ್ಮೋನಿಯಂ ಅಟ್ಟದ ಮೂಲೆಯ ಹಳೆ ಸಾಮಾನುಗಳ ರಾಶಿಯಲ್ಲಿ ಹುದುಗಿ ಹೋಯಿತು. ಯಾವಾಗ ಸುಶೀಲಚಿಕ್ಕಿ ತನ್ನ ವಾಸಕ್ಕೆ ಅಟ್ಟವನ್ನು ಆಯ್ಕೆ ಮಾಡಿದಳೋ ಆಗ ಹಳೆ ಸಾಮಾನುಗಳ ಪೈಕಿ ಕೆಲವನ್ನು ಸ್ಥಳಾಂತರಿಸುವಾಗ ಹಾರ್ಮೋನಿಯಂ ಅಜ್ಜಮ್ಮನ ಮಂಚದ ಅಡಿಗೆ ಪ್ರತಿಷ್ಠಿತವಾಗಿತ್ತು. ಅದು ಹೊರ ಬರಲು ಮಕ್ಕಳ ಹುಗ್ಗಾಟ ಒಂದು ನೆಪ.

"ಪಾಪ ಅನ್ನುತ್ತು ನಿನ್ನ ಕಮಲತ್ತೆಯನ್ನು ಕಾಂಬಾಗ ಗೌರಿ, ನೀವಿನ್ನು ಅವಳಿಗೆ ಕೇಳುವ ಹಾಂಗೆ ಬಾರ್ಸಬೇಡಿ" ಹೇಳಿದ ಆಯಿಗೆ ಮಾವ ಹೇಳಿಕೊಟ್ಟರೆ ಗೌರಿಯೂ ಹಾರ್ಮೋನಿಯಂ ಬಾರಿಸಬಲ್ಲಳೆಂದು ಖಚಿತವಾಗಿತ್ತು. ಆದರೆ ಅವರೂ ಕಲಿಸುವ ಉಮೇದು ತೋರಿಸಲಿಲ್ಲ. ಸ್ವರ ಅಪಸ್ವರವಾಗಿ ಬಾರಿಸುವಾಗ ದಿಟವಾಗಿಯೂ ಮೋತಿ ವಿಕಾರ ಸ್ವರದಲ್ಲಿ ಕೂಗಿಕೊಳ್ಳುತ್ತದೆ. ಕಮಲತ್ತೆಯದೂ ಬೊಬ್ಬೆ.

ಇರಲಿ, ಅವಳು ಮನೆಯಿಂದ ಹೊರ ಹೋದ ಸಂದರ್ಭದಲ್ಲಿ ಗೌರಿ ಸುಮ್ಮನಿರುವವಳಲ್ಲ. ಹಾರ್ಮೋನಿಯಂ ಮುಂದಿಟ್ಟುಕೊಳ್ಳುತ್ತಾಳೆ. ಆ ಹೊತ್ತಿಗೆ ನಾಣಿಗೂ ಐಲು ತಲೆಗೇರಿ ಯಕ್ಷಗಾನದ ತಥ್ ಥೈ,ತಥ್‌ಥೈ ಕುಣಿತವೇ ಕುಣಿತ. "ನೋಡಕ್ಕ, ನನ್ನನ್ನು ಯಕ್ಷಗಾನದಲ್ಲಿ ರಾಮ ಪಾತ್ರದಾರಿ ಕುಣಿದಂತೆ ಕಾಂತಿಲ್ಲೆಯಾ? ದೊಡ್ಡ ಸ್ವರದಲ್ಲಿ ನೀ ಬಾರ್ಸು. ನಾ ರಾಕ್ಷಸನಂತೆ ಕುಣಿವೆ" ಎನ್ನುವ. ಅವರಿಬ್ಬರನ್ನು ಕಂಡು ಆಯಿ ಅಡಿಗೆ ಮರೆತು ಮನಃಪೂರ್ವಕ ನಗುತ್ತಾಳೆ. ಅಜ್ಜಮ್ಮ ಕವಳ ಹಾಕಿಕೊಳ್ಳುತ್ತ ಆನಂದಿಸುತ್ತಾಳೆ. ಈಗೀಗ ಸಂಜೆ ಭಜನೆಯಲ್ಲಿ ಹಾಡುವ "ಭಾಗ್ಯದ ಲಕ್ಷ್ಮಿ ಬಾರಮ್ಮಾ, ನಮ್ಮಮ್ಮಾ ನೀ ಸೌಭಾಗ್ಯದ ಲಕ್ಷ್ಮಿ ಬಾರಮ್ಮಾ""ತಾರಕ್ಕ ಬಿಂದಿಗೆ ನಾ ನೀರಿಗೆ ಹೋಗುವೆ ತಾರೆ ಬಿಂದಿಗೆಯಾ" ಪದಗಳನ್ನು ಗೌರಿ ಹಾಡುತ್ತಾಳೆ. ಹಾರ್ಮೋನಿಯಂ? ಊಹೂಂ, ಹೊರಗೆ ಬಾಗಿಲು ಬಳಿಗೆ ಕುಳಿತ ಕಮಲತ್ತೆಗಾಗಿ ಅದು ಮೌನದ ಮುಸುಕಿನಲ್ಲಿ. "ಯಾರ ಮನಸ್ಸು ನಮ್ಮಿಂದ ಮುಳ್ಳು ಚುಚ್ಚಿದಂಗೆ ನೋಯೂಕಾಗ ಗೌರಿ. ಇನ್ನೊಬ್ಬರ ಇಚ್ಚೆ ಅರಿತು ನಡೆವಲೆ ಕಲ್ತರೆ ನಮಗೇ ಒಳ್ಳೇದು, ನೆನಪಿಟ್ಟುಕಾ"ಸಮಜಾಯಿಸಿ ಬುದ್ಧಿ ಹೇಳುತ್ತಿದ್ದಳು ಆಯಿ.

ಆವತ್ತು ಒಂದುದಿನ ಹೆರಿಯಮ್ಮನ ಮನೇಲಿ ಪೂಜೆ ಎಂದು ಆಯಿ, ಕಮಲತ್ತೆ ಹೋಗಿದ್ದರು. ನಾಲ್ಕು ದಿನ ಅಲ್ಲೇ ಉಳಿದು ಬರುವವರು. ಹೆರಿಯಮ್ಮ ಚಕ್ರಿ ಅಮ್ಮಮ್ಮನ ಹಿರಿ ಅಕ್ಕ. ವಯಸ್ಸಾದ ಜೀವ. "ಮಡಿ ಅಮ್ಮಮ್ಮ" ಬಂಧುಗಳು ಅವರಿಗಿಟ್ಟ ಹೆಸರು! ಮಡಿಅಮ್ಮಮ್ಮನ ಮನೇಲಿ ಯಾವ ಕಾರ್ಯಕಟ್ಟಲೆ ಇದ್ದರೂ ಆಯಿಗೆ ಕರೆ ಬರುತ್ತಿತ್ತು. ಹೊಳೆಬಾಗಿಲು ಕುದ್ರುವಿನಂತೆ ಅದೂ ಒಂದು ಸಣ್ಣ ಕುದ್ರು. ಆ ಜಾಗಕ್ಕೆ ಹೋಗಲು ದಾರಿಗಳಿವೆ, ದೋಣಿಯೂ ಇದೆ. ಸಾಸ್ತಾನದ ತನಕ ದೋಣಿಯಲ್ಲಿ ಹೋಗಿ ಅಲ್ಲಿಂದ ಎರಡು ಅಳವೆ ಕಿರು ದೋಣಿಯಲ್ಲಿ ದಾಟಿದರೆ ಹೊರಳಿಸಾಲು ಸಿಗುತ್ತದೆ. ಗೋವೆ ಮರಗಳ ಸಾಲುಗಳ ಮಧ್ಯೆ ನಡೆದು ಹೋದರೂ ಹೊರಳಿಸಾಲು ದೂರವೇನಲ್ಲ. ಬರೀ ಕುಗ್ರಾಮ. ಆಯಿ ಕರೆ ಬಂದಾಕ್ಷಣ ಖುಷಿಯಲ್ಲಿ ಮೈ ತುಂಬ ಚಿನ್ನದ ಒಡವೆಗಳನ್ನು ತೊಟ್ಟು ಮದುಮಗಳಂತೆ ಶೃಂಗಾರದಲ್ಲಿ ಹೋಗಿಬರುತ್ತಾಳೆ. ಕಮಲತ್ತೆಯನ್ನೂ ಒತ್ತಾಯಿಸಿ ಕರೆದೊಯ್ಯುತ್ತಾಳೆ. ಪಾಪ, ಅವಳಿಗೂ ಸ್ವಲ್ಪ ಬದಲಾವಣೆ ಇರಲಿ ಎಂಬ ಕನಿಕರ.

ಕಮಲತ್ತೆ ಹೊರಟರೆ ಗೌರಿ, ನಾಣಿ ಮನೆಯಲ್ಲಿರಬೇಕು. ಒಳ್ಳೆಯದೇ ಆಯಿತು ಗೌರಿಗೆ. ಅವರು ಅತ್ತ ಹೋದದ್ದೇ ಸೈ, ಹಾರ್ಮೋನಿಯಂಗೆ ಎಲ್ಲಿಲ್ಲದ ಸಂಭ್ರಮ. ಗೌರಿ ಕೈಗಳಿಗೆ ಉತ್ಸಾಹದ ಮೋಡಿ. ನಾಣಿಯ ಹೆಜ್ಜೆಗಳಿಗೆ ಕುಣಿತದ ಲಾಸ್ಯ. ಅವರ ಉಮೇದು ಅರಿತಿದ್ದ ಅಜ್ಜಮ್ಮ, "ಶರಾವತಿ, ನೀವು ನಾಲ್ಕು ದಿನ ಹೆಚ್ಚೇ ಉಳಿದು ಬನ್ನಿ" ಎಂದಿದ್ದಳು.

ಈ ನಡುವೆ ಗೌರಿಗೆ ಚಿತ್ರ ಬಿಡಿಸುವ ಹುಚ್ಚು ಹೆಚ್ಚಿತ್ತು. ಪ್ರಾಣಿಗಳ ಚಿತ್ರ ಮನೆ ಚಿತ್ರ, ಹಳ್ಳಿಗಳ ದೃಶ್ಯ, ಹೊಳೆಗಳು ಮರ ಗಿಡಗಳು ಬಿಡಿಸಲು ಹೇಳಿಕೊಟ್ಟಿದ್ದಾಳೆ ಸುಶೀಲಚಿಕ್ಕಿ. ಅಕ್ಕ ತಮ್ಮನನ್ನು ಹೊಳೆ ಬದು, ಗದ್ದೆ ಬಯಲು ಆಗಸ ಮುಗಿಲು, ಇತ್ಯಾದಿ ತೋರಿಸಿ, "ಇದನ್ನೆಲ್ಲ ಮನನ ಮಾಡು ಗೌರಿ. ಇವು ನಿನ್ನ ಮನದಲ್ಲಿ ಅಚ್ಚೊತ್ತಿದರೆ ಬಿಡಿಸುವ ಚಿತ್ರಗಳಿಗೂ ಅರ್ಥ ತುಂಬ್ತು" ಎನ್ನುವಳು. ಬಣ್ಣ ಬಣ್ಣದ ಪೆನ್ಸಿಲ್, ಕಾಗದಗಳು, ವಾಟರ್ ಕಲರ್ ಕುಂಚಗಳು, ಇಂಗ್ಲೀಷ್ ಪುಸ್ತಕಗಳು ಬಂದಿವೆ. ಎ.ಬಿ.ಸಿ.ಡಿ. ಅಕ್ಷರಗಳನ್ನು ಬರೆಯಲು ಓದಲು ಕಲಿಸುವಳು. ಕೈ ಹಿಡಿದು ತಿದ್ದಿಸುವಳು. ಬಣ್ಣದ ಚಿತ್ರಗಳಿಗೆ ಇಂಗ್ಲೀಷ್ ಹೆಸರುಗಳನ್ನು ಹೇಳಿಸುವಳು. ಸುಶೀಲಚಿಕ್ಕಿ ಜೊತೆ ಹೊತ್ತು ಹೋದದ್ದು ತಿಳಿಯುವುದೇ ಇಲ್ಲ. ಮಕ್ಕಳಿಬ್ಬರೂ ಅಟ್ಟದಲ್ಲಿ ಕಾಲ ಕಳೆಯುವಾಗ ಅಜ್ಜಮ್ಮ ಆಯಿಗೆ ಚಾಡಿ ಹೇಳುತ್ತಿದ್ದಳು,

"ಕೋತಿ ತಾನು ಕೆಟ್ಟು ಉಳಿದವರನ್ನೂ ಕೆಡಿಸ್ತು. ಆ ಸುಶೀಲೆಗೆ ಕೆಲ್ಸ ಇಲ್ಲೆ. ನಿನ್ನ ಮಗಳ ತಲೆಗೆ ಎಂತದೆಲ್ಲ ತುಂಬಿ ತಲೆ ಕೆಡಿಸ್ತಾ ಇರ್ತಾಳೆ. ಚೂರು ಕೆಳಗೆ ಕರಿ, ಒಂಚೂರು ಮನೆಕೆಲ್ಸ ಕಲೀಲಿ.ಇಲ್ಲದಿದ್ರೆ ಗಂಡನ ಮನೇಲಿ ಕಷ್ಟ"

"ಗಂಡನ ಮನೆಗೆ ಹ್ವಾದ ಮ್ಯಾಲೆ ಇದ್ದೇ ಇದ್ದು ಕತ್ತೆ ಚಾಕರಿ ಕೆಲ್ಸ. ಎಂತದೋ ಕಲೀತಾ ಇದ್ದು. ಕಲೀಲಿ. ಕೂಸು ನಗ್ತಾ ಇದ್ರೆ ನಮಗೂ ಹಿತ ಅಲ್ಲದಾ?" ಆಯಿ ಮಕ್ಕಳ ಪರ.

ಇವತ್ತು ಆಯಿ ಕಮಲತ್ತೆ ಇಲ್ಲದೆ ಅಜ್ಜಮ್ಮ ಎಷ್ಟು ಕಿರಿಕಿರಿ ಮಾಡುತ್ತಾಳೋ? ಹೆದರಿಯೇ ಗೌರಿ ಪಡಸಾಲೆಗೆ ಹಾರ್ಮೋನಿಯಂ ತಂದಿಟ್ಟು ಬಾರಿಸಲು ಕುಳಿತಿದ್ದಳು. ಎಡಗೈ ನಾಲ್ಕು ಬೆರಳುಗಳಿಂದ ಶೃತಿ ಹಿಡಿದು ಪೆಟ್ಟಿಗೆ ಮೇಲೆ ಬಲ ಹೆಬ್ಬೆರಳನ್ನು ಸಾ ಮೇಲೆ ಒತ್ತಿ ಉಂಗುರದ ಬೆರಳನ್ನು ಪಾ ಮೇಲೆ ಒತ್ತಿ ಬಾರಿಸ ಹೊರಟರೆ ಮತ್ತೆ ಅದೇ ಹಿಂದಿನ ಅಪಸ್ವರ. ಹೇಗೆ ಪಟ್ಟಿಗಳನ್ನು ಒತ್ತುವುದು ತಿಳಿದರೆ ತಾನೇ? ಯಾಕೋ ಅಜ್ಜಯ್ಯ ಹೇಳಿಕೊಡುವುದೇ ಇಲ್ಲ. ಅಸಮಾಧಾನದಲ್ಲಿ ಎಡ ಬೆರಳುಗಳನ್ನು ಎಳೆದೆಳೆದು ಮಾಡುತ್ತ ಬಲ ಬೆರಳಿನಿಂದ ಸಿಕ್ಕಿದ ಕಡೆ ಸ್ವರ ಒತ್ತುತ್ತ, ಹೊರಗೆ ಮೋತಿ ಇನ್ನೂ ಕರ್ಕಶವಾಗಿ ಕುಂಯ್ಯೋ ಎನ್ನುವಾಗ ಅಟ್ಟದಿಂದ ಸರಸರನೆ ಇಳಿದುಬಂದಳು ಸುಶೀಲಚಿಕ್ಕಿ. ನೋಡುತ್ತಾಳೆ ಗೌರಿ ಕೈಯ್ಯಲ್ಲಿ ಹಾರ್ಮೋನಿಯಂ ಪೆಟ್ಟಿಗೆ! ಬಾರಿಸುವ ಪ್ರಯತ್ನ

ನಡೆದಿದೆ. ಅವಳಿಗೋ ಪ್ರಪಂಚದ ಏಳು ಅದ್ಭುತಗಳನ್ನು ಕಂಡಂತೆ ಆಶ್ಚರ್ಯ, ಗೌರಿ ಎದುರು ಕುಕ್ಕುರುಗಾಲಲ್ಲಿ ಕುಳಿತು "ಇದೆಲ್ಲಿಂದ ಗೌರಿ?"ಕೇಳಿದಳು.

ಕಮಲತ್ತೆಯೇ ಬಂದಳೆಂದು ಬೆಚ್ಚಿದ ಗೌರಿಗೆ ಕಾಣಿಸಿದವಳು ಸುಶೀಲಚಿಕ್ಕಿ. ನಗು ಬಂದಿತು. ಆ ನಗುವಿನಲ್ಲಿ ಕಮಲತ್ತೆಯ ಹಾರ್ಮೋನಿಯಂ ವೃತ್ತಾಂತ ಹೊರ ಬಂದು ಅನಂತರ ನಡೆದ ಕಥೆ ಬೇರೆಯೇ. ಒಂದು ವಾದ್ಯಕ್ಕೆ ಇಷ್ಟು ದೊಡ್ಡ ಪ್ರಕರಣವೇ? ಅವಳು ಬಾರಿಸದಿದ್ದರೆ ಹೋಗಲಿ, ಗೌರಿಗೆ ಬೇಡ ಎನ್ನುವುದು ನ್ಯಾಯವೇ? ನಾಣಿ ಕಲಿಯಬೇಡವೇ? ಸುಬ್ಬಪ್ಪಯ್ಯ ಮಗಳಿಗಾಗಿ ಮೊಮ್ಮಕ್ಕಳನ್ನು ಅಲಕ್ಷಿಸುವದುಂಟೇ? ಸುಶೀಲಚಿಕ್ಕಿ ಗೌರಿಯನ್ನು ಬದಿಗೆ ಸರಿಸಿ ಚಕ್ಕಳಮುಕ್ಕಳ ಹಾಕಿ ಕೂತು,"ನಾ ಬಾರಿಸಿ ನೋಡ್ತೆ?" ಎಂದವಳು ಹಾರ್ಮೋನಿಯಂ ಎದುರಿಗಿಟ್ಟು ಕೈ ಮುಗಿದು ಅರೆಗಳಿಗೆ ಕಣ್ಣುಮುಚ್ಚಿಕೊಂಡಳು. ಅವಳ ಬೆರಳುಗಳು ನಿಧಾನವಾಗಿ ಚಲಿಸಿತು ಪೆಟ್ಟಿಗೆಯ ಮೇಲೆ,

"ನಾರಾಯಣ ನಿನ್ನ ನಾಮದ ಸ್ಮರಣೆಯ। ಪಾನಾಮೃತ ಎನ್ನ ನಾಲಿಗೆಗೆ ಬರಲಿ।" ತಾನೇ ಬಾರಿಸುತ್ತ ಹಾಡುವುದನ್ನು ನೋಡಿದರೆ ಸಂಗೀತ ಕಲಿತು ಬಾರಿಸುವುದರಲ್ಲೊ ಪಳಗಿದ ಕೈ ಹೌದು! ಮೋತಿ ಬಾಲ ಅಲ್ಲಾಡಿಸುತ್ತ ಹೇಗೆ ಸುಮ್ಮನೆ ನಿಂತು ಬಿಟ್ಟಿದೆ! ಗದ್ದೆ ಬದಿಯಿಂದ ಹಿಂದಿರುಗಿ ಬರುತ್ತಿದ್ದ ಸುಬ್ಬಪ್ಪಯ್ಯ ದಣಪೆ ದಾಟಿ ಅಂಗಳದಲ್ಲಿ ಓಡಿಕೊಂಡೆ ಬಂದರು. ಹಾರ್ಮೋನಿಯಂ ವಾದ್ಯಕ್ಕೆ ಸುಶೀಲಚಿಕ್ಕಿಯ ಸ್ವರ ಮಾದುರ್ಯ ಮಿಳಿತವಾಗಿ ಹೊರಹೊಮ್ಮುತ್ತಿದ್ದು ಸುಬ್ಬಪ್ಪಯ್ಯ ಸಂಪೂರ್ಣ ಮೋಡಿಗೆ ಒಳಗಾಗಿ ತಟಸ್ಥರಾಗಿ ನಿಂತುಬಿಟ್ಟರು. ಎಷ್ಟು ವರ್ಷಗಳು ಕಳೆದು ಹೋದವೋ ಇಂತಹ ಹಾಡು, ವಾದ್ಯದ ಸ್ವರ ಕೇಳದೆ. "ನಾರಾಯಣಾ, ನಿನ್ನ ಗಾನಾಮೃತ ತುಂಬಲಿ ನನ್ನ ಕಿವಿಗಳಲ್ಲಿ" ಹೇಳಿಕೊಂಡವರ ಕಣ್ಣಲ್ಲಿ ಆನಂದಬಾಷ್ಪ ತುಂಬಿ ಬಾಗಿಲಲ್ಲೇ ಕೈ ಮುಗಿದರು. ಅಜ್ಜಮ್ಮನ ಅಡಿಗೆಕೆಲಸವೂ ಅರ್ಧಕ್ಕೆ ನಿಂತು ಹೋಯಿತು. ಹಾಡು ಮುಗಿದು ವಾದ್ಯ ಸ್ವರ ನಿಂತ ಮೇಲೆ ಒಳ ಬಂದ ಸುಬ್ಬಪ್ಪಯ್ಯ,"ಇವತ್ತಿಗೆ ಸಾರ್ಥಕ ಆತು ಹಾರ್ಮೋನಿಯಂ. ಮಜ್ಜಿಗೆಯಲ್ಲಿ ಅಡಗಿದ ಬೆಣ್ಣೆ ಹಾಂಗೆ ಇದ್ಯಲ್ಲೇ ನೀನು!" ಎಂದರು ಮೆಚ್ಚುಗೆಯಲ್ಲಿ.

"ಇದೇನು ಮಹಾ ಅಣ್ಣಯ್ಯ, ನನಗಿದು ವಂಶದ ಬಳುವಳಿ. ನಿಂಗೊತ್ತಲ್ಲ ಅಪ್ಪ ಹರಿಕಥೆ ದಾಸರು. ಪ್ರಲ್ಹಾದ, ಹರಿಶ್ಚಂದ್ರ, ಕೃಷ್ಣ ಚರಿತ್ರೆ, ರಾಮಕಥಾ ಪ್ರಸಂಗ ಇವೆಲ್ಲದರ ಸಾರ ತೆಗೆದು ಉದಾಹರಣೆ ಕೊಟ್ಟು ದಾಸರ ಪದ್ಯಗಳನ್ನು ಹಾಡ್ತಿದ್ದರು. ಪದ್ಯಗಳ ಅಭ್ಯಾಸ ನಮ್ಮದೇ ಹಾರ್ಮೋನಿಯಂನಲ್ಲಿ. ನನಗೂ ಬಾರಿಸಲು ಹೇಳಿಕೊಟ್ಟದ್ದು ಅವರೇ. ಹೆಚ್ಚುಗಾರಿಕೆ ಎಂತದೂ ಇಲ್ಲೆ. ನೀವು ಇಷ್ಟು ದಿನ ಮಕ್ಕಳಿಂದ ಇದನ್ನು ಮುಚ್ಚಿಟ್ಟದ್ದು ಎಂತಕ್ಕೆ? ಇನ್ನಾದರೂ ಗೌರಿ, ನಾಣಿಗೆ ಅಭ್ಯಾಸ ಮಾಡ್ಸಿ.ಕಲಿಗು"

ಸುಬ್ಬಪ್ಪಯ್ಯರಿಗೂ ತಮ್ಮ ತಪ್ಪಿನ ಅರಿವಾಯಿತು. ಕಮಲಿಯ ಮೋಹದಿಂದ

ತಾನೂ ಹಾಡುವುದ, ಬಾರಿಸುವುದ ಬಿಟ್ಟು ಹಾರ್ಮೋನಿಯಂ ಮೂಲೆಗೆ ತಳ್ಳಿಬಿಟ್ಟೆನಲ್ಲ? ಸಕಾಲದಲ್ಲಿ ಎಚ್ಚರಿಸಿದ್ದು ನಿನ್ನೆ ಮೊನ್ನೆ ಬಂದವಳು. ಸರಿ, ಆ ರಾತ್ರೆಯೇ ಭಜನೆಯಲ್ಲಿ ಹಾರ್ಮೋನಿಯದೇ ಗುಂಜಾವರ.

ಹೊರಗೆ ಕುಂಭದ್ರೋಣ ಮಳೆಯ ಅಬ್ಬರ. ಇಡೀ ಆಕಾಶವೇ ಭುವಿಗೆ ಮುತ್ತಿಟ್ಟಂತೆ. ಪ್ರಾಯಶಃ ಗಂಗೊಳ್ಳಿ ಹೊಳೆನೀರು ಇಡೀ ಊರನ್ನು ತುಂಬಿಕೊಳ್ಳುತ್ತಿದೆ. ನಾಲ್ಕು ವರ್ಷಗಳ ಮೊದಲು ಇಂತಹದೇ ಮಳೆಯಲ್ಲಿ ಹೊಳೆಬಾಗಿಲು ಮನೆಯ ಚಾವಡಿ, ಪಡಸಾಲೆ, ದೇವರ ಕೋಣೆಯ ಎತ್ತರಕ್ಕೆ ಹೊಳೆನೀರು ರಭಸದಲ್ಲಿ ಹರಿದು ಅಮ್ಮೋ, ಗೌರಿ ಇನ್ನೂ ಮರೆತಿಲ್ಲ ಆರಾತ್ರೆಯನ್ನು. ಆ ನೀರಿನಲ್ಲಿ ಬಳಕೊಂಡು ಹೋದ ಸಾಮಾನುಗಳು ಅದೆಷ್ಟೋ. ತಾವೆಲ್ಲರೂ ಅಟ್ಟ ಹತ್ತಿ ಕುಳಿತು ನೀರಿಳಿದ ನಂತರವೇ ಕೆಳಗೆ ಬಂದದ್ದು. ಸುಬ್ಬಪ್ಪಯ್ಯ ಹೇಳಿದ್ದು, "ಈ ಮನೆಯ ಅಡಿಪಾಯ ಗಟ್ಟಿ ಇಲ್ಲದಿದ್ದರೆ ಮನೆಯೇ ಕುಸಿದು ಬೀಳ್ತಿತ್ತು. ನಾವೂ ಹೊಳೆಗೆ ಬಳ್ಕೊಂಡು ಹೋಪಕಿತ್ತು"ಆ ದಿನ ಊರಲ್ಲಿ ಕುಸಿದ ಮನೆಗಳು, ಮರಗಿಡಗಳು ಲೆಕ್ಕವಿಲ್ಲದಷ್ಟು. ಹಣುಮನ ಗುಡಿಸಲು ಮುಕ್ಕಾಲು ಭಾಗ ನೀರಿನಲ್ಲಿ ಕೊಚ್ಚಿ ಹೋಗಿ ಅವನ ಸಂಸಾರದ ಅವಸ್ಥೆ ಕೇಳುವುದೇ ಬೇಡ. ಆಗ ಆ ಸಂಸಾರಕ್ಕೆ ಎರಡುದಿನ ತಮ್ಮ ಕೊಟ್ಟಿಗೆಯಲ್ಲಿ ಉಳಿಯುವ ವ್ಯವಸ್ಥೆ ಮಾಡಿದ್ದು, ತಾತ್ಕಾಲಿಕ ಗುಡಿಸಲು ಹಾಕಿದ್ದು, ಅನಂತರ ಮನೆ ಕಟ್ಟಿಸಿ ಕೊಟ್ಟದ್ದು ಸುಬ್ಬಪ್ಪಯ್ಯರೇ.

ಈದಿನ ರಾತ್ರೆ ಅಂತಹದೇ ಮಳೆ. ಅಪ್ಪಯ್ಯ ಸಾಸ್ತಾನದಲ್ಲಿದ್ದ, ಆಯಿ ಹೆರಿಯಮ್ಮನಲ್ಲಿ. ಗೌರಿ ನಾಣಿ ಅಜ್ಜಮ್ಮನನ್ನೇ ಅಪ್ಪಿ ಹಿಡಿದಿದ್ದರು. ಸಾಂತ್ವನ ನೀಡುವ ಹಿರಿಜೀವ ಅದು. ಎಷ್ಟು ಹೊತ್ತಿಗೆ ಮಳೆ ತಗ್ಗಿತು ತಿಳಿಯಲಿಲ್ಲ. ನಸುಕಿನಲ್ಲಿ ಹೊರಗೆ ಏನೋ ಬಿದ್ದ ಸದ್ದು. ಎದ್ದು ನೋಡಿದರೆ ದನದ ಕೊಟ್ಟಿಗೆಯ ಮೇಲೆ ಹಳೆ ತೆಂಗಿನ ಮರ ಉರುಳಿ ಬಿದ್ದಿದೆ. ಅದು ಯಾವ ದನ ಕರುಗಳ ಮೇಲೆ ಬೀಳದೆ ವಾಲಿಕೊಂಡು ಬಿದ್ದದ್ದು ಇವರ ಪುಣ್ಯ. ಕೆಲಸದವರಿಗೆ ಕರೆ ಹೋಯಿತು. ಈ ಅವಘಡದ ಮಧ್ಯೆ ಸಿಂಧೂ ದನ ಕರು ಹಾಕಿತ್ತು. ಮುದ್ದಾದ ಹೆಣ್ಣು ಕರು. ಅದನ್ನು ಮೊದಲು ಕಂಡವಳು ಗೌರಿ. ಕೊಟ್ಟಿಗೆಯ ಉರುಗೋಲು ತೆಗೆಯುವಾಗ ಕಂಡದ್ದು. ಎಷ್ಟು ಮುದ್ದಾಗಿದೆ ಕರು! ಅಜ್ಜಮ್ಮನಿಗೆ ಎಷ್ಟು ಖುಷಿ ಇವತ್ತು. ಕೊಟ್ಟಿಗೆಯಲ್ಲಿ ಹೆಣ್ಣುಕರು ಹುಟ್ಟಿದರೆ ಅವಳು ದೇವರಿಗೆ ಮೊದಲು ಕೈಮುಗಿದು "ನಿನ್ನ ಸಂತತಿ ನೂರಾಗಲಿ" ಎನ್ನುವಳು. ಹಾಗೆಂದು ಗಂಡುಕರು ಹುಟ್ಟಿದರೆ "ಪಾಪ" ಎಂಬ ಉದ್ಗಾರ. "ಗೌರಿ, ಮನೇಲಿ ಗಂಡು, ಕೊಟ್ಟಿಗೆಯಲ್ಲಿ ಹೆಣ್ಣು ಹುಟ್ಟೆಕ್ಕು" ಎನ್ನುತ್ತಾಳೆ. ಗೌರಿಗೆ ಈ ತಾರತಮ್ಯ ಈಗೀಗ ಅರ್ಥವಾಗುತ್ತಿದೆ. ಮನೆಯಲ್ಲಿ ಹೆಣ್ಣುಮಗು ಹುಟ್ಟಿದರೆ ಕಷ್ಟದ ಸರಮಾಲೆ. ಅಂಗೈಯ್ಯಲ್ಲಿಟ್ಟು ಜೋಪಾನ ಮಾಡೆಕ್ಕು. ಮದ್ವೆ ಮಾಡಿ ಗಂಡನ

ಮನೆಗೆ ಕಳಿಸೆಕ್ಕು. ಸಮಾ ಜೀವನ ಆಗದಿದ್ದರೆ ಅವಳ ಸಂಕಟ ಯಾರು ನೋಡ್ತೋ. ಕಮಲತ್ತೆ, ಸುಶೀಲಚಿಕ್ಕಿ ಹಾಂಗೆ ಗಂಡ ಸತ್ತರೆ ಆ ಹೆಣ್ಣು? ಸುಮ್ಮನೆ ಯೋಚನೆ ಮಾಡುವ ಗೌರಿಗೆ ಮೈಯ್ಯಲ್ಲಿ ಚಳಿ ನಡುಕ. ಗಂಡುಮಗುವಾದರೆ ಅಸ್ತಿಗೆ ವಾರಸುದಾರ, ಮನೆ ಮಾಡುವವ, ಬೆಳೆಸುವವ, ಅಪ್ಪ ಅಮ್ಮನನ್ನು ನೋಡಿಕೊಳ್ಳುವವ, ಗಂಡುಗೋವಿಗಳು ಎನ್ನುವಳು ಅಜ್ಜಮ್ಮ. ಅವಳಿಗೆ ಯಾವಾಗಲೂ ಚಕ್ರೀ ಅಮ್ಮಮ್ಮನಂತೆ ಗಂಡುಮಗು ಮೇಲೆ ಘನಾ ಮೋಕೆ,

ಕೊಟ್ಟಿಗೆಯಲ್ಲಿ ಗಂಡುಕರುಗಳು ಹುಟ್ಟಿದರೆ ಗದ್ದೆ ಊಳುವ ಎತ್ತುಗಳಾಗುತ್ತವೆ. ಅವಕ್ಕೆ ಜೀವನ ಕಷ್ಟ. ಇನ್ನೂ ವರ್ಷ ತುಂಬುವ ಮೊದಲೇಹೂಳುವ ಎತ್ತು ಮಾಡಲು ಕೇಳಿದವರಿಗೆ ಸಾಗಹಾಕುವುದು ಮಾಮೂಲು. ಕೆಲವರು ದೋಣಿಯಲ್ಲಿ ಗಂಡು ಕರುಗಳನ್ನು ಕರೆದೊಯ್ಯುವುದನ್ನು ಗೌರಿ ನೋಡಿದ್ದಾಳೆ. ಗಂಡುಕರು ಬೇರೊಬ್ಬರ ಕೊಟ್ಟಿಗೆಯ ಗಂಡುಕರುವಿಗೆ ಜೊತೆಯಾಗಿ ಗದ್ದೆ ಊಳುವ ಜೋಡಿ ಎತ್ತುಗಳಾಗುತ್ತವೆ ಎಂದು ಅಜ್ಜಮ್ಮ ಹೇಳಿದಮೇಲೆ ಸಮಾಧಾನ. ಆದರೂ ಪುಟ್ಟ ಗಂಡುಕರು ಹಾಗೆ ಯಾರದೋ ಕೈಯ್ಯಲ್ಲಿ ಎಳೆಸಿಕೊಂಡು ಹೋಗುವಾಗ ಅವಳ ಕರುಳು ಚುರ್ ಚುರ್. ನಾಣಿ ಅಳುತ್ತಿದ್ದ. ಅನ್ನಪೂರ್ಣೇಶ್ವರಿ ದೇವಸ್ಥಾನಕ್ಕೆ ಹರಕೆ ರೂಪದಲ್ಲಿ ಬಸವ ಬಿಟ್ಟದ್ದು ಅಂತ ಎರಡು ಗಂಡುಕರುಗಳು ಬಂದಿವೆ ಇಷ್ಟೇ ಇಷ್ಟು ಎತ್ತರದ್ದು ಅಬ್ಬಬ್ಬ, ವರ್ಷ ಕಳೆವಾಗ ಬಸವನಂತೆ ಬೆಳೆದದ್ದು, ಬರೀ ಪಾಪದವು. ಭಕ್ತರು ಕೊಟ್ಟ ಪ್ರಸಾದ, ಹಣ್ಣು ಅವರ ಹಸ್ತದಿಂದಲೇ ತಿಂದು ಓಡಾಡುತ್ತಿವೆ. ತಮ್ಮ ಕರುಗಳೂ ಬೇರೆ ಕಡೆ ಹೋಗದೆ ಅಲ್ಲೇ ಇದ್ದರೆ ಗಮ್ಮತ್ತು, ತಾವು ಹೋಗಿ ಗಂಜಿ, ಬಾಯಾರು ಕೊಡಬಹುದಿತ್ತು. ಆದರೆ ಅಜ್ಜಮ್ಮ ಗದರುತ್ತಾಳೆ, "ಸಣ್ಣ ಮಕ್ಕೊಗೆ ಎಂತಕ್ಕೆ ಈ ಮಾತೆಲ್ಲ?"

ಇವತ್ತು ಈ ಯಾವ ಅನುಮಾನ ಇಲ್ಲೆ. ಹುಟ್ಟಿದ್ದು ಹೆಣ್ಣುಕರು! ಹೆಣ್ಣಾದರೆ ಬೆಳೆದು ತಮ್ಮಲ್ಲೇ ಕರು ಹಾಕಿ, ಆ ಕರುವೂ ಬೆಳೆದು ಕರು ಹಾಕಿ ಕೊಟ್ಟಿಗೆ ತುಂಬ ದನಗಳದೇ ಫಲ ಫಲ. ಸಮೃದ್ಧಿಹಾಲು. ಅವುಗಳಿಗೆ ಎಂತ ಉಪಚಾರ! ಮತ್ತೆಂತ ತಾನೇ ಸುದ್ದಿ ಹೇಳಬೇಕು. ಅವಳು ನಾಣಿಯನ್ನು ಕರೆದು ತೋರಿಸಿದ್ದೇ ತಡ, ಅವ ಹಕ್ಕಿಯ ರೆಕ್ಕೆಯಂತೆ ಕೈ ಅಗಲಿಸಿ ಒಳಗೋಡಿ ಮೊದಲು ಅಜ್ಜಮ್ಮನಿಗೆ ಸುದ್ದಿ ಮುಟ್ಟಿಸಿದ. ಸುಬ್ಬಪ್ಪಯ್ಯ, ಅಜ್ಜಮ್ಮ ಬಂದರು. ದೇವರು ದೊಡ್ಡವ, ತೆಂಗಿನಮರ ಈಚೆ ಬಿದ್ದಿರಲಿಲ್ಲ. ಕರುವನ್ನು ತಾಯಿ ದನದ ಕೆಚ್ಚಲು ಬಳಿ ಎತ್ತಿ ಹಿಡಿದು ಅದರ ಮೊಲೆಹಾಲು ಚೀಪಿ[illegible] ಬಿಸಿನೀರಿನಲ್ಲಿ ಸ್ನಾನ ಮಾಡಿಸಿ ಚಾವಡಿಯ ಒಳ ಮೂಲೆಯಲ್ಲಿ ಮಲಗಿಸಿ ಓ[illegible], ಎಷ್ಟು ಕೆಲಸ! ಇನ್ನು ಒಂದು ತಿಂಗಳು ಗೌರಿ, ನಾಣಿಗೆ ಆಟಕ್ಕೆ, ಮುದ್ದಾಟಕ್ಕೆ ಕರುವಿನ ಸಂಭ್ರಮ.

ಆಯಿ, ಕಮಲತ್ತೆ ಬಂದದ್ದು ಮೂರುದಿನ ಕಳೆದ ಮೇಲೆ. ಗೌರಿ ಆಯಿಯ ಸೆರಗಿನಲ್ಲಿ ಮುಖ ಹುದುಗಿಸಿ ಸಿಂಧೂ ಹೆಣ್ಣು ಕರು ಹಾಕಿದ್ದು ಗುಟ್ಟಾಗಿ ಹೇಳಿದಳು. ನಾಣಿ ಅವಳ ಕೈ ಎಳೆದು ಕೊಟ್ಟಿಗೆಗೆ ಕರೆದೊಯ್ದು, "ಆಯಿ, ಇದರ ಹೆಸರು ಎಂತ ಕೇಳು, ಪುಟ್ಟಕ್ಕ!" ಕಿಲಕಿಲ ನಕ್ಕಳು ಗೌರಿ, "ಅಕಾ, ಪುಟ್ಟಣ್ಣ ಹುಟ್ಟಿದ್ರೆ ಈ ಗೌಜು ಗಮ್ಮತ್ತು ಇತ್ತಾ?"

"ಎಂತಾದ್ರೂ ಆಗ್ಲಿ, ದನ ಕರು ಹುಷಾರಿದ್ರೆ ಸಾಕು." ಆಯಿ ಹಾಗೆಂದರೂ ಮಕ್ಕಳಷ್ಟೇ ಖುಷ್ ಆಗಿತ್ತು ಹೆಣ್ಣುಕರು ಕಂಡು. ಆ ವೇಳೆಗೆ ಮಳೆ ನಿಂತು ಹೊಳೆ ಶಾಂತವಾಗಿತ್ತು. ಅಶಾಂತಿಯ ಅಲೆ ಎದ್ದದ್ದು ಗೌರಿ ಹಾರ್ಮೋನಿಯಂ ಹಿಡಿದು ಬಾರಿಸಲು ಕುಳಿತಾಗಲೇ. ಮುಂಚಿನಂತೆ ಅಪಸ್ವರ ಇರಲಿಲ್ಲ. ಆದರೆ ಶೃತಿಗೆ ಸರಿಯಾಗಿ ಬೆರಳುಗಳು ಕೂಡಿ ಬರುತ್ತಿರಲಿಲ್ಲ. "ಪ್ರತಿದಿನ ಒಂದೇ ಪದ್ಯ ಬಾರ್ಸಲು ಹೇಳಿ ಕೊಡ್ತೆ. ಅದು ಚೆಂದಕ್ಕೆ ಬಂದರೆ ಬೇರೆ ಪದ್ಯಕ್ಕೆ ಬೆರಳು ಇಡಲು ನಿಂಗೂ ತಿಳಿತ್ತು"ಮೊದಲ ಬಾರಿಗೆ ಹೇಳಿಕೊಡಲು ಕುಳಿತಿದ್ದರು ಸುಬ್ಬಪ್ಪಯ್ಯ. ಹುಬ್ಬುಗಂಟಿಕ್ಕಿದ್ದಳು ಕಮಲತ್ತೆ. ಮೂಲೆ ಸೇರಿದ ಅದು ಹೊರ ಬಂದದ್ದು ಯಾಕೋ? ತಾಯಿಯಲ್ಲಿ ದೂರಿದಳು, ಗೌರಿಯ ಉದ್ಧಟತನಕ್ಕೆ ಆಯಿ ಮೇಲೆ ಸಿಟ್ಟು ಮಾಡಿದಳು. ಬೆಂಕಿ ಕಿಡಿ ಹತ್ತಿಸುವುದು ಬೇಡವೆಂದು ಇಬ್ಬರೂ ಉತ್ತರಿಸಲಿಲ್ಲ. ಈಗ ಸಹಾಯಕ್ಕೆ ನಿಂತವಳು ಸುಶೀಲಚಿಕ್ಕಿ. ಅವಕಾಶಕ್ಕೆ ಕಾಯುತ್ತಿದ್ದ ಚಿಕ್ಕಿ ಅವಳನ್ನು ಅಂಗಳಕ್ಕೆ ಕರೆದೊಯ್ದು ಧರಾಶಾಹಿಯಾದ ದಾಸವಾಳದ ಗಿಡ ತೋರಿಸಿದಳು, ಮೊನ್ನೆ ಬಿರು ಮಳೆಗೆ ಬಿದ್ದ ಮೈ ತುಂಬ ಹೂಅರಳಿಸಿದ ಗಿಡ.

"ಹೂವು,ಮೊಗ್ಗು, ಹಸಿರೆಲೆಗಳು ಮುದ್ದೆಯಾಗಿ ಮಣ್ಣಲ್ಲಿ ಉದುರಿ ಹ್ಯಾಗೆ ಕದಡಿ ಹೋಗಿವೆ ನೋಡು. ಆದ್ರೂ ಇನ್ನೊಂದು ವಾರದಲ್ಲಿ ಬುಡದಿಂದ ಚಿಗುರಿ, ಹಸಿರೆಲೆ ತುಂಬಿ ಮೊಗ್ಗು ಬಿರಿದು ಹೂವುಗಳು ಅರಳುತ್ತವೆ. ನಮ್ಮ ಮನಸ್ಥಿತಿನೂ ಇದೇ ಕಮಲಿ, ಇಂದು ಅಳು, ನಾಳೆ ನಗು, ಇಂದು ಸುಖ, ನಾಳೆ ದುಃಖ. ಇದೇ ಅಲ್ಲದಾ ಜೀವನ?"

"ನನ್ನ ಮನಸ್ಸು ಸಂಕಟದ ಗೂಡು. ನಿನಗೆಲ್ಲಿ ಅರ್ಥ ಆಗ್ತು?"

"ನಾನೂ ನಿನ್ನಂತೆಯೇ ಇಲ್ಲವೇ? ಕಮಲಿ, ನೀ ನಿನಗಾಗಿ ಬದುಕಬೇಕು. ಬೇರೆಯವರಿಗಾಗಿ ಅಲ್ಲ. ಬದುಕಿನ ಶೂನ್ಯದಲ್ಲಿ ಹೊಸ ಚೈತನ್ಯ ತುಂಬುವ ಮನಸ್ಸು ನಿನ್ನದಾಗೆಕ್ಕು. ಎಷ್ಟು ವರ್ಷ ಆತು ನೀ ಹಾರ್ಮೋನಿಯಂ ಬಾರಿಸಿ?ಇದರಲ್ಲೇ ನಿನ್ನನ್ನು ಮನಃಪೂರ್ವಕ ತೆರೆದುಕೋ. ಹಾಡು, ಬಾರಿಸು. ಹೊಸ ಕಮಲಿ ಆಗು. ಆಗ ಈ ಜಗತ್ತು ಬೇರೆಯೇ ಕಾಣ್ತು ನಿನಗೆ"

"ನಿನ್ನ ಪುರಾಣ ನನ್ಗೆ ಬ್ಯಾಡ."

ಚಿಕ್ಕಿ ಸುಮ್ಮನಾದಳು. ಮರುದಿನ ಮತ್ತೆ ಅದೇ ಬುದ್ಧಿವಾದ, "ಬೇರೆಯವರು ನಿನ್ನ ಮನಃಸ್ಥಿತಿ ನೋಡಿ ಮರುಕದಲ್ಲಿ ಹೆಜ್ಜೆ ಹಾಕೆಕ್ಕು ಅಂದ್ರೆ ತಪ್ಪು. ನಿನ್ನ ಪಾಡಿಗೆ ನೀನಿರು. ಆದರೆ ಗೌರಿಗೆ ವಾದ್ಯ ಬಾರಿಸ್ಬಾರ್ದು, ಹಾಡಬಾರ್ದು ಅನ್ನುವ ಅಧಿಕಾರ ನಿಂಗಿಲ್ಲ. ಅದು ಬೆಳೆವ ಕುಡಿ. ಈ ಮನೆ ಮಗಳು. ಅಲ್ಲದಾ ಹೇಳು?"

ಈ ಮಾತು ಏನು ಮೋಡಿ ಮಾಡಿತೋ. ಅನಂತರದ ದಿನಗಳಲ್ಲಿ ತಮಗಿಷ್ಟ ಬಂದಾಗ ಗೌರಿ ಹಾರ್ಮೋನಿಯಂ ಬಾರಿಸುವುದು, ನಾಣಿ ಕುಣಿವದು ನೋಡಿಯೂ ಕಮಲತ್ತೆಯ ಕರಕರೆ ನಿಂತದ್ದು ಸತ್ಯ. ಒಂದುದಿನ ಸುಬ್ಬಪ್ಪಯ್ಯ ಬಾರಿಸು ಮಗಳೇ ಎಂದು ಹೇಳುವ ಮೊದಲೇ ಅವಳು ಹಾರ್ಮೋನಿಯಂ ಮುಂದೆ ಕುಳಿತಾಗಿತ್ತು. "ಕಲಿಯುಗದಲಿ ಹರಿ ನಾಮವ ನೆನೆದರೆ। ಕುಲಕೋಟಿಗಳುದ್ಧರಿಸುವವೋ ರಂಗಾ॥" ದಾಸರ ಈ ಪದ ಇಡೀ ಮನೆಯಲ್ಲಿ ಮಾರ್ದನಿಸಿ ಹಳೆ ಕೊಳೆ ತೊಳೆದಂತೆ ಬೆಳಕು ಪ್ರಜ್ವಲಿಸಿದಂತೆ! ಅನಂತರದ ದಿನಗಳಲ್ಲಿ ಕಮಲತ್ತೆ, ಚಿಕ್ಕಿ, ಗೌರಿಯ ಪದ್ಯಗಳು ಮಾರ್ದನಿಸಿದರೆ ನಾಣಿಯ ಹೆಜ್ಜೆ ಕುಣಿತಕ್ಕೆ ರಂಗು ರಂಗಿನ ಮೆರಗು. ಮಳೆ ಅಬ್ಬರ ತಗ್ಗುವಾಗ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಪ್ರತಿ ಸಂಜೆ ಕೇಳತೊಡಗಿತು ಕಮಲತ್ತೆಯ ಸುಶ್ರಾವ್ಯ ಧ್ವನಿ ಮತ್ತು ಹಾರ್ಮೋನಿಯಂ ವಾದ್ಯದಸ್ವರ.

❋❋❋

## ಅಧ್ಯಾಯ– 8

ಶ್ರಾವಣ ಕಳೆದು ಭಾದ್ರಪದ ಮಾಸದ ಆಗಮನಕ್ಕೆ ಕೆಲವು ದಿನಗಳು ಬಾಕಿ ಇದ್ದವು. ಭಾದ್ರಪದ ಮಾಸವೆಂದರೆ ಹಬ್ಬಗಳ ಸಾಲು ಸಾಲು. ಹಲವು ವೈವಿಧ್ಯ ಅಡಿಗೆಯ ಗಮ್ಮತ್ತು. ಅಡಿಗೆಗೆ ಕಲಾಯಿ ಇರುವ ಹಿತ್ತಾಳೆ ಪಾತ್ರೆಗಳೇ ಬೇಕು. ಆಯಿ ಹಲವು ಸಣ್ಣ ದೊಡ್ಡ ಹಿತ್ತಾಳೆ ಪಾತ್ರೆಗಳನ್ನು ಕಲಾಯಿ ಹಾಕಲೆಂದೇ ತೆಗೆದಿಟ್ಟಿದ್ದಾಳೆ.

ಈ ಊರಲ್ಲಿ ಕಲಾಯಿ ಹಾಕುವವರು ಯಾರೂ ಇಲ್ಲ. ಬೇರೆ ಊರಿನಿಂದ ಕಲಾಯಿ ಹಾಕಲು ಒಬ್ಬಾತ ಎರಡು ಮೂರು ತಿಂಗಳಿಗೊಮ್ಮೆ ಬರುತ್ತಾನೆ. ಅವನ ಹೆಸರು ಚಂದು. ದೋಣಿಯ ಬದಲು ಹೆಚ್ಚಾಗಿ ಕಾಲುಹಾದಿ, ಗದ್ದೆ ಬದುವು, ಹೊಳೆನೀ ಕಡಿಮೆ ಹರಿಯುವ ಬಳಸು ದಾರಿ ಹಿಡಿಯುತ್ತಾನೆ. ಅಲ್ಲಲ್ಲಿ ಕಲಾಯಿ ಸಂಪಾದನೆ ಸಿಗುತ್ತದೆ. ಈ ಊರಿಗೆ ಬಂದರೆ ಅವನ ಠಿಕಾಣಿ ಟಪಾಲು ಪೆಟ್ಟಿಗೆ ಕಟ್ಟಿದ ಹುಳಿಮಾವಿನ ಮರದ ಕೆಳಗೆ. ಟಪ್ಪಾಲುಪೆಟ್ಟಿಗೆ ಬಂದದ್ದೂ ಕಳೆದ ವರ್ಷವೇ. ಅದಕ್ಕೂ ಮೊದಲು

ಊರಿಗೆ ಪತ್ರಗಳು ಈ ಬದಿಗೆ ಬರುವ ಇತರೇ ಜನರಿಂದ ಅಥವಾ ದೋಣಿ ಮೂಲಕ ಬಂದು ಜನರ ಕೈ ಸೇರುತ್ತಿದ್ದವು. ಟಪಾಲುಪೆಟ್ಟಿಗೆಗೆ ಒಂದು ಬೀಗ. ವಾರಕ್ಕೆ ಎರಡುಬಾರಿ ಒಬ್ಬಾತ ಬಂದು ಟಪ್ಪಾಲು ಪೆಟ್ಟಿಗೆಯ ಬೀಗ ತೆಗೆದು ಅದರಲ್ಲಿದ್ದ ಪತ್ರಗಳನ್ನು ತೆಗೆದುಕೊಳ್ಳುತ್ತಾನೆ. ಅದೇ ವೇಳೆ ತನ್ನ ಕೈಚೀಲದಲ್ಲಿದ್ದಪತ್ರಗಳನ್ನು ಊರ ಜನರಿಗೆ ಹಂಚುತ್ತಾನೆ. ದೂರ ದೂರದ ಮನೆಗಳಿಗೆ ಬಂದ ಪತ್ರಗಳನ್ನು ಹೋಗಿ ಕೊಡುವುದು ಕಷ್ಟದ ಕೆಲಸ. ಅವನ್ನು ಸಮೀಪದ ಸಣ್ಣ ಸೋಡಾ ಅಂಗಡಿಯಲ್ಲಿಟ್ಟು ಹೋಗುತ್ತಾನೆ. ಅವನದು ಖಾಕಿ ಚಡ್ಡಿ, ಖಾಕಿ ಅಂಗಿ. ಅದೇ ಬಣ್ಣದ ಚೀಲ. ಬ್ರಿಟಿಷರ ಪೋಷಾಕು. ಅವನು ಬರುವ ನಿಗದಿತ ದಿನಕ್ಕೆ ಊರ ಜನರೇ ಬಂದು ಕಾದು ನಿಂತು ಪತ್ರ ಪಡೆದು, ಓದಲು ಬಾರದವರು ಅವನಿಂದಲೇ ತಮ್ಮ ಬಂಧುಗಳ ಪತ್ರ ಓದಿಸಿಕೊಂಡು ಹೋಗುವುದು ವಾಡಿಕೆ. ಈ ಕಾರಣದಿಂದ ಚಂದು ಆರಿಸಿಕೊಂಡದ್ದು ಇದೇ ಹುಳಿಮಾವಿನ ಮರದ ನೆರಳನ್ನು. ಅವನು ಬಂದ ಸುಳಿವು ಸಿಕ್ಕಿದಾಕ್ಷಣ ಗೌರಿ, ನಾಣಿಯ ಕಾಲುಗಳು ನೆಲದ ಮೇಲೆ ನಿಲ್ಲುವುದಿಲ್ಲ. ಹಾರಿ ಹಾರಿ ಬಂದು ಚಂದೂ ಕಲಾಯಿ ಹಾಕುವುದನ್ನು ನೋಡುತ್ತ ಅಲ್ಲೇ ಸ್ಥಾಪನೆ. ಕಲಾಯಿ ಇಲ್ಲದ ಪಾತ್ರೆ ಒಳಗೆ ನಸು ತಾಮ್ರದ ಬಣ್ಣ. ಚಂದೂ ಮೊದಲು ಬೆಂಕಿ ಉರಿಸಿ ನಿಗಿ ನಿಗಿ ಕೆಂಡ ತಯಾರಿಸಿ ಊರ ಮಂದಿ ತಂದು ಕೊಡುವ ಪಾತ್ರೆಗಳನ್ನು ಬಿಸಿ ಮಾಡಿ ಆಮೇಲೆ ಏನೋ ಒಂದನ್ನು ಪಾತ್ರೆಗೆ ಹಾಕಿ ತಿಕ್ಕಿ ತಿಕ್ಕಿ ಒಳ ಭಾಗ ಬೆಳ್ಳಿಯಂತೆ ಮಾಡುವಾಗ ಇಬ್ಬರ ಕಣ್ಣುಗಳಲ್ಲಿ ನೂರು ಬೆಳ್ಳಿಯ ಮೆರಗು! ಎಷ್ಟು ಚೆಂದ!

ಈ ದಿನವೂ ಚಂದೂಊರ ಜನರ ಪಾತ್ರೆಗಳಿಗೆ ಕಲಾಯಿ ಹಾಕಿದ ನಂತರ ಹೊಳೆಬಾಗಿಲು ಮನೆಗೆ ಬಂದ. ಗೌರಿ ನಾಣಿಯ ಸವಾರಿಯೂ ಬಂತು ಅವನ ಹಿಂದೆ. ತಮ್ಮ ಮನೆ ಮುಂದೆ ಕೆಲಸ ಆಗುವುದು  ಅವರಿಗೆ ಇನ್ನೂ ಸಂತೋಷ. ಆಯಿ ಆಗಲೇ ಹಲವಾರು ಕಲಾಯಿ ಹೋದ ಪಾತ್ರೆಗಳನ್ನು ತೆಗೆದಿಟ್ಟಿದ್ದಳು. ಅವನು ಅಂಗಳದ ಹೊರಗೆ ಹಲಸಿನ ಮರದ ಕೆಳಗೆ ಕುಳಿತು ಬೆಂಕಿ ಉರಿಸಿ ಕಲಾಯಿ ಹಾಕಲು ಶುರು ಮಾಡಿದ. ಝುಟಪಟ ಕೆಲಸಗಾರ.ಹಾಗೆಂದು ಈಗಲೇ ಹೋಗುವ ಅವಸರವಿಲ್ಲ. ಕಲಾಯಿ ಕೆಲಸ ಮುಗಿಸಿ ಅವರಲ್ಲೇ ಮಧ್ಯಾನ್ಹದ ಊಟ, ಅಜ್ಜಮ್ಮ ಕೊಟ್ಟ ಕವಳ, ಸುಬ್ಬಪ್ಪಯ್ಯರ ಹಳೆ ಬಟ್ಟೆ ಇದ್ದರೆ ಅವಷ್ಟು ತೆಗೆದುಕೊಂಡು ನಿಧಾನಕ್ಕೆ ಹೋದರೆ ಸಾಕು. ಪಾತ್ರೆಗಳಿಗೆ ಕಲಾಯಿ ಹಾಕಿಯಾಯ್ತು. "ಇನ್ನೆಂತಾದ್ರೂ ಇದ್ದರೆ ತನ್ನಿ ಒಡತಿ. ಮತ್ತೆ ಮೂರು ತಿಂಗಳಿಗೆ ಬಪ್ಪಕೆ ಆತ್ತೋ ಇಲ್ಯೋ"

ಆಗ ನಾಣಿ ಒಳಗೆ ಓಡಿ ಹೋಗಿ ನಿತ್ಯ ಉಪಯೋಗಿಸುವ ತನ್ನ ಮತ್ತು ಅಕ್ಕನ ಕುಡಿಯುವ ಉದ್ದದ ಎರಡು ಹಿತ್ತಾಳೆ ಲೋಟ ತಂದಿಟ್ಟ. ಹಿತ್ತಾಳೆ ಲೋಟಗಳಿಗೆ,

ತಾಮ್ರದ ಕುಡಿಯುವ ನೀರಿನ ಗಿಂಡಿಗಳಿಗೆ ಕಲಾಯಿ ಹಾಕುವುದಿಲ್ಲ. ಅಡಿಗೆ ಉಪಯೋಗಕ್ಕೆ ಇರುವ ಹಿತ್ತಾಳೆ ಪಾತ್ರೆಗಳಿಗೆ ಮಾತ್ರ ಕಲಾಯಿ ಭಾಗ್ಯ. ಕಲಾಯಿ ಹೋಗಿ ಒಳಭಾಗ ಹಸಿರು ಪಾಚಿಗಟ್ಟಿದಂತೆ ಕಂಡರೆ ಕಲಾಯಿ ಇಲ್ಲ ಎಂದೇ ಅರ್ಥ. ಅಂತಹ ಹಿತ್ತಾಳೆ ಪಾತ್ರೆಗೆ ಹುಳಿ ಮುಟ್ಟಿದರೆ ಕಿಲುಬುತ್ತವೆ. ಕಿಲುಬಿದ ಪಾತ್ರೆಯಲ್ಲಿ ಮಾಡಿದ ಅಡಿಗೆ ಹೊಟ್ಟೆಗೆ ಹೋದ್ರೆ ವಾಂತಿ, ಹೊರಕ್ಕಡೆ ಇನ್ನೂ ಎಂತೆಂತದೋ ಶುರು. ಪಾತ್ರೆಯಂತೆ ತಮ್ಮ ಲೋಟಗಳ ಒಳಭಾಗಕ್ಕೆ ಕಲಾಯಿ ಬೇಕೆಂದು ಹಠ ಮಾಡಿ ನಾಣಿ ಕಲಾಯಿ ಹಾಕಿಸಿಕೊಂಡ. ಅವುಗಳ ಒಳಭಾಗ ಬೆಳ್ಳಿಯಂತೆ ಮಿರುಗಿತು.

"ನಿಮ್ಮ ಲೋಟಕ್ಕೆ ಹುಳಿ ಮುಟ್ತಿಲ್ಲೆ. ಕಿಲುಬುದೂ ಇಲ್ಲೆ. ಸುಮ್ಮನೆ ಕಲಾಯಿ ಹಾಕೂದು ದುಡ್ಡ ದಂಡ" ಅಜ್ಜಮ್ಮನ ಪಿರಿ ಪಿರಿ ಕೇಳಿದ ಆಯಿ, "ಮಕ್ಕಳಲ್ಲವೇ, ಬೆಳ್ಳಿ ಗ್ಲಾಸಿನಲ್ಲಿ ಕುಡೀತೇವೆ ಅಂದುಕೊಳ್ತವೆ. ಇರಲಿ ಅತ್ತೆ, ಇನ್ನೊಮ್ಮೆ ಬೆಳ್ಳಿ ಅಂಗಡಿಯಿಂದ ಇಬ್ಬರಿಗೂ ಬೆಳ್ಳಿಯದೇ ಲೋಟ, ಊಟದ ಬಟ್ಟಲು ತರುವ" ಅಂತಾಳೆ. ಆದರೆ ತರುವುದಕ್ಕೆ ಮುಹೂರ್ತ ಬರುವುದೇ ಇಲ್ಲ.

ಕಲಾಯಿ ಹಾಕಿದ ಪಾತ್ರೆಗಳಿಗೆ ಒಂದು ದಿನ ಸೆಗಣಿ ನೀರು ತುಂಬಿಸಿ ಮರುದಿನ ತೊಳೆದ ಮೇಲೆಯೇ ಅಡಿಗೆಗೆ ಲಾಯಕ್ಕು. ಮೊದಲೆಲ್ಲ ನಿತ್ಯ ಅಡಿಗೆಗೆ ಮಡಿಕೆಗಳದೇ ಸಲಕರಣೆಗಳು. ಕಳೆದೆರಡು ವರ್ಷಗಳಿಂದ ಮಡಕೆಗಳ ಬದಲಿಗೆ ಬಂದದ್ದು ಹಿತ್ತಾಳೆ ಪಾತ್ರೆಗಳು. ಆಯಿಗೆ ಹೊಸ ಮಡಕೆಗಳನ್ನು ಸುಡುವ ಕೆಲಸವಿಲ್ಲ. ಎತ್ತಿ ಜಪ್ಪಿದರೂ ಹಿತ್ತಾಳೆ ಪಾತ್ರೆಗಳು ಒಡೆಯುವ ರಗಳೆಯಿಲ್ಲ. ಆಯಿ ಚಕ್ರಿ ಮನೆಗೂ ಕೆಲವು ಪಾತ್ರೆಗಳನ್ನು ಕಳಿಸಿದ್ದಾಳೆ. ಆದರೆ ಚಕ್ರಿ ಅಮ್ಮಮ್ಮ ಇನ್ನೂ ಹಳೆಕಾಲದವಳು. ಮಣ್ಣಿನ ಕುಡಿಕೆ ಗಡಿಗೆಗಳೇ ಹೆಚ್ಚು ಇಷ್ಟ.ಎಲ್ಲ ನಮೂನೆಯ ಮಡಕೆಗಳು ಅವಳ ಊರಿನ ಕುಂಬಾರ ರಂಗಚೆಟ್ಟಿ ಮನೆಯಲ್ಲಿ ತಯಾರಾಗಿ ಸಿಗುತ್ತವೆ. ವಾರಕ್ಕೊಮ್ಮೆ ರಂಗಚೆಟ್ಟಿ ಒಂದು ದಪ್ಪದ ಬಿದಿರು ಕೋಲಿನ ಎರಡೂ ತುದಿಗೆ ಮಡಕೆಗಳನ್ನು ತೂಗುಹಾಕಿ ಹೆಗಲ ಮೇಲೆ ಕಾವಡಿಯಂತೆ ಹೊತ್ತು ಚಕ್ರಿ ಊರಿನ ಪ್ರತಿ ಬೀದಿ ಬೀದಿಗೂ ತಿರುಗುತ್ತಾನೆ.ಊರಿನಿಂದ ಹಾಡಿಗೆ, ಹಾಡಿಯಿಂದ ಕಾಡಿಗೆ, ಅಲ್ಲಿಂದ ಗದ್ದೆ ಬಯಲಿಗೆ, ದೇವಸ್ಥಾನಕ್ಕೆ ನಡೆದೇ ಹೋಗುವವ. "ಮಡಿಕೆ ಬೇಕೇ ಮಡಿಕೆ?" ಅವನ ಕೂಗು ನೂರು ಮಾರು ಆಚೆಗೂ ಕೇಳಬೇಕು. ಅದು ಎಷ್ಟು ಜೋರು ಎಂದರೆ 'ಮ' ಶಬ್ಧ ನಾಭಿಯಿಂದ ಹೊರಟು ಗಂಟಲಿಗೆ ಬಂದು ಸ್ವರ ಹೊರಬಿದ್ದು 'ಮಾ' ಆಗಿ, 'ಡಿ' ಹ್ರಸ್ವವಾಗಿ 'ಕೆ' ಇನ್ನೂ ಏರು ಸ್ಥಾಯಿಗೆ. "ಬೇಕೇ ಒಡತಿ, ಮಾ ಕೇ?" "ಸಣ್ಣದು ದೊಡ್ಡದು "ಮಾ ಕೆ" ಎನ್ನುವ ಗಂಟಲು ಹರಿಯುವಂತೆ.

ತನಗೆ ಬೇಕಿಲ್ಲದಿದ್ದರೂ ಅವನಿಗೆ ಆಸರು ತಿಂಡಿಯಿತ್ತು ಒಂದೆರಡು ಕಾಸುಕೊಟ್ಟು

ಮಡಿಕೆ ಕೊಳ್ಳುತ್ತಾಳೆ ಚಕ್ರಿಅಮ್ಮಮ್ಮ."ವಾರದಲ್ಲಿ ಎರಡು ಮಡಿಕೆ ಒಡೀತಾವೆ ನಿನ್ನ ಸೊಸೆಯಂದಿರು. ನಾವು ಮಾಡ್ದಾಂಗೆ ಹಿತ್ತಾಳೆ ಪಾತ್ರೆ ತರೂಕಾಗ್ದ?" ಆಯಿ ಹೇಳಿದ್ದು ಅಲ್ಲದೆ ತಾನೇ ಅಪ್ಪಯ್ಯನಿಗೆ ಹೇಳಿ ತರಿಸಿ ಕೊಟ್ಟಿದ್ದಳು. "ಗಡಿ ಗಡಿ [ಆಗಾಗ] ಕಲಾಯಿ ಹಾಕ್ಲೂಕೆ ನಂಗಾಗ.ರಗಳೆ" ಎನ್ನುವ ಅಮ್ಮಮ್ಮನ ಮನೆ ಹತ್ರವೇ ಕಲಾಯಿ ಹಾಕುವವನಿದ್ದ. ಅತ್ತ ಮೂಸಿಯೂ ನೋಡಲಾರಳು. ಏನಿದ್ದರೂ ಮಡಿಕೆಗಳೇ ಬೇಕು. ಅಲ್ಲದೆ ಅದರಲ್ಲಿ ಮಾಡುವ ಅಡಿಗೆ, ಮೊಸರು ಹಾಲು ಎಲ್ಲ ಹೆಚ್ಚು ರುಚಿಯಂತೆ.

"ಅಲ್ಲವೇ ಗೌರಿ, ಶ್ರೀಕೃಷ್ಣನ ಕಥೆ ಕೇಳಿದ್ಯಲ್ಲ. ಮೊಸರು ಗಡಿಗೆ ಅವನಿಗೆ ಪ್ರಿಯ. ಗೋಪಿಕೆಯರು ಕಡೆಗೋಲಿನಿಂದ ಮೊಸರು ಕಡೆವದು ಗಡಿಗೆಯಲ್ಲಿಯೇ."ಧಾರ್ ಭುರ್ ಬೊಮ್ಮಕ್ಕ, ಮೊಸರು ಕಡೆ ತಿಮ್ಮಕ್ಕ" ಹೇಳುತ್ತ ಕಡೆದ ಮೊಸರಿಂದ ಮೇಲೆದ್ದು ಬಂದ ಬೆಣ್ಣೆಯನ್ನು ಕೂಡಿ ಹಾಕೂದು ಗಡಿಗೆಯಲ್ಲೇ. ಬೆಣ್ಣೆಯ ಒಂಚೂರು ಮುದ್ದೆಯನ್ನು ಕಡೆಗೋಲಿನ ತುದಿಗೆ ಹಚ್ಚಿ ಇಡ್ತಾರೆ, ಯಾಕೆ ಗೊತ್ತೇನೇ?"

"ಶ್ರೀಕೃಷ್ಣನಿಗೆ!"

"ಹಾಗೆ ಹೇಳು. ಶ್ರೀಕೃಷ್ಣ ರಾತ್ರೆ ಬಂದು ಗಡಿಗೆಯ ಮೊಸರನ್ನು, ಕಡೆಗೋಲಿನ ತುದಿಯ ಬೆಣ್ಣೆಯನ್ನು ತಿಂತಾನೆ ಎಂದು ಗೋಪಿಕೆಯರ ಶುದ್ಧ ಪ್ರೇಮದ ಭಾವ. ನಮ್ಮ ಸಾಮಾನ್ಯ ಹೆಂಗಸರಿಗೆ ಈಗಲೂ ಇದೇ ಕಲ್ಪನೆ,ಅಭ್ಯಾಸ ಬಲ"

ಮಣ್ಣಿನ ಮಡಿಕೆಯಲ್ಲಿ ಮಾಡುವ ಅನ್ನ ಪದಾರ್ಥಕ್ಕೂ ಈ ಕಲ್ಪನೆಗೂ ಎಲ್ಲಿದೆ ಸಾಮ್ಯ? ಅಮ್ಮಮ್ಮ ಅದೇ ಕಲ್ಪನೆಯಲ್ಲಿ ಅನುಭವಿಸುವ ಸುಖ ಕಂಡು ಗೌರಿ ನಿರುತ್ತರಳು. ಆಗೆಲ್ಲ ಈ ಮಣ್ಣಿಗೆ ಥಳಕು ಹಾಕಿದ ಒಂದು ಸಂಗತಿ ಹಿಂದೆ ಯಾವಾಗಲೋ ನಡೆದದ್ದು ನೆನಪಾಗುತ್ತದೆ. ಇದೇ ರಂಗಚೆಟ್ಟಿಯಿಂದ ಆಯಿ ಸಣ್ಣ ಸಣ್ಣ ಕುಡಿಕೆ, ತಟ್ಟೆ, ಬಟ್ಟಲು ಎಲ್ಲಾ ತಂದಿದ್ದಳು. ಅವು ಗೌರಿಗೆ ಮನೆ ಆಟಕ್ಕಾಗಿ. ಒಂದುದಿನ ಮಕ್ಕಳ ಮನೆಯಾಟದ ಗೌಜಿನಲ್ಲಿ ನೀರು ತುಂಬಿಸಿಟ್ಟ ಚಿಕ್ಕ ಕುಡಿಕೆ ಒಡೆದು ಮಣ್ಣಲಿ ಬಿದ್ದು ನಾಣಿ ಅದನ್ನು ಗುದ್ದಿ ಪುಡಿ ಮಾಡಿ? ಕೇಳಬೇಕೇ, ಕುಡಿಕೆಯ ಮಣ್ಣು ನೆಲದ ಜಿಗುಟು ಮಣ್ಣುಕಲ್ಲು ಒಂದಾಗಿ ಮುದ್ದೆಯಾಗಿ ನಾಣಿ ಹಿಡಿ ತುಂಬಾ ಆ ಮಣ್ಣನ್ನು ಬಾಯಿಗೆ ತುಂಬಿಸಿ ಹ್ಹೇ ಹ್ಹೇ ನಕ್ಕಿದ್ದ. "ಉಗಿಯೋ ಕೆಳಗೆ. ಗಂಟಲು ಸಿಕ್ತು" ಹೇಳಿದರೆ ತನ್ನ ಬಾಯಲ್ಲಿ ಏನಿದೆ ನೋಡು ಕೈ ಸನ್ನೆ ಮಾಡಿದ. ಗೌರಿ ಅವನ ಕೈ ಹಿಡಿದು ಎಳೆದು ತಂದು ಆಯಿ ಮುಂದೆ ನಿಲ್ಲಿಸಿದಳು. "ಇವನ ಬಾಯಿ ಕಾಣು, ಮಣ್ಣು ತಿಂತಾ ಇದ್ದ"

ಆಯಿ ಅವನ ಭುಜ ಹಿಡಿದು ದೊಡ್ಡದಾಗಿ ತೆರೆದ ಬಾಯಿ ಒಳಗೆ ನೋಡಿದರೆ ಬರೀ ಮಣ್ಣು ಮಣ್ಣು. ಮಣ್ಣು ತಿನ್ನುವ ಕೆಟ್ಟ ರೋಗ ಯಾವಾಗ ಶುರು ಮಾಡಿದ? "ನನ್ನ ಕಂದ ಉಗುಳಿ ಬಿಡೋ" ಎಂದಳು. ಅವನು ಇನ್ನೂ ದೊಡ್ಡದಾಗಿ ಬಾಯಿ

ಅಗಲಿಸಿ ಕೈ ಬೆರಳಿನಿಂದ, "ಇಲ್ಲಿ ನೋಡು"ಎನ್ನುತ್ತಿದ್ದಾನೆ. ಬಾಯೊಳಗೆ ಮಣ್ಣು ಕಲ್ಲು ಅಲ್ಲದೆ ಇನ್ನೇನಿದೆ? ಮಣ್ಣನ್ನು ಉಗುಳದೆ ಗಂಟಲಲ್ಲಿ ಸಿಕ್ಕಿದರೆ? ಹಾಗೇ ಆಯಿತು. ಮಣ್ಣು ಗಂಟಲಲ್ಲಿ ಸಿಕ್ಕಿ ಹತ್ತಿಕ್ಕಿ ಕೆಮ್ಮು ಬಂದು ಮೂಗು ಕಣ್ಣಲ್ಲಿ ನೀರಿಳಿದು ಪಚೀತಿ! ಆಯಿ ಹೇಗೋ ತನ್ನ ಬೆರಳಿನಿಂದ ಮಣ್ಣನ್ನು ಹೊರತೆಗೆದು ಬಾಯಿ ತೊಳೆಯಿಸಿ ಸೆರಗಿನ ತುದಿಯಿಂದ ಬಾಯಿ ಮುಖ ಒರೆಸಿದಳು. ಅಷ್ಟು ಹೊತ್ತು ಮಾತು ಹೊರಡದೆ ಸುಮ್ಮನಿದ್ದವ, "ಯಾಕೆ ಬಾಯಿಂದ ಮಣ್ಣು ತೆಗೆದೆ?" ಆರ್ಭಟಿಸಿದ, "ನಿಂಗೆ ಅದೆಂತದೋ ಜಗತ್ತನ್ನು ತೋರಿಸಲು ಅದೇ ಅಜ್ಜಯ್ಯ ಶ್ರೀಕೃಷ್ಣನ ಕಥೆಯಲ್ಲಿ ಹೇಳಿದ್ದು, ಹಾಗೇ ನನ್ನ ಬಾಯೊಳ್ಗೆ ತೋರಿಸ್ಬೇಕು ಅಂದ್ಕಂಡಿದ್ದೆ. ಎಲ್ಲ ಮಣ್ಣು ಹೋಯ್ತು."

ವಾಹ್ ಮಗನೇ, ಮೊನ್ನೆ ಶ್ರೀಕೃಷ್ಣನ ಕಥೆ ಕೇಳಿದ ಲಾಗಾಯ್ತು ನಾಣಿಯದು ಒಂದೇ ಪ್ರಶ್ನೆ, "ಬಾಲ ಕೃಷ್ಣನಂತೆ ನಂಗೂ ಬಾಯಲ್ಲಿ ಜಗತ್ತು ತೋರಿಸಲು ಆತಿಲ್ಯಾ? ನನ್ನ ಬಾಯಲ್ಲಿ ಹಣಿಕಿದರೆ ಎಂತ ಕಾಣ್ತು?" ಇವತ್ತು ಮಣ್ಣು ತುಂಬಿಕೊಂಡು ಬಂದಿದ್ದಾನೆ ತನಗೆ ವಿಶ್ವರೂಪ ದರ್ಶನ ಮಾಡಿಸಲು! ಪಾಪ, ಆಯಿ ಅವನನ್ನು ಅಪ್ಪಿ ಸಮಜಾಯಿಸಿದಳು, "ತಾಯಿಗೆ ಬಾಯೊಳು ಜಗವನ್ನೇ ತೋರಿದ ಶ್ರೀಕೃಷ್ಣ. ಹೌದು ಮಗಾ, ಆದರೆ ನೀನು ದೇವತಾ ಸ್ವರೂಪಿ ಶ್ರೀಕೃಷ್ಣನೇ? ಅಲ್ಲ, ನೀನು ಶ್ರೀಕೃಷ್ಣನಲ್ಲ, ನಾನು ಯಶೋದೆಯೂ ಅಲ್ಲ! ಇನ್ನು ಅವನಂತೆ ನೀನು ಬಾಲಲೀಲೆಗೆ ಹೊರಟರೆ ಈ ಬಡಪಾಯಿ ಆಯಿ ಪಡ್ಚ!"

ಈ ಪ್ರಸಂಗ ಚಕ್ರೀಅಮ್ಮಮ್ಮನಿಗೂ ಗೊತ್ತು. ಅವಳು ಪ್ರತಿದಿನ ಕಡೆಗೋಲಿನ ತುದಿಗೆ ಒಂದು ಕಡಲೆಕಾಳು ಗಾತ್ರದ ಬೆಣ್ಣೆ ಚೂರು ಇಡುತ್ತಾಳಲ್ಲ, ಆದರೆ ನಾಣಿ ಬಂದಾಗ ತನ್ನ ಮನೆಯಲ್ಲಿ ಇರುವಷ್ಟು ದಿನವೂ ದೊಡ್ಡ ಗಾತ್ರದ ಬೆಣ್ಣೆ ಮುದ್ದೆ ಇಡುತ್ತಾಳೆ. ಅದನ್ನು ಯಾವ ಹೊತ್ತಿನಲ್ಲಿ ನಾಣಿ ಕದ್ದು ತಿನ್ನುವನೋ!

♣♣♣

ಹೊಳೆಬಾಗಿಲು ಮನೆಯಿಂದ ಹಾಡಿಯಲ್ಲಿ ಎರಡು ಫರ್ಲಾಂಗ್ ನಡೆದು ಬಲಕ್ಕೆ ತಿರುಗಿದರೆ ಗುಡಿಗಾರು ದೇವಣ್ಣನ ಮನೆ. ಸುಮಾರು ಅರ್ವತ್ತರ ವಯಸ್ಸಿನ ದೇವಣ್ಣ ಎತ್ತರದ ಆಳು, ಹೆಂಡತಿ ಮಕ್ಕಳು ಮೊಮ್ಮಕ್ಕಳಿರುವ ಸುಖಿ ಸಂಸಾರ. ಅವನ ಹಿರಿಯರು ಹಸೆ ಮಣೆ ಏರಲಿರುವ ಹೊಸ ಮದುಮಕ್ಕಳಿಗೆ ಬೇಕಾದ ಬಾಸಿಂಗ ತಯಾರಿಕೆಯಲ್ಲಿ ನಿಷ್ಣಾತರು. ದೇವಣ್ಣನಿಗೂ ಈ ವೃತ್ತಿ ಹಿರಿಯರಿಂದ ಬಂದದ್ದು. ಬೆಂಡು, ಹೊಳೆಯುವ ಬಣ್ಣದ ಕಾಗದ, ಬಣ್ಣದ ಮಣಿಗಳು, ಮುತ್ತುಗಳು, ಟಿಕಳಿಗಳಿಂದ ಜನರ ಬೇಡಿಕೆ ತಕ್ಕಂತೆ ಯಾವ ನಮೂನೆ, ಎಷ್ಟು ಕ್ರಯದ್ದು? ತಯಾರಿಸುತ್ತಾನೆ. ಈ ಊರಿನಲ್ಲಿ ಮಾತ್ರವಲ್ಲ ಪರಊರಿನಿಂದಲೂ ಬೇಡಿಕೆ ಇದೆ. ದೇವಣ್ಣನ ಬಾಸಿಂಗ ಕಟ್ಟದೆ ಯಾರ

ಮದುವೆಯೂ ಆಗಲಾರದು! ಚಕ್ರಿ ಅಮ್ಮಮ್ಮನೂ ತನ್ನ ಇಬ್ಬರು ಮಕ್ಕಳ ಮದುವೆಗೆ ತರಿಸಿದ್ದು ಇಲ್ಲಿಯದೇ ಬಾಸಿಂಗಗಳು. ವಧೂ ವರರಿಗೆ ಕಟ್ಟಿದ ಬಾಸಿಂಗವನ್ನು ಕಸಕ್ಕೆ ಎಸೆಯದೆ ವರನ ಮನೆಯಲ್ಲಿ ಕಂಭಕ್ಕೆ ಕಟ್ಟಿ ಇಡುವುದು ಪದ್ಧತಿ. ಹೊಳೆಬಾಗಿಲು ಮನೆಯ ಅಟ್ಟದ ಒಂದು ಭಾಗದಲ್ಲಿ ಸುಬ್ಬಪ್ಪಯ್ಯ ದಂಪತಿಗಳ, ಅದಕ್ಕೂ ಹಿಂದಿನವರ ಹಳೆ ಬಾಸಿಂಗಗಳು ಅಲ್ಲದೆ ಈಗಿನ ಆಯಿ, ಅಪ್ಪಯ್ಯ, ದೊಡ್ಡಪ್ಪ ದಂಪತಿಗಳ ಹೊಸ ಬಾಸಿಂಗಗಳಿವೆ.ಚಕ್ರೀ ಅಮ್ಮಮ್ಮನ ಅಟ್ಟದಲ್ಲೂ ನಾಲ್ಕಾರು ಕಂಭಗಳಲ್ಲಿ ಹಲವಾರು ಮದುಮಕ್ಕಳ ಬಾಸಿಂಗಗಳು. ಬಲೆ, ಕಸ ಮಸಿ ಹಿಡಿದರೂ ಇವೆಲ್ಲ ವೃದ್ಧಾಪ್ಯದಲ್ಲಿ ಜೀವನದ ಮಧುರ ಸ್ಮೃತಿ ಆನಂದಿಸುವ ಹಿರಿಯ ಜೋಡಿಗಳಿಗೆ ತಮ್ಮ ಮದುವೆ ನೆನಪಿಸುವ ಸಾಕ್ಷಿಗಳು!

ಗುಡಿಗಾರ ದೇವಣ್ಣ ಯಕ್ಷಗಾನದ ಮುಖವರ್ಣಿಕೆ, ಕಿರೀಟ, ವೇಷಭೂಷಣ, ಆಭರಣ ತಯಾರಿಕೆಗೂ ಪಳಗಿದ ಹಸ್ತ. ನಾಣಿ ಗೌರಿಗೆ ಅವನ ಮನೆಯೆಂದರೆ ಯಕ್ಷಲೋಕ. ಆಗಾಗ ಅಲ್ಲಿಗೆ ಹೋಗುತ್ತಿದ್ದರು. ಅವನ ಹೊರಕೋಣೆ ತುಂಬಾ ತಯಾರಿಕೆಯ ವಸ್ತುಗಳ ರಾಶಿ ರಾಶಿ. ಅವನ್ನು ತೆಗೆ ತೆಗೆದು ನೋಡುತ್ತಿದ್ದರು. ತಲೆಗಿಟ್ಟು ಮುಖಕ್ಕಿಟ್ಟು, ಮೈಗೆ ಇಟ್ಟು ಸಂಭ್ರಮಿಸುತ್ತಿದ್ದರು. ಮೈದಾ ಹಿಟ್ಟು ಬೇಯಿಸಿ ಮಾಡಿದ ಅಂಟಿನಲ್ಲಿ ಬಾಸಿಂಗಕ್ಕೆ ಟಿಕಳಿ ಜೋಡಿಸುವಾಗ ಗೌರಿ ತಾನೂ ಸಹಾಯ ಮಾಡುವ ನೆಪದಲ್ಲಿ ಅವನ ಕೆಲಸ ಕೆಡಿಸಿದ್ದೂ ಉಂಟು. ನಾಣಿ ಬಣ್ಣದ ಕಾಗದ, ಮಣಿಸರ, ಮುತ್ತಿನ ಮಾಲೆ ತೆಗೆಯುತ್ತಿದ್ದ. ಜೋಡಿಸಿ ಇಟ್ಟ ವಸ್ತುವಿನ ಹದಗೆಡಿಸಲು ಅವನು ಹುಷಾರು. ದೊಡ್ಡಮನೆಯ ಮಕ್ಕಳು! ದೇವಣ್ಣ ಸಹಿಸುತ್ತಿದ್ದ ಅವರ ಉಪಟಳ. ಒಮ್ಮೆ ನಾಣಿ ಅವನಿಗೆ ತಿಳಿಯದಂತೆ ಒಂದು ಮುಷ್ಟಿ ಮುತ್ತು ಕಿಸೆಗೆ ಸೇರಿಸಿ ತಂದಿದ್ದ. ಅಕ್ಕ ಸರ ಮಾಡಿ ಕುತ್ತಿಗೆಗೆ ಹಾಕಿಕೊಂಡರೆ ಚೆಂದ ಕಾಣ್ತಾಳೆ. ಅವನ ಮುತ್ತಿನ ರಾಶಿಯಲ್ಲಿ ಒಂದು ಮುಷ್ಟಿ ಏನು ಮಹಾ? ಅವು ಒಳ್ಳೆ ಮುತ್ತಲ್ಲ, ಸಂತೆಯಲ್ಲಿ ಸಿಗುವ ನಾಲ್ಕು ದಿನ ಬಾಳುವ ಸಾಧಾರಣ ಮುತ್ತುಗಳು. ಸಾಧಾರಣವಿರಲಿ, ಊಂಚಿಯೇ ಆಗಿರಲಿ ಹೇಳದೆ ತೆಗೆಯುವುದು ಅಪರಾಧ. ಆ ದಿನ ಆಯಿ ಬಾಳೆರೆಂಭೆಯಿಂದ ನಾಣಿಗೆ ಹೊಡೆದು,

"ಗೌರಿ, ಇವನ್ನು ಈಗಲೇ ದೇವಣ್ಣನಿಗೆ ಕೊಟ್ಟು ತಪ್ಪಾಯ್ತು ಹೇಳಿ ಬನ್ನಿ. ಯಾರ ವಸ್ತು ತೆಗೀವದೂ, ಕದಿವದು ಪಾಪ ಅಂತ ಗೊತ್ತಿಲ್ಲೆಯಾ?"ಎಂದಿದ್ದಳು. ಸಿಟ್ಟಿನಲ್ಲಿ

ಆದರೆ ಇಬ್ಬರೂ ದೇವಣ್ಣನೆದುರು ತಾವು ಕಳ್ಳರಾಗದಂತೆ ಮುತ್ತುಗಳನ್ನು ಹೊಳೆಗೆಬಿಸಾಕಿ ಬಂದದ್ದು ಈಗಲೂ ಆಯಿಗೆ ತಿಳಿದಿಲ್ಲ. ಇನ್ನೊಮ್ಮೆ ಅಕ್ಕನ ಉಗುರಿಗೆ ಬಣ್ಣ ಹಚ್ಚುವ ಸಣ್ಣ ಬಾಟ್ಲಿ ದೇವಣ್ಣನ ಪೆಟ್ಟಿಗೆಯಿಂದ ಎಗರಿಸಿದ್ದ. ಆದರೆ ಅದನ್ನು ಹಚ್ಚಿಕೊಳ್ಳುವುದು ಹೇಗೆ? ಆಯಿ ಕೇಳಿದರೆ ಉತ್ತರ? "ಈಗ ಎಂತ ಮಾಡೆಕ್ಕು ಅಕ್ಕ?" ಕೇಳಿದ್ದ.

"ನಿಂಗ್ಯಾಕೆ ಕದಿವ ಬುದ್ಧಿ ಬಂತು ನಾಣಿ? ನಮಗೇನು ಕಮ್ಮಿ ಆಗಿದೆ ಕದಿವಲೆ? ಹೋಗು, ಇದನ್ನೂ ಹೊಳೆಗೆ ಬಿಸಾಕು. ಹೊಳೆ ಏನು ಕೊಟ್ಟರೂ ಸ್ವಾಹಾ ಮಾಡ್ತು." ಹೇಳಿದ ಗೌರಿ ತನ್ನ ತಲೆ ಮೇಲೆ ಅವನ ಕೈಯ್ಯಿರಿಸಿ, "ಇನ್ಮೇಲೆ ಯಾರ ವಸ್ತು ಕದೀತಿಲ್ಲೆ ಹೇಳಿ ಪ್ರಮಾಣ ಮಾಡು."

"ತಪ್ಪಾತು ಅಕ್ಕ, ಭಾಷೆ ಕೊಡ್ತೆ. ಅಪ್ಪಯ್ಯ, ಆಯಿ, ನಿನ್ನ ಮೇಲೆ ಆಣೆ, ಆಣೆ, ಆಣೆ. ನಾ ಕದೀತಿಲ್ಲೆ"

ದೇವಣ್ಣ ತನ್ನ ಕೆಲಸದಲ್ಲಿ ಇವರನ್ನು ಗಮನಿಸಿರಲಾರ. ಆದರೂ ದೇವಸ್ಥಾನದಲ್ಲಿ ತನ್ನ ಪ್ರವಚನದ ಮಧ್ಯೆ ಪರರ ಸೊತ್ತು ಅಪಹರಿಸುವ ವಿಷಯ ಹೇಳುತ್ತ ತಮ್ಮಿಬ್ಬರ ಮುಖ ನೋಡುವುದು ಯಾಕೋ. ಮುಗ್ಧ ಗೌರಿ ಜೀವಕ್ಕೂ ಪುಕು ಪುಕು. ಅವಳಿಗೊಂದು ಅನುಮಾನ. ಅಕ್ಕನಿಗೆ ಎಂದು ನಾಣಿ ಉಸುರುವ ಮಾತಿನಲ್ಲಿ ಅವನ ನವಿಲುಗರಿ ಪೆಟ್ಟಿಗೆಯಲ್ಲಿ ನಿಗೂಡ ವಸ್ತುಗಳು ಎಷ್ಟಿವೆಯೋ? ತಾನು ಇನ್ನೂ ನೋಡಿಲ್ಲ. ಅದೇ ದಿನ ಅವನಿಗೆ ತಿಳಿಯದಂತೆ ನವಿಲುಗರಿ ಪೆಟ್ಟಿಗೆ ತೆರೆದಳು. ಅದರಲ್ಲಿ ಗಿಡಿದು ತುಂಬಿದ ಅವನ ಅಮೂಲ್ಯ ವಸ್ತುಗಳನ್ನು ಹೊರಗೆಳೆದಾಗ ಸಿಕ್ಕಿದ್ದು ಬಾಲಕೃಷ್ಣನ ಸಣ್ಣ ಕಂಚಿನ ಮೂರ್ತಿ, ನವಿಲುಗರಿ, ಕೊಕ್ಕರೆಯ ಪುಕ್ಕಗಳು, ಹಸಿರು ಬಣ್ಣದ ಉದ್ದ ಬಾಲದಂತಿದ್ದ ಹಕ್ಕಿಯ ಗರಿಗಳು, ನಾಯಿಮರಿ ಗೊಂಬೆ, ಗಿರಿಗಿಟ್ಟಿ, ಬುಗರಿ, ಎರಡು ಖಾಲಿ ಸಿಗರೇಟು ಪ್ಯಾಕೆಟ್,[ರಘು ದೊಡ್ಡಪ್ಪ ಸೇದಿ ಬಿಸಾಡಿದ್ದು] ಹಳೆ ವಾಚು, ಇನ್ನೂ ಏನೇನೋ ಕಾಟಂಗೋಟಿ ನಿರುಪಯುಕ್ತ ವಸ್ತುಗಳೇ. ಅದೋ, ಒಂದು ಬಣ್ಣಗೆಟ್ಟ ತಗಡಿನ ಚಕ್ರಗಳು ಕಳಚಿದ ಮುರಿದ ಟಿನ್ನಿನ ಸಣ್ಣ ಮೋಟಾರ್ ಗಾಡಿ. ನೋಡಿದ್ದೆ ನೆನಪಾಯಿತು, ತನಗೆ ಕೆಲವು ವರ್ಷಗಳ ಹಿಂದೆ ಅಪ್ಪಯ್ಯ ಪಿಳಿ ಪಿಳಿ ಬೊಂಬೆ ತರುವಾಗ ನಾಣಿಗೆ ತಂದಿದ್ದ ಮೋಟಾರ್‌ಗಾಡಿ. ಆ ದಿಗಳಲ್ಲಿ ಅವನಿಗೆ ಮೋಟಾರ್ ಗಾಡಿಯದೇ ಹುಚ್ಚು. ಕೀಲಿ ಕೊಟ್ಟಾಕ್ಷಣ  ಸಪಾಟು ನೆಲದಲ್ಲಿ ಭರ್ ಓಡುತ್ತಿದ್ದರೆ ಅವನು ಕೇಕೆ ಹಾಕುತ್ತಿದ್ದ. ರೈಟೋ ರೈಟ್ ಹೊಳೆಬಾಗಿಲು, ಚಕ್ರೀ ಅಮ್ಮಮ್ಮನ ಮನೆ, ಸಾಸ್ತಾನ, ಉಡುಪಿ, ಮಂಗಳೂರು ಹೋ, ತನಗೆ ಗೊತ್ತಿದ್ದ ಊರ ಹೆಸರು ಹೇಳುತ್ತ ಅದರ ಹಿಂದೆ ಓಡುವ ಕೈಕರಣದ ನಟನೆ ಮಾಡುತ್ತ ತಾನೇ ಹೋಗುವ ಕಲ್ಪನೆಯಲ್ಲಿ, ಎಷ್ಟು ಮುಗ್ಧ ಚೆಂದ ಈ ನಾಣಿ. ಆಡಿ ಆಡಿ  ದಣಿದು ಮೋಟಾರ್ ಗಾಡಿಯನ್ನು ಎಲ್ಲೋ ಇಟ್ಟು ಬಿಡುತ್ತಿದ್ದ. ಗೌರಿ ಬೇಕಿತ್ತು ಅದನ್ನು ಎತ್ತಿ ಇಡಲು.

ಇವತ್ತು ಆ ಮೋಟಾರ್ ಗಾಡಿ ಅವ‌ ಪೆಟ್ಟಿಗೆಯಲ್ಲಿ ಭದ್ರವಾಗಿಟ್ಟ ಗೊಂಬೆಯನ್ನು ನೆನಪಿಸಿತು. ಆವತ್ತು ಚಕ್ತಿ ಮನೆಯಲ್ಲಿ ವಿನಾಯಕ ಕರ್ಪೂರದ ಗೊಂಬೆಯ ಕೈಕಾಲು ಮುರಿದು ಹಾಕಿದ್ದು ಒಳ್ಳೆಯದೇ ಆಯ್ತು. ಅಪ್ಪಯ್ಯ ಹಣದ ಮುಖ ನೋಡದೆ

ಅದಕ್ಕಿಂತ ಅಪೂರ್ವವಾದ ಗೊಂಬೆ ತಂದು ಕೊಟ್ಟಿದ್ದ. ಸ್ಯಾಟಿನ್ ಅಂಗಿ, ಕಾಲಿಗೆ ಬೂಟು, ತಲೆಗೆ ಹ್ಯಾಟು, ಕಾಲ ಮೇಲೆ ಮಲಗಿಸಿದರೆ ಕಣ್ಣು ಮುಚ್ಚುವ, ಎತ್ತಿದರೆ ಕಿಂಯ್ ಸ್ವರ ಹೊರಡಿಸಿ ಕಣ್ಣು ತೆರೆಯುವ ಗೊಂಬೆ. ಗೌರಿಗೆ ಪ್ರಪಂಚದ ಎಲ್ಲ ವಸ್ತುವಿಗಿಂತ ಶ್ರೇಷ್ಠ ಈ ಗೊಂಬೆ. ಎತ್ತಿ ಮಲಗಿಸಿ, ತೂಗಿ ಹಾಡಿ, ಗೌರಿಯ ದಿನವೆಲ್ಲ ಆ ಗೊಂಬೆ ಆಟಕ್ಕೆ ಮೀಸಲು. ನಿಜ, ಗೌರಿಯಂತಹ ಪುಟ್ಟ ಹೆಣ್ಣಿನಲ್ಲೂ ತಾಯ್ತನದ ಜಾಗ್ರತಿ ಪ್ರಕೃತಿಯೇ ಕೊಡುವ ಕೊಡುಗೆ. ಅವಳ ಆಟಕ್ಕೆ ನಾಣಿ ತಲೆ ಹಾಕಿದ್ದೇ ಇಲ್ಲ. ಆದರೂ ಗೌರಿಗೆ ಅನುಮಾನ. ನಾಣಿಗೆ ಮತ್ಸರ ಬಂದು ವಿನಾಯಕ ಮಾಡಿದಂತೆ ತನ್ನ ಗೊಂಬೆಯ ಕೈಕಾಲು ಮುರಿದರೆ? ಆಟದ ನಂತರ ಗೊಂಬೆ ಅವಳ ಸರಕಿನ ಪೆಟ್ಟಿಗೆಯಲ್ಲಿ ಭದ್ರ. ನಾಣಿಗೆ ಗೊತ್ತು. ಆದರೆ ಅಕ್ಕನ ವಸ್ತು ತೆಗೆದು ನೋಡಲಾರ.

ಪಾಪ, ದೇವಣ್ಣನ ವಸ್ತುಗಳ ತನಿಖೆಗೆ ಸುಮ್ಮನೆ ನಾಣಿಯಲ್ಲಿ ತನಗೆ ಅನುಮಾನ ಎನಿಸುವಾಗ ತೀರ ಅಡಿಯಲ್ಲಿ ಮುದ್ದೆಯಾದ ಬಣ್ಣ ಬಣ್ಣದ ಕಾಗದಗಳು, ಬಣ್ಣದ ಟಿಕಳಿಗಳು, ಕೃಷ್ಣನ ವೇಷಕ್ಕೆ ಹಾಕುವ ಸಣ್ಣ ಕಿರೀಟ? ಇದೆಲ್ಲ ಎಲ್ಲಿಯದು? ದೇವಣ್ಣನ ಮನೆಯಲ್ಲಿ ಇದ್ದಂತಹದೇ? ಕಳ್ಳ, ತನಗೂ ತೋರಿಸದೆ ತಂದು ತುರುಕಿದ್ದಾನೆ? ಎಲ್ಲಾ ಹಾಗೇ ಇರಲಿ, ನಾಣಿ ಸುಳ್ಳುಗಾರ, ಕಳ್ಳನಲ್ಲ ಎಂಬ ಆಯಿಯ ನಂಬಿಕೆ ಹುಸಿಯಾಗಿತ್ತು. ಇಂದು ತಾನೂ ಗುಡಿಗಾರ ದೇವಣ್ಣನಿಗೆ ಹಿಂದಿರುಗಿಸಲು ಕೊಟ್ಟದ್ದು ಹೊಳೆಗೆ ಎಸೆದು ಅವಳ ನಂಬಿಕೆ ಕೆಡಿಸಿಬಿಟ್ಟೆ.

ಇದನ್ನು ಹೇಳಲು ಗೌರಿ ಆಯಿಯ ಸುತ್ತಲೂ ಎಡತಾಕಿ ಹಲವು ಬಾರಿ ಬಾಯ್ತೆರೆದು ಸೋತಳು. ಆ ನೀರವ ರಾತ್ರೆಯಲ್ಲಿ ಮನೆಯಾಚೆ ಹಾಡಿಯಿಂದ ರಾತ್ರೆ ಹಕ್ಕಿಗಳ ಕಿಚಿಕಿಚಿ ಸದ್ದಿನಲ್ಲಿ ಯಾರೋ ಸಣ್ಣಗೆ ಬಿಕ್ಕಳಿಸುವ ಸದ್ದು. ಆಯಿಗೆ ಗಾಡನಿದ್ರೆ. ಅವಳ ಎಡಬದಿಯಲ್ಲಿ ಮಲಗಿದ್ದ ನಾಣಿಯೇ ಬಿಕ್ಕಳಿಸಿ ಅಳುತ್ತಿರುವುದು? ಹೌದು, ಗೌರಿ ಮೆಲ್ಲನೆ ಎದ್ದು ನಾಣಿಯ ಹಾಸಿಗೆಯಲ್ಲಿ ಮಲಗಿ ಅವನ ಕುತ್ತಿಗೆ ಸುತ್ತ ಕೈಬಳಸಿದಳು. ಕಟ್ಟೆ ಹರಿದಂತೆ ಅಳು ಅಳು. "ಎಂತಕ್ಕೆ ಅಳ್ತೆ ತಮ್ಮಾ? ನಿನ್ನ ಕೇಳದೆ ನವಿಲುಗರಿ ಪೆಟ್ಟಿಗೆ ತೆರೆದೆ ಅಂತಾ ಬೇಜಾರಾ?ಅದರಲ್ಲಿ ಎಂತ ಇದ್ದು ನಾ ಆಯಿಗೆ ಹೇಳ್ಲಿಲ್ಲೆ. ಅದು ನನ್ನ ನಿನ್ನಲ್ಲಿ ಗಪ್ ಚಿಪ್"

"ಅಕ್ಕಾ, ನಿನ್ನಾಣೆ, ಆಯಿ ಅಪ್ಪಯ್ಯನಾಣೆ. ಇನ್ಮೇಲೆ ನಾ ಕದಿಯೂದಿಲ್ಲೆ ಅಕ್ಕ" ದುಃಖದಲ್ಲಿ ಮಾತು ಉಮ್ಮಳಿಸಿತು.

ಅವನನ್ನು ತಬ್ಬಿ ಬೆನ್ನು ನೇವರಿಸಿದಳು, "ನಾಳೆನೇ ಗುಡಿಗಾರರ ಮನೆಗೆ ಹೋಪ. ಅವರಲ್ಲಿ ನಮ್ಮ ತಪ್ಪು ಒಪ್ಪಿಕೊಂಡರೆ ತಪ್ಪೇನೂ ಇಲ್ಲ. ಕಳೆದ ಪ್ರವಚನದಲ್ಲಿ ಅವರು ಕೆಟ್ಟ ಕೆಲಸ ಮಾಡಿದರೂ ತಪ್ಪು ಒಪ್ಪಿಕೊಳ್ಳುವುದೇ ಪ್ರಾಯಶ್ಚಿತ ಅನ್ನಲಿಲ್ಲವೇ?"ನಾಣಿ

ಅರ್ಧ ಎದ್ದು ಕುಳಿತ, "ಆಯಿಗೆ ಮೊದಲು ನನ್ನ ತಪ್ಪು ಹೇಳಿ ಕ್ಷಮೆ ಕೇಳಿ ಆಮೇಲೆ ದೇವಣ್ಣನ ಮನೆಗೆ"

"ನಾಣಿ" ಏನೋ ನೆನಪಿಸಿ ಗೌರಿ ಅವನ ತಲೆ ನೇವರಿಸಿದಳು, "ನಾವು ಇನ್ನೂ ಒಂದು ತಪ್ಪು ಮಾಡಿ ಈವರೆಗೆ ಅಜ್ಜಯ್ಯ, ಆಯಿಯಿಂದ ಮುಚ್ಚಿ ಇಟ್ಟಿವಲ್ಲ. ನೆನಪಿದ್ದಾ ಅದೆಂತದು?"

"ನೆನಪಿದ್ದು ಅಕ್ಕ, ಅದೇ ಬ್ರಿಟಿಷ ಅಧಿಕಾರಿ ದೊಡ್ಡ ಬಿಳಿ ಮೀಸೆಯವ, ಕರಡಿ ಹಂಗೆ ಇದ್ದ, ಅವನ ವಿಷ್ಯ ಅಲ್ಲದ?"

"ಅವನದ್ದೇ. ಆದಿನ ಅಜ್ಜಯ್ಯನ ಮುಖ ಪಾಪ, ಅಳುವ ಹಾಂಗೆ ಆಗಿತ್ತು. ನಮಗೂ ಬುದ್ದಿ ಇಲ್ಲೆ. ನಾವು ಎಂತದೋ ಮಾತಾಡಿ ಇನ್ನೆಂತದೋ ಆಯ್ತು. ಅಜ್ಜಯ್ಯ ಅವಮಾನದಲ್ಲಿ ತಲೆ ತಗ್ಗಿಸಿದ್ದರೂ ನಾವಿನ್ನೂ ಅವನಿಗೆ ನಮ್ಮ ತಪ್ಪು ಹೇಳ್ಲೇ ಇಲ್ಲೆ. ಪಾಪ, ನಾಳೆ ಇದನ್ನೂ ಅಜ್ಜಯ್ಯನಿಗೆ ಹೇಳಿ" ಗೌರಿ ನೆನಪಿಗೆ ಬಂತು ಆದಿನ ಬ್ರಿಟಿಷ ಅಧಿಕಾರಿ ಮನೆಗೆ ಬಂದದ್ದು.

ಅದೊಂದು ದಿನ ಅಕಸ್ಮಾತ್ ಮನೆಗೆ ಬಂದಿದ್ದರು ಒಬ್ಬ ಬ್ರಿಟಿಷ್ ಅಧಿಕಾರಿ, ಮತ್ತು ಇಬ್ಬರು ಪೋಲೀಸ ಸಹಾಯಕರು. ಅಧಿಕಾರಿ ಬಳಿ ದಪ್ಪ ಚರ್ಮದ ಚೀಲವಿತ್ತು. ಅದರಿಂದ ಕೆಲವು ಕಾಗದ ಪತ್ರಗಳನ್ನು ತೆಗೆದು ಸುಬ್ಬಪ್ಪಯ್ಯರ ಮುಂದಿರಿಸಿದ ಅಧಿಕಾರಿ, "ನಿಮ್ಮ ಮೇಲೆ ನಮಗೊಂದು ದೂರು ಬಂದಿದೆ ಸುಬ್ಬಪ್ಪಯ್ಯನೋರೆ, ನಿಮ್ಮಲ್ಲಿ ನೂರು ಮುಡಿಗಿಂತಲೂ ಜಾಸ್ತಿ ಅಕ್ಕಿ ದಾಸ್ತಾನು ಇಟ್ಟಿದ್ದೀರಂತೆ. ಕಾನೂನು ಪ್ರಕಾರ ಅಕ್ಕಿ ದಾಸ್ತಾನು ಮಾಡ್ಬಾರದೆಂದು ಗೊತ್ತಿಲ್ಲವೇ?"

ಸುಬ್ಬಪ್ಪಯ್ಯ ಬೆಚ್ಚಿ ಬಿದ್ದರು. "ನನ್ನ ಗದ್ದೆಯಲ್ಲಿ ಬೆಳೆದ ಭತ್ತದ ಫಸಲು. ಮನೆಯಲ್ಲಿ ಕುಟ್ಟಿ ಅಕ್ಕಿ ಮಾಡಿ ಇಟ್ಟದ್ದು ಕಾನೂನು ರೀತ್ಯಾ ತಪ್ಪು, ಅಕ್ರಮ ಹೇಗಾಗುತ್ತದೆ?"

"ನಿಮ್ಮೂರಿನಿಂದ ಹೆಸರಿಲ್ಲದೆ ಬಂದ ದೂರು. ಸತ್ಯ ಸಂಗತಿ ತಿಳಿಬೇಕು ನಾವು. ಮೇಲಿನ ಅಧಿಕಾರಿಯ ಆದೇಶದಂತೆ ನಿಮ್ಮ ದಾಸ್ತಾನು ತನಿಖೆ ಮಾಡಬೇಕು" ಎಂದ.

ಸುಬ್ಬಪ್ಪಯ್ಯರ ಬಳಿ ಪ್ರತಿವರ್ಷದ ಬೆಳೆಯ ಲೆಕ್ಕದ ಪಟ್ಟಿಯಿದೆ. ಮಳೆಗಾಲಮತ್ತು ಬೇಸಿಗೆಯ  ಎರಡು ಬೆಳೆಬೆಳೆದ ಭತ್ತದ ಲೆಕ್ಕ, ಅವನ್ನು ಅಕ್ಕಿ ಮಾಡಿ ಮುಡಿ ಕಟ್ಟಿಸಿ ಇಟ್ಟ ಲೆಕ್ಕ ಆ ಪಟ್ಟಿಯಲ್ಲಿದೆ. ವರ್ಷದ ಖರ್ಚಿಗೆ ಅವೂ ಸಾಲದೆ ಹೊರಗಿನಿಂದ ಭತ್ತ ಖರೀದಿಸಿದ ಲೆಕ್ಕವೂ ಇದೆ. ಸುಬ್ಬಪ್ಪಯ್ಯರು  ಪೂರಾ ಲೆಕ್ಕ ಅಧಿಕಾರಿಯ ಮುಂದಿಟ್ಟರು. ಸಮಾಧಾನ ಆದಂತೆ ಕಾಣಲಿಲ್ಲ. ಅನಂತರ ಅವರನ್ನು ಹೊಗೆ ಅಟ್ಟಕ್ಕೆ [ಅಡಿಗೆ ಮನೆಯ ಮೇಲಿನ ಅಟ್ಟ. ಅಡಿಗೆಗೆ ಉರಿಸಿದ ಬೆಂಕಿಯ ಶಾಖ ಮೇಲಿನ ಅಟ್ಟಕ್ಕೆ

ಬಂದು ಅಲ್ಲಿಟ್ಟ ದಾಸ್ತಾನು, ಉಪ್ಪಿನಕಾಯಿ ಹಪ್ಪಳ ಇತ್ಯಾದಿ ಹಾಳಾಗುವುದಿಲ್ಲ] ಕರೆದೊಯ್ದು ಶೇಖರಿಸಿಟ್ಟ ಅಕ್ಕಿ ಮುಡಿ ತೋರಿಸಿದರು. ಅಲ್ಲಿ ಒಂಬತ್ತು ಮುಡಿಗಳಿದ್ದವು.

"ಒಂದು ಮುಡಿಗೆ ಎಷ್ಟು ಸೇರು ಅಕ್ಕಿ?" ದರ್ಪದಲ್ಲಿ ಕೇಳಿದ ಅಧಿಕಾರಿ.

"ಒಂದು ಕಳಸಿಗೆ ಅಂದರೆ ಹದಿನಾಲ್ಕು ಸೇರು ಅಕ್ಕಿ. ಮೂರು ಕಳಸಿಗೆ ಅಕ್ಕಿ ಅಂದರೆ ಒಂದು ಮುಡಿ. ಈಗ ನೀವೇ ಲೆಕ್ಕ ಹಾಕಿ ನಲವತ್ತೆರಡು ಸೇರು ಅಕ್ಕಿ ಒಂದು ಮುಡಿಗೆ. ಸ್ವಾಮೀ, ಈ ವರ್ಷ ಫಸಲು ಕಮ್ಮಿ. ಈ ಅಕ್ಕಿ ವರ್ಷ ಪೂರಾ ನಮ್ಮ ಊಟಕ್ಕೆ ಸಾಲದು. ಇದಲ್ಲದೆ ಅಲಾಯಿದ ಉದ್ದು, ನವಣೆ ಅದು ಇದೂ ಆಗಬೇಕಲ್ಲ ಸಂಸಾರಸ್ಥರ ಹೊಟ್ಟೆಗೆ. ಎಲ್ಲಾ ನಿಮ್ಮ ಕಣ್ಣೆದುರು ಇದೆ. ಇನ್ನೆಲ್ಲೂ ಅಡಗಿಸಿ ಇಟ್ಟದ್ದು ಇಲ್ಲೆ. ಯಾರೋ ಆಗದವರು ಕೊಟ್ಟ ದೂರು ಇದು" ಅಟ್ಟದಿಂದ ಕೆಳಗಿಳಿಯುತ್ತ ಸುಬ್ಬಪ್ಪಯ್ಯ ಬೆವರಿ ಹೋಗಿದ್ದರು. ಪಾಪ, ವಯಸ್ಸು ಎಂಬತ್ತೆರಡು ಆಯ್ತು. ಅಟ್ಟ ಹತ್ತಿ ಇಳಿಯುವುದು ಖುಷಾಲೇ? ಏದುಸಿರು ಬಿಡುತ್ತಿದ್ದರು. ಆಗೆಲ್ಲ ಲೆಕ್ಕಕ್ಕಿಂತ ಹೆಚ್ಚು ದಾಸ್ತಾನು ಅಕ್ಕಿ ಧಾನ್ಯ ಕದ್ದು ಮುಚ್ಚಿಟ್ಟರೆ ಜೈಲು ಶಿಕ್ಷೆಯೇ ಗತಿ. ಸುಬ್ಬಪ್ಪಯ್ಯರನ್ನು ಈ ಅಧಿಕಾರಿ ಕೋಳ ಹಾಕಿ ಕರೆದೊಯ್ಯುವನೆಂದು ಗೌರಿ, ನಾಣಿ ಹೆದರಿ ಬೆಕ್ಕಿನಂತೆ ಮುದುರಿ ಆಯಿಯ ಸೀರೆಯ ಹಿಂದೆ ಅಡಗಿದ್ದರು. "ಅವರೆಂತ ಹುಲಿಯಾ ಕರಡಿಯಾ? ತಪ್ಪು ಮಾಡಿದ್ರೆ ಹೆದರಿಕೆ. ನಾವೆಂತ ತಪ್ಪು ಮಾಡ್ಲಿಲ್ಲೆ. ಸುಮ್ಮನಿರಿ" ಮಕ್ಕಳಿಗೆ ಧೈರ್ಯ ಹೇಳಿದ ಆಯಿ ತಟ್ಟೆ ತುಂಬಾ ತಿಂಡಿ, ಬಾಳೆಹಣ್ಣು, ಮುರುಗುಲ ಹಣ್ಣಿನ ಪಾನಕ ತಂದಿಟ್ಟಳು. ಪ್ರಸನ್ನನಾದ ಅಧಿಕಾರಿ,

"ಆಸುಪಾಸಿನಲ್ಲಿ ನಿಮ್ಮ ಪ್ರಾಮಾಣಿಕತೆ ಬಗ್ಗೆ ಜನ ಒಳ್ಳೆಯ ಮಾತು ಹೇಳ್ತಾರೆ. ಆದರೂ ದೂರು ಬಂದಾಗ ತನಿಖೆ ಮಾಡುವುದು ನಮ್ಮ ಕರ್ತವ್ಯ. ನನ್ನ ಸಮಯ ಹಾಳಾಯ್ತು ಇಲ್ಲಿಗೆ ಬಂದು. [ಆಯ್ ವೇಸ್ಟ್ ಮೈ ಟೈಮ್] ಇದರ ಪರಿಹಾರ ಒಂದು ಮುಡಿ ಅಕ್ಕಿ" ಎಂದಬ್ರಿಟಿಷ್ ಅಧಿಕಾರಿ ಹಲ್ಕಿರಿದು. ಅವನ ಮಾತು ಆಜ್ಞೆಯಂತೆ. ಕೆಲಸದವ ಒಂದು ಮುಡಿ ಅಕ್ಕಿ ಹೊತ್ತು ಅಧಿಕಾರಿ ಕುಳಿತ ದೋಣಿಯಲ್ಲಿ ಇಟ್ಟು ಬಂದ.

"ಸುಲಿಗೆ? ಶುದ್ಧ ಸುಲಿಗೆ. ನಾವು ಭಾರತೀಯರು ತಗ್ಗಿ ಬಗ್ಗಿ ನಡೆವ ಗುಲಾಮರು." ಸಿಟ್ಟಿನಲ್ಲಿದ್ದ ಅಜ್ಜಯ್ಯ ಕೆಲ ವರ್ಷಗಳ ಹಿಂದೆ ಮೊದಲನೇ ಮಹಾಯುದ್ಧದ ಸಂದರ್ಭದ ದಿನಗಳಲ್ಲಿ ಬ್ರಿಟಿಷ್ ಅಧಿಕಾರಿಗಳ ದರ್ಪದ ವರ್ತನೆ ನೆನಪಿಸಿದ್ದರು. ಯುದ್ಧದ ಕಾಲ, ಸುಮಾರು ಎರಡು ವರ್ಷಗಳ ಕಾಲ ದೇಶದಲ್ಲಿ ಭೀಕರ ಬರಗಾಲ. ಆಗಲೂ ಹೀಗೆ, ತಾವು ಕಷ್ಟಪಟ್ಟು ಬೆಳೆದ ಬೆಳೆಯನ್ನು ರೈತರಿಗೆ ಮಾರುವ, ಒಂದೂರಿನಿಂದ ಇನ್ನೊಂದೂರಿಗೆ ಸಾಗಿಸುವ ಹಾಗಿರಲಿಲ್ಲ. ಸಿರಿವಂತರೂ ಅಗತ್ಯಕ್ಕಿಂತ ಹೆಚ್ಚು ದಾಸ್ತಾನು ಇಡುವುದೂ ಅಪರಾಧ. ಅಕ್ಕಿ ಗೋದಿ ಇತ್ಯಾದಿ ಆಹಾರ ಉತ್ಪನ್ನಗಳ ದಾಸ್ತಾನು ಕಂಡಲ್ಲಿ ಅವನ್ನು

ಅಧಿಕಾರಿಗಳು ಬಂದು ತನಿಖೆ ಮಾಡದೆ ಒಯ್ಯುತ್ತಿದ್ದರಂತೆ. ಜನ ಅವರಿಗೆ ಹೆದರಿಯೇ ಹುಲ್ಲಿನ ರಾಶಿಯಲ್ಲಿ, ಹೊಂಡಗಳಲ್ಲಿ, ಕತ್ತಲೆ ಪತ್ತಾಯದಲ್ಲಿ ಧಾನ್ಯದ ಮೂಟೆಗಳನ್ನು ಕಾಣದಂತೆ ಬಚ್ಚಿಡುತ್ತಿದ್ದರು. ಅದನ್ನೂ ಇಲಿಯಂತೆ ಹುಡುಕಿ ತೆಗೆಯುವ ಚಾಲಾಕಿ ಅಧಿಕಾರಿಗಳು.ಹೀಗೆ ಸಂಗ್ರಹವಾದ ಧಾನ್ಯ ಮೂಟೆ ಮೂಟೆಗಳಲ್ಲಿ ಹಡಗಿನ ಮೂಲಕ ದೇಶದಿಂದ ಹೊರಗೆ ಹೋಗಿಬಿಡುತ್ತಿತ್ತು. ನಮ್ಮ ದೇಶಕ್ಕೆ ಭೀಕರ ಬರಗಾಲ ಬಂದದ್ದು ಈ ಕಾರಣದಿಂದ. ಅವರ ಕಣ್ಣಿಗೆ ಹೊಳೆಬಾಗಿಲು ಸಣ್ಣ ಕುದ್ರು. ಅಲ್ಲೇನಿರುತ್ತದೆ ಮಣ್ಣು? ಯಾವ ಅಧಿಕಾರಿಗಳೂ ಯುದ್ಧ ಮುಗಿವ ತನಕ, ಅನಂತರದ ದಿನಗಳಲ್ಲಿ ಈ ಕಡೆ ಬರಲಿಲ್ಲವಂತೆ. ಈಗ ಆ ರಗಳೆಯಿಲ್ಲದೆ ತಾವು ನೂರಕ್ಕಿಂತ ಹೆಚ್ಚು ಅಕ್ಕಿ ಮುಡಿ ಕಳ್ಳ ದಾಸ್ತಾನು ಇಟ್ಟಿದ್ದೇವೆಂದು ಬ್ರಿಟಿಷ್ ಅಧಿಕಾರಿಗಳಿಗೆ ಹೇಳಿದ್ದು ಯಾರು? ವರ್ಷದಲ್ಲಿ ಆಗುವ ಅಕ್ಕಿಯೇ ಹನ್ನೆರಡು ಮುಡಿ. ವರ್ಷ ಖರ್ಚಿಗೆ ಸಾಲದು. ತಮಗೆ ಯಾರಲ್ಲೂ ವೈರತ್ವವಿಲ್ಲ. ಜಗಳವಿಲ್ಲ. ಕಷ್ಟದಲ್ಲಿ ಇರುವವರಿಗೆ ಕೊಟ್ಟವರೇ ವಿನಃ ಕೇಳಿದವರಲ್ಲ. ಇದು ತಮ್ಮ ಕೆಲಸದವರ ದುರ್ಬುದ್ಧಿಯೇ? ಕೂಗಾಡಿದ ಸುಬ್ಬಪ್ಪಯ್ಯರಿಗೆ ದೂರು ಕೊಟ್ಟವರು ಯಾರೆಂದು ತಿಳಿಯದೇ ಹೋಯಿತು. ಮೊಮ್ಮಕ್ಕಳನ್ನು ಕೇಳಿದರು, "ನಿಮಗೆ ಏನಾದರೂ ಸುಳಿವು ಸಿಕ್ತಾ?"

ಉಸಿರೆತ್ತಲಿಲ್ಲ ನಾಣಿ, ಗೌರಿ. ತಾವೀಗ ಬಾಯಿ ಬಿಟ್ಟರೆ ಬೆನ್ನ ಮೇಲೆ ಬಾಸುಂಡೆ ಖಚಿತವೇ. ನಿಜವಾಗಿಯೂ ತಾವೇ ತಪ್ಪಿತಸ್ಥರು! ಇಬ್ಬರೂ ತಮ್ಮಲ್ಲೇ ಅಂದುಕೊಂಡರು. ನಡೆದ ಸಂಗತಿ ಅವರಿಗೆ ಮಾತ್ರ ಗೊತ್ತು! ಕೆಲವು ದಿನಗಳ ಹಿಂದೆ ಹಣುಮನ ಮಗ ಕಲ್ಲಪ್ಪ ಅಲ್ಲದೆ ಇನ್ನೂ ಕೆಲವು ಮಕ್ಕಳೊಡನೆ ಆಡುತ್ತಿದ್ದಾಗ ಕಲ್ಲಪ್ಪ ನಾಣಿಯನ್ನು "ಊಟಕ್ಕಿಲ್ಲದ ಮಾಣಿ ಹಾಂಗೆ ಕಾಣ್ತೆ ನರಪೇತಲ!" ಎಂದಿದ್ದ ತಮಾಶೆಗೆ. ಅಷ್ಟಕ್ಕೆ ಸಿಟ್ಟು ಬಂತು ನಾಣಿಗೆ, "ಯಾರು ನರಪೇತಲ? ನೀನೇ ಉಂಬುಕೂ ಗತಿ ಇಲ್ಲದ ಬಿಕನಾಸಿ." ಆಗ ಗೌರಿಯೂ,"ಮೂರ್ಕಾಸಿನವ ನೀನೇ. ನಮ್ಮ ಅಜ್ಜಯ್ಯ ನೂರು ಮುಡಿ ಅಕ್ಕಿಯ ಸರದಾರ. ಗೊತ್ತಾ?ನಮ್ಮ ಮನೆ ಹೊಗೆ ಅಟ್ಟದಲ್ಲಿ ಅಕ್ಕಿ ಮುಡಿ ರಾಶಿಯೇ ಇದೆ ಇಷ್ಟೆತ್ತರಕ್ಕೆ. ಬಂದು ನೋಡು. ನಿಮ್ಮ ಮನೇಲಿ ಹುಡುಕಿದ್ರೆ ಮುಷ್ಟಿ ಅಕ್ಕಿಯೂ ಸಿಕ್ಕ. ಮಾತಾಡ್ತಾ. ನಿನ್ನ ಸಂಗ ಬ್ಯಾಡ. ಹೋಗಾ ಅತ್ಲಾಗೆ" ತಮ್ಮನ ಕೈಹಿಡಿದು ಆಟದಿಂದ ಹೊರಟು ಬಂದಿದ್ದಳು. ಅವಳಾಡಿದ ಮಾತಿಗೆ ರೆಕ್ಕೆ ಪುಕ್ಕ ಸೇರಿ ನೂರು ಮುಡಿ ಹೋಗಿ ನೂರಾರು ಮುಡಿ ಅಕ್ಕಿಯಾಗಿ ಬ್ರಿಟಿಷ್ ಅಧಿಕಾರಿಯ ಕಿವಿಗೆ ತಲುಪಿ ಆದದ್ದು ಅನರ್ಥವೇ. ಆದಿನ ಅಕ್ಕ ತಮ್ಮ ಕೈ ಮೇಲೆ ಕೈ ಇಟ್ಟು ತಮಗೆ ತಾವೇ ಪ್ರಮಾಣ ಮಾಡಿ, "ಇನ್ಮೇಲೆ ನಮ್ಮ ವಿಷ್ಯ ಯಾರಿಗೂ ಹೇಳಲಾಗ, ಪಾಪ ಅಜ್ಜಯ್ಯ"ಎಂದಿದ್ದರು. ಇವತ್ತು ಮತ್ತೆ ತಮ್ಮನ ಕೈಯ್ಯಲ್ಲಿ ತನ್ನ ಕೈ ಇಟ್ಟ ಗೌರಿ, "ಇದನ್ನೂ ಅಜ್ಜಯ್ಯನಿಗೆ ಹೇಳುವ

ನಾಣಿ. ಸತ್ಯ ಯಾವಾಗಲೂ ಸತ್ಯವೇ. ನಾಲ್ಕು ಬಾಸುಂಡೆ ಬೀಳ್ತು ಮೈಮೇಲೆ. ಎಂತ ಹೇಳ್ತೆ?"

ಇಬ್ಬರೂ ಜೊತೆಯಾಗಿ ಅತ್ತರು, ಕಣ್ಣೀರು ಒರಸಿ ನಕ್ಕರು. ಮುಗ್ಧತೆಯ ಪೊರೆ ಕಳಚಿ ಪ್ರಬುದ್ಧತೆ ತಾನು ತಾನಾಗಿಯೇ ಕಾಲಿಡುತ್ತಿತ್ತು.

❋❋❋

## ಅಧ್ಯಾಯ 9

ಗುಡಿಗಾರ ದೇವಣ್ಣ ಹಗಲು ಬಿಡುವಿಲ್ಲದಷ್ಟು ಕೆಲಸದಲ್ಲಿದ್ದರೂ ಸಂಜೆ ಆರರ ನಂತರ ಸೀದಾ ಅನ್ನಪೂರ್ಣೇಶ್ವರಿ ದೇವಿಯ ದೇವಸ್ಥಾನದಲ್ಲಿ ಹಾಜರು. ವಿನಯವೇ ಮೈವೆತ್ತಂತೆ ತಗ್ಗಿ ಬಗ್ಗಿ ನಡೆಯುವವ ಸಂಜೆ ದೈವೀ ಪ್ರಭೆಯಲ್ಲಿ ತನ್ನನ್ನೇ ಮರೆಯುವವ.ಪ್ರತಿ ಹದಿನೈದು ದಿನಕ್ಕೊಮ್ಮೆ ಅವನ ಪ್ರವಚನ ದೇವಸ್ಥಾನದ ಸಭಾ ಆವರಣದಲ್ಲಿ. ತುಂಬ ಪರಿಣಾಮಕಾರಿ ಅಲ್ಲದಿದ್ದರೂ ಚೆನ್ನಾಗಿ ದಾಸರ ಪದ ಹಾಡುತ್ತಾನೆ. ಭಕ್ತ ಪ್ರಹ್ಲಾದ, ಭಕ್ತ ಕುಂಬಾರ, ಶ್ರೀಕೃಷ್ಣ ಬಾಲಲೀಲೆ,ಶ್ರೀಕೃಷ್ಣ ಕಥಾ ಸಾರ, ಭಕ್ತ ಧ್ರುವ ಕುಮಾರ ಮುಂತಾದ ಭಕ್ತಿ ಪ್ರಧಾನ ಕಥೆಗಳ ಪ್ರವಚನದಲ್ಲಿ ಅವನ ಗಂಭೀರ ಕಂಠ, ಹಾಡು ಮಾತಿನಲ್ಲಿ ಕೇಳುಗರು ತಲೆದೂಗಬೇಕು.ಒಮ್ಮೆ ಸುಬ್ಬಪ್ಪಯ್ಯ ಅವನ ಪ್ರವಚನಕ್ಕೆ ಹೋದವರು, "ವಿದ್ವತ್ತು ಏನೂ ಇಲ್ಲ. ಹೆಂಗ್ಸು, ಮಕ್ಕಳಿಗೆ ಅವನ ಪ್ರವಚನ ಸಾಕು" ಎಂದದ್ದುಂಟು. ದೇವಣ್ಣನಿಗೆ ಬೇಸರವಿಲ್ಲ. ತಾನು ದೇವಿಗೆ ಭಕ್ತಿ ಮಾತುಗಳ ಸೇವೆ ಸಲ್ಲಿಸುವವ ಎನ್ನುತ್ತಾನೆ.ಈಗೀಗ ಮಾತನಾಡಿಯೇ ನಾಲಿಗೆ ಸಾಫ್ ಆಗಿ ಹಿರಿ ತಲೆಯವರು ಬರುತ್ತಿದ್ದಾರೆ. ಗೌರಿ, ನಾಣಿಗೆ ವಿದ್ವತ್ತಿನ ಮಹತ್ವ ಗೊತ್ತಿಲ್ಲ. ಮಕ್ಕಳಿಗೆಂದು ಕಥೆ ಹೇಳುವ ಅವನ ರೀತಿ ಇಷ್ಟ. ಇಲ್ಲದಿದ್ದರೆ ಈ ಬಾಲ ಬಿಚ್ಚುವ ಮಂಗಗಳು ದೇವಸ್ಥಾನಕ್ಕೆ ಬರುವುದುಂಟೇ! ಕಥೆಯ ಹುಚ್ಚು ದೇವಣ್ಣನ ಮಾತಿನ ಮೋಡಿಗೆ ಎಳೆದು ತಂದದ್ದು ಅಲ್ಲವೇ?

ಆ ಶುಕ್ರವಾರ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಸುಬ್ಬಪ್ಪಯ್ಯನವರ ಹಾಡು, ಕಮಲತ್ತೆಯ ಹಾರ್ಮೋನಿಯಂ ಆದ ನಂತರ ಗುಡಿಗಾರು ದೇವಣ್ಣನ ಪ್ರವಚನ. ಆದಿನದ ವಿಷಯ ಭಕ್ತ ಧ್ರುವ ಕುಮಾರ. ನಾಣಿ, ಗೌರಿ ಮೊದಲೇ ಬಂದು ಕುಳಿತಿದ್ದಾರೆ ಕಥೆ ಕೇಳಲು. ಏಳುವರ್ಷದ ಧ್ರುವಕುಮಾರ. ತಂದೆಯ ತೊಡೆಯೇರಿ ಕುಳಿತುಕೊಳ್ಳುವ ಆಸೆಗೆ ಅವನ ಮಲತಾಯಿ ಬಿಡುವುದಿಲ್ಲ. ಆಗ ಹೆತ್ತ ತಾಯಿ, "ನಿನ್ನ ತಂದೆಯ ಪ್ರೀತಿ ಗಳಿಸಲು ನೀನು ದೇವರನ್ನು ಹುಡುಕಿಕೊಂಡು ಹೋಗು" ಎನ್ನುತ್ತಾಳೆ. ಧ್ರುವಕುಮಾರ

ತಾಯಿಯ ಮಾತಿನಂತೆ ದೇವರನ್ನು ಒಲಿಸಿಕೊಳ್ಳಲು ಕಾಡಿಗೆ ಹೋಗುತ್ತಾನೆ. ಅವನು ದೀರ್ಘ ತಪಸ್ಸು ಮಾಡಿದ್ದು,ದೇವರು ಪ್ರತ್ಯಕ್ಷನಾಗಿ ವರ ಕೊಟ್ಟದ್ದು, ಕೊನೆಗೆ ಹೊಳೆಯುವ ನಕ್ಷತ್ರವಾಗಿ ಬಾನಿನಲ್ಲಿ ಚಿರಸ್ಥಾಯಿ ಆದದ್ದು, ಇದಿಷ್ಟು ಕಥೆ ಸ್ವಾರಸ್ಯದಲ್ಲಿ ವಿವರಿಸಿದ ದೇವಣ್ಣ ಈಗಲೂ ಉತ್ತರ ಭಾಗದಲ್ಲಿ ಧ್ರುವ ನಕ್ಷತ್ರ ನೋಡಬಹುದೆಂದೂ ಚೆಂದಕ್ಕೆ ಮನಸ್ಸಿಗೆ ನಾಟುವಂತೆ ಹೇಳಿದ. ಕೇಳಿ ಗೌರಿಗೆ ಅಳು. ನಾಣಿ ಕಣ್ಣಲ್ಲೂ ನೀರು. ಮುಂದೆ ಎರಡು ರಾತ್ರೆ ಆಕಾಶದ ಉತ್ತರಭಾಗದಲ್ಲಿ ಧ್ರುವ ನಕ್ಷತ್ರ ಹುಡುಕಿ, ಅಜ್ಜಯ್ಯನಿಂದ ಕೇಳಿ ತಿಳಿದು ನೋಡಿದ್ದರು. ಹೊಳೆಯುವ ದೊಡ್ಡ ನಕ್ಷತ್ರ!

ಧ್ರುವಕುಮಾರ ತಪಸ್ಸಿಗೆ ಕುಳಿತದ್ದು ಅರಣ್ಯದ ಏಕಾಂತ ಜಾಗದಲ್ಲಿ. ನದಿ ಹೊಳ್ಳ ಇಲ್ಲದ ದಟ್ಟ ಕಾಡಿನಲ್ಲಿ. ಒತ್ತಾಗಿ ಬೆಳೆದ ಮುತ್ತುಗದ ಮರವೋ, ಕಲ್ಮರದ ಮರವೋ, ಸಾಗವಾನಿಯೋ, ಅಶ್ವತ್ಥದ ಬಿಳಿಲೋ ಅದರ ಕೆಳಗೆ ಬಿದ್ದ ತರಗೆಲೆಗಳ ಹಾಸಿನಲ್ಲಿ ಪದ್ಮಾಸನ ಹಾಕಿ ಕುಳಿತು ತಪಸ್ಸು? ಅಯ್ಯಮ್ಮೋ!ಹಾವು ಹರಣೆ, ಹುಲಿಸಿಂಹ, ಆನೆ ಕರಡಿ ಬಂದೀತೆಂಬ ಹೆದರಿಕೆ ಇಲ್ಲವೇ ಆ ಪೋರನಿಗೆ? ದೇವರ ಕರೆಯಲ್ಲಿ ತಂದೆ ಪ್ರೀತಿ ಸಿಗಬೇಕೆಂಬ ಒಂದೇ ಧ್ಯಾನ. ನಾವೂ ಏಕಾಂತದಲ್ಲಿ ಕುಳಿತು ದೇವರನ್ನು ಧ್ಯಾನಿಸಿದರೆ ನಮ್ಮ ಬಯಕೆಗಳು ಕೈಗೂಡುತ್ತವೆ ಎಂದಿದ್ದ ದೇವಣ್ಣ ತನ್ನ ಪ್ರವಚನದಲ್ಲಿ. ಆಗಲೇ ಈ ಮಕ್ಕಳಲ್ಲಿ ತಾವೂ ಅವನಂತೆ ಧ್ಯಾನ ಮಾಡಬೇಕೆಂಬ ವಯೋಸಹಜ ಬಯಕೆ ಉದಯಿಸಿತ್ತು. ಏಕಾಂತಕ್ಕೆ ಅಟ್ಟ ಒಳ್ಳೆಯದು. ಅಲ್ಲಿ ಕುಳಿತುಕೊಳ್ಳೋಣವೇ? ಛೀ, ಸುಶೀಲಚಿಕ್ಕಿ ಇರುತ್ತಾಳೆ. ಅಟ್ಟಕ್ಕಿಂತ ಬೆಟ್ಟವೇ ಲಾಯಕ್ಕು. ಬೆಟ್ಟ ಅಂದರೆ ತಾವು ಹಾಡಿ ದಾಟಿ ಕಾಡಿಗೆ ಹೋಗಬೇಕು. ಅಲ್ಲಿ ಯಾರೂ ತಿರುಗದ ಯಾರೂ ನೋಡದ ಜಾಗ ಎಲ್ಲಿದೆ? ತಮ್ಮ ದನಕರುಗಳು ಮೇಯಲು ಕಾಡಿನ ತುದಿಗೂ ಬರುತ್ತವಲ್ಲ. ಏನು ಮಾಡೋಣ? ಅಯಿ ಅಪ್ಪಯ್ಯನಿಗೆ ಹೇಳದೆ, ಅಜ್ಜಮ್ಮನಿಗೂ ತಿಳಿಸದೆ ತಾವು ತಪಸ್ಸು ಮಾಡಲು ಕಾಡಿಗೆ ಹೋಗುವುದೇ? ಹಾಗೆ ಹೇಳಿದರೆ ಮನೆ ಅಂಗಳದಿಂದ ಹೊರ ಬಿಡುವರೇ? ಇಬ್ಬರಿಗೂ ಒಂದೆರಡು ದಿನ ಅದೇ ಯೋಚನೆ ಒಂದೇ. ಕೊನೆಗೆ ಗೌರಿ ಅಯಿಯನ್ನೇ ಕೇಳಿದಳು, "ನಾವೂ ಧ್ರುವಕುಮಾರನಂತೆ ತಪಸ್ಸು ಮಾಡಿದ್ರೆ ದೇವರು ಕಾಣ್ತಾನಾ?"

ಅಯಿಗೆ ನಗುವೋ ನಗು. "ಮಾಡಿ ನೋಡಿ, ದೇವರು ಪ್ರತ್ಯಕ್ಷ ಆಗಲೂ ಬಹ್ದು"

"ದೇವರನ್ನು ನೆನೆದು ತಪಸ್ಸು ಮಾಡ್ಬೇಕಂತೆ. ದೇವಣ್ಣ ಹೇಳಿದ್ದ ಮೂಗು ಮುಚ್ಚಿ ಕಣ್ಣು ಮುಚ್ಚಿ ಓಂ ಹೇಳ್ಬೇಕಂತೆ. ಹೌದಾ ಅಯಿ? ನಾನೂ ಹಾಗೆ ಕುಳಿತು ಮಾಡ್ಲಾ?"

ನಾಣಿಯ ತಲೆ ಸವರಿದ ಅಯಿ ಅವರ ಹುಚ್ಚು ಮಾತಿಗೆ ಸೊಪ್ಪು ಹಾಕದೆ ಸುಮ್ಮನಾದಳು. ಮಕ್ಕಳು ತಮಗೆ ಗೊತ್ತಿಲ್ಲದ ಸಂಗತಿಗೆ ನೂರು ಪ್ರಶ್ನೆ ಕೇಳ್ತಾವೆ.

ಸಹಜವೇ. ಸ್ವಲ್ಪ ದೊಡ್ಡವರಾಗಲಿ. ಧ್ರುವನ ತಪಸ್ಸು ಅರ್ಥವಾದೀತು. ಆಯಿಯ ಮೌನ ಗೌರಿ, ನಾಣಿಯಲ್ಲಿ ಉತ್ಸಾಹ ಹೆಚ್ಚಿಸಿಬಿಟ್ಟಿತು. ಗುಟ್ಟಾಗಿ ಧ್ರುವನಂತೆ ತಪಸ್ಸಿಗೆ ಹೋಗುವ ಎಣಿಕೆ ಹಾಕಿದರು. ಹೌದಲ್ಲವೇ, ಪ್ರಕೃತಿಯ ಮುಗ್ಧ ಸ್ನಿಗ್ಧ ಸೌಂದರ್ಯದಲ್ಲಿ ಲವಲೇಶವೂ ಕೃತ್ರಿಮವಿಲ್ಲದ ಕಡೆದಿಟ್ಟ ಪುತ್ತಳಿಗಳು. ಈಗಿರುವುದೇ ಸತ್ಯ ಅನುಕರಣೆಯಲ್ಲಿ ಕುತೂಹಲ, ಆನಂದದ ಕೋಲಾಹಲ.

ಒಂದು ಅಪರಾಹ್ನ ಪಶ್ಚಿಮಕ್ಕೆ ಸೂರ್ಯ ಕೆಳಗಿಳಿಯಲು ಇನ್ನೂ ಎರಡು ತಾಸುಇರುವಾಗ ಆಯಿಮಾಡಿಟ್ಟ ತಿಂಡಿ ಮುಗಿಸಿ ಗೌರಿಯೂ ನಾಣಿಯೂ ಮೋತಿಯ ಕಣ್ತಪ್ಪಿಸಿ ಸೂರ್ಯನಿಗೆ ಬೆನ್ನುಹಾಕಿ ಕಾಡು ಏರಿದರು.ಗೌರಿಯದು ಉದ್ದ ಪರಕಾರ, ಬುಗ್ಗೆ ಕೈ ರವಿಕೆ. ನಾಣಿ ಎಂದಿನ ತುಂಡು ಬಟ್ಟೆ ಬಿಟ್ಟು ಚಡ್ಡಿ ಅಂಗಿ ಹಾಕಿದ್ದ. ಏನೋ ಸಾಧಿಸುವೆ ಎಂಬ ನಗುವಿತ್ತು ಮೊಗದಲ್ಲಿ. ಇಬ್ಬರೂ ನಡಿಗೆ ಚುರುಕು ಮಾಡಿದರು. ಯಾವಾಗಲೂ ತಾವು ತಿರುಗುವ, ದನಕರುಗಳು ಮೇಯುವ ಜಾಗಗಳೇ. ಹೊಳೆನೀರಿನ ತೀರದಲ್ಲಿ ದಟ್ಟ ಕಾಡು ಎಲ್ಲಿದೆ? ಕುರುಚಲು ಪೊದೆಗಳೇ. ಕೆಲವೆಡೆ ಯಾರೂ ನಡೆದು ಸವೆಯದಿರುವ ಪೊದೆಗಳು, ಕಾಡು ಮರಗಳಿವೆ. ಏಕಾಂತಕ್ಕೆ ಸಾಕು. ಅದೋ, ಅತ್ತ ಕಾಣಿಸಿತು ಸ್ವಲ್ಪ ಒತ್ತಾಗಿ ಬೆಳೆದ ಸಾಧಾರಣ ಎತ್ತರದ ದೊಡ್ಡ ಸಾಗುವಾನಿ ಮರ. ಅದರ ಕೆಳಗೆ ಮಳೆನೀರಿನಿಂದ ಒದ್ದೆಯಾಗಿ ಒಣಗಿದ ಎಲೆಗಳು. ಮರಕ್ಕೆ ಹಬ್ಬಿದ ಬಂದಣಿಕೆಗಳು. ಜಡೆಗಟ್ಟಿದಂತೆ ತಿರುಚಿದ ಬಳ್ಳಿಗಳು. ಮರದ ಆಚೆ ಬಾಯ್ದೆರೆದು ನಿಂತ ಸಣ್ಣ ಹೊಂಡ. ಶಾಂತ ನಿರ್ಜನ ಪ್ರದೇಶ. ಕುಳಿತುಕೊಳ್ಳಲು ಪ್ರಶಸ್ತವಾಗಿತ್ತು. ಕಾಡು ಏರಿ ಬರುವಾಗ ಪ್ರಖರ ಬೆಳಕಿತ್ತು. ಈ ಜಾಗದಲ್ಲಿ ಬೆಳಕು ಕಡಿಮೆ. ಇದೂ ಒಳ್ಳೆಯದೇ. ಸ್ಥಳ ಆರಿಸಿ ಇಬ್ಬರೂ ಮರದ ಕೆಳಗೆ ನೆಲದ ಮೇಲೆ ದೂರ ದೂರ ಕುಳಿತಾಯ್ತು. ಕಣ್ಣು ಮುಚ್ಚಿದರು. ಸ್ವಲ್ಪ ಹೊತ್ತು ಇಬ್ಬರಲ್ಲೂ ಮಾತು. "ನಾಣಿ, ಏನು ಕಾಣುತ್ತಿದೇ?"

"ಬರೀ ಕತ್ತಲೆ. ಅಕ್ಕಾ, ನಿನಗೆ?"

"ನನಗೂ ಕತ್ತಲೆ. ನಾವು ಏನೆಂದು ಪ್ರಾರ್ಥಿಸುವುದು?"

"ನಂಗೂ ತಿಳೀದು. ಹೀಗೆ ಕಣ್ಣುಮುಚ್ಚಿ ಓಂ ಎನ್ನುತ್ತಿದ್ದರೆ ಅಕ್ಕಾ, ದೇವರು ಕಾಣಿಸಲೇ ಬೇಕಲ್ಲ?"

ಮತ್ತೆ ಇಬ್ಬರೂ ಮೌನ. ಮತ್ತೆರಡು ನಿಮಿಷ. ನಾಣಿ ಸರಿದು ಗೌರಿಯ ಪರಕರದ ತುದಿ ತನ್ನ ಮೈಗೆ ಮುಟ್ಟುವಂತೆ ಕುಳಿತದ್ದು ಅವಳ ಅರಿವಿಗೆ ಬಂದಿತು. ಪಾಪ ಮಗು. ಹೆದರಿದ್ದಾನೆ. ಕುಳಿತುಕೊಳ್ಳಲಿ ಗೌರಿ ಕಣ್ತೆರೆಯದೆ ನಿಧಾನಕ್ಕೆ ತಾನೂ ಸರಿದಳು ಅವನ ಬದಿಗೆ. ಓಂ ಹೇಳುತ್ತ ತಟಸ್ಥರಾದರು ಇಬ್ಬರೂ. ಎಷ್ಟು ಹೊತ್ತಾಯಿತೋ, ಸಂಜೆ

ಹಕ್ಕಿಗಳ ಕಿಚ ಕಿಚ ಗಲಾಟೆ. ಮರದ ಗೂಡಿಗೆ ಮರಳುವ ತಾಯಿ ಹಕ್ಕಿಗಳ, ಮರಿಹಕ್ಕಿಗಳ ಕಲರವ. ಬೀಸುವ ತಂಗಾಳಿಯೂ ತಂಪಾಗುವ ಹೊತ್ತು. ಮರದ ನೀರಹನಿಗಳು ಅಲ್ಲೊಂದು ಇಲ್ಲೊಂದು ಟಪ್ ಟಪ್. ಗೌರಿಗೆ ಹೆದರಿಕೆ. ತಪಸ್ಸಿಗೆ ಕುಳಿತವರ ಸುತ್ತಲೂ ಹಾವುಗಳು, ಹೆಡೆ ಎತ್ತಿದ ಸರ್ಪಗಳು ತಿರುಗುತ್ತವೆಯಂತೆ. ಕಚ್ಚಿಬಿಟ್ಟರೆ? ಬರಲಾರದು. ಆದರೆ ಜಕಣಿ, ಕೊಳ್ಳಿದೆವ್ವ, ಗಾಳಿದೆವ್ವ, ಬ್ರಹ್ಮರಾಕ್ಷಸ ಬಂದುಬಿಟ್ಟರೆ? ಅಯ್ಯೋ, ಅದೆಲ್ಲ ಚಕ್ರಿಅಮ್ಮಮ್ಮನ ಊರಿನವು. ಇಲ್ಲಿಗೆ ಬರುತ್ತಾವೆಯೇ? ಛೇ, ಹುಚ್ಚು, ಏಕೆ ಬರುತ್ತವೆ ಅವುಗಳ ಊರು ಬಿಟ್ಟು?

ಚಕ್ರಿ ಅಮ್ಮಮ್ಮನ ನೆನಪಾಗಿ ಮೈತುಂಬ ಅವಳ ಹಳೆ ಸೀರೆಗಳ ಹಾಸು ಹೊದಿಕೆಯ ನವಿರಾದ ಸ್ಪರ್ಶ, ಹಿತವಾದ ವಾಸನೆ.ಚಕ್ರಿ ಮನೆಯಲ್ಲಿ ಅವಳ ಮಲಗುವ ಕೋಣೆ ಆಚೆ ಬಾಣಂತಿ ಕೋಣೆ. ಈಗ ಕಾಣುವ ಕತ್ತಲೆಯಂತೆ ಅದೂ ಗಾಳಿ ಬೆಳಕಿಲ್ಲದ, ಮೂಲೆ ಮುಡುಕು ಕಾಣದ ಕತ್ತಲು ಕೋಣೆ. ಆ ಕೋಣೆಗೆ ಹಗಲು ಹೊತ್ತು ದೀಪ ಬೇಕು. ಅಲ್ಲಿ ಅದೆಷ್ಟು ಹೆಂಗಸರ ಹೆರಿಗೆ, ನಲ್ವತ್ತು ದಿನಗಳ ಬಾಣಂತನ ಆಗಿದೆಯೋ! ಅವರ ಹೆರಿಗೆ ನೋವಿನ ನರಳಿಕೆ, ಹುಟ್ಟಿದ ಶಿಶುಗಳ ಬೆಕ್ಕಿನ ಮರಿಯಂತೆ ಕಾವ್ ಕೂವ್ ಅಳು ಅದೇ ಕೋಣೆಯಲ್ಲಿ. ಅಮ್ಮಮ್ಮ ಆಯಿಯ ಮತ್ತು ತನ್ನ ನಾಲ್ವರು ಸೊಸೆಯಂದಿರ ಹಲವಾರು ಬಾಣಂತನ ಮಾಡಿದ್ದು ಅದೇ ಕೋಣೆಯಲ್ಲಿ. ತಾನು ನಾಣಿ ಹುಟ್ಟಿದ್ದು ಅದೇ ಕತ್ತಲೆಯ ಸ್ಪರ್ಶದಲ್ಲಿ. ತಾನು ಹುಟ್ಟಿ ನಲ್ವತ್ತು ದಿನಗಳ ತನಕ ವಿಪರೀತ ಅಳುತ್ತಿದ್ದೆನಂತೆ. "ಚೆಂದದ ಹೆಣ್ಣು ಮಗು. ದಿನಾ ದೃಷ್ಟಿ ತೆಗಿರಿ. ಗಾಳಿದೆವ್ವದ ತಂಟೆ ಇದ್ದರೆ ಓಡಿ ಹೋಗ್ತು" ಎಂದಿದ್ದರಂತೆ ಹಿರಿತಲೆ ಹೆಂಗಸರು. ಗಾಳಿದೆವ್ವದ ಹೆಸರು ಕೇಳಿದರೆ ಸಾಕು, ತನಗೆ ಹೆದರಿಕೆ. ಬಾಣಂತಿಯರೇ ಇಲ್ಲದಾಗ ಆ ಕೋಣೆ ಒಂದುತರಹ ಮೂರಿ.[ವಾಸನೆ] ತಾನು ಆ ಬಾಗಿಲು ಮುಚ್ಚಿ ಬಿಡುತ್ತಿದ್ದೆ. ಅಮ್ಮಮ್ಮ ಧೈರ್ಯ ಹೇಳುತ್ತಿದ್ದಳು. ಒಂದು ಮಧ್ಯ ರಾತ್ರೆ ಬಾಣಂತಿ ಕೋಣೆಯಿಂದ ದೀರ್ಘ ಉಸಿರು ಎಳೆಯುತ್ತ ಗೊರ ಗೊರ ಶಬ್ಧ. ತಾನು ಗಾಳಿದೆವ್ವವೇ ಬಂತೆಂದು ನಡುಗಿ ಅಮ್ಮಮ್ಮನನ್ನು ಬಿಗಿದಪ್ಪಿ ಮಲಗಿದ್ದೆ. ಮರುದಿನ ಅಮ್ಮಮ್ಮ ಗಾಳಿದೆವ್ವ ತೋರಿಸಿ ನಗಾಡಿದ್ದಳು. ಅದು ಬೇರೆ ಯಾರೂ ಅಲ್ಲ. ಹೊರ ಜಗಲಿಯಲ್ಲಿ ಮಲಗಿದ್ದ ಅಪ್ಪೂ ಮಾವ! ಗಾಢ ನಿದ್ರೆಯಲ್ಲಿ ಅಂಗಾತ ಮಲಗಿ ಅರ್ಧ ಬಾಯಿ ತೆರೆದು ಗೊರ್ ಗೊರ್! ಆ ಶಬ್ಧ ನಾಲ್ಕು ಬಾಗಿಲು ದಾಟಿ ಕೇಳಬಹುದಿತ್ತು. ತಾನು ಮತ್ತೆರಡು ದಿನ ಅವನ ತೆರೆದ ಬಾಯಿ, ಅದರಿಂದ ಹೊರಡುವ ಗೊರಕೆ ಕೇಳಿ ನಕ್ಕದ್ದು, ನಾಣಿ ಬಾಯಿಗೆ ನೀರು ಹಾಕಿದ್ದು, ನಿದ್ರೆಯಲ್ಲೇ ಅಪ್ಪೂ ಮಾವ ಘರ್ಜಿಸಿದ್ದು ಮಜಾ ಇತ್ತು. ಚಕ್ರಿ ಅಮ್ಮಮ್ಮ ಕರುಣೆಯ ಸಾಗರ. ಅವಳ ಅಂಗೈಯ್ಯಲ್ಲಿ ಬೆಳೆದ ಮಕ್ಕಳು ಚೆಂದಕ್ಕೆ ಹುಷಾರಾಗಿ ಇರುತ್ತವಂತೆ. "ನಿನ್ನ ಹೆರಿಗೆ ಬಾಣಂತನ ನಾ ಇಲ್ಲೆ ಮಾಡೆಕ್ಕು" ಅಮ್ಮಮ್ಮ ಹೇಳುವಾಗ

ಎಂತ ನಾಚಿಕೆ. "ಕತ್ತಲೆ ಕೋಣೆಯಲ್ಲಿ ಹೆದರಿಕೆನಾ?ದೆವ್ವ, ಭೂತ ನಮ್ಮ ಮನಸ್ಸಿನ ಭ್ರಮೆಗಳು" ಎಂದಿದ್ದಳು.

ಇರಬಹುದೇ? ಕಳೆದ ಚೈತ್ರ ಮಾಸದ ಕೊನೆ ಇರಬೇಕು ಚಕ್ರಿ ಊರಿನಲ್ಲಿ ಯಕ್ಷಗಾನ ಬಯಲಾಟಕ್ಕೆ ಹೋದಾಗ ತಾನು ನಾಣಿ ನೋಡಿದ್ದು ಮನಸ್ಸಿನ ಭ್ರಮೆಯಾ? ಪ್ರತಿವರ್ಷ ಚೈತ್ರ ಮಾಸದಲ್ಲಿ ಚಕ್ರಿ ಊರಿನಲ್ಲಿ ಯಕ್ಷಗಾನ ಬಯಲಾಟದ ಮೇಳ ಬರುತ್ತದೆ. ಚಕ್ರಿ ಮನೆ ಎದುರು ಗದ್ದೆಯಲ್ಲಿ ಮೇಳದವರ ಅರ್ಧಾಕೃತಿಯ ರಂಗಸ್ಥಳ. ರಾತ್ರೆಯಿಂದ ಬೆಳಗಿನ ತನಕ ದೊಂದಿ ಬೆಳಕಿನಲ್ಲಿ ಆಟದ ಪ್ರದರ್ಶನ. ಕುಳಿತುಕೊಳ್ಳಲು ನೆಲವೇ ಆಸನ. ಊರ ಮತ್ತು ಪರ ಊರ ಜನ ಬರುತ್ತಾರೆ. ಅಮ್ಮಮ್ಮನಿಗೆ ಬಯಲಾಟದ ಹುಚ್ಚು. ಆದಿನ ಬೆಳಿಗ್ಗೆಯಿಂದಲೇ ದಿನದ ಕೆಲಸ ಅವಸರದಲ್ಲಿ ಮುಗಿಸುತ್ತಾಳೆ. ರಾತ್ರೆ ಅರಳಲಿರುವ ಜಾಜಿ, ದುಂಡು ಮಲ್ಲಿಗೆಯ ಮೊಗ್ಗುಗಳನ್ನು ದಂಡೆ ಮಾಡಿ ಬಯಲಾಟಕ್ಕೆ ಹೋಗುವಾಗ ಮುಡಿದು ಕೊಳ್ಳುತ್ತಾಳೆ. ಆ ಮೊಗ್ಗುಗಳು ತಲೆಯಲ್ಲಿ ಅರಳಿ ಸುವಾಸನೆಯ ಕಂಪು ಬೀರುವಾಗ ಅಮ್ಮಮ್ಮನ ಆಟ ನೋಡುವ ಉತ್ಸಾಹವೂ ರಂಗೇರುತ್ತದೆ. ಮಲ್ಲಿಗೆ ಮೊಗ್ಗಿನ ಮಾಲೆ ಇಲ್ಲದೆ ಅವಳು ಬಯಲಾಟಕ್ಕೆ ಹೋದದ್ದೇ ಇಲ್ಲ. ಬೆಳಗಿನ ತನಕವೂ ಕಣ್ರೆಪ್ಪೆ ಮುಚ್ಚದೆ ಆಟ ನೋಡುವ ಅಮ್ಮಮ್ಮ ಮರುದಿನ ಮಕ್ಕಳೆದುರು ಬಯಲಾಟದ ಕುಣಿತದ ಕೆಲವು ಮಟ್ಟುಗಳನ್ನು ಕುಣಿದು ತೋರಿಸುವಾಗ ಮಕ್ಕಳು ಹೋ ಎನ್ನುತ್ತ ತಾವೂ ಕುಣಿಯುವವರೇ. ಕಳೆದವರ್ಷ ಮೇಳದವರು ಮಾಡಿದ್ದು "ರಾವಣ ಸಂಹಾರ" ಅದರಲ್ಲಿ ರಾಕ್ಷಸ ಪಾತ್ರಗಳೇ ಹೆಚ್ಚು. ತಾನು, ನಾಣಿ, ಮಾವಂದಿರ ಮಕ್ಕಳು ಹೋಗಿದ್ದೆವು. ಮಧ್ಯರಾತ್ರೆ ನಂತರ ಬಣ್ಣದ ವೇಷ ಬರುವಾಗ ನಾಣಿಗೆ ಆಟ ಸಾಕು ಮನೆಗೆ ಹೋಗುವ ಹಠ ಬಂದಿತ್ತು. ತಾವಿಬ್ಬರೂ ಕೆಲಸದಾಳಿನ ಜೊತೆ ಹೊರಟು ಮನೆ ಹತ್ತಿರ ಬಂದಾಗ ಕಂಡದ್ದೇನು? ತಾಳೆಮರಕ್ಕಿಂತಲೂ ಎತ್ತರದ ರಾಕ್ಷಸಾಕಾರದ ಒಂದು ಆಕೃತಿ! ಅಶ್ವಥಮರದ ಕಟ್ಟೆ ಮೇಲೆ ನಿಂತುಬಿಟ್ಟಿದೆ. ದೆವ್ವವೇ? ಬ್ರಹ್ಮರಾಕ್ಷಸನೇ? ಕಣ್ಣು ಹೊಸಕಿ ತಿಕ್ಕಿ ತಮ್ಮ ಕಥೆ ಮುಗಿದಂತೆ ಎನ್ನುವಾಗ!

ಅಯ್ಯೋ, ಇವತ್ತು ಈ ನಿರ್ಜನ ಸ್ಥಳದಲ್ಲಿ ಅದೇ ನಮೂನೆಯ ಒಂದು ಆಕೃತಿ ಬೆಳೆಯುತ್ತ ತಮ್ಮನ್ನು ಹೆದರಿಸುವುದನ್ನು ನೋಡಿದರೆ ಸಂಶಯವಿಲ್ಲ, ಅದು ಮರದ ಮೇಲಿರುವ ಜಕಣಿಯೋ, ಭೂತವೋ... "ನಾಣೀ, ಎಲ್ಲಿದ್ದಿಯೋ?" ಉಸುರಿ ಕಣ್ತೆರೆದಾಗ ನಾಣಿಯೂ ಹೆದರಿ ಅವಳನ್ನೇ ಕಣ್ಣು ಬಿಟ್ಟು ನೋಡುತ್ತಿದ್ದ.

"ಅಕ್ಕಾ, ಅಲ್ಲಿ ಕಾಣು! ಪೊದೆಯಲ್ಲಿ ಎರಡು ಪಿಳಿ ಪಿಳಿ ಕಣ್ಣು?"

ಗೌರಿ ಕಣ್ಣು ಅಗಲಿಸಿ ನೋಡುತ್ತಾಳೆ, ಎದುರಿನ ತಾಳೇಮರದಂತೆ ನಿಂತ ಆಕೃತಿ ಮಾಯ! ಪೊದೆಯಲ್ಲಿ ಕಾಣಿಸಿದೆ ಎರಡು ಕಣ್ಣುಗಳು. ಅವು ಕಣ್ಣುಗಳೋ, ಜೇಡರಬಲೆಯ

ಮೇಲೆ ಬಿದ್ದ ನೀರ ಹನಿಗಳೋ, ಹೆಡೆಯರಳಿಸಿದ ಸರ್ಪವೋ, ದೆವ್ವದ ಇರುವಿಕೆಯ ಕುರುಹೋ. ಗೌರಿ ತಮ್ಮನ ನಡಗುವ ಕೈ ಬಿಗಿಯಾಗಿ ಹಿಡಿದು ಚಳಿ ಬಂದಂತೆ ನಡುಗಿದಳು. ಅದೇ ವೇಳೆ ಬಾಯ್ದೆರೆದ ಹೊಂಡದಲ್ಲಿ ಚರ ಚರ ಸಪ್ಪಳ. ಕತ್ತಲೆ ಇಣುಕಿದ ಜಾಗದಲ್ಲಿ ತಿರುಗಿದರೆ ಏನೂ ಕಾಣದು. "ಎಂತದೇ ಆಗ್ಲಿ. ಇನ್ನೊಂದು ನಿಮಿಷ ಇಲ್ಲಿರೂದು ಬ್ಯಾಡ. ಏಳು ತಮ್ಮಾ, ನಡಿ.ಕೊಳ್ಳಿ ದೆವ್ವ, ಇನ್ನಾವ ಪ್ರಾಣಿ, ಭೂತ ಬರಲಿವೆಯೋ," ಹೇಳಿ ಮುಗಿಸುವ ಮೊದಲೇ ಅವನನ್ನು ಎಳೆದುಕೊಂಡೇ ಓಡತೊಡಗಿದಳು. ಮಕ್ಕಳಿಗೆ ಪರಿಚಿತ ಹಾದಿ. ಗವ್ ಎನಿಸುವ ಕತ್ತಲೆ. ಮುಗ್ಗರಿಸಿದರು, ಎದ್ದರು, ನಡೆದರು, ಓಡಿದರು. ಪೊದೆಗಳ ಜಾಗ ಇಳಿದು ಹಾಡಿಗೆ ಬರುವಾಗ ಚಂದ್ರ ಬೆಳಕಿನ ದರ್ಶನ. ನಾಣಿ ಹಿಂದೆ ತಿರುಗಿದರೆ ಯಾರೋ ತಮ್ಮನ್ನು ಅಟ್ಟಿಸಿಕೊಂಡು ಬಂದಂತೆ. "ತಿರುಗಿ ನೋಡಬೇಡವೋ. ಹಾಗೆ ನೋಡಿದರೆ ಭೂತಗಳಿಗೆ ಶಕ್ತಿ ಜಾಸ್ತಿಯಂತೆ. ಓಡು, ಬೇಗ"

ನಾಣಿ ಅಳತೊಡಗಿದ,"ಅಕ್ಕ, ಕತ್ತಲೆ ದಾರಿ ಕಾಣ್ತಿಲ್ಲೆ. ನಿಂಗೆ ದಾರಿ ತಪ್ಪಿತಾ?"ಅಕ್ಕ ಮಾತನಾಡಲಿಲ್ಲ.ಎಳೆದುಕೊಂಡೇ ಹೋಗುತ್ತಿದ್ದಾಳೆ ಭೂತಶಕ್ತಿ ಮೈಯ್ಯಲ್ಲಿ ಹೊಗ್ಗಿದಂತೆ. ನಾಣಿಯ ಅಳು ಇನ್ನೂ ಹೆಚ್ಚಿತು. ಅಕ್ಕ ಕಾಣುವುದೇ ಇಲ್ಲ, ಮಾತು ಆಡುತ್ತಿಲ್ಲ "ಅಕ್ಕ, ದಾರಿ ತಪ್ಪಿತಾ? ಅಕ್ಕ, ದಾರಿತಪ್ಪಿತಾ? ಲೇ ಅಕ್ಕ, ದಾರಿ ತಪ್ಪಿತೇನೇ?"

ದಾರಿ ತಪ್ಪಿರಲಿಲ್ಲ. ಓಡಿಕೊಂಡೆ ಬಂದು ನಿಂತದ್ದು ಅಂಗಳದ ಉರುಗೋಲಿನ ಬಳಿ. ಅಲ್ಲಲ್ಲ, ಇವರನ್ನೇ ಅರಸುತ್ತ ಹೊರಟ ಅಜ್ಜಯ್ಯ, ಅಪ್ಪಯ್ಯನ, ಕಾದುನಿಂತ ಆಯಿ ಅಜ್ಜಮ್ಮನ ತೆರೆದ ಬಾಹುಗಳಲ್ಲಿ. ಮುಂದೆ ಎರಡು ದಿನ ಇಬ್ಬರಿಗೂ ಜ್ವರ. ಹಾಸಿಗೆ ಬಿಟ್ಟು ಮೇಲೇಳದ ಸ್ಥಿತಿಯಲ್ಲಿ ಮನೆಮದ್ದು ನಾಟಲಿಲ್ಲ. ಸುಶೀಲಚಿಕ್ಕಿ ತನಗೆ ಗೊತ್ತಿದ್ದ ಹಳ್ಳಿ ಮದ್ದನ್ನೂ ಅರೆದು ಕುಡಿಸಿದಳು. ಅಪ್ಪಯ್ಯ ಸಾಸ್ತಾನದ ಒಬ್ಬರು ಡಾಕ್ಟರರ ಇಂಗ್ಲೀಷ ಔಷಧಿ ತಂದು ಕುಡಿಸಿದ. ತುಸು ಕಡಿಮೆಯಾಗಿ ಚೇತರಿಸುವ ಹಂತಕ್ಕೆ ಬಂದಾಗ ಅಜ್ಜಮ್ಮ ಕಾಲು ಕೈಗೆ ಎಣ್ಣೆ ಹಚ್ಚಿ, "ಕತ್ತಲೆಯಲ್ಲಿ ಎಲ್ಲಿ ಸುಡುಗಾಡಿಗೆ ಅಲೆಯಲು ಹೋದದ್ದು? ಇದು ಕೊಳ್ಳಿ ದೆವ್ವದ ಕಿತಾಪತಿ." ಎಂದಳು.

"ಕೊಳ್ಳಿ ದೆವ್ವವಲ್ಲ, ಭೂತಚೇಷ್ಟೆಯೂ ಅಲ್ಲ. ಇನ್ಮೇಲೆ ನಿಮಗಲ್ಲದ ತುಂಟ ಕೆಲಸಕ್ಕೆ ಹೋದ್ರೆ ಜಾಗ್ರತೆ"ಆಯಿ ಮೈಗೆ ಶಾಖ ಕೊಟ್ಟಳು. ಅಂತೂ ಧ್ರುವಕುಮಾರರ ತಪಸ್ಸಿನ ಪ್ರಕರಣ ಹೀಗೊಂದು ರೀತಿಯಲ್ಲಿ ಮುಕ್ತಾಯವಾಗಿ ಚೇತರಿಕೆಯಲ್ಲಿ ಇದ್ದಾ
ಸಿರ್ಸಿಯಿಂದ ರಘುದೊಡ್ಡಪ್ಪ ಗಂಗೊಳ್ಳಿ ಹೊಳೆ ದಡದ ರಸ್ತೆಯಲ್ಲಿ ಎರಡೂಪರ ಮೈಲು ನಡೆದುಬಂದ. ಕೆಲಸ ನಿಮಿತ್ತ ಮಂಗಳೂರಿಗೆ ಬಂದವನು ಹಿಂದಿರುಗುವ ಹಾದಿಯಲ್ಲಿ ಸಾಸ್ತಾನದಲ್ಲಿ ಇಳಿದು ರಾಮಪ್ಪಯ್ಯನನ್ನು ನೋಡಿ ಹೋಗೋಣ

ಎಂದುಕೊಂಡಿದ್ದ. ಆಗ ಕಮ್ತಿಯವರು, "ರಾಮಪ್ಪಯ್ಯ ಮೊನ್ನೆ ಶನಿವಾರ ಹೊಳೆಬಾಗಿಲಿಗೆ ಹೋದವರು ಒಂದು ವಾರ ರಜೆ ಹಾಕಿದ್ದಾರೆ. ಮಕ್ಕಳಿಗೆ ಮೈ ಆರಾಮ ಇಲ್ಲವಂತೆ, ದೋಣಿಯವನ ಕೈಲಿ ಹೇಳಿ ಕಳಿಸಿದ್ರು" ಎಂದರು.

ರಘುದೊಡ್ಡಪ್ಪ ಮುಂದಿನ ದೋಣಿಗೆ ಕಾಯದೆ ನಡೆದ ಬಂದಿದ್ದ.ಬಂದ ಮೇಲೆಇಲ್ಲಿ ಮಕ್ಕಳ ತಪಸ್ಸಿನ ಕಿತಾಪತಿ ಕೇಳಿ ನಗಬೇಕೋ, ವ್ಯಥೆ ಪಡಬೇಕೋ ತಿಳಿಯಲಿಲ್ಲ. ಗೌರಿಯ ಕೆನ್ನೆ ಹಿಂಡಿ, "ಮಗಳೂ, ದೊಡ್ಡವಳಾಗಿದ್ದಿ?" ನಾಣಿಯ ತಲೆ ಸವರಿ, "ಅಕ್ಕನ ಬಾಲ ನೀನು, ಸಣ್ಣವಲ್ಲ ತಿಳಿತಾ?"ಎಂದರು.ಇಬ್ಬರಿಗೂ ನಾಚಿಕೆಯಲ್ಲಿ ಏನೂ ಕೂಡಾ. ಸಿರ್ಸಿ ದೊಡ್ಡಪ್ಪ ಜೋರು ಕಂಡರೂ ಖುಷಾಲಿನವರೇ. ಅಪ್ಪಯ್ಯನನ್ನು ಗದರಿಕೊಂಡರು, "ಇಬ್ಬರನ್ನೂ ಉಂಡಾಡಿಗಳಂತೆ ಬಿಟ್ಟ ಫಲ ಇದು. ನಿನ್ನದೇ ತಪ್ಪು. ಶರಾವತಿ, ನೀ ಸ್ವಲ್ಪ ಬುದ್ಧಿ ಹೇಳು."

ಆಯಿಯಲ್ಲಿ ಉತ್ತರವಿಲ್ಲ. "ನಾಣಿ ಗೌರಿ ಬಾಲ. ಗೌರಿಗೆ ನಾಣಿಯು ಮಗುವಿನಂತೆ. ನೆರಳು ಬೆಳಕಿನಂತೆ ಇಬ್ಬರೂ ಜೊತೆ ಜೊತೆ. ಅವಳಿಗೆ ಮದ್ವೆಯಾದ್ರೆ ಇವನನ್ನೂ ಬಳವಳಿ ರೂಪದಲ್ಲಿ ಕೊಟ್ಟು ಬಿಡ್ತೇವೆ"

"ಇದೆಲ್ಲ ಹಾರಿಕೆ ಮಾತು, ಶಾಲೆಗೆ ಉಸಾಬರಿ ಇಲ್ಲದೆ ಅವಳು ದಿಗಡದಿಮ್ಮಿ, ಇವನು ಉಂಡಾಡಿ. ಸರಿಹೋಯ್ತು. ರಾಮಪ್ಪಯ್ಯ, ಮಕ್ಕಳಿಬ್ಬರೂ ಸಿರ್ಸಿಗೆ ಬರಲಿ. ನನ್ನ ಮಕ್ಕಳ ಜೊತೆ ಅವೂ ಕಲಿತಾವೆ. ಮನೆ ಹತ್ರ ಶಾಲೆನೂ ಇದೆ. ಯೋಚನೆ ಮಾಡಿ"

ಇತ್ತೀಚಿನವರೆಗೂ ಭೂಮಿ ಪಾಲು ಸರಿ ಆಗಲಿಲ್ಲವೆಂದು ಮುನಿಸು ತೋರುತ್ತಿದ್ದ ರಘು ದೊಡ್ಡಪ್ಪ ಹೀಗೆ ಬದಲಾದದ್ದು ಎಲ್ಲರಿಗೂ ಆಶ್ಚರ್ಯ. ಏನೋ ತನ್ನ ಬೇಳೆ ಬೇಯ್ಸಿಕೊಳ್ಳಲು ಬಂದವನೇ? ಅನುಮಾನ. ಹಾಗೇನೂ ಇಲ್ಲ. ಇಲ್ಲಿಗೆ ಬಂದ ಮುಖ್ಯ ಕಾರಣ, ಅದು ಸುಶೀಲಚಿಕ್ಕಿಗೆ ಸಂಬಂಧಿಸಿದ್ದು.ಕಳೆದ ಬಾರಿ ದೇವಸ್ಥಾನದ ನವರಾತ್ರೆ ಪೂಜೆಗೆ ಬಂದಾಗ ಸುಶೀಲಚಿಕ್ಕಿ ಇನ್ನೂ ಇಲ್ಲೆ ಇರುವುದ ಗಮನಿಸಿ ಸಮಾಧಾನ ಆಗಿರಲಿಲ್ಲ. ಮೊದಲೇ ರಾಮಪ್ಪಯ್ಯನ ಮೇಲೆ ಕುಟುಂಬದ ಜವಾಬ್ದಾರಿ ಅಧಿಕ. ತೋಟ ಗದ್ದೆ ಉತ್ಪನ್ನ ಹೇಳಿಕೊಳ್ಳುವಷ್ಟಿಲ್ಲ. ಸಾಸ್ತಾನದ ಉದ್ಯೋಗದಲ್ಲಿ ದಂಡಿ ಹಣ ಸಂಪಾದನೆ ಇದೆಯಾ? ತಿಳಿಯದು. ಏನಿದ್ದರೂ ಇವಳೊಬ್ಬಳು ಹೆಚ್ಚೇ. ಆದರೂ ಮನೆಯವರಿಗೆ ಹಾಲು ಜೇನಿನ ಹೊಂದಾಣಿಕೆ ಅವಳಲ್ಲಿ. ತಾನುಒಂದು ಮಾತನಾಡಿದರೆ ಕಡಿಮೆ, ಎರಡು ಮಾತಾಡಿದರೆ ಹೆಚ್ಚು. ನಯಸಾಣೆ ಅನಂತಯ್ಯ ಇಲ್ಲಿ ತಂದು ಬಿಟ್ಟು ಜಾರಿಕೊಂಡ ವಿಶ್ವಾಸ ದ್ರೋಹಿ? ಅವನ ಹೊಣೆಗೇಡಿತನಕ್ಕೆ ನಾಲ್ಕು ಬೈದು,

"ಈ ಸಮಾಜ ಸುಧಾರಕರ ಹಣೆಬರಹವೇ ಇಷ್ಟು, ಇನ್ನಾರದೋ ಹೊರೆ

ಹೊತ್ತವರಂತೆ ನಟಿಸಿ ತಾವು ಒಳ್ಳೆಯವರು! ಬೇಕಲ್ಲ ತಲೆ ಮೇಲೆ ಹೆಸರಿನ ಕಿರೀಟ. ಅವಳಿಂದ ನಿಮಗೂ ಎಷ್ಟು ಕಷ್ಟ?" ಎಚ್ಚರಿಸಿದ್ದ ಎಲ್ಲರನ್ನೂ.

ಆದರೆ ಅಪ್ಪ, ಅಮ್ಮನಿಗೆ ಅವಳು ಹೊರೆ ಅನ್ನಿಸಿಲ್ಲವಂತೆ, ಶರಾವತಿಗೆ ಕನಿಕರ ಜಾಸ್ತಿ. ಹೆಣ್ಣು ಹೆಂಗ್ಸು. ಎಲ್ಲಿಗೆ ಹೋಗ್ತಾಳೆ? ನಾವು ಉಣ್ಣುವ ಅನ್ನದಲ್ಲಿ ಅವಳಿಗೆ ಒಂದು ತುತ್ತು ಹಾಕಿದರಾಯ್ತು ಎನ್ನುವ ಶರಾವತಿಯದು ದೊಡ್ಡ ಮನಸ್ಸು. ತನಗೇನು? ಬೇಯ್ಸಿ ಮಾಡಿ ಹಾಕುವವಳು ಅವಳೇ ಅಲ್ಲವೇ. ಆದರೆ ಉಣ್ಣು ತಿನ್ನು, ಮಲಗು ಇದಿಷ್ಟೇ ಅವಳ ಘನಂದಾರಿ ಕೆಲಸ? ಇದರಿಂದಾಚೆ ಅವಳ ವ್ಯಕ್ತಿತ್ವ ಬೇರೆಯೇ ಇದೆ. ಅದು ತುಕ್ಕು ಬಾರದಂತೆ ಬಳಸಿಕೊಳುವ ಜಾಣ್ಮೆ ಇದ್ದರೆ ಹತ್ತು ಜನಕ್ಕೆ ಉಪಕಾರವೂ ಆದೀತಲ್ಲವೇ. ಸುಶೀಲಚಿಕ್ಕಿಯನ್ನು ಗಮನಿಸಿದರೆ ಓದು ಬರಹ ತಿಳಿದವಳು. ಮಕ್ಕಳಿಗೆ ಕನ್ನಡ, ಇಂಗ್ಲೀಷ್ ಕಲಿಸುತ್ತಿದ್ದಾಳೆ. ಹಾಡು ವಾದ್ಯ ಅರಿತವಳು. ಕಮಲಿಯ ಜೀವನದಲ್ಲಿ ಉತ್ಸಾಹ ತುಂಬಿಸಿದ್ದು ಅವಳೇ ಎಂದು ಅಪ್ಪ ಹೊಗಳುತ್ತಾರೆ. ಕಸೂತಿ ಹೊಲಿಗೆ ಬರುವುದಂತೆ. ಅಲ್ಲ, ಶಾರದೆಗೆ ರವಕೆ ಹೊಲಿಯಲು ಕಲಿಸಿದ್ದು ಅವಳೇ. "ನಿಂಗೊತ್ತಿಲ್ಲ, ಶಾರದೆ ಹಳೆ ರವಿಕೆ ಹಾಳತಕ್ಕಿಟ್ಟು ಹೇಗೋ ಒಂದು ರವಕೆ ಹೊಲಿತಿದ್ದಳು. ಈಗ ನೋಡು ಅವಳ ರವಕೆ, ನಂದು, ಶರಾವತಿದು ಎಲ್ಲ ಅವಳೆ ನಮ್ಮ ದರ್ಜಿ" ಅಮ್ಮನಿಂದ ಶಹಬ್ಬಾಸ್!ರಘುದೊಡ್ಡಪ್ಪ ಗುಟ್ಟಾಗಿ ಗೌರಿಯ ಕಿವಿಯಲ್ಲಿ, "ನಿನ್ನ ಚಿಕ್ಕಿ ಎಲ್ಲರನ್ನೂ ಮೋಡಿ ಮಾಡಿದ್ದಾಳೆ. ಅವಳನ್ನು ದೂರಿದರೆ..."

"ನಿನ್ನ ಕೆನ್ನೆಗೆ ಎರಡು ತಪರಾಕಿ" ನಕ್ಕಿದ್ದಳು ಗೌರಿ.

ಸುಶೀಲಚಿಕ್ಕಿಗೆ ಒಂದು ಸರಿಯಾದ ಉದ್ಯೋಗ ಸಿಕ್ಕಿದರೆ ರಾಮಪ್ಪಯ್ಯನಿಗೆ ಉಪಕಾರ. ಅದಕ್ಕಿಂತ ಹೆಚ್ಚು ಅವಳಲ್ಲಿರುವ ಪ್ರತಿಭೆ ಹೊಳೆಯುವ ಚಿನ್ನದಂತೆ. ಅವಳ ಬುದ್ಧಿವಂತಿಕೆ, ಪ್ರತಿಭೆ, ವಿದ್ಯೆ ಹತ್ತು ಜನರಿಗೆ ಸಿಗುವಂತೆ ಆಗಬೇಕು. ಈ ಯೋಚನೆಯಿಂದ ಅವನು ದಿಢೀರನೆ ಹೊಳೆಬಾಗಿಲಿಗೆ ಬಂದದ್ದು ಸುಶೀಲಚಿಕ್ಕಿಗಾಗಿಯೇ. ಹಿಂದೆ ಯೋಚಿಸಿದಂತೆ ಅವಳಿಗಾಗಿ ಎರಡು ಕೆಲಸಗಳನ್ನು ಹುಡುಕಿ ವಿವರದ ಪಟ್ಟಿ ತಂದಿದ್ದ. ಒಂದು ಸಿರ್ಸಿ ಶಾಲೆಯ ವಾರ್ಡನ್ ಕೆಲಸ. ಇನ್ನೊಂದು ಸಿರ್ಸಿ ಹೊರವಲಯದಲ್ಲಿ ಸಹಕಾರಿ ಸೇವಾಶ್ರಮದಲ್ಲಿ ಮೇಲ್ವಿಚಾರಕಿಯಾಗಿ ಉದ್ಯೋಗ. ಈ ವಿಷಯ ಮನೆಯವರಲ್ಲಿ ಪ್ರಸ್ತಾಪಿಸಿ, "ನೀವೆಲ್ಲ ಒಪ್ಪಿದರೆ ನನ್ನ ಜೊತೆಯೇ ಕರ್ಕೊಂಡು ಹೋಗ್ತೆ"ಎಂದ.

"ಅವಳು ಒಪ್ಪಿದರೆ ನಮ್ಮದೇನೂ ಇಲ್ಲ. ಕೇಳಿ ನೋಡು." ಅಂದರು ಸುಬ್ಬಪ್ಪಯ್ಯ.

ರಘು ದೊಡ್ಡಪ್ಪ ಅವಳನ್ನೇ ಮಾತನಾಡಿಸಲು ನೇರವಾಗಿ ಅಟ್ಟಕ್ಕೆ ಬಂದ.ಆ ಅಟ್ಟ ಹಿಂದಿನಂತೆ ಹರಗಣದ ಗೂಡಾಗಿರದೆ ನೀಟಾಗಿತ್ತು. ಒಂದು ಭಾಗದ ಗೋಡೆಯಮೇಲೆ ಗೌರಿ, ನಾಣಿ ಬಿಡಿಸಿದ ಬಾಲ ಪ್ರತಿಭೆಯ ಚಿತ್ರಗಳಿದ್ದವು. ಇಂಗ್ಲೀಷ, ಕನ್ನಡ ಅಕ್ಷರಗಳ

ಚಿತ್ರಪಟ ಬದಿಯಲ್ಲಿತ್ತು. ನೆಲದ ಮೇಲೆ ಮಕ್ಕಳ ಪಾಟಿ, ಪುಸ್ತಕ, ಬಳಪ, ಹಲವಾರು ಗೀಚಿದ ಕಾಗದಗಳು, ಬಣ್ಣದ ಪೆನ್ಸಿಲು, ಬಿದಿರು ಕಡ್ಡಿಗಳು ಇನ್ನೂ ಏನೇನೋ! ಅವಳು ಕಿಟಕಿ ಬಳಿ ಪುಸ್ತಕ ಹಿಡಿದು ಕುಳಿತಿದ್ದಳು. ಐವತ್ತರ ವಯಸ್ಸಿನಲ್ಲೂ ತುಂಬು ಆರೋಗ್ಯವಂತೆ ಸುಶೀಲಚಿಕ್ಕಿ. ಸುಮಾರು ಎರಡು ವರ್ಷಗಳಿಂದ ಕೂದಲಿಗೆ ಕತ್ತರಿ ಮುಟ್ಟಿಸದೆ ಭುಜದಿಂದ ಕೆಳಗಿಳಿದಿತ್ತು ಕಪ್ಪನೆಯ ಗುಂಗುರು ಕೂದಲು. ಬಿಳಿ ಬಣ್ಣ, ಥೇಟ ಬ್ರಿಟನ್ ಲೇಡಿಹಾಗೆ. ಮುಖದ ಮಂದಹಾಸ ನೋಡಿದರೆ ಸಾಕು, ಗೌರವ ಹೆಚ್ಚುವಂತೆ ಸರಳ ಸಜ್ಜನ ವ್ಯಕ್ತಿತ್ವ. ರಘುರಾಮ ಮೆಚ್ಚುಗೆಯಲ್ಲಿ ನೋಡಿ,ತಾನು ಹುಡುಕಿ ತಂದ ಎರಡು ಕೆಲಸಗಳ ವಿವರ ಹೇಳಿದ,

"ಶಾಲೆಯ ವಾರ್ಡನ್ ಕೆಲ್ಸದಲ್ಲಿದ್ದ ಈಗಿನ ವಾರ್ಡನ್ ಹೆರಿಗೆಗೆ ಮುಂದಿನ ತಿಂಗಳಿಂದ ರಜೆ ತೆಗೆದಿದ್ಲು. ಅವಳ ಬದಲಿಗೆ ನಿನ್ನನ್ನು ಶಾಲಾ ಕಮಿಟಿಯವ್ರು ಆಯ್ಕೆ ಮಾಡಿದ್ದವು. ಇನ್ನೊಂದು ಸಹಕಾರಿ ಸೇವಾ ಸಂಸ್ಥೆಯದು. ಅಲ್ಲಿಗೂ ನಂಬಿಕೆಗೆ ಇಪ್ಪ ಮಹಿಳೆ ಬೇಕು. ಸೇವಾಶ್ರಮದಲ್ಲಿ ಚರಕದಲ್ಲಿ ನೂಲು ತೆಗೆವದು, ಖಾದಿ ಮಹತ್ವ ತಿಳಿಸುವದು, ಸ್ವದೇಶಿವಸ್ತುಗಳ ಮಾರಾಟ, ಪ್ರಚಾರ, ಹೆಣ್ಣುಮಕ್ಕಳಿಗೆ ದೇಶಿ ಆಂದೋಲನದಲ್ಲಿ ಮತ್ತು ಕಲಿಕೆಯಲ್ಲಿ ಆಸಕ್ತಿ ಹೆಚ್ಚಿಸುವದು ಇಂತಾ ಕೆಲ್ಸಗಳು. ಹೆಮ್ಮಕ್ಕಳದೇ ಆಶ್ರಮ. ತುಂಬ ಜನ ಇದ್ದವು. ನಿಂಗೂ ಆ ವಾತಾವರಣ ಹಿಡಿಸುಗು. ನಾನಂತೂ ಇಲ್ಲಿಯೂ ಸೇವಾಶ್ರಮದ ಅಧ್ಯಕ್ಷರಿಗೆ ನಿನ್ನನ್ನು ಶಿಫಾರಸು ಮಾಡಿದ್ದೆ. ಈಗ ಇದೆರಡರಲ್ಲಿ ಆಯ್ಕೆ ನಿನ್ನದು." ಎಂದ.

ಯೋಚಿಸಿದಳು ಸುಶೀಲಚಿಕ್ಕಿ. ಕಳೆದ ಬಾರಿ ನವರಾತ್ರೆಗೆ ಬಂದ ರಘುದೊಡ್ಡಪ್ಪ ಹುಟ್ಟಿಸಿದ ಆಸೆ ಬಯಕೆಯ ಸಸಿಯಾಗಿ ಮರವಾಗಿ ಬೆಳೆಯುತ್ತಲೇ ಇತ್ತು. ಅವನ ನಿರೀಕ್ಷೆಯಲ್ಲೂ ಇದ್ದಳು. ಈ ಮನೆಯಲ್ಲಿ ಸುಮ್ಮನೆ ನೊಣ ಹೊಡಿವ ಬದಲು ತನಗೆ ಒಪ್ಪುವ ಸರಿಯಾದ ಉದ್ಯೋಗ ಸಿಕ್ಕಿದರೆ ಯಾವ ಗಳಿಗೆಯಲ್ಲೂ ಇಲ್ಲಿಂದ ಹೊರಡಲು ತಯಾರು. ಹಾಗೆಂದು ಈ ಮನೆ ಹಂಗಿನ ಮನೆ ಆಗದಿದ್ದರೂ ತನ್ನದೇ ಸ್ವಾವಲಂಬಿ ಬದುಕಿಗೆ ನಿರೀಕ್ಷೆಯ ನಾಳೆಗಳು ಹೊಸತನ್ನು ನೀಡುವಂತೆ ಇರಬೇಕು. ಹೆಣ್ಣು ಜೀವ, ಒಂಟಿವಾಸ. ನಂಬಿಕೆಯ ಭದ್ರತೆ ಬೇಕು. ಸಂಬಳ ಇತ್ಯಾದಿ ಅನಂತರದ್ದು. ಅವಳು ತಲೆ ಆಡಿಸಿದಳು, "ನನಗೀಗ ಐವತ್ತು. ಈ ವಯಸ್ಸಿಗೆ ಚುರುಕು ನಡಿಗೆ, ಚುರುಕು ಬುದ್ಧಿವಂತಿಕೆ ನಿರೀಕ್ಷಿಸಬೇಡಿ ರಘು, ವಿಚಾರ ಮಾಡ್ತೆ."

"ಶಾಲೆಯಲ್ಲಿ ವಾರ್ಡನ್ ಕೆಲಸ. ಕಷ್ಟ ಇಲ್ಲೆ. ಇಬ್ಬರು ಅಸಿಸ್ಟೆಂಟ್ ಇದ್ದವು. ನೀ ಬರೀ ಮೇಲ್ತನಿಖೆ ಮಾಡಿದ್ರಾಯ್ತು. ಇದರಲ್ಲಿ ವಿಚಾರ ಮಾಡ್ಲೆ ಎಂತ ಇದ್ದು?"

"ನನಗೆ ವಾರ್ಡನ್ ಕೆಲ್ಸ ಆದ್ರೇನು, ಕಸ ಗುಡಿಸುವ ಕೆಲ್ಸ ಆದ್ರೇನು? ಎರಡೂ

ಒಂದೇ. ಅದು ಹೆಚ್ಚು, ಇದು ಕಡಿಮೆ ಅನ್ನಲಾರೆ.ನಿಮ್ಮ ನಂಬಿಕೆ, ವಿಶ್ವಾಸದ ಮೇಲೆ ಇರುವುದು ಅಷ್ಟೇ"

ಮುಖಕ್ಕೆ ಹೊಡೆದಂತಾಯಿತು, "ಹಾಗಲ್ಲ ಚಿಕ್ಕಿ, ನಿನ್ನನ್ನು ಕಸ ಗುಡಿಸುವ ಕೆಲ್ಸಕ್ಕೆ ಶಿಫಾರಸ್ ಮಾಡ್ತನಾ ನಾನು? ವಾರ್ಡನ್ ಅಂದ್ರೆ ಶಾಲೆಯ ಗೌರವದ ಕೆಲ್ಸ. ಮರ್ಯಾದೆ ಹೆಚ್ಚು. ಅದು ಬೇಡ್ವಾ? ಸಹಕಾರಿ ಸೇವಾಶ್ರಮದ ಕೆಲ್ಸಕ್ಕೆ ಒಪ್ಪಿಕೋ. ನಿನ್ನ ಬುದ್ಧಿವಂತಿಕೆ, ಬೌದ್ಧಿಕ ಬೆಳವಣಿಗೆಗೆ, ಕಲೆ, ಸಂಗೀತ ಹವ್ಯಾಸಕ್ಕೆ ಅದು ಹೆಚ್ಚು ಇಷ್ಟ ಅಕ್ಕು"

ಶಾಲೆ ಕೆಲಸ, ಮಕ್ಕಳ ಒಡನಾಟ, ಪಾಠ ಕಲಿಸುವುದು ಇಷ್ಟವೇ. ಶಾಲಾ ವಾರ್ಡನ್ ಕೆಲಸ, ಸಂಗೀತವೋ, ಹಾರ್ಮೋನಿಯಮ್ ಬಾರಿಸಲು ಹೇಳಿಕೊಡುವುದೇ? ಅದಕ್ಕೂ ತಯಾರು. ಅನಾಥಾಶ್ರಮ, ಸೇವಾಸಂಸ್ಥೆಗಳ ಮೇಲ್ವಿಚಾರಕಿಯಾದರೆ ಅದೂ ಒಪ್ಪಿಗೆಯೇ. ಆದರೂ ಅಂದಳು, "ರಘು, ಇಂಗ್ಲೀಷಿನಲ್ಲಿ ಒಂದು ಮಾತಿದೆ. 'ಬೆಗ್ಗರ್ ಹ್ಯಾವ್ ನೋ ಚೊಯ್ಸ್' ಗೊತ್ತಲ್ಲ?"

ರಘುದೊಡ್ಡಪ್ಪ ಪೂರಾ ಬಗ್ಗಿಹೋದ ಅವಳೆದುರು. ಎಷ್ಟು ಸ್ಪಷ್ಟ ಇಂಗ್ಲೀಷು! ಇದು ಬೂದಿ ಮುಚ್ಚಿದ ಕೆಂಡ. ಇಂತವಳೇ ಬೇಕು ಮಕ್ಕಳ ಶಿಕ್ಷಣ ಸಂಸ್ಥೆಗೆ, ವಾರ್ಡನ್ ಕೆಲಸಕ್ಕೆ. ಇಂತವಳ ಅಗತ್ಯವಿದೆ ಸಹಕಾರಿ ಸೇವಾಶ್ರಮಕ್ಕೆ. ಇನ್ನು ಅವನಿಗೆ ಅವಳನ್ನು ಅಳೆಯಲು ಅಳತೆಯ ಯಾವ ಮಾಪನ ಬೇಕಿಲ್ಲ, ತನ್ನ ಶಿಫಾರಸು ಎರಡೂ ಕಡೆ. ಆಕರ್ಶಕ ಸಂಬಳದ ಜೊತೆಗೆ ಉಳಿಯುವ ಏರ್ಪಾಟು ಕೂಡಾ ಇದೆ. ಅಲ್ಲಿಗೆ ಹೋಗಿ ಇನ್ನೂ ವಿವರ ತಿಳಿದು ನಿಧಾನಕ್ಕೆ ಆಯ್ಕೆ ಮಾಡಿ ಕೆಲಸಕ್ಕೆ ಸೇರಲಿ. ಅವಳು ಒಪ್ಪಿದರೆ ರಘುದೊಡ್ಡಪ್ಪ ನಾಳೆಯೇ ತನ್ನೊಂದಿಗೆ ಕರೆದೊಯ್ಯಲು ಸಿದ್ಧ.

ಮತ್ತೇನು? ತಾನಾಗಿಯೇ ಒದಗಿಬಂದ ಅದೃಷ್ಟ. ಬೇಡ ಎನ್ನಲು ಕಾರಣಗಳಿಲ್ಲ. ತಡ ಮಾಡದೆ ನಾಳೆಯೇ ರಘುದೊಡ್ಡಪ್ಪನ ಜೊತೆ ಹೊರಡಬೇಕು. ಈ ಹೊತ್ತಿನಲ್ಲಿ ಅನಂತಯ್ಯನನ್ನು ಕೇಳಬೇಡ್ವೇ? ಸುಶೀಲ ಚಿಕ್ಕಿಗೆ ಅನಿಸಿತ್ತು. ಆದರೆಅವನಿಗೆ ಟಪ್ಪಾಲು ಕಳಿಸಿ ಅವನಿಂದ ಉತ್ತರ ಬಂದು, ಸಿಟ್ಟು ಬಂತು ರಘುದೊಡ್ಡಪ್ಪನಿಗೆ. "ಚಿಕ್ಕಿ, ಅವನಿಗಿಲ್ಲದ ಚಿಂತೆ ನಿನಗ್ಯಾಕೆ? ನಿನ್ನ ಮನಸ್ಸು ತಯಾರಾದ್ರೆ ಸಾಕು"

ಹೊರಡುವ ತಯಾರಿ ನಡೆಯಿತು. ನಾಳೆ ಮುಂಜಾನೆ ದೋಣಿಗೆ ಸಾಸ್ತಾನಕ್ಕೆ ಹೋದರೆ ಅಲ್ಲಿಂದ ಮೋಟಾರ್ ಗಾಡಿ ಸಿಗುತ್ತದೆ. ದಾರಿಯಲ್ಲಿ ಇನ್ನೂ ಎರಡು ಕಡೆ ಗಾಡಿ ಇಳಿದು ಕಿರು ದೋಣಿ ಹತ್ತಿ ಭಟ್ಕಳ ದಾಟಿದರೆ ಶರಾವತಿ ನದಿ. ದೊಡ್ಡ ಹಾಯಿ ದೋಣಿಯಲ್ಲಿ ನದಿ ದಾಟಿ ಹೊನ್ನಾವರ ತಲುಪಲು ಸುಮಾರು ಒಂದು ಗಂಟೆ ಬೇಕು.ಅಲ್ಲಿಂದ ಮತ್ತೆ ಮೋಟಾರ್ ಬಂಡಿ ಸೀದಾ ಸಿರ್ಸಿಗೆ. ಕಾಡು ಬೆಟ್ಟಗಳ ಮಧ್ಯೆ ತಿರುವು ಘಾಟಗಳು. ಹೊಳೆಬಾಗಿಲಿನಿಂದ ತ್ರಾಸದಾಯಕ ಪ್ರಯಾಣ. ಶಿವಮೊಗ್ಗದವಳಾದ

ಚಿಕ್ಕಿಗೆ ಈ ದಾರಿ ತಿಳಿದದ್ದೇ. ಕಷ್ಟಕ್ಕೆ ಅಂಜುವ ಜೀವ ಅವಳದಲ್ಲ. ಈ ಮನೆಗೆ ಬಂದು ಎರಡುವರ್ಷಗಳೇ ಆಗಿ ಹೋಗಿವೆ. ಹೀಗೆ ದಿಢೀರನೆ ಹೊರಟು ನಿಂತದ್ದು ಮನೆ ಮಂದಿಗೆ ಬೇಸರದ ಸಂಗತಿ. ಆದರೂ ರಘುದೊಡ್ಡಪ್ಪ ಅವಳ ಹಿತಚಿಂತಕನಾಗಿ ಭವಿಷ್ಯದ ಹೊಸ ನಾಳೆಗಳಿಗೆ ಭಾಷ್ಯ ಬರೆಯಲು ಸಜ್ಜಾದ ಹೊತ್ತಿನಲ್ಲಿ ನಿನ್ನೆಯನ್ನು ಮರೆತುಅವಳು ಎಲ್ಲಿಯೇ ಇರಲಿ ಚೆನ್ನಾಗಿರಲಿ, ಸುಖಿಯಾಗಿರಲಿ.ಹಾರೈಸಿದರು ಹಿರಿಯರು.

ಆದರೆ ಗೌರಿ, ನಾಣಿಗೆ ಚಿಕ್ಕಿ ಹೋಗುವುದು ಸುತರಾಂ ಇಷ್ಟವಿಲ್ಲ. ಅವಳ ಚೀಲವನ್ನು ಹುಗ್ಗಿಸಿ ಇಡಲು ಯೋಚಿಸಿದರು. ಕಾಲು ಹಿಡಿದರು. ಆಮೇಲೆ ಅಳುವೇ ಅಳು. ನಾಳೆಯಿಂದ ಅಟ್ಟ ಖಾಲಿ. ಇಂಗ್ಲೀಷ ಓದಿ ಬರೆಯಲು ಕಲಿಸುವವರಿಲ್ಲ.ಚಿತ್ರ ತಿದ್ದಿಸುವವರಿಲ್ಲ, ಕಸೂತಿ ಹೇಳಿಕೊಡುವವರಿಲ್ಲ, ಹಾರ್ಮೋನಿಯಂ ಬಾರಿಸುಪವರಿಲ್ಲ. ಚೆಂದದ ಕಥೆ ಹೇಳಲು ಅಜ್ಜಯ್ಯ ಇದ್ದಾರೆ. ಆದರೆ ಕಥೆ, ಕವನ ಬರೆಯಿರಿ, ಹಾಡಿರಿ ಎನ್ನಲು ಯಾರಿದ್ದಾರೆ? ಕೆಲವು ತಿಂಗಳ ಹಿಂದೆ ಗೌರಿ ಒಂದು ಕವನ ಬರೆದಿದ್ದಳು,

**"ನನ್ನ ಬಳಿ ಇತ್ತು ಒಂದು ನಾಯಿ। ಅದರ ಹೆಸರು ಮೋತಿ।**
**ಅನ್ನ ಬೇಕು, ತಿಂಡಿ ಬೇಕು। ಮಾಡಿತು ಕುಂಯ್ ಕುಂಯ್ ಹಠ।**
**ತಿನ್ನುವ ಮೊದಲೇ ಕುಂಯ್ ಎಂದಿತು। ತಿನಲಾರೆ ಎಂಬ ಹಠ।**

"ಚೆಂದ ಬರೆದಿದ್ದಿಯಲ್ಲೇ? ಹೀಗೇ ಬರೀತಾ ಇರು" ಬೆನ್ನು ತಟ್ಟಿದ್ದಳು ಚಿಕ್ಕಿ.

ನಾಣಿ ಸುಮ್ಮನಿರುವನೇ? "ಅಕ್ಕ ಬರೆದ ಪದ್ಯಕ್ಕೆ ನಾ ಕುಣಿದು ತೋರಿಸುವೆ" ತಕಥೈ ತಕಥೈ ಕುಣಿದಿದ್ದ. ಆಮೇಲೆ ಮೋತಿಯಂತೆ ನಾಲ್ಕು ಕಾಲುಗಳಲ್ಲಿ ನಡೆವಂತೆ ಅಂಬೆಗಾಲಿಟ್ಟು ಸುತ್ತಿ ನಗು ಚಿಮ್ಮಿಸಿದ್ದ. ಸುಶೀಲ ಚಿಕ್ಕಿ ಅವನ ತಲೆಗೂದಲು ಸವರಿ,"ಶಾಲೆಗೆ ಹೋಗಿ ವಿದ್ಯೆ ಕಲಿತು ದೊಡ್ಡ ಕಲೆಕ್ಟರ್ ಆಗ್ಬೇಕು ನನ್ನ ಮರಿ! ಆಗ್ತಿಯಾ?" ಕೇಳಿದಳು.

ಅವನು ಅಕ್ಕನನ್ನು ನೋಡಿದ, ಉತ್ತರಿಸಲಿಲ್ಲ. ಕುತೂಹಲದ ವಿಸ್ಮಯ ಲೋಕ ಇನ್ನೂ ಅವನ ಮುಂದೆ ತೆರೆದುಕೊಳ್ಳಬೇಕಿತ್ತು. ಹೊಳೆಬದಿಯಲ್ಲಿ ಮರ ಏರಿದರೆ ಗಂಗೊಳ್ಳಿ ಹೊಳೆಯ ತೀರ ಕಾಣದ ಸೀಮೆ ನೋಡುವಾಗ, ಅದರಾಚೆ ಇನ್ನೂ ಏನೇನೋ ಇದೆ. ತಾನು, ಅಕ್ಕ ಇಬ್ಬರೇ. ತೆಪ್ಪ ಕಟ್ಟಿ ನಾವೇ ಹುಟ್ಟು ಹಾಕಿ ಹೋಗೋಣವೆಂದು ಅಕ್ಕನೇ ಆವತ್ತು ಹೇಳಿದ್ದು. ತೆಪ್ಪ ಬೇಡ, ದೋಣಿಯಲ್ಲಿ ಹೋಗಬೇಕು. ನದಿಯಲ್ಲಿ ಸುತ್ತಬೇಕು ಇದೊಂದೇ ಮನಸ್ಸಿನಲ್ಲಿ. ತನಗೂ ಅಕ್ಕನಿಗೂ ರೆಕ್ಕೆ ಇದ್ದಿದ್ದರೆ ಹಾರಿ ಹಾರಿ ದೂರ ಬಲು ದೂರ ಕಾಣದ ಯಾವುದೋ ದೇಶಕ್ಕೆ, ಅಜ್ಜಯ್ಯ ಹೇಳುವ ಕಥೆಯಲ್ಲಿ ಇದ್ದಂತೆ ಆ ದೇಶಗಳನ್ನು ಸುತ್ತಿ ಸುತ್ತಿ. ಅಲ್ಲ, ಹನುಮಂತ ಸಂಜೀವಿನಿ ಪರ್ವತ ತರಲು ಆಕಾಶಕ್ಕೆ ನೆಗೆಯಲಿಲ್ಲವೇ? ತಮಗೆ ನೆಗೆಯುವ ತ್ರಾಣ ಇದ್ದಿದ್ದರೆ ಸಂಜೀವಿನಿ ಪರ್ವತ ಒಂದೇ ಅಲ್ಲ, ಇಡೀ ಹಿಮಾಲಯ ಹೊತ್ತು ತಂದು ಈ ಕುದ್ರುವಿನಲ್ಲಿ

ಇಡುತ್ತಿದ್ದೆವು. ಚಿಕ್ಕಿ ಹೋಗುತ್ತಿದ್ದಾಳೆ ದೋಣಿಯಲ್ಲಿ, ಮೋಟಾರ್ ಬಂಡಿಯಲ್ಲಿ. ತಾನೂ ಹೋಗ್ಬೇಕು ಮೋಟಾರ್ ಬಂಡಿಯಲ್ಲಿ ದೂರ ದೂರಕ್ಕೆ. ಹೊಳೆಬಾಗಿಲು ಊರಲ್ಲಿ ಎಂತದೂ ಇಲ್ಲೆ. ಚಕ್ರೀ ಅಮ್ಮಮ್ಮನ ಊರಲ್ಲಿ? ನಾಣಿ ಕೈಬೆರಳು ಲೆಕ್ಕ ಹಾಕಿದ, ಮೂರು ಮೋಟಾರ್ ಬಂಡಿಗಳು! ರಫ಼ಿ ಸಾಬ, ಶೀನಿ, ಮತ್ತು ಡಿಸೋಜನದು. ಆ ಮೋಟಾರ್ ಬಂಡಿಗಳನ್ನು ಓಡಿಸುವುದೇ ಚೆಂದ. ಪೋಂ ಪೋಂ, ಗುಡುಗುಡು, ಎಂತ ಕಪ್ಪು ಹೊಗೆ? ಒಮ್ಮೆ ತಾನು ಹತ್ತಿದ ರಫ಼ಿ ಸಾಬನ ಗಾಡಿ ಮುಂದೆ ಹೋಗದೆ, ತಥ್, ನನ್ನ ಪ್ಯಾರಿಗೆ ಜ್ವರ ಬಂದಿದೆ ಎನ್ನುತ್ತ ಕೆಳಗಿಳಿದು ನಾಲ್ಕು ಜನ ಅದನ್ನು ನೂಕಿದ್ದೇ. ಈ ಹಾಳು ಗಾಡಿ ಬೇಡ. ಪೋಂ ಪೋಂ ಶಬ್ಧ ಮಾಡುತ್ತ ಕುದುರೆ ವೇಗದಲ್ಲಿ ಓಡಬೇಕು ರಾಜಕುಮಾರಿಯ ರಥ ಓಡುವಂತೆ. ನಾಳೆ ನಮ್ಮನ್ನು ಬಿಟ್ಟುಚಿಕ್ಕಿ ಹೊಗ್ತಿದ್ದಾಳೆ ಮೋಟರ್‌ಬಂಡಿ ರಥದಲ್ಲಿ. "ಚಿಕ್ಕಿ, ನಾವೂ ಬರ್ತೇವೆ, ನಮ್ಮನ್ನು ಬಿಟ್ಟು ನೀನೆಲ್ಲಿಗೆ ಒಬ್ಬಳೇ ಹೋಪದು?" ಅಳುತ್ತಿದ್ದ ನಾಣಿ, ಕುಸು ಕುಸು ಸ್ವರ ಗಂಟಲುಬ್ಬಿ ಬಂದಿತ್ತು ಗೌರಿಗೆ.

ಸುಶೀಲಚಿಕ್ಕಿ ತನ್ನ ಬಿಳಿಸೆರಗಿನಿಂದ ಮುಖ ಒರಸಿದಳು. ಅವಳ ಕಣ್ಣು ತುಂಬ ನೀರು. ಸಿರ್ಸಿಗೆ ಹೋದ ನಂತರ ಇಬ್ಬರನ್ನೂ ಅಲ್ಲಿಗೆ ಕರೆಯಿಸಿಕೊಳ್ಳಬೇಕು. ಶಾಲೆಗೆ ಸೇರಿಸಿ ಓದಿನ ರುಚಿ ಹೆಚ್ಚಿಸಬೇಕು. ಅದೇಕೋ ಹೊಳೆಬಾಗಿಲ ಹಿರಿಯರಿಗೆ ಇದು ತಲೆಗೆ ಬರುವುದೇ ಇಲ್ಲವಲ್ಲ. ಯಾವ ಜನ್ಮದ ನಂಟೋ, ಕೆಲವು ಕಾಲ ಈ ಮನೆಯ ಮಂದಿಯಲ್ಲಿ ಒಂದಾಗಿಸಿದೆ. ಅವರುಗಳ ಸಹೃದಯತೆಯ ಪಾಶದಲ್ಲಿ ಕಟ್ಟಲ್ಪಟ್ಟ ಎಳೆ ಸುಲಭದಲ್ಲಿ ಕಳಚೀತೇ? ಎಲ್ಲರ ಹೃದಯಗಳೂ ವಿದಾಯದ ಗಳಿಗೆಗೆ ಭಾರವಾಗಿವೆ.ಅವಳ ಇಷ್ಟದ ಹಾಡು, "ಭಾಗ್ಯದ ಲಕ್ಷ್ಮಿ ಬಾರಮ್ಮ, ನಮ್ಮಮ್ಮ ಸೌಭಾಗ್ಯದ ಲಕ್ಷ್ಮಿ ಬಾರಮ್ಮ"ಹಾರ್ಮೋನಿಯಂನಲ್ಲಿ ಬಾರಿಸುವ ಕಮಲತ್ತೆ. ವಿಶೇಷ ಅಡಿಗೆ ತಯಾರಿಯಲ್ಲಿ ಶಾರದತ್ತೆ, ಖಾಲಿ ಕೈಯ್ಯಲ್ಲಿ ಹೋಗದಂತೆ ಇನ್ನೂ ತಾನು ಉಡದೆ ಒಳಗಿಟ್ಟ ಸೀರೆ ಎತ್ತಿಡುವ ಅಜ್ಜಮ್ಮ, ಹಪ್ಪಳ ಸಂಡಿಗೆ ಕಟ್ಟುತ್ತಿದ್ದ ಆಯಿ. ಅರೆ! ಎಲ್ಲರೂ ಮೌನ!

ರಾತ್ರೆ ದೀಪದ ಬೆಳಕಿನಲ್ಲಿ ಸುಶೀಲಚಿಕ್ಕಿ ತಾನು ಬರುವಾಗ ತಂದ ಸಾಮಾನುಗಳನ್ನು ಅಚ್ಚುಕಟ್ಟಾಗಿ ಜೋಡಿಸಿಟ್ಟು, "ಗೌರಿ, ಬೀಗ ಹಾಕಿದ ಈ ಟ್ರಂಕಿನಲ್ಲಿ ಏನಿದೆ ಅಂತ ನೋಡಬೇಡವೇ?" ಕೇಳಿದಳು. ನೋಡುವ ಕುತೂಹಲ ಈಗ ಗೌರಿಯಲ್ಲಿ ಉಳಿದಿರಲಿಲ್ಲ. ಚಿಕ್ಕಿ ಬೀಗ ತೆರೆದಳು, ಕೆಲವು ಸಣ್ಣ ರಟ್ಟಿನ ಪೆಟ್ಟಿಗೆ ಇದ್ದವು. ಅಜ್ಜಮ್ಮನ ಸಂದೂಕದಲ್ಲಿ ಇರುವಂತಹದೇ. ಅವುಗಳಲ್ಲಿ ಎರಡು ರಟ್ಟಿನ ಮುಚ್ಚಳ ತೆರೆದು ಅವಳ ಮುಂದಿಟ್ಟಳು.

"ಚಿನ್ನದಂತಹ ಹುಡುಗಿ, ನನ್ನ ನೆನಪಿಗೆ ನಿನಗೆ ಉಡುಗೊರೆ. ಇದರಲ್ಲಿ ನಿನಗೆ ಬೇಕಾದ್ದು ಒಂದನ್ನು ಆರಿಸು" ಎಂದಳು. ಒಂದು ಪುಷ್ಯರಾಗದ ನೆಕ್ಲೇಸು, ಇನ್ನೊಂದು

ಮೂರೆಳೆ ಅವಲಕ್ಕಿ ಸರ. ಇನ್ನೂ ಚಿನ್ನದ ಹೊಳಪು ಮಾಸದ ಹೊಚ್ಚ ಹೊಸತು. ಬೇಕಾದ್ದು ಆರಿಸುವ ಆಯ್ಕೆ ಅವಳಿಗೇ. ಆದರೆ ಚಿನ್ನದ ಒಡವೆ ನೋಡುವ, ಆರಿಸಿ ತೆಗೆಯುವ ಆಸೆಯಿಲ್ಲದೆ ಗೌರಿಗೆ ದುಃಖ ಉಮ್ಮಳಿಸಿತು. ಚಿಕ್ಕಿಯ ತೊಡೆಮೇಲೆ ತಲೆಯಿಟ್ಟಳು. ಕಾಲ ಉರುಳುವುದೇ ಬೇಡ. ನಿಲ್ಲಲಿ ಇಲ್ಲೇ. ಈಗಿರುವಂತೆ ರಾತ್ರೆ ಕಳೆಯದೆ, ಬೆಳಗು ಮೂಡದೆ, ರವಿ,ಚಂದ್ರರು ಕಾಣೆಯಾಗಿ ತಾರೆಗಳ ಲೋಕದಲ್ಲಿ ನಾನು ಚಿಕ್ಕಿ ಇಬ್ಬರೇ.

* * *

## ಅಧ್ಯಾಯ 10

ಸುಶೀಲ ಚಿಕ್ಕಿ ತಮ್ಮನ್ನು ಬಿಟ್ಟು ರಘು ದೊಡ್ಡಪ್ಪನ ಊರಿಗೆ ಹೋದಮೇಲೆ ಗೌರಿ, ನಾಣಿಗೆ ಹೊತ್ತು ಹೋಗದಷ್ಟು ಉದಾಸೀನ. ಓದುವ ಬರೆಯುವ ಚಿತ್ರಬಿಡಿಸುವ ಆಸಕ್ತಿ ತಗ್ಗಿತು. ಎರಡು ದಿನ ಅಟ್ಟ ಹತ್ತಿ ಇಳಿದು, ಇಂಗ್ಲೀಷ ಅಕ್ಷರ ಬರೆದು ಅಳಿಸಿ, ಕನ್ನಡ ಮಕ್ಕಳ ಕಥೆ ಪುಸ್ತಕ ಓದಿ ಇಟ್ಟು ಊಹೂಂ ಉತ್ಸಾಹ ಎಲ್ಲೋ ನಾಪತ್ತೆ.ಚಿಕ್ಕಿ ಮತ್ತೆ ತಮ್ಮಲ್ಲೇ ಇರುವಂತೆ ಆಗಲೆಂದು ದೇವರಿಗೆ ಕೈ ಮುಗಿದರು. ಎರಡು ದಿನಹೊಳೆಬದಿ, ಹಾಡಿ, ಗದ್ದೆ ತಿರುಗಿದರೂ ಸಮಾಧಾನವಿಲ್ಲ. ಕೊನೆಗೆ ಗೌರಿಗೆ ತಡೆಯಲಾಗದೆ "ನಡಿಯೋ ನಾಣಿ, ಕೂತು ಕೂತು ಕುಂಡೆ ಬಿಸಿ ಆತು. ಚೂರು ಹೊಳೆಹತ್ರ ಹೋಗಿ ಬರುವ" ಎಂದು ಹೊರಟೇಬಿಟ್ಟಳು.

ಆದರೆ ಹೊಳೆ ಹತ್ರ ಹೋಗುವ ಬದಲು ತಾವು ತಪಸ್ಸಿಗೆ ಅರಸಿ ಹೋದ ಜಾಗ, ಕುಳಿತ ಸ್ಥಳ, ಹೆದರಿದ ಕತ್ತಲು ನೆನಪಾಗಿ, "ತಟ್ಟಿರಾಯನ ಹಾಂಗೆ ಎಂತದೋ ನಿಂತಿತ್ತಲ್ಲ ಆ ಸಂಜೆ, ಮತ್ತೆ ನಿನ್ನ ಕಣ್ಣಿಗೆ ಕಂಡ ಕಣ್ಣುಗಳು? ನಡಿ ಬಿಸಿಲಲ್ಲಿ ನಾವು ಆ ದೆವ್ವಗಳು ಹ್ಯಾಗಿರುತ್ತವೆ? ಕಂಡು ಬರೋಣ" ಗೌರಿಯ ಹೆದರಿಕೆ ಕಮ್ಮಿಯಾಗಿದೆ. ಏನೆಂದು ತಿಳಿವ ಕುತೂಹಲ ಹೆಚ್ಚಿದೆ.

"ನಮ್ಮನ್ನು ಬೆರೆಸಿಕೊಂಡು ಬಂದ್ರೆ?"

"ಹಗಲು ಸೂರ್ಯನ ಬೆಳಕಿಗೆ ದೆವ್ವಗಳು ಹೆದರ್ತಾವಂತೆ. ನಮಗೂ ಹೆದರಿಕೆ ಎಂತದ್ದು? ನಡಿ"

ಗೌರಿ ತಮ್ಮನನ್ನು ಹೊರಡಿಸಿದಳು. ಬಿಸಿಲು ಅದಾಗಲೆ ಏರಿತ್ತು. ಅಂಗಳದಲ್ಲಿ ಬಿಸಿಲು ಕಾಯಿಸುತ್ತಿದ್ದ ಮೋತಿ ಇವರು ಹೊರಟದ್ದು ಕಂಡು ಚಂಗನೆ ಎದ್ದು ತಾನೂ ಬಾಲ ಅಲ್ಲಾಡಿಸುತ್ತ ಹೊರಟಿತು ಇವರ ಮುಂದಿನಿಂದ. ಅದೇ ದೊಡ್ಡ ಮರ, ಸುತ್ತಲೂ

ಪೊದೆಗಳು, ಒಣಗಿದ ತರಗೆಲೆ ರಾಶಿ, ಬಾಯ್ದೆರೆದ ಹೊಂಡ, ಬಿಸಿಲ ಮೆರಗಿತ್ತು. ಗೌರಿ ಜಾಗ್ರತೆಯಲ್ಲಿ ಬಗ್ಗಿ ಎದ್ದು ಕೋಲಿನಿಂದ ತರಗೆಲೆ, ಪೊದೆಗಳನ್ನು ಸವರಿ ಪರಿಶೀಲಿಸಿದಳು. ದೊಡ್ಡವರಂತೆ ನಾಣಿಯೂ ನೋಡುತ್ತ, "ಎಂತದೂ ಇಲ್ಲೆ ಅಕ್ಕ. ಆದರೂ ಆ ರಾತ್ರೆ ನಮ್ಮ ಕಣ್ಣಿಗೆ ಬಿದ್ದ ಕಣ್ಣು ಎಂತರದ್ದು?"

"ಗಾಳಿದೆವ್ವದ ಕಿತಾಪತಿಯಾ? ನಮ್ಮ ಮನಸ್ಸಿನ ಭ್ರಮೆಯಾ? ಆವತ್ತು ಚಕ್ರಿ ಊರಲ್ಲಿ ಬಯಲಾಟಕ್ಕೆ ಹೋಗಿದ್ದು, ರಾವಣ ಸಂಹಾರ ಪ್ರಸಂಗ, ಮಧ್ಯರಾತ್ರೆ ನಾವಿಬ್ಬರೇ ಬಂದದ್ದು ನೆನಪಿದೆಯಾ? ಆ ರಾತ್ರೆ ನಮಗೆಂತ ಆಯ್ತು?"

"ಹೂಂ, ಚೂರು ಚೂರು. ಎಂತಾ ಆಯ್ತು?"

ಬಾಲ ಮನಸ್ಸು ಮರೆತು ಬಿಟ್ಟಿತ್ತು. ಗೌರಿಯೇ ನೆನಪಿಸಿದಳು. ಚಕ್ರಿಊರಿನಲ್ಲಿ ನಡೆದ ಯಕ್ಷಗಾನ ಬಯಲಾಟ ಪ್ರಸಂಗ. ರಂಗಸ್ಥಳದಲ್ಲಿ ಒಂದೋಂದೇ ರಾಕ್ಷಸ ಬಣ್ಣದ ವೇಷಗಳು ಬರುತ್ತಿದ್ದವು. ತಟ್ಟೀರಾಯನಂತೆ ಒಂದು ರಾಕ್ಷಸ ವೇಷ ಗಧೆ ತಿರುಗಿಸುತ್ತ, ಅರ್ಧಚಂದ್ರಾಕೃತಿಯ ರಂಗಸ್ಥಳದಲ್ಲಿ ತಿರುಗಿ ತಿರುಗಿ ಹೂಂಕಾರ ಹಾಕುತ್ತ ಕುಣಿಯುವದನ್ನು ನೋಡಿದರೆ ದೊಡ್ಡವರ ಎದೆಯಲ್ಲೂ ಝಲ್, ಝಲ್. ಕುಂಬಕರ್ಣ, ಮಹಿಷಾಸುರ, ಇಂದ್ರಜಿತ್ತು ಒಬ್ಬೊಬ್ಬರನ್ನೇ ಶ್ರೀರಾಮ, ಲಕ್ಷ್ಮಣರು ಸಂಹಾರ ಮಾಡುತ್ತಿದ್ದರು. ಎಲ್ಲಾ ಆದಮೇಲೆ ರಾವಣ ಬರಬೇಕಷ್ಟೇ. ದೊಂದಿ ಬೆಳಕು, ದಟ್ಟ ಹೊಗೆ, ಚೆಂಡೆ ಅಬ್ಬರ, ಭಾಗವತರ ಏರುಧ್ವನಿಯ ಹಾಡುಗಾರಿಕೆಗೆ ಪಾಪ ನಾಣಿ ಹೆದರಿ ಅಕ್ಕನ ಕೈ ಬಿಗಿಯಾಗಿ ಹಿಡಿದಿದ್ದ. "ಹೆದರಬೇಡ್ವೋ ಪುಟ್ಟಾ, ಅಪ್ಪೂಮಾವ, ಅಮ್ಮಮ್ಮ ಬದಿಗೇ ಇದ್ದವು." ಗೌರಿ ಧೈರ್ಯ ಹೇಳಿದರೂ ಅವನು ಮನೆಗೆ ಹೋಗಲು ರೆಚ್ಚೆ ಹಿಡಿದಿದ್ದ. ಅಮ್ಮಮ್ಮ ತಮ್ಮ ಹಿಂದೆ ಕುಳಿತಿದ್ದ ಕೆಲಸದವನಿಗೆ "ಇಬ್ಬರನ್ನೂ ಮನೆಗೆ ಬಿಟ್ಟು ಬಾ" ಎಂದಳು. ಮನೆ ಅಂದ್ರೆ ಅದೇನೂ ದೂರ ಇಲ್ಲ. ರಂಗಸ್ಥಳದ ಒಂದು ಕೊಡಿ ಮನೆಗೆ ಕಾಣುವಷ್ಟೇ ಹತ್ತಿರ. ಕೆಲಸದವ ನಾಲ್ಕು ಮಾರು ಹೋದವ,

"ಆಟ ರೈಸ್ತಾ ಇಪ್ಪತ್ತಿಗೆ ನಿಮಗೆ ಮನೆ ಹೋಪ ಗ್ಯಾನ. ಎಷ್ಟು ಲಾಯ್ಕ ಇದ್ದು ಕುಣಿತ, ಭಾಗವತಿಕೆ." ಮೂದಲಿಸಿದ.

"ನೀ ಹ್ವಾಗು ನಿನ್ನಷ್ಟಕ್ಕೆ. ನಮಗೆ ಇಲ್ಲಿಂದಲೇ ಕಾಣ್ತು ಮನೆ. ಬಾ ನಾಣಿ,"

ಕೆಲಸವನಿಗೆ ಅದೇ ಬೇಕಿತ್ತು, ಅವ ಹಿಂದಿರುಗಿದ. ತಮ್ಮನ ಕೈ ಹಿಡಿದು ಬಿರಬಿರನೆ ಹೆಜ್ಜೆ ಹಾಕಿದ ಗೌರಿ ಮನೆಗೆ ತಿರುಗುವ ಕೂಡು ದಾರಿಯ ಬದಿಗೆ ಆಲದಮರದ ಸಮೀಪ ಬಂದವಳು ಗಕ್ಕನೆ ನಿಂತುಬಿಟ್ಟಳು. ನಾರ್ಣಜ್ಜಯ್ಯ ಯಾವಾಗಲೂ ಹೇಳುವ ಮಾತು ನೆನಪು ಬಂತು. ಈ ಆಲದಮರದಲ್ಲಿ ಅದೆಷ್ಟೋ ಕಾಲದಿಂದ ಬ್ರಹ್ಮರಾಕ್ಷಸನಿದ್ದ. ಮಧ್ಯರಾತ್ರೆ ದಾರಿಹೋಕರಿಗೆ ಉಪದ್ರ ಕೊಡುತ್ತಿದ್ದನಂತೆ. ಅವನ ಬಗ್ಗೆ ಜನ ಹೇಳುವ

ಕಥೆಗಳು ಹಲವಾರು. ನಾರ್ಣಜ್ಜಯ್ಯನಿಗೆ ಎರಡು ಸಲ ಬ್ರಹ್ಮರಾಕ್ಷನ ಸುಳಿವು ಸಿಕ್ಕಿದೆಯಂತೆ. ಒಮ್ಮೆ ಅವನ ಮುಂದೆ ಕಲ್ಲುಗಳ ಮಳೆ ಸುರಿದಂತೆ. ಇನ್ನೊಮ್ಮೆ ಹಿಂದಿರುಗಿ ನೋಡದೆ ನಡೆದ ಅಜ್ಜಯ್ಯನನ್ನು ಸುಮಾರು ದೂರ ಹಿಂಬಾಲಿಸಿ ಬಂದಿತ್ತಂತೆ. ಅಜ್ಜಯ್ಯನ ಕಾಲದಲ್ಲೇ ಚಕ್ರೀ ಊರಿಗೆ ಬಂದ ಓರ್ವ ಸಿದ್ಧಪುರುಷರು ಬ್ರಹ್ಮರಾಕ್ಷಸನ ಉಚ್ಚಾಟನೆ ಮಾಡಿದರಂತೆ. ಅವರು ಆ ಸಮಯ ಆಲದ ಕಟ್ಟೆಗೆ ಎರೆದ ಮಂತ್ರಿಸಿದ ಪವಿತ್ರ ನೀರು ಈಗಲೂ ಒಸರಿಕೊಂಡೇ ಇದೆ! ಅದರಾಚೆ ಮಾಸ್ತಿ ಕಟ್ಟೆ, ಅದರದ್ದು ಇನ್ನೊಂದು ಕಥೆ. ರಾತ್ರೆ ಒಬ್ಬರೇ ಆ ಕಟ್ಟೆ ಎದುರು ಹಾದು ಹೋಗುವ ಎದೆಗಾರಿಕೆ ಯಾರಿಗೂ ಇಲ್ಲ. ಬೇರೆ ಬೇರೆ ಸ್ತ್ರೀರೂಪದಲ್ಲಿ ಮಾಸ್ತಿದೇವಿ ಕಟ್ಟೆ ಬಳಿ ಇರುತ್ತಾಳೆ, ಅಪರೂಪಕ್ಕೆ ಮಾತು ಆಡುತ್ತಾಳೆಂದು ಪ್ರತೀತಿ. ಮುಸ್ಸಂಜೆ ನಂತರ ಯಾರೂ ತಮ್ಮ ಮಕ್ಕಳನ್ನು ಅತ್ತ ಕಳಿಸುವುದಿಲ್ಲ. ಅಷ್ಟು ಹೆದರಿಕೆ. ಅಕಸ್ಮಾತ್ ಹೋದವರೂ ಕಾಹಿಲೆ ಬೀಳುತ್ತಾರಂತೆ. ಇವತ್ತು ಮಧ್ಯರಾತ್ರೆಯಲ್ಲಿ ಇವರಿಬ್ಬರೇ ಬರುತ್ತಿದ್ದಾರೆ. ಮರದ ಕೆಳಗೆ, ಮಾಸ್ತಿಕಟ್ಟೆ ಎದುರು ನೋಡುವ ಧೈರ್ಯವಿಲ್ಲದೆ ಹೇಗೆ ಇಬ್ಬರೂ ದಾಟಿದರೋ. ಯಾವ ಅಗೋಚರ ಶಕ್ತಿಯೂ ಅವರನ್ನು ತಡೆಯಲೇ ಇಲ್ಲವಲ್ಲ.

ಆ ಹಿಂದಿನ ನೆನಪಿನಲ್ಲಿ ಮತ್ತು ಕೆಲವು ದಿನಗಳ ಮೊದಲು ಹುಚ್ಚು ಆವೇಶದಲ್ಲಿ ಧ್ರುವಕುಮಾರನ ಅನುಕರಣೆಗೆ ಹೊರಟು ಏನೆಲ್ಲ ಕಲ್ಪಿಸಿಹೆದರಿ ಓಡಿದ ನೆನಪು ಥಳಕು ಹಾಕಿ ನಗುಬಂತು. ಅಷ್ಟರಲ್ಲಿ ನಾಣಿ ದಟ್ಟ ಪೊದೆಯೊಳಗೆ ಏನೋ ಅದ್ಭುತ ಕಂಡವನಂತೆ, “ಅಕ್ಕಾ, ಅದಾ ಅಲ್ನೋಡು! ಬಿಳಿಯದು” ಕಿರುಚಿದ. ನೋಡಿದರೆ ಬಿಳಿ ಮೊಲ! ಸ್ವಲ್ಪ ದೊಡ್ಡದೇ, ಒಂದೇ ಇದೆ, ಮುದುರಿಕುಳಿತಿದೆ! ಇವರನ್ನು ಕಂಡು ಮೂತಿ ತಿರುಗಿಸಿ ಪಿಳಿಪಿಳಿ ಕಣ್ಣು ಬಿಡುತ್ತಿದೆ. ದಿಟವೇ! ಇದೇ ಕಣ್ಣುಗಳಲ್ಲವೇ ಅಂದು ಆ ನಸುಗತ್ತಲಲ್ಲಿ ತಮಗೆ ಕಂಡದ್ದು?ಸುಳ್ಳು ಸುಳ್ಳೇ. ಆ ಕಣ್ಣುಗಳು ಇನ್ನೂ ಪ್ರಖರವಾಗಿದ್ದವು. ಇಬ್ಬರೂ ಮುಖ ನೋಡಿಕೊಂಡರು. ಮೊಲದ ಕಣ್ಣುಗಳನ್ನು ಕಂಡು ಬೇಡಾದ್ದು ಭ್ರಮಿಸಿ ಹೆದರಿದೆವಲ್ಲ ಎಂದು ತಮಾಶೆ ಮಾಡುತ್ತ ಅದನ್ನು ಹಿಡಿಯಲು ನಾಣಿ ಕೈ ಚಾಚಿದ. ಏನಾಶ್ಚರ್ಯ, ಅದು ಸಾಕಿದ ಮರಿಯಂತೆ ಅನಾಯಾಸ ಅವನ ಕೈಗೆ ಬಂದು ಬೆಚ್ಚಗೆ ಕುಳಿತುಬಿಟ್ಟಿತು. ರೇಶ್ಮೆಯಂತೆ ಮೃದು ತುಪ್ಪಳದ ಮೈ ನುಣುಪಾಗಿ ಜಾರುತ್ತಿದೆ. ನಾಣಿ ಎದೆಗವಚಿಕೊಂಡ. ಇಬ್ಬರೂ ಅದನ್ನು ಮನೆಗೆ ಕರೆದೊಯ್ಯಲು ನಿಶ್ಚಯ ಮಾಡಿಬಿಟ್ಟರು. ಇತ್ತ ಮೋತಿಗೆ ತನ್ನ ಪ್ರೀತಿ ಪಾತ್ರರ ಗಮನ ಇನ್ನಾವುದೋ ಪ್ರಾಣಿ ಮೇಲೆ ಬಿದ್ದದ್ದು ಸಹನೆಯಾಗದೆ ಒಂದೇ ಸಮ ನಾಣಿಯ ಹಿಂದೆ ಮುಂದೆ, ಗೌರಿಯ ಪರಕಾರ ಹಿಡಿದೆಳೆದು ಬೊಗಳಾಟ. ಗೌರಿಯಿಂದ ಎರಡು ಪೆಟ್ಟು ಸಿಕ್ಕಿದ ಮೇಲೆ ಕುಂಯ್‌ಗುಡುತ್ತ ಹಿಂದೆ ಸರಿಯಿತು.

ಮನೆಗೆ ಬಂದ ಮೇಲೆ ಎಲ್ಲರ ಕಣ್ಣುಗಳು ಮೊಲದ ಮೇಲೆಯೇ. ಸಾಕಷ್ಟು ದೊಡ್ಡದಾಗಿದೆ.ಈ ಆಸುಪಾಸಲ್ಲಿ ಕೆಲವು ಮೊಲಗಳು ಇದ್ದರೂ ಹೀಗೆ ಕೈಗೆ ಸಿಕ್ಕ ಉದಾಹರಣೆ ಇಲ್ಲ. ಇದು ಎಲ್ಲಿಂದ ಬಂದಿತೋ? ಸಲೀಸಾಗಿ ನಾಣಿ ಹಿಡಿದ ಎಂದರೆ ಅದು ಸಾಕು ಮೊಲವೇ ಹೌದು. ಆದರೆ ಗೌರಿ, ನಾಣಿಗೆ ಹೆದರಿಕೆ ಹುಟ್ಟಿಸಿದ ಕಣ್ಣುಗಳು ಇವಲ್ಲ. ಆವತ್ತು ನೋಡಿದ್ದು ಕಾಡುಬೆಕ್ಕಿನ ಅಥವಾ ಕಾಟು ನಾಯಿಯ ಕಣ್ಣುಗಳಿರಬೇಕು. “ನಮಗೆ ತಿಳಿಸದೆ ತನಿಖೆ ಮಾಡಲು ಹೋಗಿದ್ದಾವೆ. ಇವತ್ತೂ ಹೆದರಿದ್ದರೆ ಮತ್ತೆ ನಾಲ್ಕು ದಿನ ಹಾಸಿಗೆ ಹಿಡೀತಿದ್ರಿ” ಬುದ್ಧಿ ಹೇಳಿದರು ಅಜ್ಜಮ್ಮ. ಆಯಿಗೆ ಸಹನೆಯಾಗದೆ, “ಇದೆಲ್ಲಿತ್ತೋ ಅಲ್ಲೇ ಬಿಟ್ಟು ಬನ್ನಿ. ಇಲ್ಲಿದ್ದರೆ ನಮ್ಮ ಮೋತಿ ಒಂದೇ ಗುಕ್ಕಿಗೆ ಬಾಯಿ ಹಾಕುಗೂ. ಅದು ಸತ್ತ ಪಾಪ ನಮಗೆ ಬ್ಯಾಡ” ಎಂದಳು.

“ಮೋತಿಗೆ ನಾ ಕಲಿಸ್ತೆ ಬುದ್ಧಿ” ಎಂದವನೆ ನಾಣಿ ಹೊರಜಗಲಿಯ ಮಾಡಿನಲ್ಲಿ ಸಿಕ್ಕಿಸಿ ಇಟ್ಟಿದ್ದ ಚಾಟಿ ತಂದ. ಸಪೂರ ಬಿದಿರಿನ ಉದ್ದ ಕೋಲಿಗೆ ಹಗ್ಗ ಕಟ್ಟಿದ ಚಾಟಿ. ಮೋತಿಗೆ ಹೊಡೆಯಲು ಕೆಲಸದವ ಮಾಡಿಕೊಟ್ಟದ್ದು. ಅದನ್ನು ಗಾಳಿಯಲ್ಲಿ ಬೀಸಿದರೆ ಚಚ್ಚ್, ಚುಬಕ್ ಸದ್ದು. ನಾಣಿಯ ಬಾಲ ಲೀಲೆಗಳಲ್ಲಿ ಮೋತಿಗೆ ಕೊಡುತ್ತಿದ್ದ ಚಾಟಿ ಸೇವೆಯೂ ಒಂದು. ಮೋತಿ ಸುಮ್ಮನೆ ಮಲಗಿದ್ದರೆ, ಆಟ ಆಡುತ್ತಿದ್ದರೆ, ಅವನನ್ನು ನೋಡುತ್ತಿದ್ದರೆ ಚಾಟಿ ಎರಗುತ್ತಿತ್ತು ಅದರ ಮೇಲೆ. ಒಂದು ದಿನ ಸುಬ್ಬಪ್ಪಯ್ಯ, “ಯಾವ ಪ್ರಾಣಿಗೂ ಹಿಂಸೆ ಮಾಡ್ಬಾರದು ಮಗೂ. ನಿನ್ನಂತೆ ಅದೂ ಸಣ್ಣದು. ಬಾಯಿ ಬಾರದ ಜೀವಿ” ಚಾಟಿ ಕಸಿದು ಇಟ್ಟಿದ್ದರು. ನಾಣಿ ಹೊಡೆಯುವುದು ತಮಾಶೆಗೆ. ಆದರೆ ಅಷ್ಟೇ ಮುದ್ದು ಪ್ರೀತಿ ಅದರ ಮೇಲೆ. ಹೊಡೆದಷ್ಟೂ ಬಾಲ ಅಲ್ಲಾಡಿಸುತ್ತ ಮೋತಿ ಅವನನ್ನೇ ಅಂಟಿಕೊಳ್ಳುವ ವಿಧೇಯ ಪ್ರಾಣಿ.ಆವತ್ತು ತೆಪ್ಪ ಮಗುಚಿ ಗೌರಿ ಮುಳುಗುವಾಗ ರಕ್ಷಿಸಿದ್ದು ಇದೇ ನಾಯಿ ಅಲ್ಲವೇ? “ನನ್ನ ಕೈಲಿದ್ದ ಮೊಲಕ್ಕೆ ತಂಟೆ ಮಾಡಿ ಕಚ್ಚಿದರೆ ಏನ್ಮಾಡ್ತೇನೆ ನೋಡು?” ದಾರಿಯಲ್ಲೇ ಗದರಿದ್ದ.

ಆಯಿ ಅಲ್ಲೇ ಬಿಟ್ಟು ಬನ್ನಿ ಎಂದರೂ ಅವನು ಗೌರಿ ಕೇಳದೆ ಒಳಜಗಲಿಗೆ ತಂದಿಟ್ಟುಕೊಂಡರು. ಕಾಯಿ, ಬೇಳೆ, ಬಾಳೆಹಣ್ಣು ತಟ್ಟೆಯಲ್ಲಿಟ್ಟರು, ಹಾಲು ಹಾಕಿದರು. ಮೂತಿ ಉದ್ದ ಮಾಡಿದ ಮೊಲ ಏನನ್ನೂ ಮುಟ್ಟಲಿಲ್ಲ. ಹೊಸ ಪರಿಸರದ ಅಭ್ಯಾಸ ಆಗಬೇಕು. ಪಾಪ! ಇದಕ್ಕೊಂದು ಗೂಡು ಮಾಡಿದರೆ ಮತ್ತೆ ಮೋತಿಯ ಹೆದರಿಕೆ ಇಲ್ಲ. ಹೊರಗೆ ಬಿಡುವಾಗ ಮೋತಿಯನ್ನು ಕಟ್ಟಿದರಾಯ್ತು. “ನೀನೇ ಅಜ್ಜಯ್ಯನಿಗೆ ಹೇಳು ನಾಣಿ, ನಿನ್ನ ಮಾತು ಅಜ್ಜಯ್ಯ ಕೇಳುಗು” ಗೌರಿ ತಮ್ಮನಿಗೆ ಗಾಳಿ ಹಾಕಿದಳು.

ಸುಬ್ಬಪ್ಪಯ್ಯರಿಗೆ ಮೊಲ ಸಾಕುವ ಇಷ್ಟವಿಲ್ಲ. ಹಾಗೆಂದು ಮೊಮ್ಮಕ್ಕಳನ್ನು ನೋಯಿಸಲಾರರು. ಮೋತಿ ಚಿಕ್ಕದಿರುವಾಗ ಬಿದಿರು ಅಡ್ಡ ಪಟ್ಟಿಗಳಿಂದ ಮಾಡಿದ

ಒಂದು ಹಳೆ ಗೂಡು ಇತ್ತು. ಅದರ ಕೆಲವು ಪಟ್ಟಿಗಳು ಕಿತ್ತು ಹೋಗಿದ್ದವು. "ನಾಳೆ ಸರಿ ಮಾಡಿಸಿ ಕೊಡ್ತೇನೆ. ಇವತ್ತು ರಾತ್ರೆ ಅದು ಓಡಿ ಹೋಗದಂತೆ ಬೆತ್ತದ ಬುಟ್ಟಿಯಲ್ಲಿ ಮುಚ್ಚಿದರೆ ಸಾಕು." ಎಂದರು ಸುಬ್ಬಪ್ಪಯ್ಯ.

ಇಷ್ಟರಲ್ಲಿ ಮೊಲ ಸಿಕ್ಕಿದ ಸುದ್ದಿ ಕೆಲಸದವರ ಮೂಲಕ ಊರಲ್ಲಿ ಹಲವು ಮನೆಗಳಿಗೆ ತಲುಪಿ, ಅದು ಗುಡಿಗಾರ ದೇವಣ್ಣನ ಮನೆಯದು ಎಂಬ ಸತ್ಯ ಸಂಗತಿಯೂ ಹೊರಬಿದ್ದಿತು. ದೇವಣ್ಣ ತಿಂಗಳ ಮೊದಲು ಮಂಕಿಕೇರಿಗೆ ಹೋದವನು ತನ್ನ ಸ್ನೇಹಿತನಿಂದ ಒಂದು ಸಾಕಿದ ಮೊಲ ತಂದಿದ್ದ. ಕೆಲವು ದಿನಗಳ ಹಿಂದೆ ಅದು ಕಾಣೆಯಾಗಿ ದೇವಣ್ಣ ಬಹಳ ಕಡೆ ಹುಡುಕಿದ್ದನಂತೆ. ಸಧ್ಯ ಬೇರೆ ಕಾಟು ನಾಯಿಗೆ ಬಲಿಯಾಗದೆ ಈ ಮಕ್ಕಳ ಕೈಗೆ ಸಿಕ್ಕಿದ್ದು ಪುಣ್ಯ. ಅವನು ಸಂಜೆ ಮೊದಲೇ ಹೊಳೆಬಾಗಿಲು ಮನೆಗೆ ಬಂದು ಇದ್ದ ವಿಷಯ ಹೇಳಿ ಮೊಲವನ್ನು ಎದೆಗಪ್ಪಿ ಹೊರಡುವಾಗ ಗೌರಿ, ನಾಣಿಯ ಕಣ್ಣುಗಳಲ್ಲಿ ಗಂಗೆ ಪ್ರತ್ಯಕ್ಷ. ನಾಣಿ ತನಗೆ ಮೊಲ ಬೇಕೇ ಬೇಕು ಎಂಬ ಹಠದಲ್ಲಿ ದೇವಣ್ಣನ ಕೈಯ್ಯಿಂದ ಎಳೆದುಕೊಳ್ಳಲು ನೋಡಿದ. ಆದರೆ ಆಯಿಗೆ ಸರಿ ಬರಲಿಲ್ಲ ಈ ಹಠ. ದೇವಣ್ಣ ಪರಮ ದಯಾಳು. ಹುಡುಗನ ಮನಸ್ಸಿಗೆ ನೋವಾಗದಂತೆ, "ಮೊಲ ನಿಮ್ಮ ಬಳಿ ಇದ್ದರೂ ಒಂದೇ. ನನ್ನಲ್ಲಿ ಇದ್ದರೂ ಒಂದೇ. ನೀವೇ ಸಾಕಿ ಕೊಳ್ಳಿ" ಎಂದ. ಬಾಯಿ ಮಾತು ಬೇರೆ, ಕೊಡುವ ಹೃದಯ ಬೇರೆ. ಅವನ ಮಾತು ಹೃದಯದಿಂದ ಬಂದಿಲ್ಲ ಎಂದು ಆಯಿಗೆ ತಿಳಿದುಹೋಯಿತು.ನಾಣಿಯ ಆಸೆಗೂ ಮಿತಿಬೇಕು. ಇವತ್ತು ಮೊಲ, ನಾಳೆ ಇನ್ನೊಂದು, ಆಮೇಲೆ ಮತ್ತೊಂದು. ಕಂಡದ್ದೆಲ್ಲ ಬೇಕು.

"ನಿನ್ನ ಮೊಲ ಸಿಕ್ಕಿತಲ್ಲ. ಇನ್ಮೇಲೆ ಹೊರಗೆ ಬಿಡಬೇಡ. ಚೆನ್ನಾಗಿ ಸಾಕು. ಅದು ಮರಿ ಇಟ್ಟ ಕಾಲಕ್ಕೆ ಒಂದನ್ನು ನಾಣಿ, ಗೌರಿಗೆ ತಂದು ಕೊಡು." ದೇವಣ್ಣನಿಗೆ ಹೇಳಿದ ಆಯಿ ನಾಣಿಗೆ, "ಹಠ ನಿಲ್ಲಿಸು. ಇನ್ನೊಬ್ಬರ ವಸ್ತು ಬಗ್ಗೆ ಆಸೆಬುರುಕರಾದರೆ ಕಷ್ಟ ನಿಮಗೇ ಮಕ್ಕಳೇ."ಎಂದಳು.

ಹಠಾತ್ತನೆ ಗೌರಿಗೆ ಒಂದು ವಿಷಯ ಸ್ಪಷ್ಟವಾಗಲಿಲ್ಲ. ಈ ಊರಿನ ಕೆಲವು ಹೆಂಗಸರು ಹಿಂದಿನಿಂದಲೂ ತಮ್ಮ ಮನೆಯ ಮದುವೆ, ಮುಂಜಿಗೆ ಅಜ್ಜಮ್ಮನ ಚಿನ್ನದ ಸರ, ಬಳೆ ಇತ್ಯಾದಿ ಒಯ್ಯುವ ಪರಿಪಾಠವಿದೆ. ಮದುಮಗಳ ಶೃಂಗಾರಕ್ಕೂ ಅಜ್ಜಮ್ಮನ ಒಡವೆಗಳು ಬೇಕು. ದೇವಣ್ಣನ ಮಗಳಂದಿರ ಮದುವೆಗಳಲ್ಲಿ ನಾಲ್ಕಾರು ದಿನ ಒಡವೆಗಳು ಅವನ ಹೆಂಡತಿ ಮಕ್ಕಳ ದೇಹವನ್ನು ಅಲಂಕರಿಸಿದ್ದು ಗೌರಿಯೂ ಗಮನಿಸಿದ್ದಾಳೆ. ಆಗ ಅಜ್ಜಮ್ಮನನ್ನು ಕೇಳಿದ್ದಳು, "ಅವರು ನಿನ್ನ ಒಡವೆ ತಕ್ಕೊಂಡು ಹೋಗಿ ಮತ್ತೆ ನಿಂಗೆ ವಾಪಸ್ಸು ಮಾಡದಿದ್ರೆ ಎಂತ ಮಾಡ್ತಿ? ಕಳೆದುಹೋಯ್ತು ಅಂತ ಸುಳ್ಳು ಹೇಳಿದ್ರೆ?"

"ಏನೋ ಇಲ್ಲದವರು ಒಡವೆ ಹಾಕುವ ಆಸೆಯಲ್ಲಿ ಕೇಳ್ತಾರೆ. ಹೇಳಿದ ದಿನಕ್ಕೆ ವಾಪಸ್ಸು ತರ್ತಾರೆ. ಇಲ್ಲಿ ನಂಬಿಕೆ, ವಿಶ್ವಾಸ ಮುಖ್ಯ ಗೌರಿ. ಅದಿಲ್ಲದಿದ್ದರೆ ಒಡವೆ ಒಂದೇ ಅಲ್ಲ ಜೀವನದಲ್ಲಿ ಇನ್ನೆಂತದಕ್ಕೂ ಬೆಲೆ ಇಲ್ಲ."ಆದರೂ ಆಯಿ ಹೇಳಿದ್ದೇನು? ಇನ್ನೊಬ್ಬರ ವಸ್ತು ಕೇಳುವುದು ಆಸೆಬುರುಕತನ?ನಾಣಿ ಆಸೆಗೆ ದೇವಣ್ಣ ಎರಡು ದಿನಕ್ಕೆ ಪುಟ್ಟ ಮೊಲವನ್ನು ಬಿಟ್ಟು ಹೋಗಿದ್ದರೆ? ಅವನೂ ಖುಷಿಯಲ್ಲಿ ಆಡಿಕೊಳ್ತಿದ್ದ. ಅಜ್ಜಮ್ಮನ ಒಡವೆಗಿಂತ ಮೊಲ ಕೇಳಿ ಆಶಿಸಿದ್ದು ತಪ್ಪಾಯಿತೇ? ಆಯಿ ಹೀಗೇಕೆ ಕಠಿಣಳು?

ಸಣ್ಣ ಮಳೆ ಬಂದು ನಿಂತ ನಂತರ ಆಕಾಶದಲ್ಲಿ ಚೆಂದಕ್ಕೆ ಮೂಡಿದ ಬಣ್ಣ ಬಣ್ಣದ ಕಾಮನಬಿಲ್ಲು ಹಾಗೇ ಮರೆಯಾದಂತೆ. ಬಾನು ಬಯಲು ಖಾಲಿ ಖಾಲಿ.

***

## ಅಧ್ಯಾಯ-11

ಸುಶೀಲಚಿಕ್ಕಿ ಸಿರ್ಸಿ ಮುಟ್ಟಿದ ನಂತರ ಒಂದು ಕಾಗದ ಬರೆದಿದ್ದಳು, "ನಾನು ಸೇವಾಶ್ರಮದ ಕೆಲಸಕ್ಕೆ ಸೇರಿದೆ. ಉಳಿದುಕೊಳ್ಳಲು ಸಣ್ಣ ಕೋಣೆ. ಮಂಚ ಹಾಸು ಹೊದಿಕೆ ಇದೆ. ಗೌರಿ, ಈ ಆಶ್ರಮದಲ್ಲಿ ನಿನ್ನ ವಯಸ್ಸಿನ ನಾಲ್ಕು ಹುಡುಗಿಯರಿದ್ದಾರೆ. ನಿನ್ನಂತೆ ಚೂಟಿ, ಚುರುಕು. ಚರಕದಲ್ಲಿ ಮೊದಲಬಾರಿ ನೂಲು ತೆಗೆದೆ. ಅರ್ಧ ಹತ್ತಿ ಅರಳೆ ಹಾಳು ಮಾಡ್ದೆ. ಗಾಂಧೀಜಿಯ ತತ್ವಗಳನ್ನು ಪಾಲಿಸುವುದು ಆಶ್ರಮದ ಮುಖ್ಯ ಉದ್ದೇಶ. ವಾತಾವರಣ ಹಿಡಿಸಿದಂತಿದೆ. ಆಯಿ, ಅಜ್ಜಮ್ಮ, ಅಣ್ಣಯ್ಯ ಮತ್ತೆ ಎಲ್ಲರಿಗೂ ನೆನಪುಗಳು."

ಗೌರಿ ಕಾಗದ ಹಿಡಿದು ಎಲ್ಲರಿಗೂ ಓದಿ ಹೇಳಿದಳು. ತಾನೂ ಕಾಗುಣಿತ ತಪ್ಪಿದರೂ "ಚಿಕ್ಕಿ, ನೀ ಹೋದ್ಮೇಲೆ ಓದು ಬರಹ ನಿಂತಿದೆ. ನಾಳೆನಿಂದ ಶುರು ಮಾಡ್ತೆ. ನಾಣಿ ಬಳಪ ಮುಟ್ಟಲಿಲ್ಲ. ನೀನು, ರಘು ದೊಡ್ಡಪ್ಪ ದೋಣಿಯಲ್ಲಿ ಕೂತು ಹೋದರಲ್ಲ, ಆ ಚಿತ್ರ ಮನಸ್ಸಲ್ಲಿಟ್ಟು ಪೆನ್ಸಿಲ್ ಚಿತ್ರ ಬರೆದೆ. ಅಪ್ಪಯ್ಯನಿಗೆ ಖುಷಿಯಾಗಿ ಕಮ್ತಿಗೆ ತೋರಿಸಲಿಕ್ಕೆ ತಕ್ಕೊಂಡು ಹೋದ. ದನ ಕರುಗಳು ಹುಷಾರಾಗಿವೆ. ಅಬ್ಬಲಿಗೆ, ಕಿಸ್ಕಾರ ಹೂ ತುಂಬಾ ಬಿಟ್ಟಿದೆ. ನಿನ್ನ ಪ್ರೀತಿಯ ಸಂಪಿಗೆ ಯಾರೂ ನೋಡದೆ ಹಾಗೇ ನೆಲದಲ್ಲಿ ಬಿದ್ದಿವೆ. ಅದೂ ನೀನು ಹ್ಯಾಗಿದ್ದಿ ಕೇಳ್ತು. ನಾ ಎಂತ ಹೇಳ್ಲಿ ಚಿಕ್ಕಿ? ಅಲ್ಲಿ ಬೇಜಾರಾದ್ರೆ ಸೀದಾ ಬತ್ತೆಯಾ ಇಲ್ಲಿಗೆ? ನಾನು, ನಾಣಿ ಇದ್ದ್ವೋ ಇಲ್ಲಿ, ನೆನಪಿರಲಿ." ಕಾಗದ ಬರೆದು ತಾನೇ ಟಪ್ಪಾಲು ಪೆಟ್ಟಿಗೆಗೆ ಹಾಕಿ ಬಂದಳು. ಕಮಲತ್ತೆ, ಶಾರದತ್ತೆ ಅಂಕು

ಡೊಂಕು ಅಕ್ಷರದಲ್ಲಿ ತಾವೂ ಬೇರೆ ಬೇರೆಯಾಗಿ ಬರೆದರು. ಎಲ್ಲ ಕಾಗದಗಳೂ ಟಪ್ಪಾಲು ಪೆಟ್ಟಿಗೆ ಸೇರಿದವು. ಅವಳಿಂದ ಇನ್ನೊಂದಷ್ಟು ಬಂದವು. ಸೇವಾಶ್ರಮದಲ್ಲಿ ಪುರುಸೊತ್ತು ಇಲ್ಲದಷ್ಟು ಕೆಲಸಗಳು ಇವೆಯಂತೆ. ಈ ನಡುವೆ ಅನಂತಯ್ಯನ ಕಾಗದ ಬಂದಿತು. ಸುಶೀಲಚಿಕ್ಕಿ ಸಿರ್ಸಿಗೆ ಹೋದದ್ದು ಒಳ್ಳೆಯದಾಯ್ತು. ಸಂತೋಷ ವ್ಯಕ್ತಪಡಿಸಿದ್ದ. ರಘು ದೊಡ್ಡಪ್ಪ ಹೇಳಿದಂತೆ ನಯವಂಚಕ? "ಇನ್ಮೇಲೆ ಯಾರನ್ನೂ ಇಲ್ಲಿಗೆ ತಂದು ಬಿಡೂಕಾಗ" ಕಮಲತ್ತೆ ಚಾಟಿ ಬೀಸಿ ಉತ್ತರಿಸಿದ್ದಳು ಮರು ಟಪ್ಪಾಲಿಗೆ.

ದಿನಗಳು ಕಳೆದವು ಹೀಗೆ. ಈ ನಡುವೆ ಹಲವು ಬದಲಾವಣೆ ಆದವು ಊರಿನಲ್ಲಿ. ಗಂಗೊಳ್ಳಿ ಹೊಳೆನೀರು ಸಾಕಷ್ಟು ಇಳಿದ ಕಾರಣ ಅದರ ತೀರದ ದಂಡೆಯ ಕಾಲುಹಾದಿ ಪೂರಾ ತೆರೆದಿತ್ತು. ಆ ಕಾಲು ಹಾದಿ ಮಳೆಗಾಲದಲ್ಲೂ ಅಗಲವಾಗಿದ್ದರೆ ಊರವರಿಗೆ ಉಪಕಾರ. ನದಿ ಓಡಾಟ ಕಡಿಮೆ ಮಾಡಿ ಅಗಲದ ಕಾಲುಹಾದಿಯಲ್ಲಿ ಎತ್ತಿನ ಗಾಡಿ, ಮೋಟಾರ್ ಬಂಡಿ ಓಡಿಸಬಹುದಲ್ಲ? ಈ ವಿಷಯದಲ್ಲಿ ವರ್ಷದ ಹಿಂದೆ ಸುಬ್ಬಪ್ಪಯ್ಯ, ರಾಮಪ್ಪಯ್ಯ ಮತ್ತಿತರ ಊರ ಹಿರಿಯರನ್ನು ಕರೆದು ಸಮಾಲೋಚನೆ ಮಾಡಿಯಾಗಿತ್ತು. ಹೊಳೆದಂಡೆ ಭದ್ರತೆಗೆ ಮಣ್ಣು, ಬಂಡೆ, ಜಲ್ಲಿಕಲ್ಲುಗಳಿಂದ ಹಾದಿ ಎತ್ತರಿಸಿ ಕಟ್ಟಬೇಕು ಎಂದು ಒಮ್ಮತದ ತೀರ್ಮಾನ ಆಗಿತ್ತು. ಹಾಗೆ ಕಳೆದ ವರ್ಷ ಜನರು ಕೊಟ್ಟ ವಂತಿಗೆ ಹಣದಿಂದ ಅರ್ಧದಷ್ಟು ಕಟ್ಟುವ ಕೆಲಸವೂ ಆಗಿತ್ತು. ಅದನ್ನು ಈ ವರ್ಷ ಮಾಡಿ ಮುಗಿಸಲು ಕಲ್ಲು, ಜಲ್ಲಿ ಎಲ್ಲಾ ತಂದು ರಾಶಿ ಬಿದ್ದಿದ್ದವು. ಹೊಳೆನೀರು ಇಳಿದದ್ದೇ ತಡ ಜನರ ಉತ್ಸಾಹ ಏರಿತು. ಮತ್ತೊಂದು ತಿಂಗಳಲ್ಲಿ ಆರು ಅಡಿ ಮೇಲಕ್ಕೆ ಗಟ್ಟಿ ರಸ್ತೆ ಎದ್ದು ನಿಂತಿತು. ಸಾಸ್ತಾನದ ಕಡೆ ಹೋಗುವ, ಮತ್ತು ಈಕಡೆ ಮರವಂತೆ, ತ್ರಾಸಿಯ ತಿರುಗು ದಾರಿಗೆ ಬರುವ ಜನರಿಗೆ ಅನುಕೂಲವಾಗಿ ಕ್ಷಿಪ್ರದಲ್ಲಿ ಒಂಟಿ ಎತ್ತಿನಗಾಡಿ ಅವತರಿಸಿತು.ಅದು ಹಣುಮನ ತಮ್ಮನ ಮಗ ಭರಮನದು.

ಎತ್ತಿಗೆ, ಮರದ ಗಾಡಿಗೆ ಹಣ ಕೊಟ್ಟದ್ದು ಸುಬ್ಬಪ್ಪಯ್ಯರೇ. ಈ ಕಾರಣದಿಂದ ಮೊದಲಬಾರಿ ಗಾಡಿ ಹೂಡಿದ ಭರಮ ಅವರನ್ನು, ಗೌರಿ ನಾಣಿಯನ್ನು ಕುಳ್ಳಿರಿಸಿ ಹೊಸ ರಸ್ತೆಯಲ್ಲಿ ಸಾಸ್ತಾನಕ್ಕೆ ಕರೆದೊಯ್ದ. ಅಲ್ಲಿ ಅಪ್ಪಯ್ಯನನ್ನು ಕಂಡದ್ದು, ಕಮ್ತಿಯವರ ಅಂಗಡಿಯಿಂದ ತಮಗೆ ಬೇಕಾದ್ದು ಕೊಂಡದ್ದು, ಎತ್ತಿಗೆ ಕಟ್ಟಲು ಕೊರಳಗಂಟೆ ತೆಗೆದದ್ದು ಆಚೆ ಈಚೆ ರಸ್ತೆಯಲ್ಲಿ ತಿರುಗಿದ್ದು, ಒಟ್ಟಿನಲ್ಲಿ ಸಂತೆಯೇ ಕಾಣದ ಅವರ ಮನಸ್ಸು ವಸಂತದ ಹೂವಾಗಿತ್ತು. ಹೋಗುವಾಗ, ಬರುವಾಗ ಎತ್ತಿನಗಾಡಿಯ ಕುಲುಕಾಟ ತೊಟ್ಟಿಲಲ್ಲಿ ಹಾಕಿ ತೂಗಿದಂತೆ ಗೌರಿ ಕೈ ಬೆರಳು ಬಾಯಿಗಿಟ್ಟು ಸಿಳ್ಳೆ ಹಾಕಿದಳು. ನಾಣಿ ಅದನ್ನೇ ಅನುಕರಣೆ ಮಾಡಿದ. ಸುಬ್ಬಪ್ಪಯ್ಯರಿಗೆ ಉತ್ಸಾಹ ಬಂದಿತು, "ಬಲ್ಲಿರೇನಯ್ಯ, ಈ ಹೊಸ ರಥ ಯಾರದೆಂದು?"

ಕೂಡಲೆ ಗೌರಿ, "ನಾ ಪೇಳ್ವೆ ಕೇಳ್, ಈ ರಥ ಹೊಳೆಬಾಗಿಲು ಅರಸನದು." ಹಾಡಿದಳು ಕೈ ಮೇಲಕ್ಕೆತ್ತಿ.

"ಬಲ್ಲಿರೇನಯ್ಯ. ಆ ಅರಸನ ಹೆಸರು ಸುಬ್ಬಪ್ಪಯ್ಯ!" ನಾಣಿ ಚಪ್ಪಾಳೆ ತಟ್ಟಿದ, "ನಾ ಕುಣಿವೆ ರಥ ಏರಿ ಅಭಿಮನ್ಯು ಹಾಂಗೆ ವೀರಾವೇಶದಲಿ."

"ನನ್ನ ರಾಜರ ಕಥೆ ಕೇಳಿ ಕೇಳಿ ಇಬ್ಬರೂ ಪ್ರತಿ ಉತ್ತರ ಕೊಡುವಷ್ಟು ಜೋರಾಗಿದ್ದೀರಿ. ಹರಿಕಥೆ ಮಾಡಲಕ್ಕು" ಎಂದರು ಸುಬ್ಬಪ್ಪಯ್ಯ ತಾವೂ ನಗುತ್ತ.

ಸಂಜೆ ರಂಗಿನಲ್ಲಿ ಹೊಳೆಯುದ್ದಕ್ಕೂ ಕೆಂಪು ಬಣ್ಣ ಎರಚಿದಂತೆ ಕಾಣುವ ರವಿ ಕಿರಣಗಳು, ದಂಡೆಯ ಉದ್ದಕ್ಕೂ ಹಾಕಿದ ಹೊಸ ಕೆಂಪು ಮಣ್ಣಿನಲ್ಲಿ ಹೋಗುವ ಎತ್ತಿನಗಾಡಿ, ಮೇಲೆ ಬಿಳಿ ಮುಗಿಲು ತುಂಬಿದ ಆಗಸ, ಬೆಳ್ಳಕ್ಕಿಯ ಸಾಲುಗಳು, ಗೂಡಿಗೆ ಹಿಂದಿರುಗುವ ಹಕ್ಕಿ ಪಕ್ಕಿಗಳ ದಂಡು ಗೌರಿಯ ಮನಸ್ಸು ಅರಿಯಲಾಗದ ಯಾವುದೋ ಕನಸಿನಲ್ಲಿ ತೇಲಿ ಹಾಡು ಬರೆಯುತ್ತಿದೆ, ಕಥೆ ಕಟ್ಟುತ್ತಿದೆ. ಯಾರೂ ಹೇಳದ ಈವರೆಗೆ ಕೇಳದ ಹೊಸ ಪ್ರಪಂಚ ತೆರೆದಂತೆ ಭಾವನೆಗಳ ಬಾಗಿಲು ತೆರೆಯುತ್ತ ಮೈ ಮರೆಸುವ ಮಂಪರು. ಈ ಗಾಡಿ ಹೋಗುತ್ತಿರಲಿ ಹೀಗೆ, ಅನಂತ ಆಕಾಶದ ಕಡೆಗೆ. ಮೂರ್ತಸ್ವರೂಪದ ಆಚೆ ನಡಿಗೆಗೆ.

"ಚಿಕ್ಕಿ, ಇವತ್ತು ನೀನೂ ನಮ್ಮ ಜೊತೆಗೆ ಇರಬೇಕಿತ್ತು" ಗೌರಿ ನೆನಪಿಸುತ್ತ ಅದೇ ಧ್ಯಾನದಲ್ಲಿ ಬಣ್ಣದ ಪೆನ್ಸಿಲ್‌ನಿಂದ ಗಾಡಿ ಮತ್ತು ಎತ್ತಿನ ಚಿತ್ರ ಬರೆದು ಸುಶೀಲಚಿಕ್ಕಿಗೆ ಟಪ್ಪಾಲಿನಲ್ಲಿ ಕಳುಹಿಸಿದಳು. ಅದಕ್ಕೆ ಉತ್ತರವೂ ಬಂದಿತು, "ನಿನ್ನ ಚಿತ್ರವನ್ನು ನಮ್ಮ ಸಂಸ್ಥೆಯ ಪ್ರಮುಖ ಕೋಣೆಯ ಗೋಡೆ ಮೇಲೆ ಹಾಕಿದೆ. ಅದನ್ನು ಸಂಸ್ಥೆಯ ಕಿರಿಯ ಹುಡುಗಿಯರು ನಕಲು ಮಾಡಲು ಪ್ರಯತ್ನಿಸಿ ಗುಲ್ಲೋ ಗುಲ್ಲು. ಬೇರೆ ಚಿತ್ರ, ಕವನ ಬರೆದಿದ್ದರೆ ಕಳಿಸು"

ಭರಮನಿಗೆ ಗಾಡಿ ಓಡಿಸಲು ಸಹಾಯ ಮಾಡಿದ್ದು ಅಜ್ಜಯ್ಯ. ಅಂದಮೇಲೆ ಗಾಡಿ ತಮ್ಮದೇ ಎಂಬ ಹೆಮ್ಮೆ ಗೌರಿ, ನಾಣಿಗೆ. ನಾವು ಕರೆದಾಗ ಅವ ಬಂದು ನಾವು ಹೇಳಿದ ಕಡೆ ಹೇಳಿದಷ್ಟು ಹೊತ್ತು ನಮ್ಮನ್ನು ಗಾಡಿಯಲ್ಲಿ ಕರೆದೊಯ್ಯಬೇಕು. ಭರಮ ಒಪ್ಪಿದ್ದ. ನಾಲ್ಕಾರು ದಿನಗಳಲ್ಲಿ ಜನರು ದೋಣಿ ಇಳಿದು ಸಾಮಾನುಗಳನ್ನು ತಲೆಹೊರೆಯಲ್ಲಿ ಸಾಗಿಸುವ ಬದಲು ಎತ್ತಿನ ಗಾಡಿ ಆಶ್ರಯಿಸಿದರು. ಸಾಗಣೆಯ ದೂರದ ಮೇಲೆ ಭತ್ತ, ಧಾನ್ಯ,ತೆಂಗಿನಕಾಯಿಗಳ ರೂಪದಲ್ಲಿ ಬಾಡಿಗೆ ಕೊಡು ಲೆಕ್ಕಾಚಾರ. ಬಾಡಿಗೆ ದಂಡಿಯಾಗಿ ಸಿಗುತ್ತಿತ್ತು. ಭರಮನಿಗೆ ಪುರುಸೊತ್ತಿಲ್ಲ. ಇತ್ತಲಾಗಿ ಹೊಳೆಬಾಗಿಲಿನಿಂದ ಮಕ್ಕಳ ಕರೆ ಬಂದರೆ ತಪ್ಪಿಸುವುದು ಹೆಚ್ಚಿತು. "ಗಾಡಿ ನಮ್ಮದು.

ಕರೆದಾಗ ಬರ್ಲಿಕ್ಕೆ ಏನು ಸೊಕ್ಕು, ಅಜ್ಜಯ್ಯ, ನೀ ಹೋಗಿ ಹೇಳು" ಗೋಗರೆದಳು ಗೌರಿ ಒಂದುದಿನ.

ಆಯಿ ಸಮಾಧಾನ ಹೇಳಿದಳು, "ಸಹಾಯ ಮಾಡಿದ್ದು ಅಜ್ಜಯ್ಯ. ಅಷ್ಟಕ್ಕೆ ಗಾಡಿ ನಮ್ಮದಾ?ಅವನು ಗಾಡಿ ಹೊಡೆದು ಕಷ್ಟ ಪಟ್ಟು ನಾಕು ಕಾಸು ಸಂಪಾದನೆ ಮಾಡ್ತಾ. ಮಾಡಲಿ. ಬಡವನ ಹೊಟ್ಟೆಗೆ ಹೊಡೀಬಾರದು ಗೌರಿ"

"ದಿನದಲ್ಲಿ ಒಂದು ಸರ್ತಿ ನಮ್ಮನ್ನು ಕೂರಿಸಿ ಗಾಡಿ ಹೊಡೀಲಿ. ನೀ ಎಂತಕ್ಕೆ ಅವನ ಪರ ಮಾತಾಡ್ತಿ?"

ಮಗಳ ಸ್ವರ ಏರಿತ್ತು. ಮುಗ್ಧತೆ ತುಂಬಿದ ಬಾಲ್ಯದ ಮೇಲೆ ಕಂಡೂ ಕಾಣದ ಕಿಶೋರ ವಯಸ್ಸು ಸಹಜದ ಹೆಜ್ಜೆಗಳನ್ನು ಊರುತ್ತಿದೆ. ಹುಡುಗಿ ಪ್ರಬುದ್ಧಳಾಗುತ್ತಿದ್ದಾಳೆ. ಆಯಿಗೆ ಅಚ್ಚರಿ. "ಇಲ್ಲೆ, ನಮ್ಮ ಹಂಗಿಗೆ ಅವ ಬೀಳುವಂತೆ ಮಾಡ್ಬೇಡಿ. ಬೇಕಾರೆ ನೀವೇ ಕಾಸು ಕೊಟ್ಟು ಹೊಳೆ ಬದಿಯಲ್ಲಿ ಹತ್ತಿ ನಮ್ಮ ಮನೆ ಬಾಗಿಲಿಗೆ ಇಳಿದು ಬನ್ನಿ"

ಎತ್ತಿನ ಗಾಡಿಯ ಕೊರಳಗಂಟೆ ನಿನಾದ ನಿಧಾನದಲ್ಲಿ ದೂರವಾದಂತೆ ಜೋಲು ಮೋರೆಯಾಯ್ತು ಇಬ್ಬರದೂ.

♣♣♣

ಪಿತೃ ಪಕ್ಷದ ಕೊನೆ ಮಹಾಲಯ ಅಮವಾಸ್ಯೆ ಕಳೆದು ನವರಾತ್ರೆಯ ಸಂಭ್ರಮ ಕಾಲಿಟ್ಟಿತು. ಶ್ರೀಅನ್ನಪೂರ್ಣೇಶ್ವರಿದೇವಸ್ಥಾನದಲ್ಲಿ ಒಂಬತ್ತು ದಿನಗಳೂ ವೈಭವದ ಪೂಜೆ. ಉತ್ಸವದ ಗೌಜು. ಊರ ಜನರಲ್ಲದೆ ಪರವೂರಿನಿಂದಲೂ ಆಗಮಿಸುವ ಭಕ್ತಾದಿಗಳು. ಪ್ರತಿದಿನ ಸಂಜೆ ಕಾರ್ಯಕ್ರಮದಲ್ಲಿ ಒಂದುತಾಸು ಸುಬ್ಬಪ್ಪಯ್ಯನವರಿಗೆ ಹಾಡುವ, ಕಮಲತ್ತೆಗೆ ಹಾರ್ಮೋನಿಯಂ ಬಾರಿಸುವ ಅವಕಾಶ ಸಿಕ್ಕಿತು. ಕಮಲತ್ತೆ ಸುಶೀಲಚಿಕ್ಕಿಗೆ "ನೀನು ಆ ಸಮಯಕ್ಕೆ ಊರಿಗೆ ಬಾ" ಎಂದು ಕಾಗದ ಹಾಕಿದ್ದಳು.

ಮರು ಟಪಾಲಿಗೆ ಬಂದಿತು ಚಿಕ್ಕಿಯ ಉತ್ತರ, "ನನ್ನ ಕೆಲಸ ಹಳಿಗೆ ಬರ್ತಾ ಇದೆ ಕಮಲಿ. ಇನ್ನೂ ಎರಡು ತಿಂಗಳು ರಜೆ ಸಿಕ್ಕೂದು ಕಷ್ಟ. ಅಲ್ಲದೆ ನಂಗೆ ಸುಖಾಸುಮ್ಮನೆ ರಜೆ ಮಾಡೂಕೂ ಇಷ್ಟ ಇಲ್ಲೆ. ನವರಾತ್ರೆಯ ದೇವಿ ಆರಾಧನೆ ನಿನ್ನಿಂದ ಸಾಂಗವಾಗಿ ನಡೆಯಲಿ"

ಸುಬ್ಬಪ್ಪಯ್ಯನವರಿಗೆ ಹಾಡುವ ಅವಕಾಶ ಸಿಕ್ಕಿದ್ದು ನಿಜ, ಆದರೆ ಇಳಿ ವಯಸ್ಸು, ಉಚ್ಚಾರವೂ ಅಸ್ಪಷ್ಟ. ಆಗಾಗ ಕಾಡುವ ಆರೋಗ್ಯ ಸಮಸ್ಯೆ, ಏದುಸಿರು, ನಿತ್ರಾಣ,ಆಯಾಸದಿಂದ ಸ್ವರ ಏರಿಸಿ ಹಾಡುವುದು ಕಷ್ಟವೇ. ಮುಂದಿನ ಮಳೆಗಾಲ ಕಳೆದೀತೇ? ಅದರೊಳಗೆ ಶಾರದೆಯ ಮದುವೆ ಆಗಿಬಿಟ್ಟರೆ ತಮ್ಮ ಜವಾಬ್ದಾರಿ ಮುಗೀತು.

ಆಗಲೇ ಶಾರದೆಗೆ ವರ್ಷ ಹೆಚ್ಚಾತು. ಮದುವೆಯಿಲ್ಲದೆ ಹಾಂಗೆ ಉಳಿದುಬಿಡ್ತಾಳೋ ಜೀವಕ್ಕೆ ಪುಕು ಪುಕು.. ಆರೋಗ್ಯ ಹದಗೆಡಲು ಇದೂ ಕಾರಣವೇ.ಯಾವುದೂ ಬೇಡ ಎನ್ನುತ್ತಿದೆ ಜೀವ. ಹೀಗಾಗಿ ಹಾಡುವ ಕಾರ್ಯ ನಿಲ್ಲಿಸಿಬಿಟ್ಟರು. ಅವರು ಹಾಡದಿದ್ದರೇನಂತೆ ಕಮಲತ್ತೆ ತಾನೇ ಹಾರ್ಮೋನಿಯಂ, ಹಾಡು ಒಟ್ಟಾಗೇ ನಡೆಸಿದಳು. ವಿಶೇಷವೆಂದರೆ ಅವಳ ಹಾಡಿಗೆ ಧ್ವನಿಗೂಡಿಸಿದಳು ಗೌರಿ. ಅಜ್ಜಯ್ಯನಿಗೆ, ಆಯಿ, ಅಜ್ಜಮ್ಮನಿಗೆ ಮೊಮ್ಮಗಳ ಹೊಸ ಬೆಳವಣಿಗೆ ಕಂಡು ರೋಮಾಂಚನ.

ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಒಂಬತ್ತು ಪೂಜೆಗಳು ಸಾಂಗವಾಗಿ ಮುಗಿದು ವಿದ್ಯಾ ದಶಮಿಯ ಮಧ್ಯಾನ್ಹ ಕೆಲವು ಗಣ್ಯರಿಗೆ ಪ್ರಸಾದ ವಿತರಿಸುವ, ಸನ್ಮಾನಿಸುವ ವಿಶೇಷ ಕಾರ್ಯಕ್ರಮ. ಸುಬ್ಬಪ್ಪಯ್ಯ ಮತ್ತು ಕಮಲತ್ತೆಗೂ ಪ್ರಸಾದ ಹಂಚಿಕೆ, ಸನ್ಮಾನ ಇತ್ತು. ಹೋದವರು ಸುಬ್ಬಪ್ಪಯ್ಯ ಒಬ್ಬರೇ. ಕಮಲತ್ತೆ ಹೋಗಲಿಲ್ಲ. ತನಗೆ ಕೊಟ್ಟ ಅವಕಾಶವೇ ದೇವಿಯ ಅನುಗ್ರಹ, ಇದಕ್ಕಿಂತ ಹೆಚ್ಚಿನದು ಬಯಸದೆ, ಸಂಪ್ರದಾಯಸ್ಥರ ಕಣ್ಣುರಿ ಆಗಲಾರದೆ ತನ್ನ ಹಾರ್ಮೋನಿಯಂ ನುಡಿಸಿದಾಕ್ಷಣ ಅದಾವ ಹೊತ್ತಿನಲ್ಲೋ ಅಲ್ಲಿಂದ ಜಾರಿಕೊಂಡಳು. ಪ್ರಧಾನ ಅರ್ಚಕರು ದೇವಿ ಪ್ರಸಾದವೆಂದು ಸೀರೆ, ಖಣ, ಹೂ ತರುವಾಗ ಅವಳು ನಾಪತ್ತೆ. ಅರ್ಥವಾಯಿತು ಅರ್ಚಕರಿಗೆ. ಮರುದಿನ ಪ್ರಸಾದ ಹಿಡಿದು ಮನೆಗೇ ಬಂದುಬಿಟ್ಟರು.

"ತಾಯಿ, ಹತ್ತುದಿನ ಅದ್ಭುತವಾಗಿ ನಿನ್ನ ಹಾಡು,ಹಾರ್ಮೋನಿಯಂ ವಾದನದಿಂದ ದೇವಿ ಸುಪ್ರೀತಳಾದಳು. ಅವಳ ಪ್ರಸಾದವನ್ನು ಗೌರವದಿಂದ ತೆಕ್ಕೋ" ಎಂದರು ವಿನೀತರಾಗಿ.

"ನಾನು ಬಾರಿಸಲಿಲ್ಲ ಅರ್ಚಕರೇ, ದೇವಿ ನನ್ನಿಂದ ನುಡಿಸಿದಳು. ಧನ್ಯಳಾದೆ. ಪ್ರಸಾದವನ್ನು ಗೌರಿಗೆ ಕೊಡಿ. ಇನ್ನು ಮುಂದೆ ಅವಳು ಹಾರ್ಮೋನಿಯಂ ನುಡಿಸುವಂತೆ ನಾನೇ ತಯಾರು ಮಾಡ್ತೇನೆ"

"ಅದಾಗದು ಅತ್ತೆ. ನಂಗಂತೂ ಹಾರ್ಮೋನಿಯಂ ಕಂಡರೆ ಬೇಜಾರು. ಪ್ರಸಾದ ನೀನೇ ಇಟ್ಟುಕೋ" ಎಂದು ಬಿಟ್ಟಳು ಗೌರಿ.

ಸಿರ್ಸಿಯಿಂದ ರಘು ದೊಡ್ಡಪ್ಪ ಬರಲಿಲ್ಲ. ಗೋವಾದಿಂದ ಬಂದವನು ಸೀತೂ ದೊಡ್ಡಪ್ಪ ಮತ್ತು ಮಗಳು ಸುನಂದ. ನಮ್ಮ ಗೌರಿಯದೇ ಪ್ರಾಯ, ಅದೇ ಬಣ್ಣ, ಮುಖ ಚೆಹರೆ. ಪಕ್ಕನೆ ಅವಳಿ ಜವಳಿ ಎನ್ನಬೇಕು. ಗೌರಿಯ ವೇಷಭೂಷಣ ಅ[illegible] ಹಳ್ಳಿಯದು. ಬಿಗಿಯಾಗಿ ಕಟ್ಟಿದ ಎರಡು ಜಡೆ, ತುದಿಗೆ ರಿಬ್ಬನ್ನು. ಪಾದ ಮುಟ್ಟುವ ಪರಕರ, ಕೈತುಂಬ ಗಾಜಿನ ಬಳೆಗಳು, ಹಣೆಗೆ ಜೇನುಮೇಣದಲ್ಲಿ ಹಚ್ಚಿದ ಅಗಲದ ಕುಂಕುಮ, ಬರಿಗಾಲಿನಲ್ಲಿ ಓಡಾಟ. ಸುನಂದ ಹಾಗಲ್ಲ, ಮೊಣಕಾಲಿನ ತನಕ ಇಡುವ

ಜರಿ ಅಂಗಿ, ಭುಜಕ್ಕೆ ಬರುವಂತೆ ಕತ್ತರಿಸಿ ಬಾಬ್ ಮಾಡಿದ ತಲೆಗೂದಲು, ಪ್ಲಾಸ್ಟಿಕ್ ಹೂವಿನ ಕ್ಲಿಪ್ಪು, ಕೈ ಕಾಲು ಉಗುರುಗಳಿಗೆ ಕೆಂಪುಬಣ್ಣ, ಹಣೆಗೂ ಕೆಂಪಿನ ಸಣ್ಣ ಟಿಕಳಿ, ಕುತ್ತಿಗೆಗೆ ಚಿನ್ನದಲ್ಲಿ ಕಟ್ಟಿದ ಮುತ್ತಿನಸರ, ಚೆಂದವೋ ಚೆಂದ. ಗೌರಿಯ ಪಿಳಿಪಿಳಿ ಗೊಂಬೆಯಂತೆ. ಹೊರಗೆ ಓಡಾಡಲು ಸುನಂದೆಯ ಕಾಲಿಗೆ ಕಪ್ಪು ಬಣ್ಣದ ಕಟ್ಟುವ ಬೂಟುಗಳು. ಅದಿನ್ನೂ ಚೆಂದ. ಮಣ್ಣು ಕಲ್ಲಲ್ಲಿ ನಡೆದೇ ಗೊತ್ತಿಲ್ಲ. ಪಾದಗಳು ಗುಲಾಬಿಯ ಪಕಳೆಯಂತೆ ಮೃದು, ಕೋಮಲ.

ಹೊಳೆಬಾಗಿಲು ಮನೆಗೆ ಸುನಂದೆ ಮೂರರ ಪ್ರಾಯದಲ್ಲಿ ಬಂದಿರಬೇಕು. ಅನಂತರ ಬಂದದ್ದು ಈಗಲೇ. ಸಹೋದರಿಯರ ಬಾಂಧವ್ಯ. ಈ ಕಾರಣ ಸಲುಗೆ ಜಾಸ್ತಿ. ಆದರೆ ಸಮಾನ ವಯಸ್ಸಿನ ಕಾರಣ ಬಂದ ದಿನವೇ ಅವರಿಬ್ಬರೂ ಸ್ನೇಹಿತರಂತೆ ಆದರು. ಗೌರಿಗೆ ತನ್ನೂರ ಬಗ್ಗೆ ಹೇಳಿದಷ್ಟು ಸಾಲದು. ಗಂಗೊಳ್ಳಿ ಹೊಳೆದಡದಲ್ಲಿ ಪ್ರತಿ ಶನಿವಾರ ತಾವು ಅಪ್ಪಯ್ಯನಿಗಾಗಿ ಕಾಯುತ್ತಿರುವ ಮರ ತೋರಿಸಿದಳು. ಭರಮನ ಎತ್ತಿನಗಾಡಿಯಲ್ಲಿ ಕೂರಿಸಿಊರಲ್ಲಿ ತಿರುಗಾಡಿಸಿದಳು. ಅವಳಿಗಾಗಿ ಕಾರೆ ಹಣ್ಣು, ಪೇರಳೆಹಣ್ಣು, ಪೊಪ್ಪಳೆ ಹಣ್ಣು ತಾನೇ ಮರ ಹತ್ತಿ ಕೊಯ್ದಳು. ದೋಂಟಿಯಿಂದ ಸಂಪಿಗೆ ಹೂ ಎಳೆದು ಕೊಟ್ಟಳು. ಹೊಳೆಯಲ್ಲಿ ಒಂದು ಸುತ್ತು ಅವಳು ನಾಣಿ ಈಜುವಾಗ ಸುನಂದೆ ಹೆದರಿ ಕಂಗಾಲು. ನಾಣಿ ತಾನು ತೆಪ್ಪದಲ್ಲಿ ಹೋಗಿ ಮುಳುಗಿದ್ದು, ಅನಂತರ ಚಕ್ರೀಅಮ್ಮಮ್ಮನಿಂದ ಚಕ್ರೀ ಹೊಳೆಯಲಿ ಈಜು ಕಲಿತದ್ದು ಹೇಳುತ್ತ, "ಈಗ ನಾವು ಶೂರರು! ಆಳದ ನೀರಲ್ಲೂ ಮೀನುಗಳ ಹಾಂಗೆ ಮುಳುಕು ಹಾಕಿ, ಈಜ್ತೇವೆ. ನಿಂಗೂ ಹೇಳಿಕೊಡ್ಲಾ?"

"ಬೇಡ ಗೌರಿ. ನಂಗೆ ನೀರು ಕಂಡ್ರೆ ಮೈಮೇಲೆ ಭೂತ ಬತ್ತು. ಅಪ್ಪ ಈ ವರ್ಷ ಈಜು ತರಬೇತಿ ಕೇಂದ್ರಕ್ಕೆ ಕಳಸ್ತೆ ಅಂದಿದ್ದ. ಅಲ್ಲಿ ಈಜು ಕಲಿತು ಇಲ್ಲಿ ಬಂದು ನಿನ್ನ ಜೊತೆ ಈಜ್ತೆ." ಎಂದಾಗ ಗೌರಿ, "ಹೋ, ಇಬ್ಬರಿಗೂ ಸ್ಪರ್ಧೆ ಇಟ್ಟರೆ ನಾನೇ ಗೆಲ್ತೆ" ಎಂದಳು.

ಇಬ್ಬರೂ ಗಜ್ಜುಗ ಆಡಿದರು. ಅವಳಿಗೆ ಆ ಆಟ ಆಡಿಯೇ ಗೊತ್ತಿಲ್ಲ. ಗಜ್ಜುಗದ ಕಾಯಿ ಮೇಲೆ ಹಾರಿಸಿ ನೆಲದಲ್ಲಿ ಹರಡಿದ ಗಜ್ಜುಗ ಕಾಯಿಗಳನ್ನು ಒಂದೇ ಮುಷ್ಟಿಯಲ್ಲಿ ಬಾಚಿ ಹಿಡಿಯುವ ಕೌಶಲಕ್ಕೆ ಬೆರಗಾದ ಸುನಂದೆಗೆ ನಗೆಯೇ ನಗೆ. ಚೌಕಾಂಬರದಲ್ಲಿ ಗೌರಿಯನ್ನು ಕಟ್ಟಿ ಗೆದ್ದು ತೋರಿಸಿದ ಸುನಂದಾ ಪಗಡೆ ಆಟದಲ್ಲಿ ಸೋತು ಪುಟ್ಟ ಸೋರೆಕಾಯಿ. ನಾಣಿ, ಗೌರಿ, ಅವಳು ಸೇರಿ ಆಡಿದ ಇಸ್ಪಿಟು ಕತ್ತೆ ಆಟದಲ್ಲಿ ಅವಳು ಕತ್ತೆಯಾಗಿ ಲೊಳಲೊಟ್ಟೆ ಮಾಡಿದ ನಾಣಿ. ಹುಗ್ಗಾಟ, ಕುಂಟಲಪಿ ಆಡಿದಂತೆ ಮರಕೋತಿ ಆಡಲು ಸುನಂದೆಗೆ ಆಗಲೇ ಇಲ್ಲ. ಅವಳೂ ಗೋವಾದ ಸುದ್ದಿ ಹೇಳಿದಳು. ಚೆಂಡಾಟ,

ಖೋ ಖೋ, ಇಷ್ಟವಂತೆ. ಅಟ್ಟದಲ್ಲಿ ಚದುರಿಸಿ ಬಿಟ್ಟ ಪುಸ್ತಕಗಳು, ಅರ್ಧ ಬಿಡಿಸಿದ ಚಿತ್ರಗಳನ್ನು ನೋಡಿ ತನಗೂ ಇವು ಇಷ್ಟವೆಂದು ತಾನೂ ಕೈ ಸೇರಿಸಿದಳು. ದನ ಕರುಗಳ ಮೈ ಸವರಿ ಅದರ ಸೆಗಣಿ ವಾಸನೆಗೆ ಮಾರು ದೂರ ಸರಿದಳು. ಎರಡು ದಿನಗಳು ಹೇಗೆ ಕಳೆದವೋ. ಮೂವರು ಮಕ್ಕಳಿಂದ ಮನೆ ತುಂಬ ಗಲಗಲ.

ಆದರೂ ಗೌರಿಗೆ ಏನೋ ತಳಮಳ. ಅಸ್ಪಷ್ಟ ಮೂರ್ತಿಯೊಂದು ಅವಳ ಮುಗ್ಧ ಭಾವನೆಗಳನ್ನು ಕೆದಕಿ ಬಿಟ್ಟಂತೆ. ಬಾಯಾರಿದ ಹಕ್ಕಿ ನೀರು ಅರಸುವಂತೆ, ಏನೋ ತಿಳಿಯಲಾಗದ, ಹೇಳಲಾಗದ ಬಾಲ ಸಹಜ ಕೊರತೆ. ಸುನಂದೆ ಪೇಟೆ ನೀರು ಕುಡಿದವಳು. ಅವಳೊಡನೆ ಕುಳಿತಾಗ ನಿಂತಾಗ ಹೊರ ಹೋಗುವಾಗ ಬಿಟ್ಟ ಕಂಗಳಿಂದ ನೋಡುವುದೇ ಆಯಿತು.ಅವಳ ಎದುರು ಮತ್ತೆ ಮತ್ತೆ ತನ್ನ ಕೈ ಬೆರಳು, ಕಾಲು ಬೆರಳು, ಪಾದ ನೋಡಿಕೊಳ್ಳುತ್ತ ಕನ್ನಡಿಯಲ್ಲಿ ತನ್ನ ಮುಖ ಕಾಣುವಳು. ಕೆದರುವ ಕೂದಲಿಗೆ ಅಲಂಕಾರವೂ ಇಲ್ಲೆ. ಅವಳಂತೆ ಮೃದು ಕೋಮಲ ಕೈಬೆರಳುಗಳು, ಪಾದವೇ? ಆ ಉಗುರಿಗೆ ಹಚ್ಚಿದ ನಸು ಗುಲಾಬಿ ಬಣ್ಣ ಎಂತ ಚೆಂದ. ತ್ಸೂ, ತನ್ನದು ಒರಟು ಮಣ್ಣು ಮೆತ್ತಿದಂತೆ. ಶುದ್ಧ ಹಳ್ಳಿ ಗುಗ್ಗು. ಒಂದು ಜೊತೆ ಕಾಲಿನ ವೇಷವೂ ಇಲ್ಲದೇ ಹೋಯ್ತಲ್ಲ. ಹುಣಿಸೆಹಣ್ಣು ಕಿವಿಚಿದಂತೆ ತಳಮಳ ಎದೆಯಲ್ಲಿ. ಅವಳ ಬಳಿ ಇರುವ ಅಂಗಿಗಳೆಲ್ಲ ಎಷ್ಟು ಲಾಯಕ್ಕು. ಮೂರು ಸಾಲುಗಳನಿರಿಗೆ ಅಂಗಿ, ನಸು ಹಳದಿ ಬಣ್ಣದ್ದು ಹಾಕಿದಾಗ ನೋಡಿಯೇ ದಂಗಾದ ಗೌರಿಗೆ ಮತ್ಸರ ಬಂದಿತ್ತು. ಗೌರಿಬಳಿ ಬೇಕಾದಷ್ಟು ಅಂಗಿಗಳಿವೆ, ಎಲ್ಲಾ ಚೀಟಿ ಬಟ್ಟೆಯವು, ಮಾಸಿದಂತೆ.

"ನಾಣಿ, ಸುನಂದೆ ಅಂಗಿ ಎಂತ ಚೆಂದವೂ ಇಲ್ಲೆ ಅಲ್ಲದ?" ಎಂದಿದ್ದಳು ಮುಖ ಕಿವುಚಿ.

ಪಾಪ ಚೋಟುದ್ದ ನಾಣಿ ಏನು ಉತ್ತರಿಸುತ್ತಾನೆ? ಸುನಂದೆಯ ನಿರಿಗೆ ಅಂಗಿ ಚೆಂದ ಇದ್ದು. ಅದೇ ಅಕ್ಕನಿಗೆ ಬೇಜಾರು. ಈಸಲ ಅಪ್ಪಯ್ಯನಿಗೆ ಹೇಳಿ ಅಕ್ಕನಿಗೂ ನಿರಿಗೆ ಅಂಗಿ ಹೊಲಿಸಬೇಕು. ಆ ಅಂಗಿಯಲ್ಲಿ ಅಕ್ಕನೂ ಚೆಂದ ಕಾಣುಗು. ಪಾಪ ಅಕ್ಕ. ಮನಸ್ಸಿಗೆ ಬಂದದ್ದೇ ಅಕ್ಕನ ಹಳದಿ ಹೂವುಗಳಿದ್ದ ಚೀಟಿ ಅಂಗಿತಂದು ಕೈಯ್ಯಲ್ಲಿಟ್ಟ, "ಇದೂ ಚೆಂದ ಇದ್ದು. ನಿಂಗೆ ಚೆಂದ ಕಾಣ್ತು. ನಂಗೆ ನೀನೇ ಮುದ್ದು ಅಕ್ಕ!"

ನವರಾತ್ರೆ ಉತ್ಸವಕ್ಕೆ ಪ್ರತಿ ವರ್ಷದಂತೆ ಈ ಸಲವೂ ಬೆಂಡು, ಬತ್ತಾಸು, ಸಕ್ಕರೆ ಚೌಕದ ತಿಂಡಿಗಳು, ಬಣ್ಣದ ಆಟಿಗೆ, ಬಣ್ಣದ ಬುಗ್ಗೆಗಳು, ಪೀಪಿ, ಡೋಲು, ಪುಟ್ಟ ಚೆಂಡೆ, ಕೊಳಲು, ಮಣಿಸರಕುಗಳ ಸಂತೆ ಬಂದಿತ್ತು. ಮರದ ಕುದುರೆ ಗಾಡಿಗಳಿದ್ದವು. ಗೌರಿ ನಾಣಿ ಸಂತೆ ಸುತ್ತಿ ತಮಗೆ ಬೇಕಾದ್ದು ತಂದರೆ ಯಾರೂ ಏನೂ ಹೇಳುವುದಿಲ್ಲ. ಜಾತ್ರೆ ಗೌಜು ಮನೆಯಲ್ಲೂ ಇರುತ್ತಿತ್ತು ಒಂದೆರಡು ದಿನ. ಈ ಬಾರಿ ವಿಶೇಷ ಅತಿಥಿ

ಸುನಂದೆ. ಆಯಿ ಗೌರಿಯ ಕೈಗೆ ಕೆಲವು ಕಾಸು ಕೊಟ್ಟು, "ನಿಮಗೆ, ಸುನಂದೆಗೆ ಬೇಕಾದ್ದು ಸಂತೆಯಲ್ಲಿ ತೆಗೆದುಕೊಳ್ಳಿ. ನಾಣಿಗೆ ಬುಗ್ಗೆ, ಪೀಪೀ, ಬೇಕಂತೆ. ಕೊಡಿಸು" ಎಂದಿದ್ದಳು. ಸುನಂದೆಗೆ ಸೀತೂ ದೊಡ್ಡಪ್ಪ ತೆಗೆದುಕೊಡುತ್ತಾನೆ. ನಾನೇಕೆ ಅವಳಿಗೆ ಕೊಡಿಸಲಿ? ಮನಸ್ಸು ಕಹಿಯಾಗಿ ಆಯಿ ಕೊಟ್ಟ ಕಾಸಿನಲ್ಲಿ ತನ್ನ ಕಾಲಿಗೆ ಹೊಂದುವ ಬೂಟು ಬೇಕೆಂದು ಗೌರಿ ಸಂತೆ ಜಾಲಾಡಿದಳು. ಆದರೆ ಬಾಕಿ ಸರಕುಗಳ ನಡುವೆ ಅವಳ ಪಾದಕ್ಕೆ ಬೇಕಾದ ಬೂಟು, ಜೋಡುಗಳು ಸಿಗಲಿಲ್ಲ. ಈ ಊರಲ್ಲಿ ಹೆಚ್ಚಿನವರ ಕಾಲುಗಳು ಬರಿಗಾಲು ಎಂದು ತಿಳಿದದ್ದು ತಲೆತಗ್ಗಿಸಿ ಬೇರೆಯವರ ಪಾದಗಳನ್ನು ಕಂಡಾಗಲೇ!

ದೇವಸ್ಥಾನದಿಂದ ಖಾಲಿ ಕೈಯ್ಯಲ್ಲಿ ಬಂದ ಗೌರಿಯನ್ನು ಕಂಡು ಆಯಿಗೆ ಅನುಮಾನ ಬಂತು. ನವರಾತ್ರೆ ಉತ್ಸವ ಜಾತ್ರೆಯಂತೆ. ದಂಡಿಯಾಗಿ ಸಾಮಾನು ಸರಕುಗಳು ಮಕ್ಕಳಿಗೆ ಮುದುಕರಿಗೆ ಸಿಗುತ್ತವೆ. ಪ್ರತಿವರ್ಷ ಸಂತೆಯೆಂದರೆ ಕುಣಿದು ಹಪ ಹಪಿಸುವ ಹುಡುಗಿ ತನಗೆ ಏನೂ ತಕ್ಕೊಳ್ಳಲಿಲ್ಲ, ನಾಣಿಗೂ ಬುಗ್ಗೆ, ಪೀಪಿ ತೆಗೆಯಲಿಲ್ಲ. ಹೋಗಲಿ ಸರ, ಬಳೆ ಸುನಂದೆಗೆ ತೆಗೆಸಿಕೊಟ್ಟಿದ್ದರೆ ಆ ಮಗು ಖುಷಿ ಪಡ್ತಿತ್ತು. "ಅಲ್ಲವೇ ಗೌರಿ, ನಿಂಗೇನಾಗಿದೆಯೇ? ಯಾಕೆ ಸಪ್ಪೆಯಾಗಿದ್ದೀ? ನಾ ಕೊಟ್ಟ ಕಾಸು ಸಾಕಾಗಲಿಲ್ಯಾ? ಇವತ್ತು ನಾನೂ ಬತ್ತೆ ದೇವಸ್ಥಾನಕ್ಕೆ. ಸುನಂದೆಗೆ ಇಷ್ಟವಾದ್ದು ತೆಗೀಬೇಕು. ತಿಳಿತಾ?  ಯಾಕೆ ಮಾತಾಡ್ದೆ ಮುಖ ಮಂಗನ್ಹಾಗೆ ಊದಿಸಿಕೊಂಡಿದ್ದಿ? ಏನಾಗಿದೆಯೇ?"

"ಗೊತ್ತಿಲ್ಲ" ಗೊಣಗಿದಳು. ಮತ್ಸರದ ಹೊಗೆ, ಉರಿ ದಟ್ಟವಾಗಿತ್ತು ಮನದಲ್ಲಿ. ನಾಣಿ ಹಲ್ಲು ಗಿಂಜಿದ. ಆಯಿಗೆ ಹೇಳ್ಲಾ? ಅಕ್ಕನಕಾಲಿಗೆ ಬೂಟು ಬೇಕಂತೆ, ನಿರಿಗೆ ಅಂಗಿ ಬೇಕಂತೆ. ನಾ ಹೇಳ್ಲಾ? ಕಣ್ಸನ್ನೆಯಲ್ಲಿ ಅಕ್ಕನತ್ತ ನೋಡಿದ. ತಲೆಬಾಚದೆ ಕೆದರಿದ ಕೂದಲನ್ನು ಕೆರೆದುಕೊಳ್ಳುತ್ತ, ಛುಪ್!

ಆ ರಾತ್ರೆ ಯಥಾಪ್ರಕಾರ ಮುಖಮಂಟಪದ ಚಾವಡಿಯಲ್ಲಿ ದೊಡ್ಡವರ ಮಾತುಕಥೆ. ಮರುದಿನ ಬೆಳಗಿನ ದೋಣಿ ಅಥವಾ ಭರಮನ ಎತ್ತಿನಗಾಡಿಯಲ್ಲಿ ಹೋಗಲಿದಾರೆ ಸೀತು ದೊಡ್ಡಪ್ಪ, ಸುನಂದೆ. ಯಾಕೋ ಬೇಜಾರು ಗೌರಿಗೆ. ಎರಡೇ ದಿನಕ್ಕೆ ಬಂದವರು. ಎರಡು ದಿನ ಹೋಗಿಬರುವ ಪ್ರಯಾಣಕ್ಕೇ ಬೇಕು. ಸಿರ್ಸಿ ಪ್ರಯಾಣಕ್ಕಿಂತ ದೂರ. ಹೊಳೆಬಾಗಿಲಿನಿಂದ ದೋಣಿ, ಮೋಟಾರುಬಂಡಿ ಕನಿಷ್ಟ ಇಪ್ಪತ್ತು ಗಂಟೆ ಬೇಕು ಗೋವಾ ತಲುಪಲು. ಆದರೂ ಸೀತುದೊಡ್ಡಪ್ಪ ಪ್ರತಿ ವರ್ಷ ನವರಾತ್ರೆಯ ಒಂದು ಪೂಜೆಗೆ ಬಂದು ದೇವಿಯ ಪ್ರಸಾದ ಸ್ವೀಕರಿಸಿ ಹೋಗುವ ನಿಷ್ಠಾವಂತ. ಅವನೂ ರಘುದೊಡ್ಡಪ್ಪನೂ ಆಸ್ತಿ ಪಾಲಿಗಾಗಿ ಜಗಳ ಮಾಡಿದ್ದು ಮಸುಕು ನೆನಪುಗಳು.

ಮರೆತಿಲ್ಲ ಇನ್ನೂ. ಬೇಕಾದ್ದು ಬೇಡಾದ್ದು ತೆಗೆದುಕೊಳ್ಳುವಾಗ ಅಪ್ಪಯ್ಯ ಏನೂ ಹೇಳಿರಲಿಲ್ಲ. ಇಲ್ಲಿಂದ ಹೋದವರು ಕೆಲವು ವರ್ಷ ಅವರಾಗಿಯೇ ಬರುವುದನ್ನು ನಿಲ್ಲಿಸಿದ್ದರು. ಆಮೇಲೆ ಅಕ್ಷತೆಯಿಟ್ಟು ಕರೆಯದೆ ಅವರಾಗಿಯೇ ಬಂದು ಹೋಗುತ್ತಿದ್ದಾರೆ. ಬಂಧುತ್ವದ ಬಿಗಿ ಅಂದರೆ ಇದೇ. ಯಾವಾಗ ತಗಾದೆ ತೆಗೆಯುವರೋ. ಆವತ್ತು ರಘು ದೊಡ್ಡಪ್ಪ ಸುಶೀಲಚಿಕ್ಕಿಯ ಜೊತೆ ಹೊರಡುವಾಗ ಅಪ್ಪಯ್ಯನೇ, "ಇವಳೇ. ಒಂದು ಚೀಲ ಸುಲಿದ ತೆಂಗಿನಕಾಯಿ ಕಟ್ಟಿ ಕೊಡು" ಎಂದಿದ್ದ. ಬಾಳೆಗೊನೆಯಿಂದ ಕಾಯಿ ಬಿಡಿಸಿ ಚೀಲಕ್ಕೆ ಹಾಕಿಯಾಗಿತ್ತು. ರಘು ದೊಡ್ಡಪ್ಪ, "ಏನೂ ಬೇಡ ತಮ್ಮಾ, ಬೇಕಾದ್ದು ಸಿರ್ಸಿಯಲ್ಲೇ ಸಿಕ್ಕುತ್ತು. ಈಗ ತಕ್ಕೊಂಡು ಹೋದ ಋಣವೇ ಬಾಕಿ ಇದ್ದು" ಎಂದಿದ್ದ.

ಅದೇ ಮಾತು ಇವತ್ತು ಬಂದಿದೆ ಸೀತೂ ದೊಡ್ಡಪ್ಪನಿಂದ. ಅದೊಂದೇ ಅಲ್ಲ, ತುಂಬ ಆಸ್ಥೆಯಿಂದ ಮಾತಾಡಿದ್ದು ಬೇರೆಯದೇ ಸಂಗತಿಗಳು. ಹೊಳೆಬಾಗಿಲು ಊರು ಇನ್ನೂ ಇಪ್ಪತ್ತೈದು ವರ್ಷ ಹಿಂದಕ್ಕಿದೆ. ಜನರು ಸುಧಾರಿಸದೆ ಊರು ಸುಧಾರಣೆ ಆಗದು. ಒಂದು ಶಾಲೆ ಊರಿಗೆ ಅಗತ್ಯ. ಅಪ್ಪ [ಅಜ್ಜಯ್ಯ] ಮನಸ್ಸು ಮಾಡಿದರೆ ಊರವರು ಸೇರಿ ನದಿ ದಡಕ್ಕೆ ಎತ್ತರದ ಗೋಡೆ ಕಟ್ಟಿದಂತೆ ಶಾಲೆಯನ್ನು ತೆರೆಯಬಹುದು. ಮಾಸ್ತರರು ಸಿಗಲಿಲ್ಲವೇ? ಅಪ್ಪನೇ ಪಾಠ ಮಾಡಲಿ. ಆದಿತ್ಯವಾರ ರಾಮಪ್ಪಯ್ಯ ಇದ್ದಾನೆ. ಅವನು ಆದಿನ ಪಾಠ ಮಾಡಲಿ. ಕಮಲಿಗೆ ನಾಲ್ಕಕ್ಷರ ಬರುತ್ತದೆ ಓದಿ ಬರೆಯಲು. ಒಂದನೇ ತರಗತಿಗೆ ಕಲಿಸಲು ಸಾಕು. ನಾವು ಒಂದು ಹೆಜ್ಜೆ ಮುಂದಿಟ್ಟರೆ ಜನ ಹತ್ತು ಹೆಜ್ಜೆ ಸೇರಿಸುತ್ತಾರೆ. ಮಾಸ್ತರರೂ ಸಿಕ್ತಾರೆ. ಎಲ್ಲರ ಪ್ರಯತ್ನದಿಂದ ಈ ಸಣ್ಣ ಊರಿಗೆ ಟಪ್ಪಾಲು ಪೆಟ್ಟಿಗೆ ಬಂದಂತೆ ಶಾಲೆಯೂ ಶುರುವಾಗಲಿ!

"ನಾನು, ರಘು ಇಪ್ಪತ್ತು ವರ್ಷಗಳ ಹಿಂದೆಯೇ ಮಂಗಳೂರಿಗೆ ಹೋಗಿ ಪರಿಚಿತರಲ್ಲಿ ವಾಸಮಾಡಿ ವಾರಾನ್ನ ಉಂಡು ಹತ್ತನೇ ಕ್ಲಾಸು ಮುಗಿಸಿದ್ದಲ್ಲದ?ಅದಕ್ಕೆ ಇವತ್ತು ನಮ್ಮ ಬದುಕು ಅಪ್ಪ ಕೊಟ್ಟ ಆಸ್ತಿ ಪಾಸ್ತಿ ಇಲ್ಲದೇ ಚೆಂದಾಗಿ ಕಳೀತಾ ಇದ್ದು.ಸುಖ ಪಡ್ಬೇಕು ಅಂದ್ರೆ ಕಷ್ಟ ಪಡೆಕ್ಕು. ಆಗೆಲ್ಲ ಎಷ್ಟು ಕಷ್ಟದ ಕಾಲ?ಹೊಳೆಬಾಗಿಲಿನಿಂದ ಇನ್ನೂ ಬೆಳಕು ಹರಿವ ಮೊದ್ಲು ಹೊರಟರೆ ನಾಲ್ಕೈದು ಹೊಳೆ, ನದಿ ಅಂತ ಬೈಸಾರಿಗೆ ಅಥವಾ ರಾತ್ರೆ ಮಂಗಳೂರಿಗೆ. ವರ್ಷದಲ್ಲಿ ಒಂದೆರಡು ಸಲ ಮನೆ ಮುಖ ಕಂಡರೆ ಹೆಚ್ಚು.ನಿಮ್ಮ ಕುರುಡು ಬುದ್ಧಿಯಿಂದಮಕ್ಕಳ ಭವಿಷ್ಯ ಹಾಳು ಮಾಡೂಕಾಗ" ಎಂದ ಸೀತುದೊಡ್ಡಪ್ಪ ಎಲ್ಲರೂ ಒಪ್ಪಿದರೆ ಗೌರಿ, ನಾಣಿಯನ್ನು ಗೋವಾದಲ್ಲಿ ಶಾಲೆಗೆ ಸೇರಿಸುವ ಅಂದಾಜಿನಲ್ಲಿ ಇದ್ದಾನಂತೆ.!

ಸೀತು ದೊಡ್ಡಪ್ಪನ ಮಾತು ಮುಂದುವರಿದಿತ್ತು, "ಗೌರಿ ಚುರುಕಿನ ಹುಡುಗಿ.ಅವಳ ಪ್ರತಿಭೆ ಮಸುಕಾಗಬಾರದು. ಅವಳನ್ನು ಶಾಲೆಗೆ ಹಾಕಿ. ಅಪ್ಪ, ಸುಶೀಲ ಚಿಕ್ಕಿಯಿಂದ

ಓದು ಬರಹ ಕಲಿತಿದ್ಲು. ಸೀದಾ ನಾಲ್ಕನೇ ಕ್ಲಾಸಿಗೆ ಸೇರಿಸಲಕ್ಕು. ಬ್ಯಾಡ್ವಾ? ಕುಂದಾಪುರ, ಉಡುಪಿ ಇದ್ದಲ್ದ? ಇನ್ನೊಂದು ಎಂತ ಗೊತ್ತಾ? ಅದು ಎಷ್ಟು ಚೆಂದಕ್ಕೆ ಚಿತ್ರ ಬಿಡಿಸುತ್ತು! ಪೆನ್ಸಿಲ್ ಸ್ಕೆಚ್ಚು, ಬಣ್ಣದ ಚಿತ್ರ ಅಟ್ಟದಲ್ಲಿದ್ದು. ಗುಟ್ಟಾಗಿ ಬರೆದಿಟ್ಟ ಕವನಗಳು, ಲಾಯ್ಕ ಇದ್ದು, ಓದಿದೆ."

ಒಳಕೋಣೆಯಲ್ಲಿ ಮಲಗಿದ್ದ ಗೌರಿ ನಾಚಿಗೆ ಮುಳ್ಳಾದಳು. ತನ್ನ ಕವನದ ಬಗ್ಗೆ ದೊಡ್ಡಪ್ಪನಿಗೆ ತಮಾಶೆ. ಪ್ರಕೃತಿ ಮೇಲೆ, ಅಪ್ಪ, ಆಮ್ಮನ ಮೇಲೆ, ಕೈಗೆ ಸಿಕ್ಕ ಮೊಲದ ಬಗ್ಗೆ ಏನೋ ಚೂರು ಪಾರು ಗೀಚಿದ್ದು. ಲಾಯ್ಕ ಇದ್ದಾ? ದೊಡ್ಡಪ್ಪ ತನ್ನನ್ನು ಹೊಗಳಲು ಹೇಳಿದ ಸುಳ್ಳು!. ಆದರೆ ಅವನು ಹಾಂಗೆ ಸುಳ್ಳು ಹೇಳುವ ಆಸಾಮಿನಾ? ಊಹೂಂ, ಹೊಳೆಬಾಗಿಲಿಗೆ ಬಂದ ದಿನವೇ ತನ್ನನ್ನು ಕರೆದು ಎರಡು ಇಂಗ್ಲೀಷ್ ಪುಸ್ತಕ ಕೊಟ್ಟಿದ್ದ. ಹಾಗೇ ಬೆಳಗಾವಿಯಲ್ಲಿ ಪ್ರಕಟವಾದ ಕನ್ನಡದ ಒಂದು ಹಳೆ ಪತ್ರಿಕೆಯನ್ನು ತೋರಿಸಿದ್ದ. ಅದರಲ್ಲಿ ಬೆಳಗಾವಿಯ ಜಿಲ್ಲೆಯ ಚಚಡಿ ಗ್ರಾಮದಲ್ಲಿ ಕನ್ನಡದ ಮೊದಲ ಹೆಣ್ಣುಮಕ್ಕಳ ಶಾಲೆ 1912ರಲ್ಲಿ ಸ್ಥಾಪನೆಯಾಗಿದ್ದು ಆ ಶಾಲೆಯಲ್ಲಿ ಕಲಿಯುವ ಹೆಣ್ಣುಮಕ್ಕಳ ಫೋಟೋ ಸಮೇತ ವರದಿ ಪ್ರಕಟವಾಗಿತ್ತು. ಫೋಟೋದಲ್ಲಿ ಸೀರೆಯುಟ್ಟು ತಲೆತುಂಬ ಸೆರಗು ಹೊದ್ದ ಹುಡುಗಿಯರು, ತನ್ನದೇ ವಯಸ್ಸಿನವರು, ತನಗಿಂತ ಚಿಕ್ಕ ಮುಗ್ಧ ಬಾಲಕಿಯರಿದ್ದರು.

"ಇವರನ್ನು ನೋಡಿಯೇ ನಿನಗೆ ಕಲಿಯುವ ಉಮೇದು ಬರಲಿ. ಸಾವಿತ್ರಿಬಾಯಿ ಪುಲೆ ಹೆಸರು ನೀ ಕೇಳಿರಲಾರೆ. ಪುಣೆಯಲ್ಲಿ ಅವಳ ಶಿಕ್ಷಣ ಸಂಸ್ಥೆ ಇದೆಯಂತೆ. ಬಹಳಷ್ಟು ಹುಡುಗಿಯರಿಗೆ ಅವಳು ಶಿಕ್ಷಣ ಕೊಡ್ತಾ ಇದ್ದಾಳಂತೆ. ನೀನೂ ಆಯೆಕ್ಕು ಅವರಂತೆ." ಎಂದಿದ್ದ ತನ್ನ ತಲೆ ಸವರಿ.

ಅವನು ಕೊಟ್ಟ ಎರಡೂ ಪುಸ್ತಕಗಳು ಮಕ್ಕಳಿಗೆ ಓದುವ ಸಚಿತ್ರ ಇಂಗ್ಲೀಷ್ ಪುಸ್ತಕಗಳು. ಅವಳಿಗೆ ಕಬ್ಬಿಣದ ಕಡಲೆಗಳು. ಸುಶೀಲಚಿಕ್ಕಿ ಹೋದ ನಂತರ ಇಂಗ್ಲೀಷ್ ಕಲಿಕೆ ನಿಂತಿದೆ. ಶಾಲೆ ಬೇಡ. ಬೇಸರವಿಲ್ಲ. ಆದರೆ ಅವಳು ಇಟ್ಟು ಹೋದ ಇಗ್ಗತ್ತಪ್ಪನ ವಿವಾಹ ಪ್ರಸಂಗ ಮತ್ತು ವಿನೋದಿನಿ ಇದೆ. ಅವನ್ನು ಕಷ್ಟದಲ್ಲಿ ಓದುವಾಗ ಏನೋ ಭಾವಲಹರಿ.. ಇನ್ನೂ ಬೇರೆ ಪುಸ್ತಕ ಓದಬೇಕು, ಕಥೆ ಕವನ ಬರೀಬೇಕು, ಚಿತ್ರ ಬಿಡಿಸಬೇಕು. ಎಲ್ಲೋ ಹುಡುಕುತ್ತಿದೆ ಯಾವುದೋ ದಾರಿ. ಹಾರ್ಮೋನಿಯಂ ಅಭ್ಯಾಸಕ್ಕೆ ಕುಳಿತರೆ ಅಪಸ್ವರದ ತಂತುವಿನಲ್ಲಿ ಭಾವದ ಅಲೆಗಳು ತೇಲಿ ಬರುವಾಗ ಅವು ಭಾಷೆ ತಿಳಿಯದೆ ಹಾಗೇ ಆವಿಯಾಗಿ....... ಏನೇ ಆಗಲಿ ಈ ವರ್ಷ ತಾನು ಸಾಸ್ತಾನದ ಶಾಲೆಗೆ ಸೇರಲೇಬೇಕು. ಕೊನೆಗೆ ಈ ಸುನಂದೆಗಿಂತ ಹೆಚ್ಚು ಓದಿ ತಾನೂ ಒಂದು "ಜನ" ಆಗಲೇಬೇಕು. ಎಷ್ಟು ಅಹಂಕಾರ ಸುನಂದೆಗೆ?

"ಗೌರಿ" ಬದಿಯಲ್ಲಿ ಕೇಳಿತು ಸುನಂದೆಯ ಸ್ವರ. ತಮ್ಮ ಹಾಸಿಗೆಯ ಬಳಿ ಹಾಸಿ ಮಲಗಿದ್ದಳು. ನಾಳೆ ಹೊರಟು ಹೋಗಲು ಅವಳಿಗೂ ಬೇಸರ. ಅವಳಿಗೆ ನಿದ್ದೆ ಬರುವುದನ್ನೇ ಕಾಯುತ್ತಿದ್ದಾಳೆ ಗೌರಿ. ಹೊಟ್ಟೆ ಸಂಕಟ, ಎದೆ ತಳಮಳ, ಸಿಟ್ಟು ಒಂದಾಗಿತ್ತು ಈ ದಿನ. ಸ್ಫೋಟ ಆಗುವದಷ್ಟೇ ಬಾಕಿ. ಒಂದು ಕತ್ತರಿಯನ್ನು ತನ್ನ ಹಾಸಿಗೆ ಅಂಚಿನಲ್ಲಿ ಅಡಿಗಿಸಿಟ್ಟು ಮಲಗಿದ ನಟನೆ. ಸುನಂದೆಯ ಚೆಂದದ ನಿರಿಗೆ ಅಂಗಿಗೆ ಕತ್ತರಿಯಿಂದ ಗತಿ ಕಾಣಿಸಬೇಕು. ತನ್ನ ಹೊಟ್ಟೆ ಉರಿಸಿದ್ದೇ ಆ ಅಂಗಿ. ಅರ್ಧ ರಾತ್ರೆ ನಂತರ ಅಂಗಿಯನ್ನು ಕತ್ತರಿಸಿ ಕತ್ತರಿಸಿ ಹಾಗೇ ಅವಳ ಚೀಲದಲ್ಲಿ ತುರುಕಿ ಇಟ್ಟ ಮೇಲೆ ಸಮಾಧಾನ. ಅದೊಂದೇ ಅಲ್ಲ, ಹೊರಗಿದೆ ಕಪ್ಪು ಬೂಟುಗಳು. ಅವು ಹರಿದು ಹೋಗಬೇಕು. ಮೋತಿ ಬಾಯಿಯ ಎದುರಿಗಿಟ್ಟರೆ ಒಂದೇ ನಿಮಿಷ. ಚರ್ಮದ ವಾಸನೆ, ಬೆವರು ಮೂರಿಗೆ ಮೋತಿ ಕಚ್ಚಿ ಕಚ್ಚಿ , ಹೋ! ಬೂಟು ಇಲ್ಲದೆ ಹೇಗೆ ಹೋಗುತ್ತಾಳೆ? ನೋಡೋಣ. ಹರಿದ ಅಂಗಿಗೆ ಇನ್ನೆಷ್ಟು ರಂಪವೋ! ತನ್ನ ಪರಕರ ಹಾಕಿ ನೋಡಲಿ.ಮನುಷ್ಯನಿಗೆ ಈರ್ಷ್ಯೆ ಹುಟ್ಟಿತೆಂದರೆ ವಿವೇಕವೂ ನಷ್ಟವಾದಂತೆ. ಗೌರಿಯ ಬಾಲಬುದ್ಧಿಗೆ ಈರ್ಷ್ಯೆ, ವಿವೇಕ ಅದರಿಂದ ಏನಾಗುತ್ತದೆ ಒಂದೂ ತಿಳಿಯದು. ತನ್ನ ಹೊಟ್ಟೆ ಉರಿ ಸಂಕಟಕ್ಕೆ ಅವಳು ಸಂಕಟ ಪಡಬೇಕು! ಅದೇ ಸರಿಯಾದ್ದು.

"ಗೌರಿ"ಮೆತ್ತಗೆ ಕರೆದಿದ್ದಾಳೆ ಸುನಂದೆ, "ನಾಳೆ ಹೋಗ್ತಾ ಇದ್ದೇನೆ. ನಿನ್ನನ್ನು ಬಿಟ್ಟು ಹೋಗಲೇ ಮನಸ್ಸಿಲ್ಲ. ಕ್ರಿಸ್‌ಮಸ್ ಸಮಯ ಗೋವಾದ ಜನರಿಗೆ ದೊಡ್ಡ ಹಬ್ಬ. ನೋಡುವುದು ಬಹಳ ಇದ್ದು. ಆಗ ನೀ ಬರ್ತಿಯಾ?"ಹಾಂ ಎಂದಳುಗೌರಿ.

"ನನ್ನ ಹಳದಿ ನಿರಿಗೆ ಅಂಗಿ ಹೇಂಗಿದ್ದು ಹೇಳು. ಹೊಸ್ತು. ಇಲ್ಲಿಗೆ ಬಂದಾಗ ಒಮ್ಮೆ ಮಾತ್ರ ಹಾಕಿದ್ದು. ಆ ಅಂಗಿ ಒಪ್ಪಿಗೆಯಾದ್ರೆ ಇಟ್ಟುಕೋ. ಗೋವಾಕ್ಕೆ ಹೋದ್ಮೇಲೆ ಇನ್ನೊಂದು ಗುಲಾಬಿ ನಿರಿಗೆ ಅಂಗಿ ನಿಂಗೆ ತೆಗೆದಿಡ್ತೆ. ಆಯ್ತಾ?"

ಹಾಸಿಗೆ ಅಡಿಗಿಟ್ಟ ಕತ್ತರಿ ಗೌರಿಯ ಬೆನ್ನಿಗೆ ಚುಚ್ಚಿದಂತೆ ಬೆಚ್ಚಿದಳು. "ಗೌರಿ, ನನ್ನಹತ್ರ ನಾಲ್ಕು ಬಣ್ಣದ ಪ್ಲಾಸ್ಟಿಕ್ ಕ್ಲಿಪ್ ಇದ್ದು. ಎರಡು ನಿನಗೇಯಾ. ಹಳದಿ ನಿರಿಗೆ ಅಂಗಿಗೆ ಹಸುರು, ಕೆಂಪು ಕ್ಲಿಪ್ ಹಾಕ್ಕಂಡರೆ ನೀ ಚಿಟ್ಟೆ ಹಾಂಗೆ ಕಾಣ್ತೆ. ಮುತ್ತಿನ ಬಳೆ ಬೇಕಾ?"

ಅವಳ ಮೆಲು ಮೃದು ನುಡಿಗೆ ಕರಗಿ ಹೋದ ಗೌರಿಯ ಬೆನ್ನಿಗೆ ಇನ್ನೂ ಆಳಕ್ಕೆ ಕತ್ತರಿ ಕುತ್ತಿದಂತೆ. ಆಮೇಲೆ ಅವಳ ಮಾತು ಕೇಳಲೇ ಇಲ್ಲ. ಬಹಳ ಹಿಂದೆ, ಕಳೆದ ವರ್ಷವಲ್ಲವೇ? ಹೌದು, ಮನೇಲಿ ಸತ್ಯನಾರಾಯಣ ಪೂಜೆ. ಊರ ಕೆಲವು ಜನ, ದೇವಸ್ಥಾನದ ಅರ್ಚಕರು, ಅಲ್ಲದೆ ಕಮ್ತಿಯವರಿಗೂ ಅಪ್ಪಯ್ಯ ಹೇಳಿಕೆ ಕೊಟ್ಟಿದ್ದ. ಕಮ್ತಿಯವರು ಹಿಂದಿನ ದಿನವೇ ದೋಣಿಯವನ ಕೈಲಿ ಒಂದು ಚೀಲ ತುಂಬ

ಉತ್ತಮ ಜಾತಿಯ ರಸಭರಿತ ಮಾವಿನ ಹಣ್ಣುಗಳನ್ನು ಕಳುಹಿಸಿದ್ದರು. ನೋಡಿಯೇ ಗೌರಿ, ನಾಣಿಗೆ ಜೊಲ್ಲು ಸುರಿದಿತ್ತು. ತಿನ್ನಲು ಕೈ ಹಾಕಿದಾಗ ಆಯಿ ತಡೆದಿದ್ದಳು, ನಾಳೆ ಪೂಜೆ ಮುಗಿವ ತನಕ ಮುಟ್ಟಲಿಕ್ಕಿಲ್ಲ. ರಸಾಯನಕ್ಕೂ ಅದೇ, ನೇವೇದ್ಯದ ಪ್ರಸಾದಕ್ಕೂ ಅದೇ. ಜನ ಬಹಳ ಬರುವ ಕಾರಣ ತಮಗೆ ಏನೂ ಉಳಿಯದೆಂದು ಗೌರಿ ನಾಲ್ಕು ಹಣ್ಣುಗಳನ್ನು ಗುಟ್ಟಾಗಿ ಅಡಗಿಸಿಟ್ಟಿದ್ದಳು ಬೈ ಹುಲ್ಲಿನ ಅಟ್ಟದಲ್ಲಿ. ಅದರ ನೆನಪಾದದ್ದು ಪೂಜೆ ಕಳೆದು ಎರಡು ದಿನಗಳ ನಂತರ. ನೋಡಿದರೆ ನಾಲ್ಕೂ ಕೊಳೆತು ಅಪ್ಪಚ್ಚಿ. ಕದ್ದು ತಿನ್ನಲು ಜೊಲ್ಲು ಸುರಿಸಿದ್ದೇ ಬಂತು. ಅಂತೂ ಆಯಿ ಎದುರಲ್ಲೇ ಗುಟ್ಟು ರಟ್ಟು. ಅಜ್ಜಮ್ಮ ಶಾಂತವಾಗಿ, "ಹಣ್ಣು ತೊಳೆದು ಎಣಿಸಿ ಇಟ್ಟವಳು ನಾನು. ಕಡೆಗೆ ಕಂಡರೆ ನಾಲ್ಕು ಕಮ್ಮಿ. ಇದೇ ಮಂಗಗಳು ತಿಂದದ್ದು. ಅನುಮಾನ ಬಂತು. ಆದರೆ ಮಕ್ಕಳಲ್ದ, ಅವು ದೇವರ ಸಮ. ಸುಮ್ಮನಾದೆ" ಅಂದಳು.

"ನೀವೇ ಅವನ್ನು ತಲೆಮ್ಯಾಲೆ ಹೊತ್ತು ಹಾಳು ಮಾಡ್ತೀರಿ" ಆಯಿ ಗದರಿದಳು, "ಹಣ್ಣು ಕೊಳೆತದ್ದು ದೊಡ್ಡದಲ್ಲ. ಅಡಗಿಸಿ ಇಟ್ಟದ್ದು ತಪ್ಪು. ಎಂತದೇ ಆಗ್ಲಿ ಹಂಚಿ ತಿಂಬ ಗುಣ ಮಕ್ಕಳು ಕಲೀಬೆಕು. ಹಂಚುವುದು ಬೇಡ್ವಾ? ಹೋಗ್ಲಿ, ಕದ್ದು ಮುಚ್ಚಿದ್ದು ಯಾಕೆ? ಹಾಳು ಬುದ್ಧಿ? ದೇವರಿಗೆಎಂತದೇ ಸಮರ್ಪಣೆ ಮಾಡಲಿ, ಮನಃಪೂರ್ವಕ ಮಾಡೆಕ್ಕು. ಹತ್ತು ಸಲ ಶಬರಿ ಕಥೆ ಕೇಳಿ ಬೆಳೆದವು ನೀವು. ಶಬರಿಯ ಸಮರ್ಪಣಾ ಭಾವ ಅರ್ಥ ಆಗಲಿಲ್ಯಾ? ಶ್ರೀರಾಮನಿಗಾಗಿ ಶಬರಿ ತಾನು ಆರಿಸಿ ತಂದ ಹಣ್ಣುಗಳನ್ನು ಒಂದೊಂದೇ ಕಚ್ಚಿ ನೋಡಿ ಹಾಳು, ಹುಳಿ ಹಣ್ಣು ಬಿಸಾಕಿ ಸಿಹಿಹಣ್ಣುಗಳನ್ನು ಮಾತ್ರ ಅವನಿಗೆ ಸಮರ್ಪಿಸಿದವಳು. ಅದು ತನ್ನ ಎಂಜಲು ಎಂಬ ಕಲ್ಪನೆಯೂ ಬಾರದ ಮುಗ್ಧಳು. ತನ್ನ ರುಚಿ ರಾಮ ರುಚಿ"

ಗೌರಿ ಗದ್ಗದಿತಳಾದಳು, "ತನ್ನ ರುಚಿ ರಾಮ ರುಚಿ, ತನ್ನ ಶ್ರದ್ಧೆ ರಾಮ ಶ್ರದ್ಧೆ, ತನ್ನ ಭಕ್ತಿ ರಾಮ ಭಕ್ತಿ, ತನ್ನ ಚಿತ್ತ ರಾಮ ಚಿತ್ತ ಎಂದು ಶಬರಿ ತನ್ನನ್ನೇ ಶ್ರೀ ರಾಮನಿಗೆ ಸಮರ್ಪಿಸಿ.. .."

"ಕಥೆ ಎಲ್ಲಾ ಗೊತ್ತಿದ್ದು ನೀ ಮಾಡಿದ್ದು ಎಂತಾ? ಈ ಕೆಮಿಲಿ ಕೇಳಿ ಆ ಕೆಮಿಲಿ ಬಿಟ್ಟದ್ದು. ದೇವರಿಗೆ ತಂದದ್ದು ನಾವು ಕದ್ದಿಟ್ಟು ಉಳಿದದ್ದು ಕೊಡುವುದಲ್ಲ.ಹೋಗಿ ಇಬ್ಬರೂ ನಾಲ್ಕು ಬಸ್ಕಿ ತೆಗೆದು ದೇವರಲ್ಲಿ ಕ್ಷಮೆ ಕೇಳಿ"

ತಾನೀಗ ಮಾಡಲು ಹೊರಟಿದ್ದು ಇದನ್ನೇ. ಕದ್ದು ಮುಚ್ಚಿ ಅಂಗಿ ಕತ್ತರಿಸಿ, ಬೂಟು ಹರಿದು ಸುನಂದೆಗೆ ಉಪಯೋಗ ಮಾಡದಂತೆ, ಅಯ್ಯೋ, ಸರಿಯಾದ ಸಮಯದಲ್ಲಿ ಎಚ್ಚರಿಸಿದಳು ಸುನಂದೆ. ತಿನ್ನುವ ಸ್ವಾರ್ಥದಲ್ಲಿ ಹಾಳಾದ್ದು ಹಣ್ಣುಗಳು. ಹಾಗೇ ತನಗಿಲ್ಲದ ಮತ್ಸರದಲ್ಲಿ ಕತ್ತರಿಯಿಂದ ಕಡಿದು ಹೋಗುತ್ತಿತ್ತು ಬಂಧುತ್ವದ

ತಂತು. ನನ್ನ ಸ್ವಾರ್ಥವೇ, ಮತ್ಸರವೇ ಹಾಳಾಗಿ ಹೋಗು! ನನ್ನಿಂದ ದೂರ ಹೋಗು. ನನ್ನ ಮನಸ್ಸು ಪ್ರೀತಿಯ ಬಟ್ಟಲಾಗಲಿ. ಕ್ಷಮಿಸು ದೇವರೇ. ಇನ್ನೆಂದೂ ಯಾರಿಗೂ ನೋವು ಕೊಡ್ತಿಲ್ಲೆ. ಮತ್ತೊಂದು ಕ್ಷಣದಲ್ಲಿ ಜೋರಾಗಿ ಬಿಕ್ಕಳಿಸುತ್ತ ಸುನಂದೆಯ ಹೆಗಲ ಮೇಲೊರಗಿದಳು.

ಭಾದ್ರಪದ ಮಾಸದ ಕೊನೆಯಲ್ಲಿ ಬರುವ ಮಳೆ ಬಿಸಿಲಿನ ರಂಗಿನಾಟದಂತೆ ಗೌರಿ ಅತ್ತಳು, ನಕ್ಕಳು. ನಿಜವಾಗಿಯೂ ಸುನಂದೆಗೆ ಒಗಟಾದಳು ಈ ಹುಡುಗಿ.

***

## ಅಧ್ಯಾಯ 12

ಕಮ್ತಿಯವರು ಸುಮ್ಮನೆ ಕೂರುವ ಜನವಲ್ಲ. ಅವರ ಪರಿಚಯದವರು ವಿನಾಯಕ ಶರ್ಮ ಹುಬ್ಬಳ್ಳಿಯಲ್ಲಿ ಪ್ರಸಿದ್ಧಿ ಪಡೆದ ವಕೀಲರು. ಅವರ ಮೂರು ಗಂಡುಮಕ್ಕಳಲ್ಲಿ ಇಬ್ಬರಿಗೆ ಮದುವೆಯಾಗಿದೆ. ಕೊನೆಯವನು ವಿಷ್ಣು.ಮೂವತ್ತರ ತರುಣ. ತಂದೆಯಂತೆ ಅವನೂ ವಕೀಲ. ಅವನಿಗೆ ಹೆಣ್ಣು ನೋಡುತ್ತಿದ್ದಾರೆಂಬ ಸುದ್ದಿ ಕಮ್ತಿಯವರ ಕಿವಿಗೆ ಬಿದ್ದದ್ದೇ ತಡ, ನೆನಪಾದವಳು ಶಾರದೆ. ರಾಮಪ್ಪಯ್ಯನಿಗೆ ಹುಡುಗನ ವಿಷಯ ಹೇಳಿದರು. ವಿನಾಯಕ ಶರ್ಮರಿಗೆ ಸುದ್ದಿ ಕಳುಹಿಸಿದರು. ವಿಷ್ಣುವಿಗೆ ಎರಡು ವರ್ಷಗಳಿಂದ ಹುಡುಗಿ ನೋಡುತ್ತಿದ್ದರೂ ಎಲ್ಲಿಯೂ ಜಾತಕ ಹೊಂದಿ ಬಂದಿಲ್ಲವಂತೆ. ಜಾತಕ ಹೊಂದಿದರೆ ಮುಂದಿನ ಮಾತು. ಅಚ್ಚರಿ ಎಂದರೆ ಶಾರದೆ, ವಿಷ್ಣುವಿನ ಜಾತಕ ಹದಿನಾರಾಣೆ ಹೊಂದುತ್ತದೆ. ಮತ್ತೇನು, ಎರಡೂ ಕುಟುಂಬದಲ್ಲಿ ಅಂಚೆ ಪತ್ರಗಳ ಮೂಲಕ ನಡೆಯಿತು ಮಾತುಕತೆ. ಶಾರದೆ ಕಲಿತವಳಲ್ಲ. "ನಮ್ಮ ಹೊಳೆದಂಡೆಯಿಂದ ದಿನಾ ದೋಣಿಯಲ್ಲಿ ಶಾಲೆಗೆ ಹೋಪ ಹುಡುಗೀರು ನಮ್ಮ ಕಾಲದಲ್ಲಿ ಇರಲಿಲ್ಲೆ. ನನ್ನ ಅಪ್ಪನೇ ಅವಳಿಗೆ ಓದಿ ಬರೆಯಲು ಕಲಿಸಿದ್ದು. ರಾಮಾಯಣ, ಮಹಾಭಾರತ ಕೈಗೆ ಸಿಕ್ಕಿದ ಪುಸ್ತಕ ಎಲ್ಲ ಓದ್ತಾಳೆ. ಬರೆಯಲೂ ಬತ್ತು" ಮೊದಲ ಪತ್ರದಲ್ಲಿ ಅಪ್ಪಯ್ಯ ಮುಚ್ಚುಮರೆಯಿಲ್ಲದೆ ಬರೆದ. ಸತ್ಯದ ಮಾತು. "ನಮ್ಮ ವಿಷ್ಣು ಕಲಿತ ಹುಡುಗಿಯೇ ಬೇಕು ಅಂತಿದ್ದ. ಹೀಗೆ ಹೇಳ್ತಾ ಇದ್ದರೆ ಲಗ್ನ ಇಲ್ಲದೆ ನಿನ್ನ ಗಡ್ಡ ಹಣ್ಣಾಗುತ್ತೆ ಅಂದಿದ್ದೇವೆ. ನಿಮ್ಮ ಮಗಳು ಅವನಿಗೆ ಅಗ್ದೀ ಪಸಂದ್ ಬಂದಾಳ." ವಿನಾಯಕ ಶರ್ಮರು ಉತ್ತರಿಸಿದರು.

ಅವರ ಹೆಂಡತಿ ಅದಿತಿದೇವಿ, "ನಮ್ಮ ದೊಡ್ಡ ಸೊಸಿ ಹುಬ್ಬಳ್ಳಿ ಕಾಲೇಜಿನಾಗ ಲೆಕ್ಚರರ್. ಲಗ್ನ ಆದಾಗ ಬರೀ ಹನ್ನೊಂದನೇ ಕ್ಲಾಸ್ ಓದಿದ್ದು. ಮುಂದೆ ನಾವೇ

ಕಾಲೇಜಿಗೆ ಕಳಿಸಿದ್ವಿ" ಎಂದು ಬರೆದರು. 'ನಮ್ಮ ಎರಡನೇ ಸೊಸಿ ಕಲ್ತದ್ದು ಗೃಹವಿಜ್ಞಾನ. ವಿಜಾಪುರದಾಗ ದೊಡ್ಡ ಕೆಲಸದಲ್ಲಿದ್ದಾಳ" ಅವರದೇ ಮತ್ತೊಂದು ಪತ್ರ. "ಮೂವರು ಹೊಡುಗಿಯರಿಗೆ ಮದುವಿ ಆಗೇದ. ವಿಷ್ಣು ಒಬ್ಬಂದು ಮುಗೀತು ಅಂದ್ರ ನಮ್ಮ ಜವಾಬ್ದಾರಿ ಮುಗೀತು" ವಿನಾಯಕ ಶರ್ಮರ ಪತ್ರ.

ಶಾರದೆಯ ಬಗ್ಗೆ, ತಮ್ಮ ಕುಟುಂಬದ ಬಗ್ಗೆ ಅಪ್ಪಯ್ಯನೂ, ಅಜ್ಜಯ್ಯನೂ ಬರೆದರು. ಅಂತೂ ಹಲವಾರು ಪತ್ರಗಳು ಓಡಾಡಿದವು. ಬರೆಯುತ್ತ ಎರಡೂ ಕಡೆಯವರು ನೆಂಟಸ್ಥಿಕೆ ಮುಂದುವರಿಸಲು ಓಂಕಾರ ಹಾಕಿಯೇಬಿಟ್ಟರು. ಗುರುಬಲ, ಕಂಕಣಬಲ ಕೂಡಿಬಂದರೆ ಲಗ್ನ ಕಾರ್ಯ ಚಿಟಿಕೆ ಹೊಡೆದಷ್ಟೇ ಸುಲಭ! ಮುಂದೆ ಒಂದು ವಾರದಲ್ಲಿ ವಿನಾಯಕ ಶರ್ಮರು, ಅದಿತಿದೇವಿ, ವಿಷ್ಣು ಜೊತೆಗೆ ಕಮ್ತಿಯವರು ಹೊಳೆಬಾಗಿಲಿಗೆ ಬಂದರು. ಹುಬ್ಬಳ್ಳಿಯಿಂದ ಬಹಳ ದೂರ. ಮೂರು ದೋಣಿಗಳು, ಎರಡು ಕಡೆ ಮೋಟಾರ್ ಗಾಡಿ ಬದಲಾಯಿಸಬೇಕು. ಹುಡುಗಿ ಒಪ್ಪಿಗೆಯಾದರೆ ಒಂದು ದಿನ ಹೆಚ್ಚೇ ನಿಂತು ನಿಶ್ಚಿತಾರ್ಥ ಮುಗಿಸುವುದೆಂದು ನಿರ್ಧರಿಸಿಯೇ ಬಂದಿದ್ದರು ವಿನಾಯಕ ಶರ್ಮರು. ಅವರ ಅನಿಸಿಕೆಗೆ ಶಾರದೆ ನಿರಾಸೆ ಪಡಿಸಲಿಲ್ಲ. ಅವಳ ನಯ ವಿನಯ, ಸುಬ್ಬಪ್ಪಯ್ಯರ ಮನೆ, ಉಪಚಾರ, ಆತ್ಮೀಯತೆ, ದೊಡ್ಡಮನಸ್ಸಿನ ನಡೆ ನುಡಿ ಇಷ್ಟವಾದವು.

ಆದರೆ ಈ ಹುಬ್ಬಳ್ಳಿ ಜನಕ್ಕೆ ಕಷ್ಟವಾದದ್ದು ಹೊಳೆಬದಿಯ ಹಳ್ಳಿಮನೆ. ತಗ್ಗು ಬಾಗಿಲುಗಳು, ಕಿಟಕಿಗಳು, ಸವುದೆ ಒಲೆ ಉರಿಸಿ ಮಸಿಹಿಡಿದ ಅಡಿಗೆ ಮನೆ, ಶೌಚಕ್ಕೂ ಮನೆಹಿಂಬದಿ ತಂಬಿಗೆ ಹಿಡಿದು ಕಾಡಿಗೆ ಹೋಗಬೇಕು. ಕುಳಿತುಕೊಳ್ಳಲು ಸರಿಯಾದ ಖುರ್ಚಿ, ಊಟದಮೇಜು ಇಲ್ಲ. ಸೀರೆ ನಿರಿಗೆ ಮೊಣಕಾಲು ಎತ್ತರಕ್ಕೆ ಕಟ್ಟಿ ಬಗ್ಗಿ ಬಗ್ಗಿ ಕೆಲಸ ಮಾಡುವ ಹೆಂಗಸರು. ಇನ್ನೂ ಬಹಳಷ್ಟು ಸಂಗತಿ ಹುಬ್ಬಳ್ಳಿ ಜನ ಕನಸಿನಲ್ಲೂ ಕಂಡಿರಲಾರರು. ಆದರೂ ಹೊಳೆಬಾಗಿಲು ಸುಸಂಸ್ಕೃತ ಮನೆ ಎಂದು ಶರಾ ಬರೆದು ಒಪ್ಪಿಗೆ ಸೂಚಿಸಿದರು. ಮರುದಿನ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಿಶ್ಚಿತಾರ್ಥ ನಡೆಸುವುದೆಂದು ಸುಬ್ಬಪ್ಪಯ್ಯ ಉಳಿದವರು ತೀರ್ಮಾನಿಸಿ ಸಂಜೆಯೇ ಮುಖ್ಯ ಅರ್ಚಕರಿಗೆ ವರ್ತಮಾನ ಹೇಳಿಯೂ ಆಯಿತು.

ಎಲ್ಲ ಸರಿಯಿತ್ತು. ಕಷ್ಟ ಎನಿಸಿದ್ದು ಮುಸ್ಸಂಜೆಯಲ್ಲೇ ಕಪ್ಪಿಡುವ ಕತ್ತಲೆ, ರಾತ್ರೆಯಲ್ಲಿ ಬೆಳಕು ಬೀರುತ್ತೇವೆ ಎನ್ನುವ ಅಸಂಖ್ಯ ಮಿಂಚುಳಿಗಳು, ಚಿಮಣಿದೀಪದ ಬೆಳಕು, ಗವ್ ಎನಿಸುವ ವಾತಾವರಣ, ಹೊಳೆಯಿಂದ ಬೀಸಿ ಬರುವ ತಂಪು ಗಾಳಿ, ಬಿದಿರುಮೆಳೆಯ ಗಸ್ ಗಸ್ ಸದ್ದಿನ ಜೊತೆಗೇ ರಾತ್ರೆ ಹಕ್ಕಿ ಪಕ್ಕಿಗಳ ಕಿಚ್ಚಿಚ್, ರಾತ್ರಿ ರಾಣಿ, ಪಾರಿಜಾತ ಹೂವುಗಳ ಪರಿಮಳ, ರಾತ್ರೆ ಹೆಚ್ಚಿದಂತೆ ಹೆದರಿಕೆ ಹುಟ್ಟಿಸುವ

ನೀರವ ಮೌನ! ಅದಿತಿದೇವಿ ಮತ್ತುಶರ್ಮರು ಪಿಸುಗುಟ್ಟಿದರು, ಸಣ್ಣ ನಡುಗಡ್ಡೆಯ ಜನಜೀವನ ಹೀಗೂ ಉಂಟೇ? ಲಗ್ನದ ನಂತರ ವಿಷ್ಣುವಿಗೆ ಕಷ್ಟವಾಗದೆ? ಸಂಬಂಧ ಬೇಡವೆಂದು ನಿರಾಕರಿಸೋಣವೇ? ಎಂಬ ಯೋಚನೆ ಸುಳಿದರೂ ಇವೆಲ್ಲ ದೊಡ್ಡ ಸಂಗತಿಯಲ್ಲ. ಹುಡುಗಿಯನ್ನು ತರುವ ಮನೆ. ಸುಸಂಸ್ಕೃತರು, ಸಜ್ಜನರು. ಮನುಷ್ಯ ಸಂಬಂಧದಲ್ಲಿ ಅದೇ ಮುಖ್ಯ. ಇಂತಹ ಉತ್ತಮ ಸಂಬಂಧ ಒಪ್ಪದಿರಲು ಇದಾವ ಅಳತೆಗೋಲು ಬೇಡ. "ಹುಡುಗಿ ವಿಷ್ಣುವನ್ನು ಚೆನ್ನಾಗಿ ನೋಡಿಕೊಂಡರೆ ಸಾಕು"

ಮರುದಿನ ಬೆಳಿಗ್ಗೆ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ದೇವಿ ಸಮ್ಮುಖದಲ್ಲಿ ಪ್ರಧಾನ ಅರ್ಚಕರಿಗೆ ಕರೆ ಹೋಯಿತು. ಲಗ್ನದ ನಿಶ್ಚಿತಾರ್ಥ ಮಾತುಗಳು ಪರಸ್ಪರ ವಿಶ್ವಾಸ, ನಂಬಿಕೆ, ಒಪ್ಪಿಗೆಯ ಮೇಲೆ ನಡೆದವು. ಲಗ್ನ ಹೊಳೆಬಾಗಿಲಿನಲ್ಲಿ, ವಧೂಗೃಹಪ್ರವೇಶ ಹುಬ್ಬಳ್ಳಿಯಲ್ಲಿ. ಒಂದು ದಿನ ಮುಂದಾಗಿ ಗಂಡಿನ ದಿಬ್ಬಣದವರು ಹೊಳೆಬಾಗಿಲಿಗೆ ತಲುಪಬೇಕೆಂದು ನಿಶ್ಚಯಿಸಲಾಯಿತು. ಮಾಘ ಮಾಸದ ಮೊದಲ ಪಕ್ಷ. ಹುಡುಗ ಹುಡುಗಿಗೆ ಮತ್ತು ಎರಡೂ ಕುಟುಂಬಕ್ಕೆ ಹೊಂದುವ ಪ್ರಶಸ್ತ ಮುಹೂರ್ತ ಸಿಕ್ಕಿತು. ಈ ಮದುವೆ ಹಿಂದಿನ ದಿನ ನಾಣಿಗೆ ಮುಂಜಿ ಮಾಡುವ ಯೋಚನೆ ಬಂತು ಅಪ್ಪಯ್ಯನಿಗೆ. ನಾಣಿ ನಕ್ಷತ್ರಕ್ಕೆ ಸರಿಯಾದ ಮುಹೂರ್ತ ಸಿಗಬೇಕು. ಅದನ್ನೂ ನೋಡಲಾಗಿ ಮುಂಜಿಗೆ ಮುಹೂರ್ತ ಇದೆ ಎಂದು ತಿಳಿಯಿತು. ಎರಡು ಶುಭ ಕಾರ್ಯಗಳು ಒಟ್ಟಿಗೆ! ಅದರ ಪ್ರಕಾರ ಆಮಂತ್ರಣ ಪತ್ರಿಕೆ ಬರೆದು ದೇವರ ಮುಂದಿಟ್ಟು ಕೈ ಜೋಡಿಸಿದರು. ಪ್ರಧಾನ ಅರ್ಚಕರು ಭಾವೀ ವಧು ವರರಿಗೆ ಆಶೀರ್ವದಿಸಿ ಪ್ರಸಾದವಿತ್ತರು. ಹೌದು, ಇಲ್ಲಿ ಸಾಕ್ಷಾತ್ ದೇವಿಯೇ ಅಗೋಚರ ರೂಪದಲ್ಲಿ ಸಾಕ್ಷಿಯಾದಳು! ಎರಡೂ ಕಡೆ ಲಗ್ನಪತ್ರಿಕೆ ಒಟ್ಟಿಗೆ ಮಾಡುವುದು. ತಮಗೆ ಬೇಕಾದವರನ್ನು ಕರೆಯುವುದು. ಅಕ್ಕಿ ಕಾಳಿನಲ್ಲಿ ಲಗ್ನಪತ್ರಿಕೆ ಬರೆದು ಅನಂತರ ಕಾಗದಲ್ಲಿ ಅದರ ನಕಲು ತೆಗೆದರು. ಮಧುಪರ್ಕದ ವಸ್ತುಗಳು, ಚಿನ್ನ ಬೆಳ್ಳಿ, ಹಣ ಕೊಡುವ ತೆಗೆದುಕೊಳ್ಳುವ ಮಾತು ಬಂದಾಗ ವಿನಾಯಕ ಶರ್ಮರು, "ನೀವು ಸಾದಾ ಸೀರೆ, ನೂಲಿನ ಸರದಲ್ಲಿ ಹುಡುಗಿಯನ್ನು ಧಾರೆ ಎರೆದುಕೊಟ್ಟರೂ ನಮಗೆ ಸಮ್ಮತವೇ. ವರೋಪಚಾರ ಅದೂ ಇದೂ ಏನೂ ಬೇಡ" ಎಂದರು.

ಜನ ಹೀಗೂ ಇದ್ದಾರೆಯೇ? ಕಮಲಿ ಮದುವೆಯಲ್ಲಿ ವರೋಪಚಾರ ಸರಿಯಿಲ್ಲ, ಹಾಕಿದ ಚಿನ್ನಾಭರಣ ಕಡಿಮೆ ಆಯ್ತೆಂದು ಗಂಡಿನ ಕಡೆಯವರು ಗೊಣಗಿದ್ದರು. ಇವರು ನೋಡಿದರೆ ಏನೂ ಬೇಡವಂತೆ. ಅಪ್ಪಯ್ಯ ತಲೆ ಕೆರೆದುಕೊಂಡ. ಕೇಳಿ ತಿಳಿಯದ ಸಂಬಂಧ. ಪತ್ರಗಳಲ್ಲಿ ಒಳ್ಳೆಯದನ್ನೇ ಬರೆದಿದ್ದಾರೆ. ಸುಳ್ಳು ಬರೆದಿರಲಿಕ್ಕಿಲ್ಲ ಎನ್ನಲೇ?. ಆದರೂ ವಿಷ್ಣು ಬಗ್ಗೆ ಏನೂ ಬರೆದಿಲ್ಲ. ದೂರದ ನೆಂಟಸ್ಥಿಕೆಗೆ ನೋಡಿದ್ದಾರೆ

ಎಂದರೆ ಅವರೂರಲ್ಲಿ ಇವರಿಗೆ ಯಾವ ಹೆಣ್ಣು ಸಿಗಲಿಲ್ಲವೇ? ಇವಳು ಕಲ್ತವಳಲ್ಲ. ಹ್ಯಾಗೆ ಒಪ್ಪಿದರು? ಹುಡುಗನಿಗೆ ಎಂತಾದ್ರೂ ಐಬು ಇತ್ತಾ? ಕುಲ ಗೋತ್ರ ಗೊತ್ತಿಲ್ಲದೆ ಕಮ್ತಿಯವರು ಹೇಳಿದರೆಂದು ಕಣ್ಣುಮುಚ್ಚಿ ಮದಿ ಮಾಡಿದ್ರೆ ನಾಳೆ ಅವಳನ್ನು ಕಲ್ಲು ಕಟ್ಟಿ ಹೊಳೆಗೆ ಹೊತ್ತು ಹಾಕಿದಂತೆ ಆಗದಾ? ಮನಸ್ಸಿಗೆ ಬಂದುದನ್ನು ಶಾರದೆಗೆ ಹೇಳಿದ "ನೀ ಎಂತ ಹೇಳ್ತೆ?"

ನಿನ್ನೆಯಿಂದ ವಿಷ್ಣುವಿನ ಮಾತು, ಚಹರೆಯಿಂದ ಪ್ರಭಾವಿತಳಾಗಿದ್ದ ಶಾರದೆ ನಾಚಿ ಧೈರ್ಯದಿಂದ, "ನನ್ನ ಹಣೆಯಲ್ಲಿ ವಿಧಿ ಬರಹ ಯಾರು ಕಂಡಿದ್ದೋ ಅಣ್ಣಯ್ಯ? ಅವರು ನನ್ನ ಒಪ್ಪಿದರೆ ಮತ್ತೆಂತ ಚಿಂತೆನೂ ಬ್ಯಾಡ" ಎಂದಳು.

"ಈಶ್ವರಾನುಗ್ರಹ ಅಂದರೆ ಇದೇ! ಎಲ್ಲಾ ಆ ದೇವರಾಟ!"

ನಿಶ್ಚಿತಾರ್ಥ ಕಾರ್ಯದ ಶಾಸ್ತ್ರ ಮುಗಿದು ಎರಡೂ ಕುಟುಂಬಗಳು ಎಲೆ ಅಡಿಕೆ ತಟ್ಟೆ ಬದಲಾಯಿಸಿಕೊಂಡರು. ದೇವರ ಹುಂಡಿಗೆ ಕಾಣಿಕೆ, ಪ್ರಧಾನ ಅರ್ಚಕರಿಗೆ, ಸಹಾಯಕರಿಗೆ ವಿನಾಯಕ ಶರ್ಮರಿಂದ, ಸುಬ್ಬಯ್ಯರಿಂದ ದಕ್ಷಿಣೆ ಕೊಟ್ಟಾಯಿತು. ಅದಿತಿ ದೇವಿ ಹೊಸ ಸೊಸೆಗೆ ಸೀರೆ, ಒಂದೆಳೆ ದಪ್ಪದ ಚಿನ್ನದ ಸರ ತೊಡಿಸಿದರು. ಅದು ಮನೆ ಪದ್ಧತಿಯಂತೆ. ಸುಬ್ಬಪ್ಪಯ್ಯ ಹುಡುಗನಿಗೆ ಏನುಕೊಡಲಿ? ಯೋಚಿಸಿದ್ದು ಕಂಡು ವಿನಾಯಕ ಶರ್ಮರು "ನಾವು ಹೀಂಗ್ ನಿಂತ ಕಾಲ್ನಲ್ಲಿ ಧಿಡೀರನೆ ಬಂದು ಹುಡುಗಿಯನ್ನು ಒಪ್ಪಿದ್ವಿ. ನಮಗ ನಿಮ್ಮ ಆಶೀರ್ವಾದ ಇದ್ದರ ಸಾಕು" ಎಂದರು ವಿನಯದಿಂದ.

"ಹುಡುಗಿ ಪಸಂದ ಇದ್ದಳಾ? ಕಣ್ತೆರೆದು ಚಲೋದಾಗಿ ನೋಡ್ಕೋ"ಅದಿತಿದೇವಿ ಮಗನ ಕಿವಿ ಹಿಂಡಿದರು. ವಿಷ್ಣು ಹಸನ್ಮುಖಿಯಾಗಿದ್ದ. ನಿನ್ನೆಗಿಂತ ಹೆಚ್ಚು ಉತ್ಸಾಹದಲ್ಲಿದ್ದ. ಒಂದು ಚೆಂದದ ಪೆನ್ನು ಮತ್ತು ತಮ್ಮ ಮನೆ ವಿಳಾಸದ ಚೀಟಿ ಶಾರದೆಯ ಕೈಗಿತ್ತ. ಅದರ ಅರ್ಥ ತನಗೆ ಕಾಗದ ಬರೀತಾ ಇರು! ಪೆನ್ನಿನಲ್ಲಿ ಹೇಗೆ ಶಾಹಿ ಹಾಕಬೇಕು, ಹೇಗೆ ಬರೆಯಬೇಕು ಅವನೇ ತೋರಿಸಿದ. ನಾಚಿ ನೀರಾದಳು ಶಾರದೆ. ಅವಳು ಪೆನ್ನು ನೋಡಿದವಳೇ ಅಲ್ಲ. ಹೊಳೆಬಾಗಿಲಿಗೆ ಇನ್ನೂ ಪೆನ್ನುಗಳು ಕಾಲಿಟ್ಟಿಲ್ಲ. ಶಾಹಿ ದೌತಿ, ಲೆಕ್ಕಣಿಕೆಯಲ್ಲಿ ಬರೀಬೇಕು. ಬರೆಯುವಾಗ ಅಲ್ಲಲ್ಲಿ ಶಾಹಿ ಮುದ್ದೆಯಾಗಿ, ಕೆಲವೆಡೆ ಸ್ಪಷ್ಟ ಅಕ್ಷರಗಳು ಮೂಡದೆ ತಾಪತ್ರಯ. ಇದಾದರೆ ಒಮ್ಮೆ ಶಾಹಿ ತುಂಬಿಸಿದರೆ ಎಷ್ಟೋ ಹೊತ್ತು ಬರೆಯಬಲ್ಲದಂತೆ. ನಾಣಿ ಸುಮ್ಮನಿರುವನೇ? "ಇಲ್ನೋಡೇ ಅಕ್ಕ, ಪೆನ್ನು! ನೀನೂ ಇದರಲ್ಲೇ ಸುಶೀಲಚಿಕ್ಕಿಗೆ ಕಾಗ್ದ ಬರಿ"

ಪೆನ್ನು ಕಂಡ ಗೌರಿಯ ಕಣ್ಣರಳಿತು. "ನನಗೂ ಬೇಕು ಇಂತಹ ಪೆನ್ನು. ಎಲ್ಲಿ ಸಿಗುತ್ತದೆ?" ಆಗ ಅಪ್ಪಯ್ಯ ಶಾರದತ್ತೆಗೆ "ಸುಮ್ಮನೆ ಇಬ್ಬರೂ ಒಂದು ಸುತ್ತು ತಿರುಗಾಡಿ

ಬನ್ನಿ" ಹೇಳುವುದು ಕೇಳಿಸಿತು. ಅವಳು ವಿಷ್ಣು ಜೊತೆಯಾಗಿ ಹೊರಟಾಗ ಗೌರಿ, ನಾಣಿ ತಾವೂ ಹೊರಟರು. ತಮ್ಮದೇ ತೋಟ, ಕಾಡು ಬಯಲು ತೋರಿಸುವ ಉತ್ಸಾಹ. ಮೋತಿಯೂ ಬಾಲ ಅಲ್ಲಾಡಿಸುತ್ತ ಹಾಜರು. ಜಿಂಕೆಯ ನೆಗತದಲ್ಲಿ ಅವರು ಮುಂದೆ ಇವರು ಹಿಂದೆ.

ಮಧ್ಯಾಹ್ನ ಭರ್ಜರಿ ಬೋಜನ. ಒಬ್ಬ ಅಡಿಗೆಯವರ ಸಹಾಯದಿಂದ ಅಜ್ಜಮ್ಮ, ಕಮಲಿ, ಆಯಿ ಸೇರಿ ಮಾಡಿದ ಅಡಿಗೆ. ತುಂಬ ರುಚಿ. ಸಾರು,ಹುಳಿ, ಪಳದ್ಯ, ಎರಡು ಬಗೆ ಪಲ್ಯ ಜೊತೆಗೆ ಪಾಯಸ, ಜಿಲೇಬಿ. ನೆಲದಲ್ಲಿ ಬಾಳೇಎಲೆಯಲ್ಲಿ ಬಡಿಸಿದ್ದು. ವಿನಾಯಕ ಶರ್ಮ ದಂಪತಿಗಳಿಗೆ ನೆಲದಲ್ಲಿ ಕುಳಿತುಕೊಳ್ಳಲು ಕಷ್ಟವೆಂದು ಹೊರಕೋಣೆಯ ಮೇಜು ಖುರ್ಚಿ ತಂದು ಇಟ್ಟರು ಕಮ್ತಿಯವರು. ತಾನು ಮಾಡಿದ ಸಂಧಾನ ಫಲಪ್ರದವಾದ ಧನ್ಯ ಭಾವದಲ್ಲಿ ತಾವೂ ನೆಲದ ಮೇಲೆ ಊಟಕ್ಕೆ ಕುಳಿತರು.

"ನಮ್ಮ ಬದಿ ಅಡಿಗೆ, ಸೇರ್ತದಾ?" ಬಡಿಸುತ್ತಿದ್ದ ಆಯಿಯದು ಉಪಚಾರದ ಮಾತುಗಳು.

"ಮದುವೆ ಊಟ ಛಲೋದಾಗಿ ಹಾಕ್ಸಿದ್ರಿ. ರುಚಿ ಅದ. ನಿಮ್ಮೂರ ಕಡೆ ಪಳದ್ಯ ನನ್ನ ಹೆಂಡತಿಗೆ ಭ್ಹಾಳ ಸೇರ್ತದ." ವಿನಾಯಕ ಶರ್ಮರು ಪಾಯಸವನ್ನು ಎರಡು ಬಾರಿ ಹಾಕಿಸಿಕೊಂಡರು.

"ನಮ್ಮ ವಿಷ್ಣುವಿಗೆ ದಿನಾ ಊಟಕ್ಕ ಭಕ್ರಿ ಬೇಕು. ಆದ್ರ ಈ ಬದಿ ಅಡಿಗಿನೂ ಭಾಳ ಪಸಂದ ಮಾಡ್ತಾನ. ಶಾರದೆ ಬದ್ಮೇಲೆ ಭಕ್ರಿ ಮಾಡಾಕ ಕಲಿವ ತ್ರಾಸ ಅದ ನೋಡ್ರಿ" ನಗುತ್ತ ಅಂದರು ಅದಿತಿ ದೇವಿ. "ನಮ್ಮದು ತುಂಬಿದ ಮನಿ. ಬಂದು ಹೋಗುವವರು ಭಾಳ ಮಂದಿ."

"ಅದೆಂತ ದೊಡ್ಡ ಸಂಗತಿಯಾ? ಎಲ್ಲಿದ್ದರೂ ನನ್ನ ತಂಗಿ ಕೆಲಸಕ್ಕೆ ಗಟ್ಟಿಗಿತ್ತಿ"

"ಖುಷಾಲ್‌ಗೆ ಅಂದೆ. ಆಕೀ ಚಿಂತಿ ನಮಗಿಲ್ಲ. ಅಡಿಗೆ ಹೆಂಗ್ಸು ಅದಾಳ. ಹೊರಗೆ ಬಟ್ಟೆ, ಪಾತ್ರೆ ಭಾಂಡಿ ಕೆಲಸಕ್ಕೂ ಜನ ಅದಾವು. ವಿಷ್ಣು ಜತಿ ಚೆಂದಕ್ಕ ಇದ್ದರಾತು"

ಹುಬ್ಬಳ್ಳಿ ಭಾಷೆ. ಕಷ್ಟವಾದರೂ ಆ ಮೂವರ ಸರಳತೆ, ನಗುಮುಖ ಸುಬ್ಬಪ್ಪಯ್ಯರ ಮನೆಯಲ್ಲಿ ತಂಪಾದ ಚಾಮರ ಬೀಸಿತು. ಊಟ ಬೇಗ ಮುಗಿಯಿತು. ಸ್ವಲ್ಪ ಹೊತ್ತು ವಿರಮಿಸದೆ ಎಲ್ಲರೂ ಹೊರಟುನಿಂತರು. ಬೇಗ ಹೊರಟರೆ ಸಾಸ್ತಾನದಲ್ಲಿ ಮೋಟಾರ್ ಗಾಡಿ ಸಿಕ್ಕೀತು. ಬೈಂದೂರು ಅಳವೆ ದಾಟಿ ಭಟ್ಕಳದಿಂದ ಮೋಟಾರ್ ಗಾಡಿಯಲ್ಲಿ ಹೊನ್ನಾವರದ ಒಂದು ದಂಡೆಗೆ ಬಂದರೆ ಅಲ್ಲಿಂದ ದೊಡ್ಡ ಹಾಯಿ ದೋಣಿಯಲ್ಲಿ ಶರಾವತಿ ನದಿಯ ಆಚೆ ಇನ್ನೊಂದು ದಂಡೆಗೆ ಹೋಗಬೇಕು. ಸಧ್ಯ ಬೇಗ ಹೊರಟರೆ ಹುಬ್ಬಳ್ಳಿಗೆ ಮಧ್ಯರಾತ್ರೆಗೆ ತಲುಪಬಹುದು. ಅದಾಗಲೇ ಎತ್ತಿನ ಗಾಡಿ ತಂದು ನಿಲ್ಲಿಸಿದ್ದ

ಭರಮ. ಆಯಿ ಡಬ್ಬಿ ತುಂಬ ಕಲಸಿದ ಅವಲಕ್ಕಿ, ಬೇರೆ ಒಂದಷ್ಟು ತಿಂಡಿ ತುಂಬಿಸಿಕೊಟ್ಟಳು. ಹುಬ್ಬಳ್ಳಿ ಮುಟ್ಟುವಾಗ ಎಷ್ಟು ರಾತ್ರೆ ಆದೀತೋ ತಿಳಿಯದು. ಸುಬ್ಬಪ್ಪಯ್ಯ ಬಾಳೇಹಣ್ಣುಗಳನ್ನೂ ಚೀಲದಲ್ಲಿಟ್ಟರು. ಅವರ ಧಾರಾಳತನ ಆ ಮೂವರ ಮಾತಿನ ಶಬ್ಧಕ್ಕೂ ನಿಲುಕದೆ ಸುಮ್ಮನೆ ತಲೆ ಆಡಿಸಿ ಕಮ್ತಿಯವರ ಜೊತೆ ಎತ್ತಿನ ಗಾಡಿ ಏರಿದರು. ಎತ್ತನ್ನು ಹೊರಡಿಸುವ ಮೊದಲು ಭರಮನಿಂದ ಹೊಸ ಸುದ್ದಿ,

"ಉಡುಪಿ, ಕುಂದಾಪುರದ ಈಚೆ ಕಡೆ ದಾರೀಲಿ ಎಂತದೋ ಹರತಾಳ, ಮೆರವಣಿಗೆ ಗಲಾಟೆ ಒಡೆಯಾ. ವಿದೇಶಿ ಮಾಲು ಸುಟ್ಟು ಜಯಕಾರ ಮಾಡ್ತಿದ್ದೋ. ಇವತ್ತು ಆಚೆಕಡಿಂದ ನದಿ, ಹೊಳೆ ನೀರಿಗೆ ದೋಣಿಗಳು ಇಳಿದಿದ್ದಾವಂತೆ. ಮೋಟಾರ್ ಗಾಡಿ ಬಪ್ಪದು ಸಂಶಯವೇ. ಎಂತ ಹೊಡೀಲಾ ಗಾಡಿ?" ಕೇಳಿದ. ಅವನಿಗೆ ಸುದ್ದಿ ಸಿಕ್ಕಿದ್ದು ಹನುಮನಿಂದ.

"ದಿನ ಬೆಳಗಾದ್ರೆ ದೇಶ ವಿದ್ರೋಹಿ ಕೆಲಸಗಳು. ಸ್ವಾತಂತ್ರ್ಯ ಹೋರಾಟಗಾರರ ಪ್ರತಿಭಟನೆ. ಕೈಗೆ ಸಿಕ್ಕವರನ್ನು ಬ್ರಿಟಿಷರು ಜೈಲಿಗೆ ತಳ್ಳುತಾರೆ. ಮೊನ್ನೆ ನಾವು ಹೊರಟಾಗಲೇ ಉತ್ತರ ಭಾರತದಲ್ಲಿ ನಮ್ಮ ಮೂವರು ನಿಷ್ಠಾವಂತ ಅಧಿಕಾರಿಗಳು ಬ್ರಿಟಿಶರ ಬಂದೂಕಿಗೆ ಹತರಾದ ಸುದ್ದಿ ಬಂದಿತ್ತು. ಇದೆಲ್ಲ ಸ್ವಾತಂತ್ರ್ಯ ಕಿಚ್ಚಿನಲ್ಲಿ ಮಾಮೂಲು. ಜಲ್ದಿ ಹೋಗೋಣ" ವಿನಾಯಕ ಶರ್ಮರು ಧೈರ್ಯ ಹೇಳಿದರು.

ಎತ್ತಿನ ಕೊರಳಗಂಟೆಯ ಸದ್ದಿನಲ್ಲಿ ಗಾಡಿಚಕ್ರ ಗುಡು ಗುಡು ಉರುಳಿತು ಮುಂದಕ್ಕೆ. ಸುಬ್ಬಪ್ಪಯ್ಯ ಆಕಾಶಕ್ಕೆ ತಲೆ ಎತ್ತಿ ಕೈಮುಗಿದರು, "ಆ ಪರಶಿವನೇ ಅವರನ್ನು ನೋಡಿಕೊಳ್ತಾನೆ!"

***

## ಅಧ್ಯಾಯ –14

ಮಾಘಮಾಸಕ್ಕೆ ಲಗ್ನವಿದ್ದರೂ ಮಾಡುವ ಕೆಲಸಗಳು ಬೆಟ್ಟದಷ್ಟು. ದೊಡ್ಡಮನೆ ಲಗ್ನ, ಕೇಳಬೇಕೇ? ಕೆಲಸ ಕಾರ್ಯಗಳಿಗೆ ಹಲವಾರು ಮಂದಿಯ ಸಹಾಯಹಸ್ತ. ಸುಬ್ಬಪ್ಪಯ್ಯರಿಂದ ಉಪಕೃತರಾದವರು ನಿಮ್ಮ ಮಗಳ ಮದಿ ನಮ್ಮ ಮನೆ ಮದಿ ಇದ್ದಾಂಗೆ ಎಂದರು. ಹಪ್ಪಳ ಸಂಡಿಗೆ ತಯಾರಿಗೆ ಆಚೆ ಈಚೆಯ ಹೆಂಗಸರು ಕೈ ಜೋಡಿಸಿದರು. ಆರತಿ ಬತ್ತಿಯನ್ನು ನಾಲ್ಕು ಮಂದಿ ಕೆಲಸವಿಲ್ಲದ ಅಜ್ಜಮ್ಮಂದಿರು ಹಂಚಿಕೊಡರು. ಬಳೆಗಾರ ಸಣ್ಣಪ್ಪ ಬಳೆಗಳ ಕಟ್ಟು ಹೊತ್ತು ಊರೂರು ತಿರುಗುವವ. ಅವನಿಗೆ ಲಗ್ನದ ಎರಡು ದಿನಗಳ ಮುಂಚೆ ಹತ್ತಾರು ಬಣ್ಣದ ವಿವಿಧ ಅಳತೆಯ

ಬಳೆಗಳನ್ನು ತರಬೇಕೆಂದು, ಶಾರದೆ ಮತ್ತು ಲಗ್ನಕ್ಕೆ ಬಂದ ಎಲ್ಲ ಹೆಮ್ಮಕ್ಕಳಿಗೆ ಅವನೇ ಬಳೆ ತೊಡಿಸಬೇಕೆಂದು ಆಯಿ ಹೇಳಿ ಕಳುಹಿಸಿದಳು. ಗುಡಿಗಾರ ದೇವಣ್ಣನಿಗೆ ಕರೆ ಹೋಯಿತು. ಮದುಮಕ್ಕಳಿಗೆ ಬಾಸಿಂಗ ತಯಾರಿ, ಚಪ್ಪರ ಸಿಂಗಾರ, ಲಗ್ನ ಮಂಟಪದ ಅಲಂಕಾರ ಅವನದೇ. ದೇವಣ್ಣ ಸ್ವಲ್ಪ ನಿಧಾನಿ. "ಲಗ್ನದ ಎಂಟು ದಿನದ ಮೊದಲೇ ನಿನ್ನ ಕೆಲಸ ಮುಗಿಸಬೇಕು" ತಾಕೀತು ಮಾಡಿದರು ಸುಬ್ಬಪ್ಪಯ್ಯ. ಕಲಾಯಿ ಹಾಕುವ ಚಂದುವಿಗೆ ಸುಳಿವು ಸಿಕ್ಕಿ ತನ್ನ ಸರಂಜಾಮು ಹೊತ್ತು ಒಂದು ಬೆಳಿಗ್ಗೆ ಅಂಗಳದಲ್ಲಿ ಹಾಜರು. ಕಮಲಿ ಲಗ್ನದ ಸಂದರ್ಭದಲ್ಲಿ ದೊಡ್ಡ ದೊಡ್ಡ ಕೊಳಾಯಿ ತಪ್ಪಲೆಗಳಿಗೆ ಕಲಾಯಿ ಹಾಕಿದ್ದು. ಅವೆಲ್ಲ ಮತ್ತೊಮ್ಮೆ ಕಲಾಯಿಗಾಗಿ ಕೆಳಗಿಳಿದು ಬಂದು ಹಿಂದಿನ ಅಂಗಳದ ಮೂಲೆಗೆ ಕುಳಿತವು. ಚಂದುವಿನ ಉಮೇದು ನೋಡಬೇಕು. ಎರಡು ದಿನಗಳಲ್ಲಿ ಮುಗಿಯುವ ಕೆಲಸ ನಾಲ್ಕು ದಿನ ಮಾಡಿ ಕೈತುಂಬ ಹಣ, ಹೊಸ ಬಟ್ಟೆ ಪಡೆದು, ಲಗ್ನದ ಊಟಕ್ಕೆ ಬರುತ್ತೇನೆಂದು ಹೊರಟುಹೋದ. ವಾಲಗದವರು ಮುಂಜಿಗೆ, ಲಗ್ನಕ್ಕೆ ಎರಡೂದಿನ ಇರಬೇಕೆಂದು ಅಪ್ಪಯ್ಯನೇ ವೀಳ್ಯಕೊಟ್ಟು ಬಂದ. ಶಾರದೆಯ ಹಾಳತದ ಬಳೆ, ಸರ ಮೊದಲೇ ಮಾಡಿಸಿಯಾಗಿತ್ತು. ಸೀರೆ, ಜವಳಿ ಸಾಮಾನುಗಳ ಉದ್ದದ ಪಟ್ಟಿ ಬರೆದು ಅವನ್ನೂ ತಂದಾಯಿತು. ಗೌರಿ ನಾಣಿಯ ಇಷ್ಟದ ಬಟ್ಟೆಗಳು ಬಂದು ಹೊಲಿಸಿದ್ದೂ ಆಯ್ತು. ಮರೆತು ಹೋದದ್ದು ನೆನಪಿಗೆ ಬಂದಂತೆ ಮಾಡಿದ್ದಾಯ್ತು.

ಶಾರದೆಗೆ ಎರಡು ದಿನಕ್ಕೊಮ್ಮೆ ಪತ್ರ ಬರುತ್ತಿತ್ತು. ಅಂಚೆಯವನು ಅಂಚೆಪೆಟ್ಟಿಗೆಯ ಬೀಗ ತೆಗೆವ ಹೊತ್ತಿಗೆ ನಾಣಿ ಗೌರಿ ಹಾಜರು. ಹುಬ್ಬಳ್ಳಿ ಪತ್ರ ನೋಡಿದರೇ ತಿಳಿಯುತ್ತದೆ ಅದು ಶಾರದೆಗೇ ಬಂದದ್ದು ಎಂದು. ಇಬ್ಬರೂ ರೇಸಿನ ಕುದುರೆಯಂತೆ ಓಡಿಯೇ ತರುತ್ತಾರೆ. ಶಾರದೆ ಅವರ ಕಣ್ತಪ್ಪಿಸಿ ಪತ್ರಕ್ಕೆ ಮುತ್ತು ಕೊಟ್ಟು ಓದುವಾಗ ಗೌರಿ, ನಾಣಿಗೆ ಕುತೂಹಲ. "ತಮ್ಮಾ, ಪತ್ರದಲ್ಲಿ ಹುಬ್ಬಳ್ಳಿಮಾವ ಎಂತ ಬರೀತಾ? ಒಂದ್ಸಲ ನಾವೇ ಪತ್ರ ಹರಿದು ಓದ್ವನಾ?"

ಪತ್ರ ಓದಲಿಲ್ಲ. ಆದರೆ ಪ್ರತಿಸಲ ಅದನ್ನು ಅಂಚೆಯವನಿಂದ ತಂದು ಶಾರದತ್ತೆ ಕೈಗೆ ಕೊಡುವಾಗ ಆ ಮುಗ್ಧ ಬಾಲೆಯ ಮನಸ್ಸು, ದೇಹದಲ್ಲಿ ಮೃದು ಕಂಪನ. ಮರವನ್ನು ತಳಿರು ಬಳ್ಳಿ ಅಪ್ಪಿ ಹಿಡಿದಂತೆ. ಲಗ್ನಕ್ಕೆ ನಾಲ್ಕು ದಿನ ಮೊದಲೇ ಸೀತು ದೊಡ್ಡಪ್ಪ, ರಘುದೊಡ್ಡಪ್ಪನ ಸಂಸಾರ ಪೂರಾ ಬಂದದ್ದು ಎಲ್ಲರಿಗೂ ಸಮಾಧಾನ.ಈ ತಲೆಮಾರಿನ ಕೊನೆಯ ಲಗ್ನ. ಹಳೆ ಸಿಟ್ಟು, ದ್ವೇಷ ಮರೆತು ಅವರೆಲ್ಲ ಒಂದೇ ಮನೆಯಂತೆ ಪ್ರೀತಿಯಲ್ಲಿ ಒಂದಾಗಿದ್ದರು. ಸುಬ್ಬಪ್ಪಯ್ಯ ಕೇಳದಿದ್ದರೂ ತಂಗಿಯ ಮದುವೆಗೆ ಧನ ಸಹಾಯ ಕೊಟ್ಟರು ತಮ್ಮ ಹಳೆ ಋಣಕ್ಕೆ ಸಂದಾಯ ಎನ್ನುವಂತೆ! ಸುಬ್ಬಪ್ಪಯ್ಯ ತೆಗೆದುಕೊಳ್ಳಲಿಲ್ಲ. ತಮ್ಮ ಕೊನೆ ಮಗಳ ಮದುವೆ. ತಾವೇ ಮಾಡಬೇಕಾದ್ದು

ಧರ್ಮ ಎಂದರು. ಅಪ್ಪನ ಅಂತಃಕರಣದ ಮುಂದೆ ಚಿಕ್ಕವರಾದರು ರಘು ದೊಡ್ಡಪ್ಪ, ಸೀತೂ ದೊಡ್ಡಪ್ಪ. ಸುನಂದೆ ಗೌರಿಗಾಗಿ ಮೂರು ನಿರಿಗೆಗಳ ಅಂಗಿ, ಬೂಟು, ಚಪ್ಪಲಿ, ಕೈಗೊಂದು ಹೊಸ ವಾಚು ತಂದಿದ್ದಳು. ನಾಣಿಗೂ ವಾಚು ಉಡುಗೊರೆ ಮಾಡಿದ್ದ ಸೀತೂದೊಡ್ಡಪ್ಪ. ಆಯಿ ಗೌರಿ ಕಿವಿಯಲ್ಲಿ ಪಿಸುಗುಟ್ಟಿದಳು,

"ಇದೇ ಮನೆಯಲ್ಲಿ ಆವತ್ತು ಪಾತ್ರೆ ಪಗಡಿಗಳು ಬಡಿದಾಡಿ ಸದ್ದು ಮಾಡಿ. ಆಸ್ತಿ ಪಾಸ್ತಿ, ಹಣ, ಚಿನ್ನಕ್ಕೆ ಕಾಲು ಕೆದರಿ ಜಗಳ ತೆಗೆದ ನಿನ್ನ ದೊಡ್ಡಪ್ಪಂದಿರು, ದೊಡ್ಡಮ್ಮರು ಇವರೇನಾ? ಹೇಂಗೆ ಬದಲಾವಣೆ! ಸಂಬಂಧ ಮುರಿಯೂದ ಬ್ಯಾಡಾ ಅಂದ್ಕಂಡ ನಿನ್ನ ಅಪ್ಪಯ್ಯನೇ ಅವರಲ್ಲಿ ಹೋಕ್ ಬರ್ಕ್ ಇಟ್ಕಂಡಿದ್ದರು. ಈಗ ಹೇಗೆ ಬದಲಾಗಿದ್ದಾರೆ! ನಂಬೂದು ಕಷ್ಟ!"

ಹೆಚ್ಚಿನ ನೆಂಟರಿಷ್ಟರು ಬಂದದ್ದು ನಾಣಿಯ ಮುಂಜಿ ದಿನ ಮಧ್ಯಾಹ್ನದ ಹೊತ್ತಿಗೆ. ಚಕ್ರೀ ಅಮ್ಮಮ್ಮ ಅಜ್ಜಯ್ಯ ಉಳಿದವರೆಲ್ಲ ಮುಂಜಿ ಹಿಂದಿನ ದಿನ ದೊಡ್ಡ ದೋಣಿಯಲ್ಲಿ ಬಂದಿಳಿದರು. ಅಮ್ಮನನ್ನು ಕಂಡದ್ದೆ ಗೌರಿ ನಾಣಿಗೆ ರೆಕ್ಕೆ ಬಂದಂತೆ. ಆ ವೇಳೆಗೆ ಗುಡಿಗಾರು ದೇವಣ್ಣ ಲಗ್ನಮಂಟಪದ ಕೊನೆ ತಯಾರಿಯಲ್ಲಿದ್ದ. "ಅಮ್ಮಮ್ಮ, ಮಂಟಪಕ್ಕೆ ಕಾಗದದ ಹೂ ಅಂಟಿಸಿದ್ದು ನಾನು" ನಾಣಿ ಹೇಳುವಾಗ, "ಎಲ್ಲೋ ನಾಲ್ಕು ಹೂ ಅಂಟಿಸಿದ್ದ. ಅವು ಕಿತ್ತು ದೇವಣ್ಣ ಬೇರೆ ಅಂಟಿಸಿದ್ದು ಇವಂಗೆ ತಿಳಿಲೇಇಲ್ಲೆ." ಗೌರಿ ಅಮ್ಮಮ್ಮನಿಗೆ ದೂರು ಕೊಟ್ಟಳು. ರಾಶಿ ಹಪ್ಪಳ ಸಂಡಿಗೆ ಮಾಡುವಾಗ ಎಲ್ಲರೂ ಅಮ್ಮಮ್ಮನನ್ನು ನೆನಪಿಸಿದ್ದು, ದೀಪಗಳನ್ನು ಉರಿಸಿ ಇಡಲು ಅಕ್ಕಿಹಿಟ್ಟಿನಿಂದ ತರೆವಾರು ಮುಕುಟಗಳನ್ನು ತಾನೇ ಮಾಡಿದ್ದು, ಹಸೆ ಹಾಡು, ಆರತಿ ಹಾಡು, ಬಾಗಿಲು ತಡೆವ ಹಾಡು ಒಂದೆರಡಲ್ಲ ಆಯಿ ಜೊತೆ ಕಲಿತದ್ದು ಹೇಳಿ ಜಂಭ ಪಟ್ಟಳು. ಮುಂಜಿಯಲ್ಲಿ ನಾಣಿ ಹೊಸ ಬಟ್ಟೆ ಉಡುವುದಕ್ಕೆ ಅಭ್ಯಾಸ ಮಾಡುವಾಗ ಅದು ಜಾರಿ ಥ್ಸೂ ನಾಚಿಕೆ, ನಕ್ಕಳು. ಹಾಗೆ ನಗುವಾಗ ಶಾರದತ್ತೆ ಕೈಗೆ ಹುಬ್ಬಳ್ಳಿಯವ ಮುತ್ತು ಕೊಟ್ಟದ್ದು ಅಮ್ಮಮ್ಮನ ಬಳಿ ಚಾಡಿ ಹೇಳಿ, ಅವಳಿಗೂ ನಗು ಬಂದು, "ನೀ ದೊಡ್ಡ ಆಗು! ಎಲ್ಲ ಗುಟ್ಟು ತೆಳಿಗು" ಎಂದಳು ಪ್ರೀತಿಯಲ್ಲಿ. ಹುಡುಗ ಬುದ್ಧಿ, ಸಣ್ಣ ಸಣ್ಣ ಸಂಗತಿಯೂ ಏನು ಸಂಭ್ರಮ!

ಲಗ್ನಕ್ಕೆ ಬಾರದವಳು ಸುಶೀಲ ಚಿಕ್ಕಿ ಒಬ್ಬಳೇ. ನಾಲ್ಕಾರು ದಿನ ರಜೆ ತೆಗೆಯಲು ಕಷ್ಟ, ಹುಬ್ಬಳ್ಳಿಗೆ ಗೃಹಪ್ರವೇಶಕ್ಕೆ ಬರುತ್ತೇನೆಂದು ಪತ್ರ ಬಂದಿತ್ತು. ಅದೇ ಪತ್ರದಲ್ಲಿ ಹೊಸ ಸುದ್ದಿಯಿತ್ತು. ಅದು ಗೌರಿಯ ಕಲಿಕೆಯ ಬಗ್ಗೆ. ಸುಶೀಲಚಿಕ್ಕಿ ಸಿರ್ಸಿ ಸರಕಾರಿ ಶಾಲೆಯಲ್ಲಿ ವಿಚಾರಿಸಿದ್ದಾಳೆ. ಒಂದು ಸಾಮಾನ್ಯ ಪರೀಕ್ಷೆ ಕಟ್ಟಿ ಪಾಸಾದರೆ ಅರ್ಹತೆ ಆಧಾರದಲ್ಲಿ ಗೌರಿಗೆ ಆರನೇ ಕ್ಲಾಸಿಗೆ ಸೇರಬಹುದಂತೆ. ಎರಡು ವರ್ಷ ತಾನು ಈ

ಮನೆ ಉಪ್ಪು ತಿಂದವಳು. ಮೊದಲು ಆರನೇ ಕ್ಲಾಸಿಗೆ ಸೇರಿ ಮೆಟ್ರಿಕ್ ಮುಗಿಸಲಿ. ಆಮೇಲೆ ಮುಂದಿನ ಯೋಚನೆ. ಅದಕ್ಕೆ ಬೇಕಾದ ನಿಯಮಗಳ ಅರ್ಜಿ ಕಾಗದ ರಘು ದೊಡ್ಡಪ್ಪನ ಕೈಲಿ ಕಳಿಸಿದ್ದಾಳೆ. "ಗೌರಿ, ಅವಕಾಶ ಬಂದಾಗ ಬಿಡೂಕಾಗ. ಕಳೆದ ಕಾಲ ಮತ್ತೆ ಬೇಕೂ ಅಂದ್ರೂ ಬತ್ತಿಲ್ಲೆ. ಆಯಿ ಅಪ್ಪಯ್ಯನನ್ನು ನಾ ಒಪ್ಪಿಸ್ತೆ" ಹುರಿದುಂಬಿಸಿದ್ದಳು ತನ್ನ ಪತ್ರದಲ್ಲಿ. "ಹುಬ್ಬಳ್ಳಿಗೆ ದಿಬ್ಬಣ ಹೊರಡುವಾಗ ನಿನ್ನ ಬಟ್ಟೆಬರೆ, ಬೇಕಾದ ಸಾಮಾನು ಕಟ್ಟಿ ಬೇರೆ ಚೀಲದಲ್ಲಿ ತಕ್ಕೊಂಡು ಬಾ. ನಾವು ಅಲ್ಲಿಂದಲೇ ಸಿರ್ಸಿಗೆ. ಶಾಲೆ ಬ್ಯಾಡ, ಬೇಜಾರು ಅಂದ್ರೆ ನಾನೇ ಹೊಳೆಬಾಗಿಲಿಗೆ ಹೊತ್ತು ಹಾಕ್ತೆ. ಮದಿ ಮಾಡ್ಕಂಡು ಮಕ್ಕಳು ಮರಿ ಹೆತ್ತು, ಅಲ್ಲೇ ಇರು. ನಂಗೆಂತ ಲಾಭ ಇಲ್ಲೆ. ನೆನಪಿಟ್ಕಾ, ಕಳೆದ ಕಾಲ ಮತ್ತೆ ಬತ್ತಿಲ್ಲೆ. ನೀನು ಓದಿ ಎಂತಾದರೂ ಸಾಧನೆ ಮಾಡೆಕ್ಕು"

ಉತ್ಸಾಹ ತುಂಬುವ ಬರಹ. ಗೌರಿಗೂ ಸರಿ ಎನಿಸಿದೆ. ಸುನಂದೆಯನ್ನು ಕಂಡ ನಂತರ ಅವಳ ಮನಸ್ಸು ವಾಲಿದೆ. ತಾನೂ ಅವಳಂತೆ ಆಗಬೇಕು. ಗೌರಿ ಆಯಿಗೆ ಸುಶೀಲ ಚಿಕ್ಕಿ ಪತ್ರ ತೋರಿಸಿ, "ನಾ ಹೋಗಲಾ ಸಿರ್ಸಿಗೆ?" ಕೇಳಿದಳು.

ಲಗ್ನದ ತಯಾರಿಯಲ್ಲಿ ಆಯಿಗೆ ತಲೆ ಬಾಚಲು ಸಮಯವಿಲ್ಲ. ಮಾತು ಹಾರಿಸಿಬಿಟ್ಟಳು. ಚಕ್ರಿ ಅಮ್ಮಮ್ಮನಿಗೆ ವಿಷಯ ತಿಳಿದು, "ನಿನ್ನ ಆಯಿಯನ್ನು ನಾ ಒಪ್ಪಿಸ್ತೆ. ಸುಶೀಲಚಿಕ್ಕಿ ಸಂಗಡ ಹೋಗು. ಅವಳಿದ್ದ ಜಾಗ ಗಾಂಧೀಜಿಯ ಸೇವಾಶ್ರಮ. ಹೆಣ್ಣುಮಕ್ಳೊಗೆ ಲಾಯಕ್ಕಾದ ತರಬೇತಿ ಸಿಕ್ತು. ಹೊಸನೀರು ಕುಡ್ದ ನೋಡು!"

ವ್ಯವಹಾರಸ್ಥೆ ಚಕ್ರಿ ಅಮ್ಮಮ್ಮ ಸರಿಯಾಗೇ ಹೇಳಿದ್ದು. ಗೌರಿ ಆ ಕ್ಷಣವೇ ತನ್ನ ಹಳೆ ಹೊಸ ಬಟ್ಟೆಗಳನ್ನು, ಪಿಳಿಪಿಳಿ ಗೊಂಬೆಯಿದ್ದ ಪೆಟ್ಟಿಗೆಯನ್ನು ಜೋಡಿಸಿಟ್ಟಳು. ಅಟ್ಟದಲ್ಲಿ ತಾನೇ ಬಿಡಿಸಿಟ್ಟ ಚಿತ್ರಗಳನ್ನೂ ತೆಗೆದು ಚೀಲಕ್ಕೆ ತುರುಕಿದಳು. ಇಷ್ಟು ತಯಾರಿ ಸಾಕು. ಆ ಉತ್ಸಾಹದಲ್ಲಿ ಆಯಿ ಬೇಡವೇ ಅಂದ್ರೆ? ನಾಣಿ ಹಠ ಮಾಡಿದರೆ? ತಲೆ ಕೆದರಿತು.

ಬಹಳ ಗೌಜಿನಲ್ಲಿ ನಡೆಯಿತು ನಾಣಿಯ ಮುಂಜಿ, ಶಾರದತ್ತೆಯ ಲಗ್ನ. ಆ ನಿಮಿತ್ತ ನಾಲ್ಕು ದಿನಗಳ ಗೌಜಿನ ಕಾರ್ಯಕಲಾಪ. ವಾರದ ನಂತರ ಹುಬ್ಬಳ್ಳಿಯಲ್ಲಿ ಗೃಹಪ್ರವೇಶ. ನೂಲುಸರ ಕೊಟ್ಟರೂ ಸಾಕು ಎಂದಿದ್ದರು ವಿನಾಯಕ ಶರ್ಮರು. ಅಜ್ಜಮ್ಮ ಮಗಳಿಗೆ ಎರಡೆಳೆ ಸರ, ಕೈಗೆ ನಾಲ್ಕು ಬಳೆ, ತೋಳುಬಂದಿ, ಉಂಗುರ ಹಾಕಿದ್ದಳು. ಅಳಿಯನಿಗೆ ಎರಡೆಳೆ ಚೈನು, ಪಂಚಹರಳಿನ ಉಂಗುರ. ಬಳುವಳಿಯಾಗಿ ಎಲ್ಲವೂ ಬೆಳ್ಳಿಸಾಮಾನುಗಳೇ. "ನಿಮ್ಮ ಸರಳತನಕ್ಕೆ ನಾವು ಕೊಟ್ಟದ್ದು ಕಡಿಮೆಯೇ" ವಿನೀತನಾಗಿದ್ದರು ಸುಬ್ಬಪ್ಪಯ್ಯ. ವಿನಾಯಕ ಶರ್ಮರು ಸೊಸೆಗೆ ಕೊಟ್ಟದ್ದು ಕನಿಷ್ಟ ಹತ್ತು ತೊಲ ತೂಕದ ಆಭರಣಗಳನ್ನು. ಆಯಿ, ಅಜ್ಜಮ್ಮ ಮನದಲ್ಲೇ ಗುಣುಗಿದರು

"ನಮ್ಮಮ್ಮ ಶಾರದೆ! ಉಮಾಮಹೇಶ್ವರಿ!" ಮದುವೆ ಸಂಭ್ರಮದ ಉಳಿದ ಕಲಾಪಗಳು ಚೆನ್ನಾಗಿ ನಡೆದು ಭೋಜನವೂ ಕುಂದು ಕೊರತೆಯಿಲ್ಲದೆ ನೆರವೇರಿತು.

ಮದುಮಗ ಒಬ್ಬನನ್ನು ಇಲ್ಲಿ ಬಿಟ್ಟು ಉಳಿದ ದಿಬ್ಬಣದವರು, ಮದುವೆಗೆ ಬಂದ ಹೆಚ್ಚಿನ ಬಂಧು ಬಳಗ ಸಂತೃಪ್ತರಾಗಿ ಎರಡನೇ ದಿನ ಬೆಳಿಗ್ಗೆ "ಇನ್ನು ನಾವೆಲ್ಲರೂ ಹೊಳೆಬಾಗಿಲಿಗೆ ಗೌರಿ ಮದುವೆಗೆ ಸೇರೋಣ, ಬೇಗ ಆ ಪಾಯಸದ ಊಟ ಹಾಕ್ಸಿ" ಎಂದು ಹೊರಟು ಹೋದರು. ಆದರೂ ನಾಲ್ಕು ದಿನದ ಲಗ್ನದ ಉಳಿದ ಕಾರ್ಯಗಳು ಲೋಪವಿಲ್ಲದೆ ಆಗಬೇಕು. ಇನ್ನುಳಿದ ಗೌಜು, ಕೆಲಸ ಕಾರ್ಯದ ಹೊರೆ, ಹುಬ್ಬಳ್ಳಿ ಗೃಹಪ್ರವೇಶಕ್ಕೆ ಹೊರಡುವ ತಯಾರಿ, ಎಲ್ಲರೂ ಹೋದರೆ ಮನೆ ಪಾರಕ್ಕೆ ವ್ಯವಸ್ಥೆ ಆಗಬೇಕು, ಗುಡಿಗಾರ ದೇವಣ್ಣ ಮನೆ ಪಾರಕ್ಕೆ ಬರುವೆ, ದನ ಕರುಗಳನ್ನು ನೋಡಿಕೊಳ್ಳುವೆ ಎಂದಿದ್ದ. ಹೀಗೆಲ್ಲ ಆಯಿ ಅಪ್ಪಯ್ಯನಿಗೆ ಮಾತಿಗೆ ಪುರುಸೊತ್ತಿಲ್ಲ.

ಸ್ವಲ್ಪ ಬಿಡುವಾದಾಗ ಸುಶೀಲಚಿಕ್ಕಿ ಬರೆದ ಪತ್ರದ ವಿಷಯ  ನೆನಪಾಯಿತು. ಗೌರಿ ತೋರಿಸಿದ ಆ ಪತ್ರದಲ್ಲಿ, "ನಾ ಬೇಡದ್ದು ಹೇಳ್ತಿಲ್ಲೆ ಅಣ್ಣಯ್ಯ, ಈಗೆಲ್ಲ ಭಾಳ ಹೆಮ್ಮಕ್ಳೋಗೆ ಕಲಿವದೇ ಒಂದು ಗಿರ. ಅವಳು ಕಲಿಯಲಿ. ಅವಳು ಬರೆದ ನಾಯಿಮರಿ ಹಾಡನ್ನು ನಮ್ಮ ಹುಡುಗೀರು ದಿನಾ ಹಾಡುತ್ತಾವೆ. ಕುಣಿತಾವೆ. ಅವಳು ಕಳಿಸಿದ ಚಿತ್ರ ನೋಡಿ ಚಿತ್ರ ಗೀಚ್ತಾವೆ. ಸೈ, ಅಂತಾ ಪ್ರತಿಭೆ ಧೂಳು ಹಿಡಕಟೆ ಆಗೂಕಾಗ."ಎಂದು ಬರೆದದ್ದು ಆಯಿ ಅಪ್ಪಯ್ಯ ಯೋಚಿಸುವಂತೆ ಆದದ್ದು ನಿಜ.. ಸುಶೀಲಚಿಕ್ಕಿ ಪ್ರತಿ ಹೆಜ್ಜೆ ನೋಡಿ ಇಡುವವಳು. ಅವಳು ಪಟ್ಟು ಹಿಡಿದರೆ ಉಡದಂತೆ. ಸುಮ್ಮನೆ ಬಿಡುವವಳಲ್ಲ. ಅವಳೇ ಗೌರಿಗೆ ಓದಿನ ರುಚಿ ಹತ್ತಿಸಿದವಳು? ಶಾಲೆಗೆ ಹೋಗುವ ಕಲ್ಪನೆ ಚಿಗುರಿಸಿದ್ದು? ಅಜ್ಜಯ್ಯನ ಕೆಲವು ಹಳೆ ಪುಸ್ತಕಗಳು ಅಟ್ಟದಲ್ಲಿವೆ ಧೂಳು ತಿನ್ನುತ್ತ. ಅದರಿಂದ "ಇಗ್ಗುತಪ್ಪನ ವಿವಾಹ ಪ್ರಸಂಗ" ಓದಿ ಖುಶಿ ಪಟ್ಟ ಗೌರಿ ಶರಶ್ಚಂದ್ರರ "ವಿನೋದಿನಿ" ಓದಿ ಕಣ್ಣೀರು ಹಾಕಿದ್ದಳಲ್ಲ. ಆ ಕಥೆ ಆಯಿಗೂ ಹೇಳಿದ್ದಳು. ಅವರ ಬೇರೆ ಕಥೆಗಾಗಿ ಅಪ್ಪಯ್ಯನನ್ನು ದುಂಬಾಲು ಬಿದ್ದಿದ್ದು ಸುಳ್ಳಲ್ಲ. "ಓದು ಅವಳ ತಲೆ ಕೆಡಸ್ತು" ಅಜ್ಜಮ್ಮ ಎಷ್ಟು ಬಾರಿಹೇಳಿದ್ದಾಳೋ. ಆಯ್ತು, ಸುಶೀಲ ಹೇಳಿದಂತೆ  ಅವಳನ್ನು ಕಳುಹಿಸಿದರೆ ನಾಣಿ ಚಂಡಿ ಹಿಡಿಯುತ್ತಾನೆ. ಅವನನ್ನು ಬಿಟ್ಟು ಇದೂ ಒಬ್ಬಳೇ ಇರ್ತದಾ? ಸಂಶಯವೇ. ಒಂದೇ ಹೊಕ್ಕಳು ಬಳ್ಳಿಗಳು ಅವು. ಸಧ್ಯ ನಾಲ್ಕು ದಿನಕ್ಕೆ ಸಿರ್ಸಿಯಲ್ಲಿ ಇದ್ದು ಬರಲಿ.

ಆಯಿ ಅಪ್ಪಯ್ಯ ಈ ತೀರ್ಮಾನಕ್ಕೆ ಬಂದಮೇಲೆ ಹೊರಡುವ ತಯಾರಿ ಮೊದಲೇ ಮಾಡಿಟ್ಟು ಅರೆ ಬರೆ ಮನದಲ್ಲಿದ್ದ ಗೌರಿಯ ಕಲ್ಪನೆಗೆ ಮೂಡಿದವು ನೂರಾರು ಗರಿಗಳು. ನಾಣಿಗೂ ತಿಳಿಯಿತು ಅಕ್ಕ ಸಿರ್ಸಿಗೆ ಹೋಗುವ ಸಂಗತಿ. ಕೂಡಲೆ ತನ್ನ ಭೂಪಟ ಬಿಡಿಸಿ ಅದರಲ್ಲಿ ಸಿರ್ಸಿ ಎಲ್ಲಿದೆ, ಹುಬ್ಬಳ್ಳಿ ಎಲ್ಲಿದೆ ನೋಡಿದ. ಆ ಊರುಗಳ

ಹೆಸರಿನ ಮುಂದೆ ಕೆಂಪು ಗುರುತು! ದೊಡ್ಡ ಊರುಗಳೆಂದು ತಿಳಿವ ಗುರುತು. ಹೊಳೆಬಾಗಿಲಿನಿಂದ ಎಷ್ಟೋ ದೂರ. ಅಕ್ಕನ ಜೊತೆ ತಾನೂ ಹೋಗಬೇಕು, ಶಾಲೆಗೆ ಸೇರಬೇಕು. ಚಿಕ್ಕಿ ಗುಣ ತನಗೆ ಗೊತ್ತು, ಹೂಂ ಅಂದಾಳು. ಆದರೆ ಅಪ್ಪಯ್ಯ, ಆಯಿ, ಅಜ್ಜಯ್ಯ ಊಹೂಂ. "ಚಕ್ರಿ ಅಮ್ಮಮ್ಮನ ಮನೆಯಿಂದ ಶಾಲೆ ಬಿಟ್ಟು ನೀ ಒಬ್ನೇ ಓಡಿ ಬಂದದ್ದು ಸಾಕು. ಇವಳೂ ಸಿರ್ಸಿ ಶಾಲೆಗೆ ಕಲ್ಲು ಹೊತ್ತಾಕಿ ಬರ್ಲಿ.ಸುಮ್ನೆ ಕೂತ್ಕೋ" ಆದರೆ ಅಕ್ಕನಿಲ್ಲದೆ ನಾ ಹ್ಯಾಗೆ ಇಲ್ಲಿರಲಿ? ಗಂಟಲು ಕಟ್ಟಿ ಕಣ್ಣಿಂದ ದೊಡ್ಡ ಹನಿ ಬೀಳುತ್ತ, ಪಾಪ, ಗೌರಿ ತಬ್ಬಿದಳು ನಾಣಿಯನ್ನು,

"ಚಿಕ್ಕಿಗೆ ಬೇಜಾರು ಆಗದಾಂಗೆ ನಾಲ್ಕು ದಿನಕ್ಕೆ ಹೋಗಿ ಬತ್ತೆ ಪುಟ್ಟಾ, ನೀ ಇಲ್ಲದಿದ್ದರೆ ನಾಎಲ್ಲಿ ಅಲ್ಲಿರ್ತೆ? ಶಾಲೆಗೆ ಹೋಗ್ತಿಲ್ಲೆ. ಅಳ್ಬೇಡವೋ, ನೀ ಅತ್ತರೆ ನಂಗೂ ಅಳು ಬತ್ತು"

***

## ಅಧ್ಯಾಯ–15

ಹುಬ್ಬಳ್ಳಿಯ ವಿನಾಯಕ ಶರ್ಮರ ಮನೆಯಲ್ಲಿ ಅದ್ದೂರಿಯ ವಧೂ ಗೃಹಪ್ರವೇಶ ಸಮಾರಂಭ. ಅವರ ಕುಟುಂಬದವರು, ಬಂಧುಬಳಗ, ಊರ ಗಣ್ಯ ಮಹನೀಯರು, ವಿಷ್ಣುವಿನ ಗೆಳೆಯರು ಹೀಗೆ ಒಳ ಹೊರ ಚಪ್ಪರ ತುಂಬಿ ಹೋಗಿತ್ತು. ವಿನಾಯಕ ಶರ್ಮರು, ಅದಿತಿ ದೇವಿ ಅತಿಥಿಗಳನ್ನು ಖುದ್ದಾಗಿ ವಿಚಾರಿಸುತ್ತ ಸುಬ್ಬಪ್ಪಯ್ಯ, ರಾಮಪ್ಪಯ್ಯನವರಿಗೂ ಪರಿಚಯಿಸುತ್ತಿದ್ದರು. ಸುಸಂಸ್ಕೃತ ಕುಟುಂಬ. ಮಾತಿನಲ್ಲಿ ವಿನಯ, ಸಜ್ಜನಿಕೆ, ಸರಳತೆಯ ವಾತಾವರಣ. ಶೃಂಗರಿಸಿದ ಹೊರ ಚಪ್ಪರ, ಅಲಂಕಾರ ನೋಡಿದಷ್ಟೂ ಸಾಲದು. ಗುಡಿಗಾರ ದೇವಣ್ಣನನ್ನೂ ಮೀರಿಸಿದ ಬಣ್ಣ ಬಣ್ಣದ ಅಲಂಕಾರ. ಅಲ್ಲಲ್ಲಿ ಹಗಲಿನ ಸೂರ್ಯನನ್ನೂ ನಾಚಿಸುವ ವಿದ್ಯುದ್ದೀಪದ ಬೆಳಕು. ಹೊಳೆಬಾಗಿಲಿನ ಅನೇಕರು ವಿದ್ಯುದ್ದೀಪ ನೋಡಿದ್ದು ಹುಬ್ಬಳ್ಳಿಯಲ್ಲೇ.ಬೀದಿ ಬೀದಿಯನ್ನು ಬೆಳಗುವ ಈ ದೀಪ ಶರ್ಮರ ಮನೆಯಲ್ಲೂ ಬೆಳಗುತ್ತಿದೆ ಪ್ರತಿ ಕೋಣೆಯಲ್ಲಿ. ಗೌರಿ ನಾಣಿ ದಂಗಾಗಿದ್ದಾರೆ. ಚಿಮಣಿ ದೀಪದಂತೆ ನಸು ಬೆಳಕಲ್ಲ. ಝಗಮಗಿಸುವ ಬೆಳಕು. ಅಲ್ಲೊಂದು ಬಟನ್ ಒತ್ತಿದರೆ ಮೇಲೆ ಮಾಡಿಗೆ ಇಳಿಬಿಟ್ಟ ದೀಪ ಝಗ್! ಚಪ್ಪರದ ತುದಿಯಲ್ಲಿ ವಾದ್ಯಗಳ ಅಬ್ಬರ. ಇಂಗ್ಲೀಷ ಹಾಡಿಗೆ ರಾಗ ಹಾಕಿ ವಿವಿಧ ವಾದ್ಯಗಳನ್ನು ಬಾರಿಸುತ್ತಿದ್ದಾರೆ. ಕಿವಿಗೆ ಇಂಪೇ? ಇಲ್ಲ, ಕರ್ಕಶವಾಗಿ ಕೇಳುತ್ತಿದೆ. ಅವರ ಉಡುಪುಗಳೂ ಬ್ರಿಟಿಷ್‌ರ ಉಡುಪುಗಳ ತರಹವೇ. ಕೆಲವು ಬ್ರಿಟಿಷ್ ಅಧಿಕಾರಿಗಳೂ ಬಂದಿದ್ದಾರೆ.

ವಿಲಾಯತಿ ಪಾನೀಯದ ವ್ಯವಸ್ಥೆಯಿದೆ. ಆಚೆ ಈಚೆ ಸಮವಸ್ತ್ರ ಧರಿಸಿದ ಯುವಕರು ಬಂದ ಗಣ್ಯರಿಗೆ ಪಾನೀಯ ಹಂಚುತ್ತಿದ್ದಾರೆ. ದೊಡ್ಡ ಮನುಷ್ಯರು! ಮುತ್ತೈದೆಯರಿಗೆ ಅರಸಿನ ಕುಂಕುಮ, ಹೂವು, ರವಕೆ ಖಣ ಕೊಡುವ, ನೆರೆದವರಿಗೆ ಸಿಹಿ ತಿಂಡಿ ಹಂಚುವ, ಅದು ತನ್ನಿ, ಇದು ತನ್ನಿ, ಇತ್ತ ಬನ್ನಿ, ನಮಸ್ತೆ, ಥ್ಯಾಂಕ್ಯೂ, ಇತ್ಯಾದಿ ಸ್ವರ ಶಬ್ಧಗಳು ವಾದ್ಯದ ಅಬ್ಬರದಲ್ಲಿ ಕಳೆದುಹೋಗುತ್ತಿವೆ. ಏನೋ ಗಡಿಬಿಡಿ, ಉಲ್ಲಾಸದ ನಗು, ಹರ್ಷದ ಹೊನಲು. ಚಪ್ಪರದಲ್ಲಿ ಓಡಾಟ. ಶಾರದತ್ತೆಯ ಮನೆತುಂಬಿಸುವ ಕಾರ್ಯಕ್ರಮದ ನಂತರ ಹೊರ ಚಪ್ಪರದಲ್ಲಿ ಹಾಕಿದ ಸಿಂಹಾಸನದಂತೆ ಇರುವ ಖುರ್ಚಿಯಲ್ಲಿ ಮದುಮಕ್ಕಳನ್ನು ಕರೆ ತಂದು ಕುಳ್ಳಿರಿಸಲಾಯಿತು. ಆರತಕ್ಷತೆಯ ಹೊತ್ತು, ಗಣ್ಯರು ಆಶೀರ್ವದಿಸುವ ಕ್ಷಣಗಳು.

ಬಹಳ ಹೊತ್ತಿನಿಂದ ಶಾರದತ್ತೆಯ ಹಿಂದೆ ಕುಳಿತು ಗೃಹಪ್ರವೇಶದ ಕಾರ್ಯಕಲಾಪ ನೋಡುತ್ತಿದ್ದ ಗೌರಿ ಉದಾಸೀನದಿಂದ ಆಕಳಿಕೆ ತೆಗೆದು ನಾಣಿಯನ್ನು ಹುಡುಕುತ್ತ ಚಪ್ಪರಕ್ಕೆ ಬಂದಳು. ಅದಾವಾಗಲೋ ನಾಣಿ ಚಪ್ಪರದ ದೀಪಾಲಂಕಾರ ನೋಡಲು ಎದ್ದು ಹೋಗಿಯಾಗಿತ್ತು. ಆಯಿ, ಅಪ್ಪಯ್ಯ ನಿನ್ನೆ ರಾತ್ರೆಯೇ “ಗೌರಿ, ಇದು ದೊಡ್ಡ ಶಹರು. ಹೊಳೆಬಾಗಿಲಿನ ಹಾಗಲ್ಲ. ಈ ಮನೆಯ ಅಂಗಳದ ಗೇಟು ದಾಟಿ ಹೊರ ನಡೆದರೆ ಮತ್ತೆ ಹಿಂದೆ ಬರೂಕೆ ದಾರಿ ಸಿಕ್ಕ. ನಾಣೀನ್ನ ಕೈ ಬಿಡದೆ ಗನಾ ಜ್ವಾಪ್ಯಾ ಇಟ್ಕಾ.” ಎಂದಿದ್ದರು. ನಿಜವೇ, ನಿನ್ನೆ ಹೊಳೆಬಾಗಿಲಿನಿಂದ ಹೊರಟ ವಧುವಿನ ದಿಬ್ಬಣ ಹುಬ್ಬಳ್ಳಿಗೆ ಬರುವಾಗ ರಾತ್ರೆಯಾಗಿದ್ದರೂ ವಿಷ್ಣು ಶರ್ಮರ ಮನೆ ಎದುರಿನ ಡಾಂಬರು ರಸ್ತೆಯಲ್ಲಿ ರಸ್ತೆ ದೀಪದ ಬೆಳಕಿತ್ತು. ಜನರ ತಿರುಗಾಟ, ಕುದುರೆ ಗಾಡಿಗಳ ಓಡಾಟವಿತ್ತು. ಹಗಲು ಹೊತ್ತಿನಲ್ಲಿ ಮತ್ತೆ ಕೇಳಬೇಕೇ? ಆಗಲೇ ಗೃಹಪ್ರವೇಶಕ್ಕೆ ಬಂದ ಸುಶೀಲಚಿಕ್ಕಿ ನಾಣಿಗೆ ಮಾತ್ರವಲ್ಲ, ಗೌರಿಗೂ ಎಚ್ಚರಿಗೆ ಕೊಟ್ಟಿದ್ದಳು. ಹಳ್ಳಿ ಮಕ್ಕಳು. ಶಹರಿನ ರೀತಿ ರಿವಾಜು ಅರಿಯದವರು, ತುಂಟ ನಾಣಿ ಎಲ್ಲಿ ಕೇಳುತ್ತಾನೆ? ಅವನನ್ನು ಹಿಡಿಯುವುದೇ ಕಷ್ಟ

ಗೌರಿ ಅವನನ್ನು ಹುಡುಕುತ್ತ ಚಪ್ಪರಕ್ಕೆ ಬಂದಳು. ಅತಿಥಿ, ಅಭ್ಯಾಗತರಿಂದ ತುಂಬಿದ ಆ ಜನಸಾಗರದಲ್ಲಿ ನಾಣಿ ಕಾಣಿಸಲಿಲ್ಲ. ಅಂಗಳದ ಗೇಟಿನ ತನಕ ಬಂದು ಕಣ್ಣಾಡಿಸಿದಳು, ವಿದೇಶಿ ವಾದ್ಯ ನುಡಿಸುವವರ ಹಿಂದೆ ಮುಂದೆ ತಿರುಗಿದಳು. ಪಾನಕ ಹಂಚುವ ಜಾಗದತ್ತ ಓಡಿದಳು. ಊಹೂಂ, ಆಚೆ ಬದಿಗೆ ಮಧ್ಯಾನ್ಹದ ಬಫೆಗಾಗಿ ಟೇಬಲ್, ಖುರ್ಚಿ ಇಡುತ್ತಿದ್ದ ಪರಿಚಾರಕರತ್ತ ನುಸುಳಿದಳು. ನಾಣಿಯ ತಲೆ ಕಾಣದೆ ಮೈ ಕಂಪಿಸುವ ಹೊತ್ತಿಗೆ ಅತ್ತ ಮಹಡಿ ಮೆಟ್ಟಲುಗಳು ಕಾಣಿಸದವು. ನಿನ್ನೆ ರಾತ್ರೆ ಹೊಳೆಬಾಗಿಲಿನ ಬೀಗರಿಗೆ ಆ ಮಹಡಿಯ ಎರಡು ಕೋಣೆಗಳಲ್ಲಿ ಉಳಿಯುವ ವ್ಯವಸ್ಥೆ ಆಗಿತ್ತು. ನಾಣಿ ಅಲ್ಲಿಯೇ ಇರಬಹುದೆಂದು ಗೌರಿ ಮಹಡಿ ಏರಿದಳು.

ಅಲ್ಲಿ ಹೋಗಿ ನೋಡಿದರೆ ಅವರಿಗೆ ಮೀಸಲಾದ ಎರಡೂ ಕೋಣೆಗಳಿಗೆ ಬೀಗ! ಅದರ ನೇರ ಎದುರು ಭಾಗದ ಕೋಣೆ ಅರ್ಧ ತೆರೆದಿತ್ತು. ಗೌರಿ ಹೆಜ್ಜೆ ಅತ್ತ ಹೋಯಿತು. ಅರ್ಧ ತೆರೆದ ಬಾಗಿಲನ್ನು ಪೂರ್ಣ ತೆರೆದಾಗ ತಿಳಿಯಿತು ಅದೊಂದು ಪುಸ್ತಕ ಭಂಡಾರದ ಕೋಣೆ! ನಾಲ್ಕಾರು ಕನ್ನಡಿ ಕಪಾಟುಗಳ ತುಂಬ ಹೊಟ್ಟೆ ಬಿರಿದಂತೆ ಕನ್ನಡ ಇಂಗ್ಲೀಷ್, ಸಂಸ್ಕೃತ ಇನ್ನೂ ಬೇರೆ ಬೇರೆ ಭಾಷೆಗಳ ಪುಸ್ತಕಗಳು. ಕನ್ನಡ ಪುಸ್ತಕಗಳಲ್ಲಿ ಈಗಾಗಲೆ ಓದಿದ ಇಗ್ಗುತ್ತಪ್ಪನ ವಿವಾಹಪ್ರಸಂಗ, ವಿನೋದಿನಿ ಇದ್ದವು. ಬಂಗಾಲಿ ಅನುವಾದಿತ ದಪ್ಪ ಕೃತಿಗಳು, ಬಿಡಿಸಿ ನೋಡೋಣವೆಂದರೆ ಕಪಾಟಿಗೆ ಬೀಗ. ಒಂದು ಹಳೆಗನ್ನಡದ ಹಳೆ ಪುಸ್ತಕ, ಅರ್ಥವಾಗದ ಕಬ್ಬಿಣದ ಕಡಲೆಯೇ ಸರಿ. ಮೇಜಿನ ಮೇಲೆ ಸ್ವರಾಜ್ಯ, ದೀನಬಂಧು, ಸ್ವಾತಂತ್ರ್ಯವಾಣಿ, ಹರಿಜನ ಪತ್ರಿಕೆ ಇತ್ಯಾದಿ ಹಲವು ಕನ್ನಡ ಪತ್ರಿಕೆಗಳು. ಹಾರುವ ಚಿಟ್ಟೆಯಂತೆ ಇವಳು ಕಪಾಟನ್ನು,ಪತ್ರಿಕೆಗಳನ್ನು ಮೆಲ್ಲನೆ ಸ್ಪರ್ಶಿಸಿದಳು. ಏನೋ ಪುಳಕ. ಇವತ್ತು ಸೇರಿದ ಜನರಲ್ಲಿ ಹಲವರು ವಿಮಾನ ಏರಿದ ನೇತಾಜಿ ಸುಭಾಷಚಂದ್ರ ಭೋಸರು ಕಾಣೆ ಆದರಂತೆ, ಗಾಂಧೀಜಿಯ ಅಹಿಂಸಾ ವ್ರತ, ಸತ್ಯಾಗ್ರಹದಿಂದ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಗುವುದು ದೂರವಿಲ್ಲ, ಬ್ರಿಟಿಷ್‌ರು ಹಿಂದೂ ಮುಸ್ಲಿಂಭೇದ ಹುಟ್ಟಿಸಿ ವಿದ್ರೋಹಿ ಕೆಲಸ ಮಾಡಿಸಿ ಕತ್ತಿ ಮಸೆಯುತ್ತಿದ್ದಾರೆ ಹೀಗೆ ಸುದ್ದಿಯೇ ಸುದ್ದಿ. ಈ ಎಲ್ಲ ಸುದ್ದಿಗಳಿಗೆ ಹೊಳೆಬಾಗಿಲು ಮೌನ. ಸುದ್ದಿ ಆ ಕುದ್ರು ತನಕ ತಲುಪಿದರೆ ತಾನೇ ಮಾತುಗಳು. ತಾನೂ ಇಲ್ಲಿರುವ ಎಲ್ಲ ಪುಸ್ತಕ, ಪತ್ರಿಕೆ ಓದಿಹೆಚ್ಚು ಹೆಚ್ಚು ತಿಳಿದುಕೊಳ್ಳಬೇಕು. ಹೇಗೆ? ಯಾವಾಗ? ಇಲ್ಲವಾದರೆ ಏನೂ ಅರಿಯದ ಗುಗ್ಗು, ಬಾವಿಯೊಳಗಿನ ಕಪ್ಪೆಯಂತೆ. ಇದೇ ಅಜ್ಞಾನ ಎನ್ನುವುದು. ತನ್ನ ಪ್ರತಿಭೆ ಧೂಳು ಹಿಡಕಟೆ ಆಗೂಕಾಗ ಎಂದಳಲ್ಲ ಚಿಕ್ಕಿ?ಕೆಳಗೆ ಚಪ್ಪರದಲ್ಲಿ ಗೃಹಪ್ರವೇಶದ ಸಮಾರಂಭಕ್ಕೂ ತನಗೂ ಸಂಬಂಧ ಇಲ್ಲ ಎನ್ನುವಂತೆ ಗೌರಿ ಅಲ್ಲಿರುವ ಒಂದು ಕನ್ನಡ ಪತ್ರಿಕೆ ಕೈಗೆತ್ತಿಕೊಂಡಳು. ಪುಟ ತಿರುಗಿಸುತ್ತ..., ತಾನು ನಾಣಿಯನ್ನು ಹುಡುಕುತ್ತ ಬಂದದ್ದು ಮರೆತು ಹೋಯಿತಾ.

ಅಷ್ಟು ಹೊತ್ತಿಗೆ ಇನ್ನೊಂದು ಕೋಣೆಯಿಂದ ಮಕ್ಕಳ ಕೇಕೆ, ಅಟ್ಟಹಾಸ ಕೆಳಗೆ ವಾದ್ಯವೃಂದದ ಅಬ್ಬರವನ್ನೂ ಮೀರಿಸಿ ಕೇಳಿಸಿತು. ಹೋ, ಏನಪ್ಪ ಇಷ್ಟು ಸಂತೋಷ? ಗೌರಿ ಕುತೂಹಲದಿಂದ ಆ ಕೋಣೆಗೆ ನಡೆದು ಬಾಗಿಲಲ್ಲಿ ಇಣುಕಿದರೆ ನಾಣಿಯದೇ ಪ್ರಾಯದ ಅಂಗಿ ಚಡ್ಡಿ ಹಾಕಿದ ಒಬ್ಬ ಸಣ್ಣ ಹುಡುಗನನ್ನು ನಾಲ್ಕಾರು ದೊಡ್ಡ ಮಕ್ಕಳು ಅಟ್ಟಾಡಿಸುತ್ತಿದ್ದಾರೆ. ಒಬ್ಬನ ಕೈಯ್ಯಲ್ಲಿ ಬೆಳಗಿನ ಉಪಹಾರಕ್ಕೆ ಮಾಡಿದ ಸಿಹಿ, ಖಾರದ ತಿಂಡಿ ತುಂಬಿದ ತಟ್ಟೆ, ಅದನ್ನು ಹುಡುಗನ ಮುಂದೆ ಹಿಡಿಯುವುದು, ಅವನು ಆಸೆಯಿಂದ ತಟ್ಟೆಗೆ ಕೈ ಚಾಚುವಾಗ ಎಳೆದು ದೂರ ಸರಿದು ಎಲ್ಲರೂ ಚಪ್ಪಾಳೆ ತಟ್ಟುವುದು. ಆತ ಚಪ್ಪಾಳೆ ಸ್ವರ ಬಂದ ದಿಕ್ಕಿಗೆ ಹೊರಳಿ ತನ್ನೆರಡೂ ಕೈಚಾಚಿ ಧಾವಿಸುವುದು, ಆಗ

ಖುರ್ಚಿಗೆ ಡಿಕ್ಕಿ, ಅಥವಾ ಒಬ್ಬ ತನ್ನ ಕಾಲು ಅಡ್ಡ ಹಾಕಿ ಬೀಳಿಸುವುದು. ಹೋ ಹೋ ಖುಷಿಯ ಕೇಕೆ. ಬಿದ್ದವನು ಏಳುವಾಗ ಬಾಯಿ ಮುಂದೆತಿಂಡಿತಟ್ಟೆ, ಪರಿಮಳಕ್ಕೆ ಜೊಲ್ಲು ಸುರಿಯಬೇಕು. ಮತ್ತೆ ತಿಂಡಿ ತಟ್ಟೆ ಹಿಡಿಯುವ, ಓಡುವ, ಓಡಿಸುವ ಆಟ! ಹೌದು, ಇದು ಮಕ್ಕಳ ಕಣ್ಣುಮುಚ್ಚಾಲೆ ಆಟ. ಖುಷ್ ಖುಷಿಯಾಗಿ ಆಡುತ್ತಿದ್ದಾರೆ. ನಾಣಿ ಇಲ್ಲೇ ಇರಬೇಕು. ಈ ತರಹದ ಆಟ ಅವನಿಗೆ ಇಷ್ಟವೇ. ತಾನೂ ಆಟದಲ್ಲಿ ಸೇರಿಕೊಳ್ಳಲು ಗೌರಿ ಎರಡು ಹೆಜ್ಜೆ ಮುಂದಿಟ್ಟಳು. ಆದರೆ ಆ ಸಣ್ಣ ಹುಡುಗನ ಕಣ್ಣಿಗೆ ಪಟ್ಟಿ ಕಟ್ಟಿಲ್ಲ. ಪೂರ್ಣ ಕಣ್ಣು ತೆರೆದಿದೆ! ಕಣ್ಣ ಗೊಂಬೆಗಳು ಸ್ವರ ಬಂದತ್ತ ಹೊರಳಿ, ಎಲ್ಲಿ ಇದ್ದಾರೆಂಬ ಊಹೆಯಲ್ಲಿ ಅವರ ಚಪ್ಪಾಳೆಗೆ ಹೆಡ್ಡನಂತೆ ನಗುತ್ತ ತಿಂಡಿಗೆ ಕೈ ಚಾಚಿ. ಅಯ್ಯೋ,ಇದೆಂತ ಆಟ? ಅರ್ಥವಾಗಿ ಹೋಯಿತು ಗೌರಿಗೆ, ಆ ಹುಡುಗ ಕುರುಡ! ಕಣ್ಣಿಲ್ಲದವ! ಈ ಸುಂದರ ಜಗತ್ತನ್ನು ನೋಡಲಾರದವ. ಇದೂ ಒಂದು ಆಟವೇ?

ಮುಂದಿಟ್ಟ ಹೆಜ್ಜೆ ಹಿಂದೆ ಸರಿಸಿದ ಗೌರಿಯ ಸಿಟ್ಟು ನೆತ್ತಿಗೇರಿತು. ಮೂಲೆಯಲ್ಲಿ ಅಜ್ಜಂದಿರು ಉಪಯೋಗಿಸುವ ಹಿಡಿಯುಳ್ಳ ದೊಣ್ಣೆ ಕಾಣಿಸಿತು. ಅದನ್ನು ಎತ್ತಿಕೊಂಡವಳೆ, "ನಿಲ್ಲಿಸಿ, ಒಬ್ಬ ಕುರುಡನಿಗೆ ಹೀಂಗಾ ಹಿಂಸೆ ಕೊಟ್ಟು ಮಜಾ ಕಾಂಬದು? ಕಣ್ಣಲ್ಲಿ ಪಸೆ ಇತ್ತಾ ನಿಮ್ಗೆ? ನಿಮ್ಗೂ ಬಾರ್ಸತೆ ಕಾಣಿ" ಆ ಸಣ್ಣ ಹುಡುಗನ ಕೈ ಹಿಡಿದು ದೊಡ್ಡಹುಡುಗನ ಕೈಯ್ಯಲ್ಲಿದ್ದ ತಿಂಡಿ ತಟ್ಟೆಯನ್ನು ದೊಣ್ಣೆ ತುದಿಯಿಂದ ಹಾರಿಸಿದಳು ಮೇಲಕ್ಕೆ. ತಟ್ಟೆ ಕೆಳಗೆ ಬಿದ್ದು ಸಿಹಿ ಖಾರ ಸುತ್ತಲೂ ಎರಚಿಹೋಯಿತು. ಒಂದು ಕ್ಷಣ ಸ್ಥಬ್ಧ. ಎಲ್ಲ ಗಂಡುಮಕ್ಕಳೂ ಹೊಸಬಳತ್ತ ಹೊರಳಿದರು. ಆಟ ಕೆಡಿಸಿದ ಸಿಟ್ಟು ಕುಣಿಯಿತು ಅವರ ಮುಖದಲ್ಲಿ. ಉದ್ದ ಪರಕರ, ಬಿಗಿಯಾಗಿ ಕಟ್ಟಿದ ಎರಡು ಜಡೆ. ಥಳಕು ಪಳಕು ಇಲ್ಲದ ಇವಳು ಈ ಮನೆಯ ಕೆಲಸದವರ ಮಗಳೇ ಹೌದು. ತಮ್ಮನ್ನು ಮುಟ್ಟುವ ಧೈರ್ಯವೇ? ಸೊಕ್ಕು, ಸೊಕ್ಕು ಮುರೀಬೇಕು. ಹುಡುಗರು ಒಟ್ಟಾದರು. "ಚೋಟುದ್ದ ಅದಿ, ನಮ್ಮನ್ನು ಕೇಳಾಕಿ ನೀ ಯಾರು? ಮದ್ವಿ ಮನ್ಯಾಗ ನಾವು ಏನಾರ ಮಾಡ್ತೀವಿ." ಒಬ್ಬ ಹುಡುಗ ಕೈ ಮುಷ್ಟಿ ಬಿಗಿದು ಮುಂದೆ ಬಂದ.

"ಅವನು ಕುರುಡ, ಕಾಂತಿಲ್ಯಾ ನಿಮಗೆ? ನೀವು ಕಣ್ಣು ಇದ್ರೂ ಕುರುಡರು. ಅವಂಗೆ ತಿಂಬ ಆಸೆ ತೋರ್ಸಿ"

"ನಿನಗೂ ಮಣ್ಣು ಮುಕ್ಸತೇವಿ. ನಮ್ಮನ್ನು ಹೆದರಿಸ್ತಿ ಏನ್? ಬನ್ರೋ, ನಾಲ್ಕು ತದಕೋಣ"

ಇನ್ನೊಬ್ಬ ಮಾತು ಮುಗಿಸುವ ಮೊದಲೇ ಎಲ್ಲರೂ ಒಟ್ಟಾಗಿ ಸೀದಾ ಅವಳ ಮೇಲೆ ಬಿದ್ದು ಮುಷ್ಟಿಯಿಂದ ಚಚ್ಚ ತೊಡಗಿದರು. ಕೆಳಗೆ ಬೀಳಿಸಿ ಕಾಲಿನಿಂದ ಒದೆ

ಹಾಕಿದರು. ಗೌರಿ ತಲೆ ಕೂದಲು ಕೆದರಿತು, ಪರಕರ ಹರಿಯಿತು, ಮುತ್ತಿಸರ ಕಡಿದು ಮುತ್ತುಗಳು ಚಲ್ಲಾಪಿಲ್ಲಿ. ಅದೇ ವೇಳೆಯಲ್ಲಿ,

"ಅಕ್ಕಾ, ಎಲ್ಲಿದ್ದೀ? ನೀ ಶಾರದತ್ತೆಗೆ ಆರತಿ ಎತ್ತೂಕೆ ಬರ್ಬೇಕಂತೆ, ಆಯಿ ಕರೀತ್ಲು" ಎನ್ನುತ್ತ ಮಹಡಿ ಹತ್ತಿ ಬಂದ ನಾಣಿ. ಅಲ್ಲಿ ಅಕ್ಕನನ್ನು ನಾಲ್ಕಾರು ಹುಡುಗರು ಹೊಡೆಯುವದ ಕಂಡವ ಬೆಚ್ಚಿ ನಿಂತು ಆಮೇಲೆ ರಿಂವನೆ ಕೆಳಗೋಡಿ ಆಯಿ ಕಿವಿಯಲ್ಲಿ ಉಸುರಿದ. ಅವಳು ಅಪ್ಪಯ್ಯನಿಗೆ ಹೇಳಿ ಅದನ್ನು ವಿನಾಯಕ ಶರ್ಮರು ಕೇಳಿ ಮತ್ತೊಂದು ನಿಮಿಷದಲ್ಲಿ ಹಲವರು ಮಹಡಿ ಏರಿ ಬಂದರು. ಹುಡುಗರನ್ನು ಗದರಿಸಿ ದೂರ ಸರಿಸಿದ ವಿನಾಯಕ ಶರ್ಮರು ಗೌರಿಯ ಕೈ ಹಿಡಿದು ಮೇಲೆಬ್ಬಿಸಿದರು. ನಡೆದ ವಿಷಯ ಅವಳಿಂದಲೇ ತಿಳಿದು ಅವರ ಮುಖದ ಬಣ್ಣ ಬದಲಾಗಿಹೋಯಿತು. ಆ ಮಕ್ಕಳು ಬೇರೆ ಯಾರೂ ಅಲ್ಲ, ಅವರ ಅಣ್ಣ ತಮ್ಮಂದಿರ ಮತ್ತು ಅವರದೇ ಮೊಮ್ಮಕ್ಕಳು. ಕುರುಡ ಹುಡುಗ ಅವರ ಸೋದರತ್ತೆಯ ಸಂಬಂಧಿ.ಮಕ್ಕಳು ಕೂಡಿ ಆಡಬೇಕು, ಸಂತೋಷ ಪಡಬೇಕು, ಒಗ್ಗಟ್ಟಲ್ಲಿ ಇರಬೇಕು ನಿಜ, ಆದರೆ ಹೀಗೆ ನಿಷ್ಪಾಪಿ ಕುರುಡನನ್ನು ಅಟ್ಟಾಡಿಸಿ ಹಿಂಸೆ ಕೊಟ್ಟು ಅವನ ನೋವು ಅಸಹಾಯಕತೆಗೆ ಆನಂದಿಸಿ ಮಜಾ ಮಾಡಿ ಆಡುವುದಲ್ಲ. ತಮ್ಮ ಮೊಮ್ಮಕ್ಕಳಿಂದ ತಾವು ಕನಸಿನಲ್ಲೂ ಯೋಚಿಸದ ಹಿಂಸೆ, ಕ್ರೌರ್ಯ. ಸಿಟ್ಟಿನಲ್ಲಿ ಎಲ್ಲರಿಗೂ ಎರಡು ತಪರಾಕಿ ಕೊಟ್ಟು, "ಈಕಿ ಬೀಗರ ಕಡೆ ಹುಡುಗಿ. ನಮ್ಮ ಹೊಸ ಸೊಸಿಯ ಅಣ್ಣನ ಮಗಳು. ಮದ್ವಿ ಮನ್ಯಾಗ ಸುಮ್ಮನ ಕುಳಿತಿರಲಾಗ್ದೆ ಗೌಜು ಎಬ್ಬಿಸ್ತಿರಲ್ಲ, ಹೋಗಿ ನಿಮ್ಮ ತಪ್ಪಿಗೆ ಗೌರಿಯ ಕ್ಷಮೆ ಕೇಳ್ರಿ."ಎಂದು ತಾವೂ ಆಯಿ, ಅಪ್ಪಯ್ಯನ ಕ್ಷಮೆ ಬೇಡಿದರು.

ಹೊಸ ಬೀಗರ ಮನೆ. ಅವರದೇ ಮೊಮ್ಮಕ್ಕಳು. ಆಯಿ ಅಪ್ಪಯ್ಯ ಮೌನವಾಗಿ ಕೋಣೆಗೆ ಬಂದದ್ದೇ ತಡ ಗೌರಿ ಸಿಟ್ಟಿನಿಂದ ತಿರುಗಿ ಬಿದ್ದಳು, "ನಾ ತಪ್ಪು ಮಾಡಿದ್ನಾ ಅಪ್ಪಯ್ಯ, ಕಣ್ಣು ಕಾಣದವನನ್ನು ಗೋಳು ಹುಯ್ಕಂಡದ್ದು ಕಂಡು ಸಮಾ ಬಾರಿಸಬೇಕಿತ್ತು. ದೊಡ್ಡ ಮನುಷ್ಯರ ಅಹಂಕಾರ."

"ಆದರೂ ನೀ ಎಂತಕ್ಕೆ ಕಾಲು ಕೆದರಿ ಜಗಳಕ್ಕೆ ಹೋದೆ? ಸುಮ್ಮನೆ ಇರಕ್ಕಿತ್ತು" ಅಪ್ಪಯ್ಯ ಅವಳ ಕೆನ್ನೆ ಸವರಿ ತಪ್ಪನ್ನು ಅವಳಿಗೇ ಹೊರಿಸಿದ.

"ಸುಮ್ಮನೆ ಇರಕ್ಕಿತ್ತಾ? ನಾ ಚಕ್ರೀ ಅಮ್ಮಮ್ಮನ ಮೊಮ್ಮಗಳು. ಹೊಳೆಬಾಗಿಲು ನೀರು ಕುಡಿದು ಬೆಳೆದವಳು. ನನ್ನ ರಟ್ಟೆಯಲ್ಲಿ ಅವರನ್ನು ಬಡಿದು ಎತ್ತಿ ಬಿಸಾಕುವ ಶಕ್ತಿ ಇತ್ತು. ಆದ್ರೆ ನಾವು ಅವರ ಮನೆಗೆ ಬಂದವರಲ್ದಾ? ಅವರಿಂದ ಹೊಡ್ತ ತಿಂದ್ರೂ ಸುಮ್ಮನಿದ್ದೆ. ನಾ ತಪ್ಪು ಮಾಡಿದ್ನಾ?'

"ಗೌರಿ, ನೀ ಛಲೋ ಮಾಡ್ದೆ. ತಪ್ಪು ಮಾಡಿದಾಗ ತೋರಿಸಿ ಕೊಡೆಕ್ಕು. ಜಂಬದ ಕೋಳಿಗಳಿಗೆ ಅವರ ಅಜ್ಜನಿಂದಲೇ ಸಿಕ್ಕಿತಲ್ದ ಪೆಟ್ಟು. ಸಾಕು ಬಿಡು"

ಆಯಿ ಅವಳ ಹರಿದ ಜರಿ ಪರಕರ ತೆಗೆದು ಸುನಂದೆ ಕೊಟ್ಟ ನಿರಿಗೆ ಅಂಗಿ ಹಾಕಿಸಿದಳು. ತಲೆ ಬಾಚಿ ಜಡೆ ಹಾಕಿ ಬೇರೆ ಸರ, ಬಳೆಗಳನ್ನು ತೊಡಿಸಿದಳು. ಅಷ್ಟರಲ್ಲಿ ಸುಬ್ಬಪ್ಪಯ್ಯ, ಅಜ್ಜಮ್ಮ ಇಬ್ಬರೂ ಮಹಡಿಗೆ ಬಂದರು. ಹಿಂದಿನಿಂದ ಸುಶೀಲ ಚಿಕ್ಕಿ, ಚಕ್ರೀ ಅಮ್ಮಮ್ಮನ ಸವಾರಿಯೂ ಬಂತು. ಕೆನ್ನೆ ಊದಿದ ಗೌರಿಯನ್ನು ತಬ್ಬಿ ಚಕ್ರಿ ಅಮ್ಮಮ್ಮ, ಅಜ್ಜಮ್ಮ ಹೋ ಎಂದು ಅತ್ತರು. ಚಕ್ರೀ ಅಮ್ಮಮ್ಮ ಮೂಗಿನ ಸಿಂಬಳ ಒರಸಿಕೊಳ್ಳುತ್ತ, "ನೀ ಸರಿಯಾಗಿ ಮಾಡ್ದೆ. ಬೀಗರಾಗಲಿ, ವೈರಿಯಾಗಲಿ ತಪ್ಪು ತಪ್ಪೇ. ಕುರುಡರ ಕಷ್ಟ ತಿಳಿದಿದ್ದರೆ ಅವರ ಕಣ್ಣಿಗೂ ಪಟ್ಟ ಕಟ್ಟಿ ಒಂದಿನ ಪೂರಾ ಬೆಳಕು ಕಾಣದಾಂಗೆ ಮಾಡೆಕ್ಕು. ಇದ್ದವಕ್ಕೆ ಇಲ್ಲದವರ ನೋವು ಎಂತದು? ಅರ್ಥ ಆಗೆಕ್ಕು" ಎಂದಳು.

ಸುಶೀಲ ಚಿಕ್ಕಿ ಒಂದು ಮಾತು ಹೇಳದೆ ಗೌರಿಯ ಬೆನ್ನು ನೀವಿದಳು. ನೀನು ಮಾಡಿದ್ದು ಸರಿಯಾಗಿದೆ ಎನ್ನುವ ಸಾಂತ್ವನ ಸ್ಪರ್ಶ! ಕುರುಡ ಹುಡುಗನ ತಾಯಿತನ್ನ ಮಗನನ್ನು ಪುಂಡರ ಕೀಟಲೆಯಿಂದ ಪಾರು ಮಾಡಿದ ಗೌರಿಯನ್ನು ಮೆಚ್ಚುಗೆಯಲ್ಲಿ ನೋಡುತ್ತ ತಾನೂ ಅತ್ತು ಸುಧಾರಿಸಿಕೊಂಡಳು. ಬೀಗರ ಮನೆ ಹುಡುಗಿಗೆ ಶರ್ಮರ ಮೊಮ್ಮಕ್ಕಳು ಹೊಡೆದ ಸುದ್ದಿ ಕೇಳಿ ಆಗಲೇ ಚಪ್ಪರದಲ್ಲಿ ಗುಲ್ಲೋ ಗುಲ್ಲು. ನೂರೆಂಟು ಮಾತುಗಳು. ಆಯಿ ಮಗಳ ಕೈ ಹಿಡಿದು ಕೆಳಗಿಳಿದು ಬಂದಳು.ಎಲ್ಲರ ಕಣ್ಣುಗಳೂ ಗೌರಿಮೇಲೆ. ಇರಬೇಕು ಹುಡುಗಿಯರಿಗೆ ಇಂತಹ ಧೈರ್ಯ. ಅವಳ ಕ್ಷಮೆ ಕೇಳಿದ ದೊಡ್ಡ ಹುಡುಗರಿಗೆ ನಾಚಿಕೆಯಾಗಿ ಚಪ್ಪರದ ಹೊರಗೆ ಉಳಿದರು. ಮತ್ತೆ ಅವರವರ ತಾಯಂದಿರು ಬೈಯ್ಯುತ್ತ ಕೊನೆಗೆ ಊಟದ ಹೊತ್ತಿನಲ್ಲಿ ಗೌರಿ ಜೊತೆ ಅವರನ್ನೂ,ಕುರುಡ ಹುಡುಗನನ್ನೂ ಕುಳ್ಳಿರಿಸಿದರು. ತಮ್ಮ ಮಕ್ಕಳ ಕೈಯ್ಯಿಂದಲೇ ಗೌರಿಗೆ ಸಿಹಿ ತಿನ್ನಿಸಿ ಸ್ನೇಹದ ಹಸ್ತ ಚಾಚುವಂತೆ ಮಾಡಿದರು. ಘಟನೆಯ ಒಡಕಿಗೆ ತೇಪೆ ಹಚ್ಚಿ, ನಾಣಿಗೆ ನಗುವೋ ನಗು. "ಹಾಗೆ ಆಗ್ಬೇಕು, ಹಲ್ಲು ಮುರಿಬೇಕು। ನಾ ನಗ್ಬೇಕು, ನೀ ಅಳಬೇಕು।" ಅಣಕಿಸಿದ ಅವರಿಗೆ ಕೇಳದಂತೆ. ಸ್ವಲ್ಪ ಹೊತ್ತಿಗೆ ಎಲ್ಲ ಮರೆತು ಸರಿ ಹೋಯಿತು. ಮಕ್ಕಳ ಸ್ವಭಾವವೇ ಹೀಗೆ. ಮೋಡ ಬಿಸಿಲಿನ ಹಾಗೆ.

ಮಧ್ಯಾನ್ಹದ ಭೋಜನವೂ ಅದ್ದೂರಿಯದೇ. ಚಿರೋಟಿ, ಮಂಡಿಗೆ, ಬಾದೂಷಾ ಸಿಹಿ ಭಕ್ಷ್ಯಗಳು. ಹುಟ್ಟಿದಾರಭ್ಯ ತಿನ್ನದ ಅವನ್ನು ನಾಣಿ ಗೌರಿ ಎರಡು ಬಾರಿ ಹಾಕಿಸಿಕೊಂಡು ತಿಂದರು. "ನಮ್ಮ ಊರಾಗಿನ ಮಂಡಿಗೆ ಇನ್ನೂ ಹಾಕ್ಸಕೊಳ್ಳಿ. ಇಲ್ಲಿ ವಿಶೇಷದ್ದು. ಹಾಂಗ ಆ ಧಾರವಾಡ ಫ್ಲೇಡಾ ನೋಡ್ರಿ, ಕರಿದ ಆಲೂ ಬೋಂಡಾ

ಬಾಯಾಗ ಇಟ್ಟು ನೋಡ್ರಿ,ಇನ್ನೂ ತಿನಬೇಕಂತ ನಾಲಗಿ ಬೇಡ್ತದ!" ಎಂದ ಅವಳ ಬಳಿ ಕುಳಿತ ದೊಡ್ಡ ಹುಡುಗ. ಅವನೇ ತಟ್ಟೆ ಹಿಡಿದು ಕುರುಡನಿಗೆ ಹೆಚ್ಚು ಸತಾಯಿಸಿದವ. ಹೆಸರು ಪ್ರಕಾಶ. ಬಡಿಸುವವರನ್ನು ಕರೆದು ಗೌರಿ ಸಾಕೆಂದರೂ ಎಲೆಗೆ ಹಾಕಿಸಿದ, "ಗೌರಿ ಅಕ್ಕ, ಇವತ್ತು ನೀ ಕಲಿಸಿದ ಪಾಠ ನಾವು ಈ ಜನ್ಮದಾಗ ಮರೆಯಾಂಗಿಲ್ಲ. ನಮಗೆ ಎಷ್ಟೋ ಸಲ ಘಮಂಡ ಬಂದುಬಿಡ್ತದ. ಅದಕ್ಕ ಒಂದು ಒತ್ತ ಸಿಕ್ಕರ ಮಾತ್ರ ಬುದ್ಧಿ ಬರ್ತದ"

ಇನ್ನೊಬ್ಬ ಎಲೆ ತುದಿಯಿಂದ ಬಗ್ಗಿದ, "ನಮ್ಮಿಂದ ಎಷ್ಟು ನೋವು ತಿಂದಿ. ನಮಗ ದಾರಿ ತೋರ್ಸಿದಿ. ಇಲ್ಲಾಂದ್ರೆ ಇಂತಾ ಕಾರ್ಯ ಆದಾಗ ಇವನನ್ನು ಹೀಂಗ ಆಡ್ಸಿ ಖುಷಿಯಾಗಿ"

"ಲೋ, ಗಧಾಕೆ ಬಚ್ಚೆ, ಚುಪ್. ಗೌರಿ ಗುಡಿಯಾ, ಎಲ್ಲ ಮರ್ತು ಬಿಡು. ನನ್ನ ಅಣ್ಣಾ[ತಂದೆ] ಡಾಕ್ಟರು. ನಿನ್ನ ಮೈ ನೋವಿಗೆ ಅವ್ರೇ ದವಾ ಕೊಡ್ತಾರ್" ಎಂದ ಇನ್ನೊಬ್ಬ, "ಇನ್ಮೇಲೆ ನಾವು ನೀನು ಫ್ರೆಂಡ್ಸು."

ಗೌರಿಗೆ ಯಾರ ಬಳಿಯೂ ಮಾತು ಬೇಡವಾಗಿತ್ತು. ಅನಿರೀಕ್ಷಿತ ಸಿಕ್ಕಿದ ಹೊಡೆತ ಮುಖ ಊದಿಸಿತ್ತು.

"ಸಂಕೋಚ ಬ್ಯಾಡ್ರೀ, ಬೇಕ್ಕಾದ್ದು ಹಾಕ್ಸಕೊಂಡು ತಿನ್ರಿ" ಬಡಿಸುವವನದೂ ಒತ್ತಾಯ.

ಊಟದ ನಂತರ ತಾಂಬೂಲ ಸೇವನೆ. ಹೊರಗೆ ಎಳೆ ವೀಳ್ಯದೆಲೆಗೆ ಅಡಿಕೆಪುಡಿ, ಕೆಂಪು ಗುಲಾಬಿ ರಂಗಿನ ಸಿಹಿ ದ್ರವ್ಯ ಬಳಿದು ಒಬ್ಬಾತ ತಾಜಾ ಬೀಡಾ ತಯಾರಿಸಿ ಕೊಡುತ್ತಿದ್ದ. "ಸುಬ್ಬಪ್ಪನೋರ, ಕೈ ತೊಳೆದು ಈ ಕಡಿ ಬರ್ರಿ" ವಿನಾಯಕ ಶರ್ಮರಿಂದ ಉಪಚಾರ,"ಇವನು ಬಸ್ಯಾ. ವಿಲಾಯತಿ ಬೀಡಾ ಕಟ್ಟೋದ್ರಲ್ಲಿ ಗಟ್ಟಿ ಅದಾನ. ತಿಂದ ನೋಡಿ ಹೇಳ್ರಿ."

ವಿಲಾಯತಿ ಬೀಡಾ! ನಾಣಿ, ಗೌರಿಯ ಕಣ್ಣರಳಿತು. ಬಾಯಿಗೆ ಹಾಕಿದರೆ ಅದೆಂತಹ ಸಿಹಿ ರುಚಿ, ಘಮ ಘಮ. ಅಜ್ಜಮ್ಮ ಅಜ್ಜಯ್ಯ ಇಬ್ಬರೂ ಎಲೆಗೆ ಸುಣ್ಣ ಬಳಿದು ಮೇಲೆ ಅಡಿಕೆ ಇಟ್ಟು ಅವನ್ನು ಕುಟ್ಟಿ ಕವಳ ಜಗಿಯುತ್ತಾರೆ. ಅದೇಕೆ ಚಕ್ರಿಅಮ್ಮಮ್ಮ ಚೂರು ಹೊಗೆಸೊಪ್ಪಿನ ತುಂಡನ್ನೂ ದವಡೆ ಒಳಕ್ಕೆ ಇಟ್ಟು ಕವಳ ಹಾಕುತ್ತಾಳೆ. ಒಮ್ಮೆ ಚಕ್ರಿಅಮ್ಮಮ್ಮನಂತೆ ನಾಣಿ ಹೊಗೆಸೊಪ್ಪು ಬಾಯಲ್ಲಿಟ್ಟು ಕವಳ ಜಗಿದಾಗ ತಲೆ ತಿರುಗಿ, ಬೇಡಪ್ಪ ಈ ಎಲೆಅಡಿಕೆ ಸಹವಾಸ. ಆದರೆ ಆ ಕವಳದ ಪರಿಮಳ ಬೇರೆಯೇ. ಇಲ್ಲಿ ತಿಂದ ಬೀಡಾದ ರುಚಿಯೇ ಬೇರೆ. ಇಲ್ಲಿಯದು ಸಿಹಿ, ಪರಿಮಳ. ನಾಣಿ ಎರಡು

ಬೇಡಾ ತಿಂದು ಇನ್ನೊಂದಕ್ಕೆ ಕೈ ನೀಡಿದಾಗ ಗೌರಿ ತಡೆದಳು, "ಹಸಿರು ಕಂಡ ಪರದೇಸಿಯಾ ನೀನು? ತುಂಬ ತಿಂದ್ರೆ ತಲೆ ಸೊಕ್ಕುಗು. ಸಾಕು"

ಸಂಜೆ ಗೌರಿ ಮತ್ತು ನಾಣಿಗೆ ಹುಬ್ಬಳ್ಳಿ ರಸ್ತೆಯಲ್ಲಿ ಒಂದೆರಡು ಸುತ್ತು ತಿರುಗಾಟ ಮಾಡಲು ತಮ್ಮ ಪರಿಚಯದ ಕುದುರೆಗಾಡಿಯನ್ನು ಗೊತ್ತು ಮಾಡಿದ್ದವಿಷ್ಣು.ಕುದುರೆ ಗಾಡಿ ನಡೆಸುವವ ಮಧ್ಯ ವಯಸ್ಸಿನ ಮೀರ ಸಾಬಿ. ಅವನ ಗಾಡಿಗೆ ಕಟ್ಟಿದ್ದು ಬಿಳಿ ನಸುಗಂದು ಬಣ್ಣದ ಎತ್ತರದ ಕುದುರೆ. ಕುದುರೆಯ ಕುತ್ತಿಗೆಗೆ ಕಟ್ಟಿದ ಗೆಜ್ಜೆ ಸರ, ನೆತ್ತಿ ಮೇಲೆ ಕೆಂಪು ಬಣ್ಣದ ಗೆಜ್ಜೆಯದೇ ಮಣಿಗಳ ಕುಚ್ಚು, ಕನ್ನಡಿ ಚೂರುಗಳ ಬಟ್ಟೆಯಿಂದ ಹೊಲಿದ ಹಣೆಪಟ್ಟಿ, ಕಾಲು ಕೈಗಳಿಗೂ ಸಣ್ಣ ಗೆಜ್ಜೆಗಳ ಬಳೆಗಳು. ಎಡಗೈಯ್ಯಲ್ಲಿಅದರ ಜೀನ ಹಿಡಿದು,ಬಲಗೈಯ್ಯಲ್ಲಿ ಚಾಟಿ ಎತ್ತಿಕೊಂಡ ಮೀರಸಾಬಿ ಕುಳಿತ ಗತ್ತು ನೋಡಿ ನಾಣಿಗೆ ಖುಷಿಯೇ ಖುಷಿ. ಅವನ ಆದೇಶದಂತೆ ಹುಬ್ಬಳ್ಳಿಯ ನುಣುಪಾದ ಡಾಂಬರು ರಸ್ತೆಯಲ್ಲಿ ಕುದುರೆ ಹೆಜ್ಜೆ ಹಾಕುತ್ತದೆ. ಕಾಲಿನ ಖುರಪುಟಗಳ ಸದ್ದು, ಕುತ್ತಿಗೆಯ ಗೆಜ್ಜೆದನಿ, ಆಗಾಗ "ಬೇಟಾ, ಸಾವಧಾನಸೆ ಚಲೋ. ಪ್ಯಾರೀ ಲಾಡಲಿ ದೇಖೋ ಆಗೆ" ಮೀರ ಸಾಬ ಹೇಳುತ್ತ ಚಕ್ರದ ಗಾಲಿಗಳು ಮುಂದೆ ಹೋಗುತ್ತಿದ್ದರೆ ಗೌರಿ, ನಾಣಿಗೆ ಅಜ್ಜಯ್ಯ ಹೇಳುವ ಕಥೆಗಳಲ್ಲಿ ಕೇಳಿದ ರಾಜರ ಕುದುರೆ ರಥಗಳು ನೆನಪಾಗುತ್ತದೆ. ಸಿಂಡ್ರೆಲ್ಲಾ ರಥ ಏರಿ ಆಕಾಶದಲ್ಲಿ ಹೋದದ್ದು ಕಾಣುತ್ತದೆ. ತಾವೂ ಹತ್ತಿದ್ದೇವೆ ಕುದುರೆ ರಥವನ್ನು. ಏನು ಹುಬ್ಬಳ್ಳಿಯ ತಂಪುಗಾಳಿ! ಮೈಮನಕ್ಕೂ ಮುದ. ಎಲ್ಲೋ ತೇಲಿದಂತೆ. ಹಾದಿಯ ಇಕ್ಕೆಲಗಳಲ್ಲಿ ಮರಗಳ ಸಾಲು ಸಾಲು. ಅವು ಮೇ ಫ್ಲವರ್ ಮರಗಳಂತೆ.

ವಿಷ್ಣು ಹೇಳಿದಂತೆ ಮೀರಸಾಬಿ ಅವರನ್ನು ಅನೇಕ ಕಡೆ ಸುತ್ತಾಡಿಸಿದ ನಂತರ ಕರೆ ತಂದದ್ದು ರೇಲ್ವೇ ಸ್ಟೇಶನ್ನಿಗೆ. ಇವರು ಸ್ಟೇಶನ್ನಿಗೆ ಬಂದ ಸ್ವಲ್ಪ ಹೊತ್ತಿನಲ್ಲೇ ಎರಡು ಹಳಿಗಳ ನಡುವೆ ಹೋಗುವ ಎರಡು ರೈಲುಗಳು ಗುಡು ಗುಡಕ್ ಕುಹೂ ಸದ್ದಿನೊಂದಿಗೆ ಸ್ಟೇಶನ್‌ನಲ್ಲಿ ಬಂದು ನಿಂತವು. ಹಲವರನ್ನು ಅಲ್ಲಿ ಕೆಳಗಿಳಿಸಿ ಇನ್ನಷ್ಟು ಜನರನ್ನು ತನ್ನಲ್ಲಿ ತುಂಬಿಸಿಕೊಂಡು ಕುಹೂ ಸಿಳ್ಳಿನೊಂದಿಗೆ ಹೊರಟು ಹೋಗುವಾಗ ಅಬ್ಬ, ಅದೆಷ್ಟು ದೊಡ್ಡ ರೈಲುಗಾಡಿ!

ನಾಣಿ ಚಿತ್ರಗಳಲ್ಲಿ ರೈಲುಗಾಡಿ ನೋಡಿದ್ದ. ಇಲ್ಲಿ ಎದುರಿಗೇ ಕಾಣುತ್ತಿದ್ದಾನೆ ಜೋಡು ಪಟ್ಟಿಗಳಂತೆ ರೈಲು ಹಳಿಗಳನ್ನು, ಅದರ ಮೇಲೆ ಗುಡು ಗುಡು ಧಡ್ ದಡ್‌ಕ್, ಚುಕು ಬುಕು ಸದ್ದು, ಕುಹೂ ಸಿಳ್ಳೆಯೊಂದಿಗೆ ಚಲಿಸುವ ರೈಲುಗಾಡಿಗಳು. ರಾಮ, ರಾಮಾ, ಗೌರಿ ನಾಣಿಯರ ಹರ್ಷೋದ್ಗಾರ. ಎಷ್ಟುದ್ದದ ರೈಲು ಗಾಡಿಗಳು. ಅದರ ಸದ್ದಿಗೆ ಎದೆಯಲ್ಲೂ ಗುಡು ಗುಡು ಕಂಪನ.ತುದಿ ಮೊದಲಿಲ್ಲದ ರಸ್ತೆಯಲ್ಲಿ ರೈಲುಗಾಡಿ ಎಲ್ಲಿಗೆ ಹೋಗುತ್ತದೋ? ಹೇಗೆ ನಡೆಯುತ್ತದೋ? ಮೀರ ಸಾಬಿಯನ್ನೇ

ಕೇಳಿದ. ಅವನು ಪ್ರತಿದಿನ ಹಲವು ಬಾರಿ ತನ್ನ ಕುದುರೆ ಗಾಡಿಯಲ್ಲಿ ಜನರನ್ನು ಸ್ಟೇಶನ್‌ಗೆ ಬಿಡಲು, ರೈಲಿನಿಂದ ಇಳಿದವರನ್ನು ಕರೆದೊಯ್ಯಲು ಬರುತ್ತಾನೆ. ಕರ್ನಾಟಕದ ಒಳಗೆ, ಹೊರಗೆ ಬೇರೆ ಬೇರೆ ರಾಜ್ಯಗಳಿಗೆ ರೈಲು ಗಾಡಿ ಹುಬ್ಬಳ್ಳಿ ದಾಟಿ ಹೋಗುತ್ತವೆಂದು ಅವನೇ ವಿವರಿಸಿದ.

"ಇಷ್ಟು ಉದ್ದದ ರೈಲು ಬಿಡಲು ಡೈವರನಿಗೆ ಕಷ್ಟ ಆಗ್ತಿಲ್ಲೆಯಾ?" ನಾಣಿಗೆ ತಿಳಿವ ಕುತೂಹಲ. "ರೈಲು ಹಳಿ ಮೇಲೆ ಹ್ಯಾಂಗೆ ದೋಪದು?"

"ಇವನ್ನು ಕಲ್ಲಿದ್ದಲು ಬೆಂಕಿನಾಗೆ ನಡೆಸ್ತಾರೀ ಅಣ್ಣಾವರ. ಕಲ್ಲಿದ್ದಲು ಬೆಂಕಿ ಅಂದ್ರೆ ಶಾಕದಾಗ [ಉಗಿಯಲ್ಲಿ] ಓಡೋ ರೈಲುಗಳುರೀ. ಉಗಿಬಂಡಿ. ಬಂಡಿ ಹೋಗ್ತಾ ಇದ್ದಾಂಗ ಕಲ್ಲಿದ್ದಲನ್ನು ಬೆಂಕಿನಾಗೆ ಹಾಕ್ಕೋತಾ ಇರ್ತಾರ್ರಿ. ಬಂಡಿ ಹೋಗ್ತಾಇರ್ತದ್ರೀ. ಅಣ್ಣಾವ್ರ, ನಿಮಗೂ ಉಗಿಬಂಡ್ಯಾಗ ಕುಂತು ಹೋಗೋ ಆಸೆಯಾ?"

ನಾಣಿ ಗೌರಿ ಮುಖ ನೋಡಿದ. ಅವಳಿಗೂ ಆಸೆ ಇದೆ. ಆದರೆ ಹೋಗುವುದು ಎಲ್ಲಿಗೆ? ಹೊಳೆಬಾಗಿಲಿಗೆ ಹೋದನಂತರ ಅದೇ ಹೊಳೆ ತೀರ, ಕುರುಚಲು ಕಾಡು, ಬೆಟ್ಟ, ದನ ಕರು. ಹೊರಗೆ ಹೋಗುವುದೇ ಕಮ್ಮಿ. ಇದೇ ಹಳಿಯುದ್ದಕ್ಕೂ ಹೋಗಬೇಕು, ದೂರ ದೂರ, ಯಾರೂ ನೋಡದ ತೀರದ ಆಚೆ. ತಾನು ನಾಣಿ ಕೈಯ್ಯಲ್ಲಿ ಕೈ ಹಿಡಿದು ರೈಲಲ್ಲಿ ಕುಳಿತು ಕಿಟಕಿಯಾಚೆ ನೋಡುತ್ತ, ಹಸಿರು ಮರ ಗಿಡ ಬಳ್ಳಿಗಳನ್ನು, ನದಿ ತೊರೆ, ಹಳ್ಳಗಳನ್ನು ಹಿಂದೆ ಹಾಕುತ್ತ ಹೋಗಬೇಕು. ಎಲ್ಲಿಗೆ? ಉತ್ತರ ಗೊತ್ತಿಲ್ಲ.

ಮೀರ ಸಾಬಿಯ ಭಾಷೆ ಬೇರೆಯೇ. ಮನಸ್ಸಿಲ್ಲದೆ ಕುದುರೆ ಗಾಡಿ ಹತ್ತಿದರು. ಹಿಂದಿರುಗುವ ದಾರಿಯಲ್ಲಿ ಒಂದು ಕಡೆ ಹಾಡು, ಹಾರ್ಮೋನಿಯಂ ಸ್ವರ ಕೇಳಿಸಿ ಗೌರಿ ಗಾಡಿ ನಿಲ್ಲಿಸುವಂತೆ ಮೀರಸಾಬಿಗೆ ಹೇಳಿ ಕೆಳಗಿಳಿದಳು. ನಾಣಿಯೂ ಇಳಿದ. ಅದು ಟೌನ್ ಹಾಲ್ ಕಟ್ಟಡ. ಒಳಗೆ "ಶ್ರೀ ಕೃಷ್ಣ ಪಾರಿಜಾತ ಪ್ರಸಂಗ" ಆಟ ನಡೆಯುತ್ತಿತ್ತು. ಹಾಲ್ ತುಂಬಿ ಹೋಗಿತ್ತು. ಹಾಡು, ವೇಷಧಾರಿಗಳ ಕುಣಿತ. ಯಕ್ಷಗಾನ ನಡೆಯುತ್ತಿರಬೇಕು. ಗೌರಿ ಟಿಕೆಟ್ ಕೊಡುವವನ ಬಳಿ ಹೋಗಿ ವಿಚಾರಿಸಿದಳು. "ರಾಣೆಬೆನ್ನೂರಿನ ದೊಡ್ಡಾಟ ಪ್ರಸಂಗ, ನೀವು ಆಟ ನೋಡಾಕ ಬಂದ್ರೇನು. ಶುರುವಾಗಿ ತಾಸು ಕಳೀತಲ್ರೀ. ಮತ್ತ ಟಿಕೆಟ್ ಕೊಡಲೇನು?" ಕೇಳಿದ.

"ರಾಣೆಬೆನ್ನೂರು ತಂಡದ ಆಟ ಅಂದ್ರ ಮಸ್ತ ಇರ್ತದ. ನೀವು ನೋಡ್ತೀರೇನೂ." ಹಿಂದಿನಿಂದ ಬಂದ ಮೀರಸಾಬಿ ಕೇಳಿದ, "ನೀವು ಟಿಕೆಟ್ ತಗದು ಹೋಗ್ರಿ. ನಾ ದೊಡ್ಡ ಅಪ್ಪಾರವರಿಗೆ ಹೇಳಿ ನಾಟಕ ಮುಗೀತ್ಲೂ ಮತ್ತ ಗಾಡಿ ತರ್ತೀನಿ"

ಗೌರಿಗೆ ಹಾಡು ಕೇಳುವಾಸೆ. ನಾಣಿಗೆ ಗೆಜ್ಜೆ ಕಟ್ಟಿ ಕುಣಿಯುವುದನ್ನು ನೋಡುವ ಆಸೆ. ಆದರೆ ಅದು ಮುಗಿಯುವಾಗ ಮಧ್ಯರಾತ್ರೆ ಆದೀತಲ್ಲವೇ? ಅಷ್ಟು ರಾತ್ರೆವರೆಗೆ

ಆಯಿ ನಿದ್ದೆ ಮಾಡದೆ ಕಾಯಬೇಕು ತಮಗಾಗಿ. ಮತ್ತೆ ನಾಳೆ ನಸುಕಿನ ಬಸ್ಸಿಗೆ ಹೆಣ್ಣಿನ ದಿಬ್ಬಣದವರು, ನಾಣಿಯೂ ಹೊಳೆಬಾಗಿಲಿಗೆ ಮತ್ತು ಗೌರಿ ಸುಶೀಲಚಿಕ್ಕಿಯ ಜೊತೆ ಸಿರ್ಸಿಗೆ ಹೊರಡಲೇಬೇಕು.ಗೃಹಪ್ರವೇಶದಿಂದ ಹಿಂದಿರುಗುವಾಗ ಗೌರಿಯನ್ನು ಕರೆದೊಯ್ಯುವ ವಿಚಾರ ಇಟ್ಟುಕೊಂಡೇ ಚಿಕ್ಕಿ ಹುಬ್ಬಳ್ಳಿಗೆ ಬಂದಿದ್ದಾಳೆ. ಆಯಿ ಅವಳ ಬಟ್ಟೆಗಳ ಚೀಲಬೇರೆಯೇ ತಂದಿದ್ದಾಳೆ. ಜೊತೆಗೆ ಅವಳಿಗಿಷ್ಟದ ತಿಂಡಿ, ಹಪ್ಪಳ, ಸಂಡಿಗೆ, ಹುರಿದ ಹುಣಿಸೆ ಬೀಜ ಇನ್ನೂ ಏನೇನೋ ಕಟ್ಟಿದ್ದಾಳೆ. ಗೌರಿಯೋ ಹೊಸ ಊರಿನಲ್ಲಿ ಹೊಸ ಭವಿಷ್ಯದ ದಿನಗಳಿಗೆ ತನ್ನ ಕನಸು ಸೇರಿಸಲು ಹೊರಟಿದ್ದಾಳೆ. ತಮ್ಮನನ್ನು ಅಗಲುವುದು ಅನಿವಾರ್ಯವೇ. ಅವನನ್ನು ಜೊತೆಗೆ ಕರೆದೊಯ್ಯುವ ಎಂದರೆ ಸೇವಾಶ್ರಮದ ಟ್ರಸ್ಟಿಗಳು ಗೌರಿಯ ವಾಸ್ತವ್ಯಕ್ಕೆ ಒಪ್ಪಿಗೆ ಕೊಟ್ಟದ್ದೇ ದೊಡ್ಡ ಸಂಗತಿ. ಅದನ್ನೇ ನೆನಪಿಸಿ ಗಂಟಲು ಕಟ್ಟಿದಂತೆ, ನಾಣಿಗೆ ಅಕ್ಕನ ಮುಖ ನೋಡಲಾಗಲಿಲ್ಲ. ನಾಳೆ ಅಕ್ಕನನ್ನು ಬಿಟ್ಟು ತಾನೊಬ್ಬನೇ ಹೊಳೆಬಾಗಿಲಿಗೆ ಹೋಗಬೇಕು. ತನ್ನೊಡನೆ ಅವಳಿಲ್ಲ. ಅದೇ ನೋವಿನ ಸಂಗತಿ. ಈ ಯೋಚನೆಯಲ್ಲೇ,

"ಅಕ್ಕ, ನೀನು ನಿಜವಾಗ್ಲೂ ಸಿರ್ಸಿಗೆ ಹೋಗ್ತಿಯಾ? ನೀನಿಲ್ಲದೆ ನಾನೊಬ್ಬನೇ ಎಂತ ಮಾಡ್ಲಿ? ನೀನಿಲ್ಲದೆ ಅಪ್ಪಯ್ಯ ಬಂದಾಗ ನಾನೊಬ್ಬನೇ ಪರದೆ ಆಚೆ ಹ್ಯಾಗೆ ಮಲಗಲಿ? ನೀನಿಲ್ಲದೆ ಹಾಡಿ ಆಚೆ, ಹೊಳೆಬದಿ ಯಾರ ಜತಿ ಹೋಗ್ಲಿ?" ಕಣ್ಣೀರಾದ.

ಇಬ್ಬರೂ ಭಾರವಾದ ಹೆಜ್ಜೆ ಇಟ್ಟು ಮೀರಸಾಬಿಯ ಕುದುರೆಗಾಡಿ ಹತ್ತಿದರು. ಹೋಗುತ್ತ ಗೌರಿಗೆ ತಾನು ಊರಲ್ಲೇ ಇಟ್ಟು ಬಂದ ಪಿಳಿ ಪಿಳಿ ಗೊಂಬೆ ಪೆಟ್ಟಿಗೆ ನೆನಪಾಯಿತು. ಹೊರಡುವ ಅವಸರದಲ್ಲಿ ಮರೆತು ಹೋಗಿತ್ತು. ಗೌರಿ ತಾನಾಗಿಯೇ ಮರೆತಳೋ, ಬೇಡವೆಂದು ಬಿಟ್ಟು ಬಂದಳೋ, ನಾಣಿಯ ಕಿವಿಯಲ್ಲಿ ಗುಟ್ಟಾಗಿ, "ನನ್ನ ಗೊಂಬೆ ಪೆಟ್ಟಿಗೆ ತೆಗೆದು ಅಜ್ಜಮ್ಮನ ಮಂಚದ ಕೆಳಗೆ ಹುಗ್ಗಿಸಿ ಇಡು ನಾಣಿ. ನಾ ಊರಿಗೆ ಬಂದಾಗ ಆಡ್ಲಿಕ್ಕೆ ಗೊಂಬೆ ಬೇಕು." ಎಂದು ತಾನೂ ಕಣ್ಣೀರಾದಳು.

♣♣♣

ಮರುದಿನ ನಸುಕಿನಲ್ಲಿ ಹೊಳೆಬಾಗಿಲಿನವರು ಗಂಗೊಳ್ಳಿ ಹೊಳೆಯ ತಮ್ಮ ಕುದ್ರುವಿಗೆ, ಅಮ್ಮಮ್ಮ ಅವಳ ಒಬ್ಬಳು ಸೊಸೆ, ಮೊಮ್ಮಕ್ಕಳು ಚಕ್ರಿಮನೆಗೆ, ಸೀತು ದೊಡ್ಡಪ್ಪರ ಸಂಸಾರ ಗೋವಾಕ್ಕೆ ಮತ್ತು ರಘು ದೊಡ್ಡಪ್ಪನ ಸಂಸಾರದ ಜೊತೆಗೆ ಸುಶೀಲಚಿಕ್ಕಿ, ಗೌರಿ ಸಿರ್ಸಿಗೆ ಹೊರಟುಸಿದ್ಧರಾದರು. ಐದು ಗಂಟೆಗೆ ಎಲ್ಲರಿಗೂ ಚಹ, ಕಾಫಿ ತಿಂಡಿ ಆಯಿತು. ಅವರಿಗೆಲ್ಲ ಪ್ರತ್ಯೇಕವಾಗಿ ಮದುವೆಯ ಸಿಹಿ, ಖಾರದ ತಿಂಡಿಗಳನ್ನು, ದಾರಿ ಪ್ರಯಾಣದಲ್ಲಿ ಉದರ ಸೇವನೆಗೆ ಬೇಕಾದುದನ್ನು ಚೆಂದದ ಚೀಲದಲ್ಲಿ ಕಟ್ಟಿಕೊಟ್ಟರು ಅದಿತಿದೇವಿ.

"ಮಗಳನ್ನು ನೋಡಲು ಆಗಾಗ ಹುಬ್ಬಳ್ಳಿಗೆ ಬರ್ತಾ ಇರಿ" ಎಂದರು ಶರ್ಮರು ಸುಬ್ಬಪ್ಪಯ್ಯರಿಗೆ. ವೃದ್ಧಾಪ್ಯದ ಅಂಚಿನಲ್ಲಿ ತಮ್ಮ ಕೊನೆ ಮಗಳನ್ನು ಮದುವೆ ಮಾಡಿ ಗಂಡನ ಮನೆಗೆ ಕಳುಹಿಸಿದ ಧನ್ಯತೆಯ ಭಾವ ಸುಬ್ಬಪ್ಪಯ್ಯರಲ್ಲಿತ್ತು. ಅಜ್ಜಮ್ಮ ಅದೆಷ್ಟು ಬಾರಿ ಕೊಲ್ಲೂರು ಮೂಕಾಂಬಿಕೆಯನ್ನು ಸ್ಮರಿಸಿ ಕೈ ಮುಗಿದರೋ. ಮಕ್ಕಳನ್ನು ಹುಟ್ಟಿಸಿದ ಮೇಲೆ ತಮ್ಮ ಜವಾಬ್ದಾರಿಯನ್ನು ಇನ್ನೊಬ್ಬರ ಹೆಗಲಿಗೆ ಏರಿಸಬಾರದಲ್ಲ. ಮಗಳ ಮದುವೆಯಂತೂ ಕಳೆಯಿತು. ಇನ್ನು ಗಂಗೊಳ್ಳಿ ಹೊಳೆ ಯಾವಾಗ ಕರೆದರೂ ತಾವು ಹೋಪಕೆ ಸಿದ್ಧವಂತೆ.

ವಿದಾಯದ ಗಳಿಗೆ ಎಲ್ಲರ ಕಣ್ಣುಗಳಲ್ಲೂ ನೀರು. ಮದುಮಗಳು ಶಾರದೆಯನ್ನು ಬಿಟ್ಟು ಹೋಗುವುದು ದುಃಖವೇ ಹೌದು. ಆದರೆ ಅದಕ್ಕಿಂತ ಮಿಗಿಲಾಗಿ ಗೌರಿಯನ್ನು ಕಳಿಸುವ, ಅವಳಿಂದ ಅಗಲಿ ಹೋಗುವ ನೋವು ಅಧಿಕವಾಗಿತ್ತು ಹೊಳೆಬಾಗಿಲಿನವರಿಗೆ. ಮುದ್ದಿನ ಮನೆಮಗಳು. ಹಿರಿಯರನ್ನು ಬಿಟ್ಟು ದೂರ ಇದ್ದವಳಲ್ಲ. ಊರುಕೇರಿ, ಶಹರು ಕಂಡವಳಲ್ಲ. ಸುಶೀಲಚಿಕ್ಕಿಯ ಸುಪರ್ದಿಯಲ್ಲಿ ಕಳೆಯಬೇಕಾಗಿದೆ ಅವಳ ಮುಂದಿನ ಜೀವನ. ಒಳಿತಾದೀತೆಂಬ ಭರವಸೆ. ಆಗದಿದ್ದರೆ ಆ ಕೊಲ್ಲೂರು ಅಮ್ಮನೇ ನೋಡಿಕೊಳ್ಳಬೇಕು. ಅಜ್ಜಮ್ಮನಿಂದ ನೂರು ಉಪದೇಶ ಮದುವೆ ವಯಸ್ಸಿನ ಮೊಮ್ಮಗಳು ಕಾಣದ ಊರಿನಲ್ಲಿ ಇರುವುದನ್ನು ಊಹಿಸಿ ಅತ್ತದ್ದೇ ಜಾಸ್ತಿ. ಚಕ್ರಿ ಅಮ್ಮಮ್ಮ ಅವಳ ಕೈ ಬಿಡದೆ ಗಟ್ಟಿಯಾಗಿ ಹಿಡಿದುಕೊಂಡಿದ್ದಾಳೆ. ಆಯಿ ಅಪ್ಪಯ್ಯ ಬಿಮ್ಮಗಿದ್ದರೂ ಈಗಲೇ ಎನ್ನುವಂತೆ ಧುಮಿಕ್ಕಲು ಸಿದ್ಧವಾಗಿದೆ ಕಣ್ಣೀರಧಾರೆ. ಅದೋ, ನಾಣಿಯ ಕಣ್ಣುಗಳು ಕೆಂಪಾಗಿ ಅಳು ಮುಂದುವರಿದಿದ್ದು ಸಿಂಬಳ ಅಂಗಿ ತುದಿಗೆ ವರೆಸಿಕೊಳ್ಳುತ್ತ ಅಕ್ಕನನ್ನು ಅಂಟಿಕೊಂಡಿದ್ದ ಮೇಣದಂತೆ. "ನನ್ನನ್ನು ಕರ್ಕೊಂಡು ಹೋಗು ಅಕ್ಕಾ, ಇಲ್ಲ, ನೀನೇ ಬಾ ನಮ್ಮೊಟ್ಟಿಗೆ" ಒಂದೇ ಹಠ.

ಯಾರು ಯಾರನ್ನು ಸಮಾಧಾನಿಸುವುದು ತಿಳಿಯದ ಗಳಿಗೆ. ಶಾರದತ್ತೆಯ ಮದುವೆ ಮೊದಲೇ ಸುಶೀಲ ಚಿಕ್ಕಿಯ ಪತ್ರ ಬಂದ ಲಾಗಾಯ್ತು ಗೌರಿಗೆ ಕಲಿಯುವ ಆಸೆಗಿಂತ ಹೆಚ್ಚು ಅವಳ ಸಂಗಡ ಹೊಸ ವಾತಾವರಣಕ್ಕೆ ಹೋಗುವ ಸಂಭ್ರಮ ತುಂಬಿದೆ. ಚಕ್ರಿ ಅಮ್ಮಮ್ಮ ಬೇರೆ ಸಿರ್ಸಿ ಆಶ್ರಮದ ಬಗ್ಗೆ ಎಷ್ಟೆಲ್ಲ ಹೇಳಿದಳಲ್ಲ. ಅವಳಿಗೂ ಮೊಮ್ಮಗಳು ಕಲಿಯಲಿ ಎಂಬ ಆಸೆ. ಅವಳ ಜೀವನೋತ್ಸಾಹ ಅಪರೂಪದ್ದು. ಹುಬ್ಬಳ್ಳಿಯಿಂದ ಹೊರಡುವಾಗ ಆಯಿ, "ಗೌರಿಗೆ ಬೇಜಾರು ಬಂದ್ರೆ ಒಂದು ಕಾಗದ ಗೀಚಿ ಹಾಕು. ಅವಳ ಅಪ್ಪಯ್ಯ ಬಂದು ಕರ್ಕೊಂಡು ಬತ್ತವು" ಎಂದಿದ್ದಳು ಸುಶೀಲಚಿಕ್ಕಿಗೆ. ಆ ಕ್ಷಣವೇ ಚಕ್ರಿಅಮ್ಮಮ್ಮ ಅವಳ ನೆತ್ತಿಗೆ ಮುದ್ದಿಟ್ಟು ,

"ಬ್ಯಾಸರ, ದುಃಖ ಹೇಳಿ ಶಾಲೆಗೆ ಹೋಗದೆ ಸೋಮಾರಿ ಆದಿಯೋ ಗೌರಿ,

ನಿನ್ನ ಕಾಲಿಗೆ ನೀನೇ ಚಪ್ಪಡಿಕಲ್ಲು ಎಳ್ಕತ್ತೆ. ಕಲಿತು ದೊಡ್ಡವಳಾಗಬೇಕು ನನ್ನ ಮೊಮ್ಮಗಳು. ನೆನಪಿಟ್ಕಾ!" ಎಂದಳು. ಅವಳ ಕಣ್ಣುಗಳು ತುಂಬಿತ್ತು.

ನಿನ್ನೆ ಅವಳಿಗೆ ಹೊಡೆದ ಹುಡುಗನ ಜೊತೆ ಇನ್ನೂ ಕೆಲವು ಹುಡುಗರು ನಿದ್ದೆಗಣ್ಣು ಉಜ್ಜುತ್ತ ಮಾಳಿಗೆಯಿಂದ ಇಳಿದು ಬಂದರು. ನಿನ್ನೆ ಪ್ರಸಂಗ ಮರೆತು ತಾವು ತಂದ ಕೆಲವು ವಸ್ತುಗಳನ್ನು ಅವಳಿಗೆ ಕೊಟ್ಟು ಸ್ವಲ್ಪಹೊತ್ತು ಮಾತನಾಡಿದ್ದು ಹಿರಿಯರಿಗೂ ಸಮಾಧಾನ ತಂದಿತು. ಮಕ್ಕಳ ಜಗಳ ಕ್ಷಣಿಕ ಎನ್ನುವುದು ಇದಕ್ಕಾಗಿಯೇ ಅಲ್ಲವೇ! ಹೊತ್ತು ಯಾರ ಸುಖ, ದುಃಖ ವಿಚಾರಿಸದೆ ತನ್ನ ಪಾಡಿಗೆ ಸರಿಯುತ್ತದೆ. ಮೂಡಲಮನೆ ಕೆಂಪಾಗುವ ಹೊತ್ತಿಗೆ ಒಬ್ಬೊಬ್ಬರೇ ಹಿರಿಯರ ಕಾಲಿಗೆರಗುತ್ತ, ಕಿರಿಯರಿಗೆ ಆಶೀರ್ವದಿಸುತ್ತ ವಿದಾಯದ ಮಾತಿನೊಂದಿಗೆ ಬೇರೆ ಬೇರೆ ಕುದುರೆಗಾಡಿಗಳನ್ನು ಹತ್ತಿದರು. ಬಿಗಿಯಾಗಿ ಅಕ್ಕನ ಕೈ ಹಿಡಿದಿದ್ದ ನಾಣಿಯನ್ನು ಅಪ್ಪಯ್ಯ ಮೈದಡವಿ ಎಳೆದುಕೊಳ್ಳುತ್ತ ತನ್ನ ಕುದುರೆ ಗಾಡಿಯಲ್ಲಿ ಹತ್ತಿಸಿಕೊಂಡ. "ಅಕ್ಕಾ, ಅಕ್ಕಾ" ನಾಣಿಯ ಬಿಕ್ಕಳಿಕೆ ಗಾಡಿಯ ಚಕ್ರದ ಸದ್ದನ್ನೂ ಮೀರಿಸಿತ್ತು.

* * *

## ಅಧ್ಯಾಯ– 16

ಕಮಾನು ಆಕೃತಿಯ ದೊಡ್ಡ ಗೇಟಿನ ಮೇಲೆ ಬರೆದ ಫಲಕ "ಸಹಕಾರಿ ಸೇವಾಶ್ರಮ, ಮಾನಾಪುರ, ಸಿರ್ಸಿ" ಗೇಟು ದಾಟಿ ಒಳಗೆ ಕಾಲಿಟ್ಟರೆ ಅಗಲದ ಸಿಮೆಂಟ್‌ನ ದಾರಿ. ಇಕ್ಕೆಲಗಳಲ್ಲಿ ಅಶೋಕವೃಕ್ಷದ ಸಾಲು ಮರಗಳು. ಚೂಪಾಗಿ ತೇರಿನಂತೆ ಆಗಸದತ್ತ ಮುಖ ಮಾಡಿವೆ. ಮುಂದೆ ಅಗಲದ ಕಿರು ಗೋಡೆಯ ಪಾಗಾರ. ಅಲ್ಲಿಯೂ ಸೇವಾಶ್ರಮದ ಇನ್ನೊಂದು ಫಲಕ.ಇದರ ಬಲಭಾಗದಲ್ಲಿ ಆಳೆತ್ತರದ ಗಣೇಶನ ವಿಗ್ರಹ, ಎಡಭಾಗದಲ್ಲಿ ಮಹಾತ್ಮಾ ಗಾಂಧೀಜಿಯ ಪ್ರತಿಮೆ. ಅಲ್ಲಿಂದ ಮುಂದೆ ವೃತ್ತಾಕಾರದ ಹಸಿರುಹುಲ್ಲಿನ ಖಾಲಿಜಾಗ. ಅದರ ಮಧ್ಯೆ ಉದ್ದದ ಕಂಭವಿರುವ ಸಿಮೆಂಟಿನ ಒಂದು ಕಟ್ಟೆ. ಪ್ರತಿದಿನ ಬೆಳಿಗ್ಗೆ, ಸಂಜೆ ಸಾಮೂಹಿಕ ಪ್ರಾರ್ಥನೆ, ಕವಾಯತು ಮಾಡುವುದು ಅಲ್ಲಿಯೇ. ಎದುರು ಕೆಂಪು ಬಣ್ಣ ಹೊದ್ದ ಸೇವಾಶ್ರಮದ ಎರಡು ಮಹಡಿಯ ದೊಡ್ಡಕಟ್ಟಡ. ಹಿಂಭಾಗದಲ್ಲಿ ಮರದ ಸಣ್ಣ ಗೇಟು ದಾಟಿದರೆ ವಸತಿ ಗೃಹಗಳು, ಅಡಿಗೆ ಮನೆ, ಊಟದ ಕೋಣೆ, ಸಾಮಾನು ಶೇಖರಣೆಯ ಕೋಣೆ, ಉರುವಲಿಗೆ ವ್ಯವಸ್ಥೆ ಇತ್ಯಾದಿ. ಇದರಾಚೆ ಕಾಣುತ್ತದೆ ಹಸಿರು ವೃಕ್ಷಗಳು. ಸಾಗುವಾನಿ, ತೇಗ, ಗೇರು, ಮಾವು ಹಲಸಿನ ಮರಗಳ ತೋಪು. ಸವೆದುಹೋದ ಕಿರುದಾರಿಯಲ್ಲಿ

ನಡೆದರೆ ವೃಕ್ಷ ಸಂಪತ್ತಿನ, ಬಳ್ಳಿ ಲತೆಗಳ, ಕಿರುಹೂವು ಕಾಡು ಪುಷ್ಪಗಳ ಸಮೃದ್ಧ ತಂಪು ನೆರಳಿನ ಹಾಸಿಗೆ. ಕೇದಗೆ, ಸಂಪಿಗೆ, ಪಾರಿಜಾತಗಳ ಕಮನೀಯ ಸುವಾಸನೆ ಬೆರೆತ ಮಂದಮಾರುತ, ಹಕ್ಕಿಗಳ ಇಂಪಾದ ಗುಂಜಾವರ, ಬಿಸಿಲು ಬೆಳದಿಂಗಳ ನೋಟದಲ್ಲಿ ಪ್ರಕೃತಿಯೇ ಸೌಂದರ್ಯದ ಖನಿ. ನೋಡುತ್ತಿದ್ದರೆ ಇದೇನಿದು ಗಂಗೊಳ್ಳಿಯ ಹೊಳೆಬಾಗಿಲು ಇಲ್ಲೇ ಇದೆ ಎನ್ನುವಂತೆ. ದಿಟ, ಪ್ರಕೃತಿ ತನ್ನ ಸೌಂದರ್ಯವನ್ನು ಬೇಧಭಾವವಿಲ್ಲದೆ ಭುವಿಯಲ್ಲಿ ಎಲ್ಲರಿಗೂ ಉಣಬಡಿಸುತ್ತದೆ. ಗೌರಿ ಸುಶೀಲಚಿಕ್ಕಿಯ ಜೊತೆ ಈ ಜಾಗಕ್ಕೆ ಬಂದಿಳಿದಾಗ ಕಣ್ಣಿಗೆ ಕಂಡದ್ದು ಕಲ್ಲು ಸಿಮೆಂಟಿನ ಕಟ್ಟಡವಲ್ಲ, ಅದೋ ಆ ದಟ್ಟ ಕಾಡು! ಅದರ ಅನುಭೂತಿ ಅವಳ ಎದೆಯಾಳದಲ್ಲಿ ಹೊಸ ಭಾವ ಚಿಮ್ಮಿಸಿ ಎಲ್ಲಿ ನೋಡಿದರಲ್ಲಿ ಆನಂದದ ಕೋಲಾಹಲ.

ವಾಸ್ತವ್ಯಕ್ಕೆ ಸುಶೀಲಚಿಕ್ಕಿಯ ಕೋಣೆಯಲ್ಲಿ ಏರ್ಪಾಟಾಗಿತ್ತು. "ಗೌರಿ ನಮ್ಮ ಮನೆಯಲ್ಲಿರಲಿ. ಪ್ರತಿದಿನ ಸೇವಾಶ್ರಮಕ್ಕೆ ಹೋಗಿಬರಲು ಬಸ್ಸುಗಳಿವೆ" ಎಂದಿದ್ದ ರಘು ದೊಡ್ಡಪ್ಪ.

ಸುಶೀಲಚಿಕ್ಕಿ ಒಪ್ಪಲಿಲ್ಲ. ಸಣ್ಣ ಹುಡುಗಿ. ಇನ್ನೊಂದು ವರ್ಷಕ್ಕೆ ಹರಯ ಕಾಲಿಡುತ್ತದೆ. ತನ್ನ ಜವಾಬ್ದಾರಿಯಲ್ಲಿ ಕರೆತಂದಿದ್ದಳು. ಅನಂತಯ್ಯನಂತೆ ಆ ಜವಾಬ್ದಾರಿಯನ್ನು ರಘುವಿನ ಹೆಗಲಿಗೇರಿಸಿದರೆ ಅದು ತನ್ನ ತತ್ವಕ್ಕೆ ವಿರೋಧ. ತನ್ನಲ್ಲಿದ್ದು ಆರನೇ ಇಯತ್ತೆಯ ಪಾಠ ಓದಿ ಪರೀಕ್ಷೆಗೆ ಬರೆಯಲಿ. ಕಡಿಮೆ ಅಂಕ ಬಂದರೆ ಐದನೇ ಇಯತ್ತೆಗೆ ದಾಖಲಾತಿ ಮಾಡಿಕೊಳ್ಳುವ ಸಮ್ಮತಿ ಸಿಕ್ಕಿದೆ ಶಾಲೆಯಿಂದ. ಹುಬ್ಬಳ್ಳಿಯಿಂದ ಹೊರಡುವಾಗ ಆಯಿ, "ಗೌರಿಗೆ ಬೇಜಾರು ಬಂದ್ರೆ ಒಂದು ಕಾಗ್ದ ಗೀಚಿ ಹಾಕು. ಅವಳ ಅಪ್ಪಯ್ಯ ಬಂದು ಕರೊಂಡು ಹೋಗ್ತವು" ಎಂದಿದ್ದಳು. ಆಗ ಚಕ್ರಿಅಮ್ಮಮ್ಮ ಗೌರಿಯ ನೆತ್ತಿಗೆ ಮುದ್ದಿಟ್ಟು, "ಬ್ಯಾಸ್ರ, ದುಃಖ ಹೇಳಿ ಶಾಲೆಗೆ ಹೋಗ್ದೆ ಸೋಮಾರಿ ಆದಿಯೋ ಗೌರಿ, ನಿನ್ನ ಕಾಲಿಗೆ ನೀನೇ ಚಪ್ಪಡಿಕಲ್ಲು ಎಳ್ಕತ್ತೆ. ಕಲಿತು ದೊಡ್ಡವಳಾಗ್ಬೇಕು ನನ್ನ ಮೊಮ್ಮಗಳು, ನೆನಪಿಟ್ಕಾ' ಎಂದದ್ದು ನೆನಪಾಗುತ್ತದೆ.

ಗೌರಿಗಿಂತ ಅವಳಿಗೇ ಸಂಭ್ರಮ ಜಾಸ್ತಿ. ಈ ಸೇವಾಶ್ರಮವೆಂದರೆ ಮಹಾತ್ಮ ಗಾಂಧೀಜಿಯ ಹೆಜ್ಜೆಯನ್ನು ಅನುಸರಿಸುವ ಆಶ್ರಮ. ಅದರ ಆದರ್ಶದ ಬಗ್ಗ ಕೇಳಿ ತಿಳಿದಿದ್ದ ಅಮ್ಮಮ್ಮ ಗೌರಿಗೆ ಸರಿಯಾದ ಕಡೆ ಕಲಿಯುವ ಅವಕಾಶ ಬಂತೆಂದು ಎಷ್ಟು ಬಾರಿ ದೇವರನ್ನು ಸ್ಮರಿಸಿದಳೋ. ಒಂದಕ್ಷರದ ಅರಿವು ಇಲ್ಲದಿದ್ದರೂ ಕಟ್ಟಾ ವ್ಯವಹಾ[illegible] ತನ್ನ ಸೀರೆಯ ಒಳಗಿಟ್ಟು ತಂದಿದ್ದ ಸಣ್ಣ ಚೀಲವನ್ನು ಅವಳ ಕೈಗಿತ್ತು "ಮನೆ[illegible] ದೂರ ಇರ್ತೆ,ಇಕಾ, ನಿನ್ನ ಧೈರ್ಯಕ್ಕೆ ಇರಲಿ." ಬಿಡಿಸಿದರೆ ಅದರ ತುಂಬ ಒಂದು ರೂಪಾಯಿಗಳ ಚಿಲ್ಲರೆ ನಾಣ್ಯಗಳು, ಒಂದಷ್ಟು ನೋಟಿನ ಕಟ್ಟುಗಳು. "ಇಷ್ಟು ದುಡ್ಡು!

ಅಪ್ಪಯ್ಯ ಕೊಟ್ಟಿದ್ದೇ ಹೆಚ್ಚಿದ್ದು" ಗೌರಿ ಹೇಳಿದರೆ "ಸುಮ್ಮನಿರು. ಕೊಟ್ಟದ್ದು ಹೆಚ್ಚಾಗ. ಪರಸ್ಥಳ. ಯಾರ ಹತ್ರಾನೂ ಹಲ್ಲು ಗಿಂಜೂಕಾಗ. ನಮ್ಮ ಸ್ವಾಭಿಮಾನ ಬಿಡೂಕಾಗ." ಅಂದಳಲ್ಲದೆ, "ನೀ ನಿನ್ನೆ ಕುರುಡನ ಪರ ನಿಂತು ಹಿಂಸೆ ನಿಲ್ಲಿಸಿ ಸತ್ಯದ ನಡೆ, ಸಹೃದಯದ ನಡೆ ತೋರ್ಸಕೊಟ್ಟೆ, ನಿನ್ನ ಅನುಕಂಪದ ಅಂತಃಕರಣ ಆ ಹುಡುಗನಲ್ಲಿ ಏನು ಮೋಡಿ ಮಾಡಿತೋ! ಹೀಂಗೆ ಎಲ್ಲಿರ್ತಿಯೋ ಅಲ್ಲಿ ನಿನ್ನತನ ಬಿಡ್ಬೇಡ ಗೌರಿ." ಅಮ್ಮಮ್ಮನ ಕಣ್ಣು ತುಂಬಿತ್ತು.

ನನ್ನತನ ಬಿಡಬಾರ್ದುಎಂದರೇನು ತಿಳಿಯಲಿಲ್ಲ ಗೌರಿಗೆ. ಸುಶೀಲಚಿಕ್ಕಿಯ ವಾತ್ಸಲ್ಯ, ಪ್ರೀತಿಯ ಹೊದಿಕೆಯಲ್ಲಿ ಚಕ್ರಿ ಅಮ್ಮಮ್ಮನ ಸೀರೆಯ ನವಿರಾದ ಕಂಪಿತ್ತು. ಅವಳು ಹೇಳಿದ್ದನ್ನು ತಪ್ಪದೆ ಪಾಲಿಸುವ ಅಂತಃಕರಣದ ಹೃದಯವಿತ್ತು. ಅವಳಷ್ಟೇ ವಯಸ್ಸಿನ ಪ್ರಕಾಶ ಗುರುತಿಸಿದ್ದೂ ಅದನ್ನೇ. ಹುಬ್ಬಳ್ಳಿಯಲ್ಲಿ ತಾವು ಹೊಡೆದು ಚಚ್ಚಿದರೂ ಆಮೇಲೆ ಸ್ನೇಹದ ನಗು ಬೀರಿದ ಗೌರಿ, ಅವಳ ಸಮಾಧಾನಚಿತ್ತದಿಂದ ಆಕರ್ಶಿತನಾಗಿ ಆದಿನ ಸಂಜೆ ಕುದುರೆಗಾಡಿಯಲ್ಲಿ ತಾನೂ ಅವರೊಡನೆ ಹೊರಡಲು ಸಿದ್ಧನಾಗಿದ್ದ. ಆಗ ವಿಷ್ಣು, "ಅವರ ಜೊತೆ ಹೋಗಿ ಇನ್ನೇನಾರ ಬಾನಗಡಿ ಮಾಡಾಕ ಹತ್ತಿದರ ನಿನ್ನ ಕಂಟ್ರೋಲ್ ಮಾಡಾಕ ಕಷ್ಟ ಅದ. ಸುಮ್ಮನಿರು" ಹೇಳಿದ್ದು ಲಜ್ಜಿತನನ್ನಾಗಿ ಮಾಡಿತ್ತು. ಈ ಕಾರಣದಿಂದಲೇ ಮರುದಿನ ನಸುಕಿನಲ್ಲೇ ಗೌರಿಗೆ ವಿದಾಯ ಹೇಳಲು ಬಂದವನು ಧಾರವಾಡದ ಫ್ಲೇಡಾ ಮತ್ತು ಒಂದು ಪುಸ್ತಕದ ಕಟ್ಟು ಕೊಟ್ಟಿದ್ದ, "ವಿಷ್ಣು ಮಾವ ನಿನಗೆ ಓದೂ ಹುಚ್ಚು ಅದ ಅಂದಿದ್ದ, ಮಕ್ಕಳ ಇಂಗ್ಲೀಷ್ ಕಥಿ ಪುಸ್ತಕಾ ಅದಾವ ಇದರೊಳಗ. ಓದಾಕ ಬರದಿದ್ರ ನನ್ನ ಬೈ ಬೇಡ."

"ನಾ ಇಂಗ್ಲೀಷ ಕಲೀಬೇಕು. ಕಲ್ತ ಮೇಲೆ ಖಂಡಿತ ಓದ್ತೆ." ಹೇಳುತ್ತ ಸ್ನೇಹ ಹಸ್ತ ಚಾಚಿದ್ದಳು, "ನಾ ಇನ್ನೊಂದಷ್ಟು ಸಮಯ ಸಿರ್ಸಿನಲ್ಲಿ ಇರ್ತೆ. ಅಲ್ಲಿ ಟಪ್ಪಾಲು ಇತ್ತು. ಇಂಗ್ಲೀಷಲ್ಲೇ ಕಾಗ್ದ ಬರಿ. ಅಕ್ಷರ ಕೂಡ್ಸಿ ಚಿಕ್ಕಿ ಹತ್ರ ಕೇಳಿ ಓದ್ತೆ. ಮತ್ತೆ ನಿಂಗೆ ಎಂತ ಆಯೆಕ್ಕು ಆ ಕಣ್ಣಿಲ್ಲದ ಹುಡುಗ?"

"ದೂರದ ಸಂಬಂಧಿ, ಅವನ ಅಪ್ಪ ಅಮ್ಮ ಬಡವರು. ಆದರೂ ಕುರುಡರ ಸಾಲೀಗ ಸೇರಸ್ಯಾರ. ಬ್ರೈಲ್ ಲಿಪಿಯಲ್ಲಿ ಕಲೀಲಿಕ್ಕ ಹತ್ಯಾನ. ಅವ್ನ ನೆನ್ಪು ತಗದರ ನಿನ್ನಿದು ನೆನ್ಪಾಗಿ ಬೇಸ್ರ ಬರ್ತದ. ಬಿಡು. ನನ್ನ ತಂದಿ ಹತ್ರ ಹೇಳೀನಿ, ಅವ್ನಿಗೆ ಬ್ಯಾರೆಯವರು ಕಣ್ಣು ದಾನ ಮಾಡ್ತಾರಂದ್ರ ನಾವೇ ಖರ್ಚು ಹಾಕೋಣ ಅಂದೀನಿ.ಹೂಂ ಅಂದಾರ. ಅಷ್ಟೇ ಅಲ್ಲ, ಅವನ ಶಿಕ್ಷಣದ ಖರ್ಚ ಕೂಡಾ ನಾವೇ ಬರಸೋಣ ಅಂದೆ. ಅದಕ್ಕೂ ಒಪ್ಪಿ ಕೊಂಡಾರ. ನಿಂಗೆ ಸಮಾಧಾನ ಆತಲ್ಲ? ನಂಗೂ ನಾ ಮಾಡಿದ ಹುಡುಗಾಟಕ್ಕೆ ಪ್ರಾಯಶ್ಚಿತವೂ ಆತು. ಏನಂತಿ?"

ಇಲ್ಲಿಗೆ ಬಂದ ನಂತರ ಹಲವು ದಿನ ಪ್ರಕಾಶನ ಮಾತುಗಳು, ಹುಡುಗರ ಕೈಯ್ಯಿಂದ ಪೆಟ್ಟು ತಿಂದದ್ದು, ಅನಂತರ ನಡೆದದ್ದು ಇದೇ ನೆನಪುಗಳು. ಹೊಳೆಯ ನೀರಿನಲೆ ರಭಸದಿಂದ ಮೇಲೆ ತೇಲಿ ಬಂದಂತೆ. ರಾತ್ರೆ ಸುಶೀಲಚಿಕ್ಕಿ ಆಶ್ರಮದ ವಹಿವಾಟು ಮುಗಿಸಿ ಕೋಣೆಗೆ ಬರುವಾಗ ಅವಳು ಲಾಟೀನು ಬೆಳಕಿನಲ್ಲಿ ಪಾಠ ಓದಿಕೊಳ್ಳುತ್ತಾಳೆ, ಪಾಟಿಯಲ್ಲಿ ಬರೆದು ಉರು ಹೊಡೆಯುತ್ತಾಳೆ. ಇಲ್ಲಿ ಹುಬ್ಬಳ್ಳಿಯಂತೆ ವಿದ್ಯುತ್ ದೀಪದ ಬೆಳಕಿಲ್ಲ. ಲಾಟೀನು, ಬತ್ತಿ ದೀಪಗಳು. ಚಿಕ್ಕಿ ಹತ್ತಿರ ಬಂದು ತಮ್ಮಿಬ್ಬರ ಹಾಸಿಗೆ ಹಾಕಿ ಪಾಠಗಳ ಪ್ರಶ್ನೆ ಕೇಳುವ ಮೊದಲೇ ಗೌರಿಗೆ ನಿದ್ದೆ. ಅಲ್ಲಲ್ಲ, ನಿದ್ದೆ ಬಂದಂತೆ ನಟನೆ! ಚಿಕ್ಕಿಯ ಓದಿಸುವ ಕಾಯಕಕ್ಕೆ ವಿರಾಮ!

ಆಶ್ರಮದಲ್ಲಿ ಸುಶೀಲಚಿಕ್ಕಿಯ ಸಹಾಯಕ್ಕೆ ಇನ್ನಿಬ್ಬರು ಅರ್ವತ್ತು ವರ್ಷ ಮೀರಿದ ಸಹಾಯಕಿಯರಿದ್ದಾರೆ. ಒಟ್ಟು ಅಲ್ಲಿ ನೆಲೆ ನಿಂತವರು ಸಿರ್ಸಿ ಅಲ್ಲದೆ ಬೇರೆ ಭಾಗಗಳಿಂದ ಬಂದ ನಲ್ವತ್ತೈದು ಹೆಂಗಸರು, ನಾಲ್ಕು ಹುಡುಗಿಯರು, ಎಂಟು ಮಂದಿ ಗಂಡಸರು. ಕೇಸರಿ ಬಣ್ಣದ ಬಿಳಿ ಸೀರೆಹೆಂಗಸರಿಗೆ, ಬಿಳಿ ಪಂಚೆ, ಅಂಗಿ, ಕೇಸರಿಶಾಲು ಗಂಡಸರಿಗೆ. ಎಲ್ಲರಿಗೂ ಸಮವಸ್ತ್ರದ ನಿಯಮ. ಹಾಲು ಮಜ್ಜಿಗೆ ಊಟ ತಿಂಡಿ ಯಥೇಷ್ಟ. ಹಾಲು ಕರೆಯುವ ಮೂರು ದನಗಳಿವೆ. ನಾಲ್ಕಾರು ಜನಕ್ಕೆ ಹಾಲು ಕರೆಯುವುದು ಗೊತ್ತು. ಉಳಿದಂತೆ ಅಡಿಗೆ ತಿಂಡಿ ಸಿದ್ಧತೆ, ಪಾತ್ರೆ ತಿಕ್ಕು, ಗುಡಿಸು, ಒರಸು ಇತ್ಯಾದಿ ಕೆಲಸಹಂಚಿಕೊಂಡು ಮಾಡುತ್ತಾರೆ. ಗೌರಿ ಸುಮ್ಮನೆ ಇರುವವಳಲ್ಲ. ಕೈ ಜೋಡಿಸಲು ಹೋಗುತ್ತಾಳೆ. ಓದಲು ಬಂದ ಹುಡುಗಿ, ತಮ್ಮ ಮೇಲ್ವಿಚಾರಕಿಗೆ ಬೇಕಾದವಳು. ಎಲ್ಲರೂ ಅವಳನ್ನು ತಲೆ ಮೇಲೆ ಹೊತ್ತು ಕೆಲಸ ಕೊಡುವುದಿಲ್ಲ. ಆಗೆಲ್ಲ ಗೌರಿ ಅಂಗಳದಲ್ಲಿ, ಕಾಡಿಗೆ ಹೋಗುವ ಕಿರು ದಾರಿಯಲ್ಲಿ ಸ್ವಲ್ಪ ದೂರ ನಡಿಗೆ. ಕಾಡಿನಲ್ಲಿತುಂಬ ಒಳಗೆ ಒಬ್ಬಳೇ ಹೋಗಬಾರದೆಂದು ಎಚ್ಚರಿಸಿದ್ದಾಳೆ ಚಿಕ್ಕಿ. ಹಾಗಂತ ಅಲ್ಲಿ ಚಿರತೆ, ಹುಲಿ ಇಲ್ಲ. ಹಾವು ಹರಣೆಗೆ ಬರಗಾಲವಿಲ್ಲ. ತೋಳಗಳು ಇವೆ ಅಂತ ಸುದ್ದಿ. ಯಾರೂ ಈ ತನಕ ಕಂಡಿಲ್ಲ. ನವಿಲು ಬೇಕಷ್ಟಿವೆ. ಒಂದು ದಿನ ಗೌರಿ ಯಾರಿಗೂ ಹೇಳದೆ ಒಬ್ಬಳೇ ಕಾಡಿನಲ್ಲಿ ತನ್ನಪಾಡಿಗೆ ಗುನುಗುತ್ತ ಬಹಳ ದೂರ ಹೋಗಿ ಚಿಕ್ಕಿಗೆ ಗೊತ್ತಾಗಿ ಅವಳಿಂದ ಬೈಸಿಕೊಂಡು ನಂತರ, "ನಾ ಎಂತ ಮಗು ಅಂದುಕೊಂಡ್ಯಾ ಚಿಕ್ಕಿ? ಹೊಳೆಬಾಗಿಲಲ್ಲಿ ನಾನು ನಾಣಿ ದಿನವೆಲ್ಲ ತಿರುಗಾಡಿ ಅಭ್ಯಾಸ ಇದ್ದವರು." ಭುಜ ಕುಣಿಸಿದ್ದಳು. ಹೊಳೆಬಾಗಿಲಿನಂತೆ ಇದು ಕುರುಚಲು ಕಾಡಲ್ಲವೆಂದು ಗೊತ್ತಾದ ನಂತರ ದೂರ ಹೋಗದಿದ್ದರೂ ಕಾಡಿನ ತಂಪು ನೆರಳಲ್ಲಿ ಪ್ರತಿ ಬೆಳಿಗ್ಗೆ ಅವಳ ತಿರುಗಾಟ. ಮಂದಾರ, ಪಾರಿಜಾತ, ಬಕುಳ, ಹೊನ್ನೆ ಹೂವುಗಳ ಮಧುರ ಕಂಪಿನಲ್ಲಿ ಸುಯ್ಲಿಡುವ ಗಾಳಿ ಗಂಧ ತೀಡಿದಂತೆ ಇಡೀ ಪೃಥ್ವಿಯನ್ನೇ ಹೊದ್ದು ಮಲಗಿರುತ್ತದೆ. ಮಂಜಿನಲ್ಲಿ ತೊಯ್ದು ಅರಳುವ ಪುಷ್ಪಗಳ ಮಕರಂದ ಹೀರಲು ಬರುವ ಜೇನ್ನೊಣ,

ದುಂಬಿಗಳ ಸಂಭ್ರಮದ ಹಾಡು ಅಷ್ಟ ದಿಕ್ಕುಗಳಲ್ಲಿ ಝೇಂಕರಿಸುವಾಗ ಅದೋ ಅಲ್ಲಲ್ಲಿ ಹಾರುವ ಚಿಟ್ಟೆ, ಬಣ್ಣ ಬಣ್ಣದ ಪಾತರಗಿತ್ತಿ, ಓಡುವ ಅಳಿಲುಗಳು ಅರೆರೆ! "ಎಲ್ಲಿದ್ದಿಯೋ ನಾಣಿ, ಬಾ, ಕಾಡಿನ ಸುತ್ತ ನಾವಿಬ್ಬರೇ ಕೈಯ್ಯಲ್ಲಿ ಕೈ ಹಿಡಿದು ಸುತ್ತು ಹಾಕಿ ಬರೋಣ" ಕರೆಯುತ್ತಾ ಓಡುತ್ತಾಳೆ. ಒಂದೆರಡು ಪಾತರಗಿತ್ತಿಗಳು ಅವಳ ಅಂಗೈಗೆ ಬಂದು ಸುಮ್ಮನೆ ಪಟ ಪಟ ರೆಕ್ಕೆ ಬಡಿದರೆ, "ನಾಣಿ, ನೋಡಿಲ್ಲಿ, ನಾ ಹಿಡಿದೇ ಬಿಟ್ಟೆ." ಎನ್ನುತ್ತಾಳೆ. ನಾಣಿ ನೋಡಿದನೇ? ಅವಳ ಮಾತು ಕೇಳಿಸಿತೇ ಅವನಿಗೆ?ಇಲ್ಲವಲ್ಲ!

ಆಶ್ರಮದ ಕಿರಿಯರಿಗೆ, ಹಿರಿಯರಿಗೆ ತೂಗಿಕೊಳ್ಳಲು ಹೂದೋಟದಲ್ಲಿ ಗಟ್ಟಿ ಹಗ್ಗದಿಂದ ಕಟ್ಟಿದ ಜೋಕಾಲಿ ಇದೆ. ಗೌರಿ ಅದರಲ್ಲಿ ಕುಳಿತು ತೂಗುತ್ತಿದ್ದರೆ ಎದುರಿನಲ್ಲಿ ಕಾಣಿಸುತ್ತಾಳೆ ಚಕ್ರಿ ಅಮ್ಮಮ್ಮ. ಮಕ್ಕಳಾದ ನಮಗೆ ಹೊಳೆಬಾಗಿಲು ಮನೆ ಎದುರು ಅಂಗಳದಲ್ಲಿ ಹೀಗೆ ಜೋಕಾಲಿ ಕಟ್ಟಿಸಿದವಳು ಅವಳೇ. ಆದಿನ "ತೂಗಿರೆ ರಂಗನ್ನ, ತೂಗಿರೆ ಕೃಷ್ಣನ್ನ" ಎನ್ನುತ್ತ ಮುಗಿಲು ಮುಟ್ಟಿದ ತನ್ನ ಮತ್ತು ನಾಣಿಯ ಸಂಭ್ರಮದಲ್ಲಿ ಅಮ್ಮಮ್ಮ ತಾನೂ ಮಗುವಾಗಿದ್ದಳು. ದಿನಾ ಜೋಕಾಲಿ ತೂಗ್ತಾ ಮರದೆತ್ತರಕ್ಕೆ ಹೋಪಾಗ ಎಂತ ಖುಷಿ! ಕಾಲ ಬೆರಳಿಂದ ನೆಲ ನೂಕಿ ನೂಕಿ ಮೇಲೇರಬೇಕು. ಆ ಖುಷಿ ಇಲ್ಲಿ ಎಲ್ಲಿದೆ? ನಾಣಿಯಿಲ್ಲದೆ ಬೇಜಾರು. ಚೂರು ತೂಗಿಕೊಂಡ್ರೆ ಸಾಕು, ನಾಣಿಯ ಗಲಗಲ ನಗು ನೆನಪಾಗಿ ಜೋಕಾಲಿ ನಿಲ್ಲುತ್ತದೆ ಅಲ್ಲಿಗೇ. ತೂಗು ಹಗ್ಗಕ್ಕೆ ತಲೆ ಆನಿಸಿ ಮೌನವಾಗಿ ತನ್ನೊಳಗೇ ಕೇಳುತ್ತಾಳೆ, "ಎಲ್ಲಿದ್ದಿ ನಾಣಿ?" ಅವನು ಉತ್ತರಿಸುವನೇ? ಇಲ್ಲವಲ್ಲ!

ಅವಳಿಗೀಗ ಆಶ್ರಮದ ವಿವಿಧ ಚಟುವಟಿಕೆಯಲ್ಲಿ ಮಗ್ನಳು. ಆಶ್ರಮದಲ್ಲಿ ಕೆಲವು ಪಾಲಿಸಬೇಕಾದ ನಿಯಮಗಳಿವೆ. ಪ್ರತಿದಿನ ಪ್ರಾರ್ಥನೆ, ವ್ಯಾಯಾಮ, ಎಳೆ ಬಿಸಿಲಿನಲ್ಲಿ ಕವಾಯತು. ಆಗಾಗ ಜ್ಞಾನಕ್ಕಾಗಿ ಬೌದ್ಧಿಕ ಉಪನ್ಯಾಸಗಳು, ಬೇರೆ ಭಾಗದಿಂದ ಆಗಮಿಸುವ ಗಣ್ಯರಿಂದ ಭಾಷಣಗಳು. ದೇಶ ಪ್ರೇಮ, ದೇಶ ಭಕ್ತಿ ಹೆಚ್ಚಿಸುವ ಆವೇಶದ ಮಾತುಗಳು, ಪದ್ಯಗಳು ಜಡಚೇತನವನ್ನು ಬಡಿದೆಬ್ಬಿಸಿ ಉತ್ಸಾಹ, ನವ ಚೈತನ್ಯ ತುಂಬಿಸುವ ಕಾರಂಜಿಗಳು. ಗಾಂಧೀಜಿ ಇಂದಿನ ಸ್ತ್ರೀಯರಿಗೆ ಅವರ ಧರ್ಮ, ಶೀಲ, ಮಾತೃತ್ವದ ಮಹಾನತೆ ವಿವರಿಸಿ, "ಭಾರತಮಾತೆ ದಾಸ್ಯ ಶೃಂಕಲೆಯಲ್ಲಿದ್ದಾಳೆ. ನಿಮ್ಮ ತನು ಮನ, ಧನ ಅರ್ಪಿಸಿ ಅವಳನ್ನು ಕಾಪಾಡಿ. ನಿಮ್ಮ ಚಿನ್ನಾಭರಣದ ಸಹಾಯ ಮಾಡಿ. ಸರಳತೆಯೇ ನಮ್ಮ ಆದರ್ಶವಾಗಲಿ. ನಿಮ್ಮ ಮಕ್ಕಳನ್ನು ವೀರ ಯೋಧರನ್ನಾಗಿ ಮಾಡಿ" ಹೇಳಿದ ಉಪದೇಶಗಳು. ಗೌರಿಗೆ ಇದೆಲ್ಲ ಹೊಸದು, ಆಸಕ್ತಿದಾಯಕ. ಒಬ್ಬರ ಉಪನ್ಯಾಸದಲ್ಲಿ ಜಲಿಯನ್‌ವಾಲಾ ಭಾಗನಲ್ಲಿ ಬ್ರಿಟಿಷರು ನಡೆಸಿದ ಹಿಂದುಗಳ ದಾರುಣ ಹತ್ಯಾಕಂಡವನ್ನು ವಿವರಿಸಿದ್ದರು. ಈ ಮೊದಲೇ ಸುಶೀಲಚಿಕ್ಕಿಯಿಂದ ಈ ಪ್ರಕರಣ ಕೇಳಿದ್ದರೂ ಆ ರಾತ್ರೆ ನಿದ್ದೆಯಲ್ಲೂ ಬೆಚ್ಚಿ ಬಿದ್ದಿದ್ದಳು. ಮತ್ತೊಂದು ದಿನ ಉಪನ್ಯಾಸದಲ್ಲಿ ಬ್ರಿಟಿಷ ಅಧಿಕಾರಿಯನ್ನು

ಕೊಂದು ಅಸೆಂಬ್ಲಿಯಲ್ಲಿ ಬಾಂಬ್ ಹಾಕಿದ ಭಗತಸಿಂಗ್, ರಾಜಗುರು ಮತ್ತು ಸುಖದೇವ ಈ ಮೂವರು ಯುವಕರನ್ನು ನೇಣುಗಂಭಕ್ಕೆ ಏರಿಸಿದ ವಿಷಯವಿತ್ತು. ಇನ್ನೂ ಇಪ್ಪತ್ತೈದು ಮೀರದ ಆ ಬಿಸಿ ಕೆಚ್ಚೆದೆಯ ಯುವಕರ ಕಥೆ ಕೇಳಿಯೇ ಗೌರಿಗೆ ಮೈಯೆಲ್ಲ ನಡುಕ. ಅವರ ಜಾಗದಲ್ಲಿ ನಾಣಿಯನ್ನು ಇಟ್ಟು ನೋಡಿ ಬೆಚ್ಚಿ ಬಿದ್ದಿದ್ದಳು. ನಾಣಿ ಕುದ್ರುವಿನಲ್ಲಿ ಇಪ್ಪದ್ದು ಒಳ್ಳೆದಾಯ್ತು. ಈ ಸ್ವಾತಂತ್ರ್ಯದ ಬಿಸಿ ಆ ಮಗೂಗೆ ತಟ್ಟದಾಂಗೆ ಇರಲಿ. ಅಪ್ಪಯ್ಯಂಗೆ ಹೇಳೆಕ್ಕು, ಅವನು ಸಾಸ್ತಾನಕ್ಕೆ ಹೋಪದೇ ಬ್ಯಾಡ. ಅಲ್ಲೋ, ಸಣ್ಣ ವಿಷಯಕ್ಕೂ ಒಂದಲ್ಲ ಒಂದು ಗಲಾಟೆ, ಪ್ರತಿಭಟನೆ. ಇವ ಹೋಗಿ ಸಿಕ್ಕಿ ಹಾಕ್ಕಂಡ್ರೆ ಪಚೀತಿ. ಇವತ್ತೇ ಅಪ್ಪಯ್ಯಂಗೆ ಕಾಗ್ದ ಬರೀತೆ.

ಇದರಂತೆ ಸ್ವಾತಂತ್ರ್ಯ ಕಿಚ್ಚಿಗೆ ಕಾರಣವಾದ ನೈಜ ಸುದ್ದಿ ಹೇಳುತ್ತಿದ್ದರೆ ಆಶ್ರಮದಲ್ಲಿ ಎರಡು ದಿನವೆಲ್ಲಾ ಇದೇ ಚರ್ಚೆ. ಅವರ ನರಮೇಧ ಯಜ್ಞವನ್ನು ಪ್ರತಿಭಟಿಸಿ ಮೆರವಣಿಗೆ ಮಾಡೋಣವೆಂದು ಕೆಲವರು ಅಭಿಪ್ರಾಯ ವ್ಯಕ್ತ ಪಡಿಸುತ್ತಿದ್ದರು. ಆಗ ಸುಶೀಲಚಿಕ್ಕಿ ಸ್ವರ ಏರುತ್ತಿತ್ತು,

"ಕಳೆದುಹೋದ ವಿಷಯಕ್ಕೆ ಪ್ರತಿಭಟನೆಯೇ? ಸರಿಯಲ್ಲ. ನಾವೀಗ ಮಾಡಬೇಕಾದ್ದು ಸ್ವದೇಶಿ ವಸ್ತುಗಳ ಪುರಸ್ಕಾರ, ವಿದೇಶಿ ವಸ್ತುಗಳ ತಿರಸ್ಕಾರ. ಇಡೀ ದೇಶದಲ್ಲಿ ಈ ಭಾವನೆ ಕಾಳ್ಗಿಚ್ಚಿನಂತೆ ಹಬ್ತಾ ಇದೆ." ಜೊತೆಗೆ "ನಮ್ಮ ಮಹಿಳೆಯರ ಅಜ್ಞಾನ, ಮೂಢನಂಬಿಕೆ, ಅನಕ್ಷರತೆ ತೊಲಗಿಸುವ ವಿಷಯದಲ್ಲೂ ಹೆಚ್ಚು ಕ್ರಿಯಾಶೀಲ ರಾಗಬೇಕು"ಎನ್ನುತ್ತಿದ್ದಳು.

ಗೌರಿಗೆ ಅಚ್ಚರಿ. ಆವತ್ತು ಹೊಳೆಬಾಗಿಲಿನ ಅಂಗಳದಲ್ಲಿ ಹನುಮನ ಎದುರು ತಲೆ ಬಗ್ಗಿಸಿ ಕುಳಿತ ಚಿಕ್ಕಿ ಇವಳೆಯೇ? ಆಗಎಷ್ಟು ಮುಗ್ಧಳು,ಹಿರಿಯರ ಸಂಪ್ರದಾಯ ಧಿಕ್ಕರಿಸಲಾಗದೆ ಮೌನವಾಗಿ ಕುಳಿತವಳು ಯಾವಾಗ ಹನುಮ ಹಿಂದೆ ಸರಿದನೋ ಇವಳೂ ಸೆಟೆದು ಒಳ ನಡೆದಿದ್ದಳು. ಗೌರಿ ಇನ್ನೂ ಮರೆತಿಲ್ಲ. ಇಂತಹ ಹಲವು ಹತ್ತುಸಂಗತಿ ಸುಶೀಲಚಿಕ್ಕಿಯ ದಟ್ಟ ಕೂದಲಿನಲ್ಲಿ ಮುಚ್ಚಿ ಹೋಗಿದೆ. ಚಿಕ್ಕಿ ಆಶ್ರಮ ಸೇರುವಾಗ ಇಲ್ಲಿ ಮಧ್ಯವಯಸ್ಸಿನ ಇಬ್ಬರು ಬೋಳು ತಲೆ, ಕೆಂಪುಸೀರೆಯಲ್ಲಿ ಒಪ್ಪತ್ತು ಉಪವಾಸ ಮಾಡುತ್ತ ಇದ್ದರಂತೆ. ಮಕ್ಕಳು ಸಂಸಾರವಿಲ್ಲದ ಅನಾಥೆಯರು. ಚಿಕ್ಕಿ ಮಾಡಿದ ಮೊದಲ ಕೆಲಸವೆಂದರೆ ಅವರ ಕಣ್ಣೀರು ಒರೆಸಿ, ಅಜ್ಞಾನದ ಪರೆ ಕಿತ್ತು ತೆಗೆದು ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿದ್ದು. ಇದೀಗ ಅವರೂ ಹಜಾಮನ ಕೈಗೆ ತ... ತಲೆ ಕೊಡದೆ ತಲೆ ಬಾಚಿ ಹೂ ಮುಡಿಯುವ ಸ್ಥಿತಿಗೆ ಬಂದದ್ದು ನೋಡಿ ದಂಗಾಗಿದ್ದ... ಗೌರಿ.ಆಶ್ರಮದ ಬಹಳಷ್ಟು ಮಹಿಳೆಯರು ಅನಕ್ಷರಸ್ಥರು. ಅವರಿಗೂ ನಡೆದಿದೆ ಅಕ್ಷರಾಭ್ಯಾಸ. ಮಹಿಳೆಯರು ಅಕ್ಷರಸ್ಥರಾಗಬೇಕು ಎನ್ನುವ ಗಾಂಧೀಜಿಯ ಮಾತು ಒಪ್ಪಿದೆ ಚಿಕ್ಕಿ

ಮನಸ್ಸು. ಗೌರಿಗೆ ಚಡಪಡಿಕೆ. ಹೊಳೆಬಾಗಿಲಿನ ಕುದ್ರುವಿನಲ್ಲಿ ಕಣ್ಣಿಳಿಗೆ ಪಟ್ಟಿ ಕಟ್ಟಿದ ಕತ್ತೆಯೇ ಆದ ತಾನು ಜಾಣ ಕುದುರೆ ಆಗುವುದು ಎಂದು?

ದಿನ ಸರಿದಂತೆ ಗೌರಿ ಹೊಸ ಬದಲಾವಣೆಗೆ ಹೊಂದಿಕೊಂಡಳು. ಕಲಿಯುವ ಸ್ಫೂರ್ತಿ, ಸ್ವಾತಂತ್ರ್ಯದ ಕಿಚ್ಚು ಹೆಚ್ಚುತ್ತಿದೆ.ಸ್ವಾತಂತ್ರ್ಯದ ಮೇಲೆ ಬರೆದಳು ಒಂದು ಕವನ,

**ಏರಲಿ ಹಾರಲಿ ಭಾರತದ ಬಾವುಟ, ಕೆಂಪು, ಬಿಳಿ, ಹಸಿರು ಬಣ್ಣದ ಬಾವುಟ.**
**ಆರದಿರಲಿ ನಮ್ಮ ಕಿಚ್ಚು, ಹಾರದಿರಲಿ ನಮ್ಮ ಹುರುಪು**
**ಸೋಲದಿರಲಿ, ಎದೆಗುಂದದಿರಲಿ ನಮ್ಮ ಚೇತನ, ನಮ್ಮ ದಿವ್ಯ ಚೇತನ.**

ಗೌರಿಯ ವಯಸ್ಸಿಗೆ ಇದು ಬಾಲಿಷ ಕವಿತೆ. ಆದರೆ ಏನೋ ಮಹಾನ್ ಕವಿತೆ ಎಂದು ಸುಶೀಲಚಿಕ್ಕಿ ಆಶ್ರಮದ ಸಂಜೆ ಪ್ರಾರ್ಥನೆಯ ಮೊದಲು ಗೌರಿಯಿಂದಲೇ ಓದಿಸಿದಳು. ಅಷ್ಟು ಸಾಲದೆ ಸಿರ್ಸಿಯಲ್ಲಿ ಪ್ರಕಟವಾಗುವ ಪತ್ರಿಕೆಗೆ ಕಳುಹಿಸಿದಳು. ಏನಾಶ್ಚರ್ಯ! ಎರಡೇ ದಿನದಲ್ಲಿ ಕವಿತೆ ಪ್ರಕಟವಾಗಿ ಗೌರಿಗೆ ತನ್ನ ಕಣ್ಣುಗಳನ್ನು ನಂಬಲಾಗಲೇ ಇಲ್ಲ. ಅದನ್ನೇ ಗೌರಿ ವಯಸ್ಸಿನ ಮಕ್ಕಳು ಹಾಡುತ್ತ ಕುಣಿದದ್ದು ಇನ್ನೂ ದೊಡ್ಡ ಸಂಗತಿ. ಬಾವುಟದ ಚಿತ್ರ ಬರೆದು ಕೇಸರಿ, ಬಿಳಿ, ಹಸಿರು ಬಣ್ಣ ತುಂಬಿದಾಗ ಎಲ್ಲರ ಮನದಲ್ಲೂ ದೇಶ ಪ್ರೇಮದ ನಗಾರಿ. ಹಾಗೆಂದು ಅದರಲ್ಲಿ ಹೊಸತನವಿತ್ತೇ? ಅದೇ ದೇಶದ ಧ್ವಜ, ಅದೇ ದೇಶದ ಸ್ವತಂತ್ರ ಕಲ್ಪನೆಯ ಕವಿತೆ. ಆದರೆ ಅಭಿಮಾನದ ಕಿಚ್ಚಿಗೆ ಪ್ರತಿಯೊಂದು ರೂಪರೇಷೆಯೂ ಹೊಸದು. ಗೌರಿ ಬಿಡಿಸಿದ ಧ್ವಜವನ್ನು ಉದ್ದ ಕೋಲಿಗೆ ಕಟ್ಟಿ ಅನೇಕರು ಸೇವಾಶ್ರಮದ ಹೊರಗಿನ ರಸ್ತೆಯಲ್ಲಿ ಒಂದಷ್ಟು ದೂರ "ಭಾರತ ಮಾತಾಕೀ ಜೈ" ಹೇಳುತ್ತ ಮೆರವಣಿಗೆ ಹೊರಟರು. ಮೆರವಣಿಗೆಯಲ್ಲಿ ಧ್ವಜ ಹಿಡಿದ ಗೌರಿ ಮುಂದೆ. ಹಿಂದಿನಿಂದ ಉಳಿದವರು. ಮುಗಿಲು ಮುಟ್ಟಿದ ಉತ್ಸಾಹ. ಅರೆ! ಮತ್ತೆ ಮರುದಿನ ಸಿರ್ಸಿ ಪತ್ರಿಕೆಯಲ್ಲಿ ಈ ಸುದ್ದಿ ಪ್ರಕಟವಾಗಿ, ಎಲ್ಲರ ಶ್ಲಾಘನೆ ತಾರಕಕ್ಕೇರಿ ಸುಶೀಲಚಿಕ್ಕಿಯೂ ಹೊಗಳಿ ಗೌರಿಗೆ ಕೋಡು ಬರುವುದೊಂದೇ ಬಾಕಿ.ತನ್ನೊಳಗೆ ನಗುತ್ತಾಳೆ. ಇನ್ನು ಹದಿನೈದು ದಿನಕ್ಕೆ ಪರೀಕ್ಷೆ. ಚಿಕ್ಕಿಎಚ್ಚರಿಸುತ್ತಾಳೆ, "ಚೆನ್ನಾಗಿ ಓದಿಕೋ. ಆರನೇ ಕ್ಲಾಸಿಗೆ ದಾಖಲಾತಿ ಸಿಕ್ಕಿದರೆ ನಿನ್ನ ಭವಿಷ್ಯವೇ ಬೇರೆ."

ಪ್ರತಿ ಸಂಜೆ "ವೈಷ್ಣವ ಜನತೋ ತೇನೆ ಕಹಿಯೇ" ಗಾಂಧೀಜಿಯ ಇಷ್ಟದ ಹಾಡು ಗೌರಿಯೇ ಪ್ರಾರಂಭಿಸಬೇಕು. ಉಳಿದವರು ಧ್ವನಿ ಕೂಡಿಸಬೇಕು. ಆಗೆಲ್ಲ ಈ ಹೊತ್ತಿನಲ್ಲಿ ತನ್ನೊಡನೆ ನಾಣಿ ಇರಬೇಕಿತ್ತು ಚಡಪಡಿಸುತ್ತಾಳೆ. ಆಯಿಗೆ ಪತ್ರ ಬರೆಯುತ್ತಾಳೆ, "ನನಗೆ ಆಶ್ರಮ ಖುಷಿ ಆಗ್ತಿದೆ ಆಯಿ. ಹೊಳೆಬಾಗಿಲಿಗಿಂತ ಎಲ್ಲಾ ಬೇರೆಯೇ. ಕಲೀವ ಉತ್ಸಾಹ ಇದೆ. ಹಾಂಗೆ ನಿನ್ನ ಬಿಟ್ಟಿರೂದು ಕಷ್ಟ. ಪರೀಕ್ಷೆಗೆ ಓದಿ ಪಾಸಾದರೆ ಇಲ್ಲೇ

ಶಾಲೆಗೆ. ಅದರ ಮೊದಲು ಹೊಳೆಬಾಗಿಲಿಗೆ ಬರ್ತೇ. ನನ್ನ ನಾಣಿ, ಮೋತಿ, ಸಿಂಧೂ ಕರು ಎಂತ ಮಾಡ್ತೋ? ಎಲ್ಲಾ ಮರ್ತು ಹೋಗ್ಲಿಲ್ಲೆ"

ಬೆಳಗು ಮೂಡಿ ಹಗಲು ಕಳೆದು ಸಂಜೆ ಸೂರ್ಯ ಆಯಾಸದಲ್ಲಿ ವಿಶ್ರಮಿಸುವ ಹೊತ್ತಿಗೆ ಗೌರಿಗೆ ಹೊಳೆಬಾಗಿಲು ಇನ್ನೂ ಕಾಡುತ್ತದೆ. ಸುಶೀಲಚಿಕ್ಕಿಯ ಮಡಿಲಿನಲ್ಲಿ ತಲೆ ಇಟ್ಟು ಕಣ್ಣು ಮುಚ್ಚಿದರೆ ಸಾಕು, ತೆರೆಯುತ್ತದೆ ಹೊಳೆಬಾಗಿಲು. ಇನ್ನಿಲ್ಲದಂತೆ ಕಾಡುತ್ತಾನೆ ನಾಣಿ. ಅವನಿಗೆ ಪತ್ರ ಬರೆಯುತ್ತಾಳೆ. "ನಾಣಿ, ಇಲ್ಲಿ ಕಾಣು! ನಿನ್ನನ್ನು ಬಿಟ್ಟು ನಾ ಇಲ್ಲಿ ಒಬ್ಬಳೇ ಇದ್ದೇ. ನೋಡು. ನೋಡುವುದಿಲ್ಲವೇ?" ಎನ್ನುತ್ತಾಳೆ. ಹೊಳೆಬಾಗಿಲಲ್ಲಿ ಪ್ರತಿದಿನವೂ ಒಂದಲ್ಲ ಒಂದು ವಿಧದಲ್ಲಿ ನಾಣಿಯ ಸ್ಪರ್ಷದ ಅನುಭೂತಿಯಲ್ಲಿ ಮಿಂದವಳು. ಎಷ್ಟೋ ಮುಸ್ಸಂಜೆಗಳು, ಅದೆಷ್ಟೋ ರಾತ್ರೆಗಳು, "ಅಕ್ಕ, ಕಥೆ ಹೇಳೇ. ಅಕ್ಕ, ನಿದ್ದೆ ಬಂದಿತಾ? ಆವತ್ತು ಕಮಲತ್ತೆ ಹಾರ್ಮೋನಿಯಂನಲ್ಲಿ, "ಅದೋ ನೋಡೆ ರಂಗನಾಥನ ಪುಟ್ಟ ಪಾದವ" ಬಾರಿಸಿದ್ದಳಲ್ಲ, ಅದನ್ನು ಹಾಡುತ್ತಿಯಾ? ನಾ ಕುಣಿವೆ ಅಕ್ಕ" ನೀರಿನಿಂದ ಎದ್ದು ಬಂದ ಗುಳು ಗುಳು ಸದ್ದಿನಂತೆ ಅವನ ಬಾಲ ಭಾಷೆಯ ಧ್ವನಿ ಕೇಳಿದಂತೆ ಪಾಪ, ಈಗೇನು ಮಾಡುವನೋ. ಅದರ ನೇವರಿಕೆಯ ಪ್ರೀತಿಯ ವಿರಹದಲ್ಲಿ ನೊಂದಂತೆ ಇಡೀ ಮನಸ್ಸು ಹಿಂಡಿ ಹಿಪ್ಪೆ ಮಾಡಿ ಚಿಕ್ಕಿಯ ಚಾದರದಲ್ಲಿ ಸುಮ್ಮನೆ ಕಣ್ಣೀರು ಸೋರಿ ಸೋರಿ ಅಳುತ್ತಾಳೆ ಗೌರಿ. ಚಿಕ್ಕಿಯ ಬೆರಳುಗಳು ಮಗುವಿನಂತೆ ಸಾಂತ್ವನದಲ್ಲಿ ಬೆನ್ನು ತಟ್ಟುತ್ತವೆ. ನಾಣಿ ಅವಳನ್ನು ನೋಡುವನೇ? ಅವಳ ಮಾತು ಕೇಳಿಸುವುದೇ ಅವನಿಗೆ? ಇಲ್ಲವಲ್ಲ!

♣♣♣

ಮುಂದೆ ಕೆಲವು ದಿನಗಳಲ್ಲಿ ಗೌರಿ ಪರೀಕ್ಷೆ ಬರೆದಾಯ್ತು. ಪ್ರಶ್ನೆಗಳು ಸುಲಭವಾದ ಕಾರಣ ಒಳ್ಳೆಯ ಅಂಕ ತೆಗೆದು ಮೊದಲ ಸ್ಥಾನದಲ್ಲಿ ಬಂದು ಆರನೇ ತರಗತಿಗೆ ಸೀಟು ಸಿಗುವುದು ನಿಕ್ಕಿ ಎಂದಿದ್ದಾಳೆ ಸುಶೀಲ ಚಿಕ್ಕಿ. ಹಾಗೆ ಈ ಸುದ್ದಿಯನ್ನು ಹೊತ್ತ ಅವಳ ಕಾಗದ ಹೊಳೆಬಾಗಿಲು ಮನೆಗೆ ಅಂಚೆಯಲ್ಲಿ ಕಳಿಸಿದಳು ಮರು ಟಪ್ಪಾಲಿಗೆ ಅಪ್ಪಯ್ಯ ಉತ್ತರಿಸಿದ್ದ. "ನಿನ್ನನ್ನು ನಾಣಿ ನೆನಪಿಸಿಕೊಳ್ತಾ ಇದ್ದಾ. ಬರ್ತಿಯಾ ನಾಲ್ಕು ದಿನಕ್ಕೆ"

ನಾಣಿಯನ್ನು ನೋಡುವ ಆಸೆಯಿದ್ದರೂ ಅಷ್ಟು ದೂರ ಹೋಗಿ ಬರಲು ಸಮಯ ಬೇಡ್ವಾ? ಅಲ್ಲದೆ ಯಾರಿಗೂ ತಿಳಿಯದಂತೆ ಸ್ವಾತಂತ್ರ್ಯ ಚಳುವಳಿ ನಡುವೆಯೇ ಕೆಲವೇ ತಿಂಗಳಲ್ಲಿ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕೀತೆಂಬ ಭರವಸೆಯ ಪಿಸು ಮಾತುಗಳು ಕಿವಿಯಿಂದ ಕಿವಿಗೆ ಹಬ್ಬುತ್ತಿದೆ. ಸ್ವಾತಂತ್ರ್ಯ ಧ್ವಜವನ್ನೂ ತಯಾರಿಸಿ ಇಡಬೇಕೆಂದು ಸುಶೀಲಚಿಕ್ಕಿ ತಮ್ಮ ಸಹಾಯಕರ ಬಳಿ ಗುಟ್ಟಾಗಿ ಹೇಳಿದ್ದು ಗೌರಿಗೆ.

ಸೇವಾಶ್ರಮದ ಇತರ ಎಲ್ಲರ ಕಿವಿಗೆ ಬಿದ್ದು ಯಾರೂ ತಮಗೇನೂ ತಿಳಿಯದೆಂದು ಮೌನ ತಳೆದಿದ್ದರು. ಆದರೆ ಎಲ್ಲರ ಮುಖದಲ್ಲೂ ಉತ್ಸಾಹ ಕಾಣುತ್ತಿತ್ತು. ಸ್ವಾತಂತ್ರ್ಯದ ಬಗ್ಗೆ ಹಾಡು ಬರಿ, ಎರಡು ನಿಮಿಷದ ನಾಟಕ ಬರಿ" ಎಂದೆಲ್ಲ ಸುಶೀಲಚಿಕ್ಕಿಯ ಕಟ್ಟಪ್ಪಣೆ. ಸೇವಾಶ್ರಮದ ಚಟುವಟಿಕೆ ಗೌರಿಯಲ್ಲಿ ಹೊಸ ಚಿಂತನೆಯ ಬೀಜ ಬಿತ್ತುತ್ತಿದೆ. ಸೇವಾಶ್ರಮದ ಲೈಬ್ರರಿಯ ಎದುರು ಸ್ತ್ರೀ ಶಿಕ್ಷಣಕ್ಕೆ ಪ್ರೇರಣೆ ನೀಡಿದ ಸಾವಿತ್ರಿಬಾಯಿ ಫುಲೆ ಮತ್ತು ಆನಂದಿಬಾಯಿ ಗೋಪಾಲ ಅವರ ಭಾವಚಿತ್ರಗಳಿವೆ. ಇಬ್ಬರೂ ಕಳೆದ ಹದಿನೆಂಟನೇ ಶತಮಾನದಲ್ಲಿ ಉನ್ನತ ಶಿಕ್ಷಣ ಪಡೆದ ಸ್ತ್ರೀಯರಲ್ಲಿ ಮೊದಲಿಗರು.. ಸಾವಿತ್ರಿಬಾಯಿ ಫುಲೆ ತನ್ನ ಪತಿ ಜ್ಯೋತಿಬಾ ಫುಲೆಯವರ ಜೊತೆ ಸೇರಿ ಹೆಣ್ಣುಮಕ್ಕಳಿಗಾಗಿ ಅನೇಕ ಶಾಲೆ ತೆರೆದವಳು. ಆನಂದಿಬಾಯಿ ಗೋಪಾಲ ಪ್ರಥಮ ವೈದ್ಯಕೀಯ ಶಿಕ್ಷಣ ಪಡೆದು ಡಾಕ್ಟರಳಾದವಳು. ಗೌರಿಗೆ ತಾನೂ ಕಲಿಯಬೇಕು, ಶಿಕ್ಷಕಿಯಾಗಿ ಅಥವಾ ಡಾಕ್ಟರಳಾಗಿ ಸಮಾಜಸೇವೆ ಮಾಡಬೇಕು ಎನ್ನುವ ಯೋಚನೆಯಲ್ಲಿ ತನ್ನನ್ನೇ ಮರೆತು ಬಿಡುತ್ತಾಳೆ. ಹೊಳೆಬಾಗಿಲಲ್ಲಿ ಶಾಲೆಯಿಲ್ಲ. ಮೊದಲು ಅಲ್ಲೊಂದು ಶಾಲೆ ಹುಟ್ಟಬೇಕು. ಓಹ್, ಗರಿಕೆ ಹುಲ್ಲಿನಂತೆ ಊರೆಲ್ಲ ಶಾಲೆ ಎತ್ತಲಿ. ತನ್ನಂತೆ ಇಪ್ಪ ಹುಡುಗಿಯರು ಶಾಲೆಗೆ ಹೋಯೆಕ್ಕು. ಸಾಧ್ಯ ಆದೀತೆ? ಸುಶೀಲಚಿಕ್ಕಿಯ ಗಂಡ ಪ್ಲೇಗ್‌ನಲ್ಲಿ ಸತ್ತಂತೆ ಯಾರೂ ಸಣ್ಣ ಪ್ರಾಯದಲ್ಲಿ ಸಾಯಬಾರದು.

ಹೀಗೆ ಯೋಚಿಸುವಾಗ ತನಗೆ ಮದುವೆ ಮಾಡಲು ಹೊರಟ ಆಯಿ ಅಪ್ಪಯ್ಯ, ವೈಧವ್ಯದ ಬಿಸಿಯಲ್ಲಿ ನಲುಗುವ ಕಮಲತ್ತೆ, ದಿಕ್ಕಿಲ್ಲದ ಸುಶೀಲಚಿಕ್ಕಿ ನೆನಪಾಗುತ್ತಾರೆ. "ಹೆಣ್ಣುಮಕ್ಕೋಗೆ ಕತ್ತಲೆ ಕೂಪದಿಂದ ಬೆಳಕಿನೆಡೆಗೆ ದಾರಿ ತೋರ್ಸೆಕ್ಕು ಗೌರಿ" ಅವಳ ಬೆನ್ನು ಸವರಿ ಕಣ್ಣೀರಾಗುವಳು ಸುಶೀಲಚಿಕ್ಕಿ. ಹೀಗಿದ್ದಾಗಲೆ ಅಪ್ಪಯ್ಯನಿಂದ ಸಂತೋಷದ ಸುದ್ದಿ ಹೊತ್ತ ಇನ್ನೊಂದು ಕಾಗದ ಬಂದಿತು. ಅದು ಹೊಳೆಬಾಗಿಲಲ್ಲಿ ಹೊಸ ಶಾಲೆ ತೆರೆಯುವ ವಿಷಯದ್ದು-ಸುಮಾರು ಮೂರು ತಿಂಗಳ ಹಿಂದೆ ಸುಬ್ಬಪ್ಪಯ್ಯ ಮತ್ತು ಊರಿನ ಕೆಲವು ಗಣ್ಯರು ಹೊಳೆಬಾಗಿಲಿನಲ್ಲಿ ಸಣ್ಣ ಮಕ್ಕಳಿಗೆ ಪ್ರಾಥಮಿಕ ಶಾಲೆ ಬೇಕೆಂದು ತೀರ್ಮಾನಿಸಿ ತಮ್ಮ ಬೇಡಿಕೆಯನ್ನು ಮದ್ರಾಸು ಪ್ರಾಂತ್ಯದ ಶಿಕ್ಷಣ ಸಂಸ್ಥೆಗೆ ಸಲ್ಲಿಸಿ ಪತ್ರ ಹಾಕಿದ್ದರು. ಶಾಲೆ ನಡೆಸಲು ಇದೀಗ ಅನುಮತಿ ದೊರಕಿದೆ. ಮದ್ರಾಸು ಪ್ರಾಂತ್ಯದಿಂದ ಸುಬ್ಬಪ್ಪಯ್ಯರ ಹೆಸರಿಗೆ ಅಂಚೆಯಲ್ಲಿ ಬಂದ ಅನುಮತಿ ಪತ್ರದ ಯಥಾವತ್ ಕೈ ಬರಹದ ನಕಲನ್ನು ಅಪ್ಪಯ್ಯ ಕಳುಹಿಸಿದ್ದ. "ಈ ಶೈಕ್ಷಣಿಕ ವರ್ಷದಿಂದಲೇ ಪ್ರಾಥಮಿಕ ಶಾಲೆಯ ಒಂದನೇ ತರಗತಿ ಶುರು ಮಾಡಿ ಪಾಠಕ್ಕೆ ಸ್ಥಳೀಯರನ್ನು ಮಾಸ್ತರರಾಗಿ ನಿಯಮಿಸಬೇಕು. ನಮ್ಮ ಅನುಮತಿಯ ಪತ್ರಕ್ಕೆ ಕೂಡಲೆ ತಮ್ಮ ಒಪ್ಪಿಗೆಯ ಸಹಿ ಹಾಕಿ ಕಳಿಸಿಕೊಡಿ" ಎಂದಿತ್ತು ಆ ಪತ್ರದಲ್ಲಿ.

ಅಪ್ಪಯ್ಯ ಬರೆದಿದ್ದ, "ಈ ಸುದ್ದಿ ಕ್ಷಣ ಮಾತ್ರದಲ್ಲಿ ಕುದ್ರುವಿನ ಜನರಿಗೆ ತಲುಪಿ ಅನೇಕ ಹಿರಿಯರು, ಯುವಕರು ಮನೆ ಅಂಗಳದಲ್ಲಿ ತುಂಬಿ ಜಯ ಘೋಷ ಹಾಕಿದ್ದವು. ಸಧ್ಯಕ್ಕೆ ಅನ್ನಪೂರ್ಣೇಶ್ವರಿ ದೇವಸ್ಥಾನದ ಬಳಿ ಬಿದಿರಿನ ತಡಿಕೆ ಮಾಡಿ ಮಡಲಿನ ಹೊದಿಕೆ ಹಾಕಿ ಪಾಠ ಮಾಡುವುದೆಂದೂ ನಮ್ಮ ಯೋಚನೆ. ಇಲ್ಲಿ ಮೊದಲ ದಾಖಲಾತಿಗೆ ಹೆಚ್ಚೆಂದ್ರೆ ನಾಣಿ ಪ್ರಾಯದ ಹತ್ತು ಮಕ್ಕಳು ಇಕ್ಕು. ಪಾಠಕ್ಕೆ ಕೆಲವು ಸಮಯ ನನ್ನ ಅಪ್ಪನೇ ಸಾಕು. ಮುಂದೆ ಬೇರೆ ಗುರುಗಳು ಸಿಕ್ಕುವ ಭರವಸೆ ಇದ್ದು. ನಿನ್ನ ಆಯಿ ಆಗಲೇ ಎಲ್ಲರಿಗೂ ಸಿಹಿ ಹಂಚಿದಳು. ಗೌರಿ, ನಾಣಿಯನ್ನು ಸಿರ್ಸಿಗೆ ಕಳಿಸಿ ನಿನ್ನ ಒಟ್ಟಿಗೇ ಅಲ್ಲಿ ಓದಿಸುವುದೇ? ಸಾಸ್ತಾನದಲ್ಲಿ ಓದಿಸುವುದೇ ದಿನಾ ಆಯಿ ನಾನು ಚರ್ಚೆ ಮಾಡ್ತಾ ಮಂಡೆ ಬೆಚ್ಚಗಾಯ್ದು. ಈಗ ಆ ಪ್ರಶ್ನೆಗೆ ತಾನಾಗಿಯೇ ಸಿಕ್ತು ಪರಿಹಾರ. ನೀನೂ ಊರಲ್ಲಿ ಶಾಲೆ ಬೇಕಂತ ಜಪ ಮಾಡ್ತಿದ್ದಿ. ಹ್ಯಾಂಗೆ ಖುಷಿ ಆಯ್ತಾ?"

ಗೌರಿ ಆ ಕಾಗದ ಓದುತ್ತ ಕುಣಿ ಕುಣಿದಳು. ತಮ್ಮ ಊರಲ್ಲೇ ತಲೆ ಎತ್ತುತ್ತಾ ಇದೆ ಶಾಲೆ. ಅದನ್ನೇ ಹಾಡುತ್ತ ಒಳ ಹೊರಗೆ ನೆಗೆದಳು. ಉಯ್ಯಾಲೆ ತೂಗಿದಳು. "ಎಲ್ಲಿದ್ದಿ ನಾಣಿ? ನಾನೂ ಹೊಳೆಬಾಗಿಲಿಗೆ ಬಂದು ಬಿಡ್ಲಾ? ಹೊಸ ಶಾಲೆಗೆ ಪಾಠ ಮಾಡಲಾ?" ಅವಳ ಕನಸು ಕಂಗಳು ಹೊಸ ಶಾಲೆಯ ನಕ್ಷೆ ಬರೆಯುತ್ತ ಸಣ್ಣ ಮಕ್ಕಳಿಗೆ ನಾಯಿಮರಿಯ ಕಥೆ, ಹಾಡು ಹೇಳಿ ಕೊಟ್ಟಂತೆ, ತಾನೇ ಬರೆದ ಸ್ವಾತಂತ್ರ್ಯದ ಹಾಡು ಹಾಡಿಸಿದಂತೆ, ಕಪ್ಪು ಹಲಗೆಯಲ್ಲಿ ಬಳಪದಿಂದ ಗೊಂಬೆಯ ಚಿತ್ರ ಬಿಡಿಸಿದಂತೆ. ಕೈ ಅಗಲಿಸಿ ಪರಕರದ ನಿರಿಗೆ ಚಿಮ್ಮಿಸಿದಳು. "ಎಲ್ಲಿದ್ದಿ ನಾಣಿ?"

♣♣♣

ನಾಣಿ ನೋಡಿದನೇ ಅವಳನ್ನು? ಮಾತು ಕೇಳಿಸಿಕೊಂಡನೇ? ಇಲ್ಲವಲ್ಲ.! ಈಗೆಲ್ಲ ನಾಣಿ ಒಬ್ಬನೇ ಹೊಳೆಬಾಗಿಲಿನಿಂದ ಹೊರಗೆ ಹೋಗುವುದೇ ಇಲ್ಲ. ದನಕರು ಮೇಯಲು ಬಿಡುತ್ತಾನೆ ನಿತ್ಯ ಅಭ್ಯಾಸದಲ್ಲಿ. ಅವುಗಳ ಗಂಗೆದೊಗಲು ಸವರಿ ಹಣೆ ಮುದ್ದಿಸಿ ಬೆನ್ನ ಮೇಲೆ ಕೈಯ್ಯಾಡಿಸಿ, ಬೇಡ, ಯಾವುದೂ ಬೇಡ. ಅವು ಬಾಲ ಎತ್ತಿ ಓಡುವುದನ್ನು ನೋಡುತ್ತಾನೆ ಇನ್ನೆಲ್ಲೋ ಗಮನ ಇಟ್ಟವನಂತೆ. ಮೋತಿ ಜೊತೆ  ಹಾಡಿ ಆಚೆ ಗುಡ್ಡೆಗೆ, ಆವತ್ತು ಧ್ರುವನಂತೆ ತಪಸ್ಸಿಗೆ ಹೋದ ಜಾಗ, ಆ ತೆರೆದ ಹೊಂಡ, ಗಂಗೊಳ್ಳಿ ಹೊಳೆ ತೀರಕ್ಕೆ ಹೋಗಲು ಬೇಸರ. ಅಷ್ಟೇಕೆ, ಪ್ರತಿ ಶನಿವಾರ ಅಪ್ಪಯ್ಯ ಬರುವ ಸಮಯ ಹೊಳೆ ಅಂಚಿಗೆ ಬಂದು ಮರ ಏರಿ ಹರಿವ ಹೊಳೆಯಾಚೆ ದೋಣಿ ಬಂತಾ? ಕಾತರದಲ್ಲಿ ಕಾದು, "ಅಕ್ಕ ದೋಣಿ ಕಾಣ್ತಾ ಇತ್ತಾ?" ಕೇಳುವ ಉತ್ಸಾಹ? ಊಹೂಂ. ಈಗವನು ಕಷ್ಟದಲ್ಲಿ ಅಕ್ಕ ಹತ್ತಿದ ಮರ ಹತ್ತಬಲ್ಲ. ಹೊಳೆಯಾಚೆ ದೃಷ್ಟಿ ಹಾಯಿಸಬಲ್ಲ. ಅಯ್ಯೋ, ಆ ಉಮೇದು ಇಲ್ಲವಲ್ಲ. ಅಪ್ಪಯ್ಯ ಬಂದಾಗ ಮುದ್ದು ಮಾಡುತ್ತಾನೆ,

ಏನೇನೋ ತರುತ್ತಾನೆ ಸಾಸ್ತಾನದಿಂದ. ಅವನಿಗೆ ಬೇಸರ ಆಗದಂತೆ ಅಜ್ಜಯ್ಯ ತಮ್ಮ ಬೆನ್ನ ಮೇಲೆ ಹೊತ್ತು, "ಉಪ್ಪಿನ ಮೂಟೆ ಯಾರಿಗೆ ಬೇಕು?" ಕೇಳುವಾಗ, ಅಂಬೆಗಾಲಿಟ್ಟು ಬೆನ್ನ ಮೇಲೆ ಕುಳ್ಳಿರಿಸಿ ಕುದುರೆ ಸವಾರಿ ಮಾಡಿಸುವಾಗ, "ನನ್ನ ಕುದುರೆ, ಹಚ್ ಹಚಾ," ಎನ್ನುವುದಿಲ್ಲ. ತಾನೀಗ ದೊಡ್ಡವನು, ತನ್ನನ್ನು ಹೊತ್ತರೆ ಅಜ್ಜಯ್ಯನ ಬೆನ್ನು ಮುರಿದು, "ನೋಡೇ ಅಕ್ಕ, ನಿನ್ನ ಅಜ್ಜಯ್ಯನಿಗೆ ಬುದ್ಧಿ ಹೇಳು" ಎನ್ನುವ ಚಪ್ಪಾಳೆ ತಟ್ಟಿ ಅಕ್ಕ ನೋಡಿದಳೇ ಅವನನ್ನು? ತಮ್ಮನ ಮಾತು ಕೇಳಿಸಿಕೊಂಡಳೇ? ಇಲ್ಲವಲ್ಲ. ಪ್ರತಿದಿನ ಅವಳ ಹಿತವಾದ ಸ್ಪರ್ಶ, ಅಖಂಡ ಪ್ರೀತಿಯಲ್ಲಿ ಎರಡು ದೇಹ ಒಂದೇ ಜೀವ ಎಂಬಂತೆ ಇದ್ದವ ಈಗ ಹೇಗೆ ತಾನೇ ಒಬ್ಬನೇ ಸೈರಿಸಬಲ್ಲ. ಚಕ್ರಿ ಅಮ್ಮಮ್ಮನ ಮನೆಯಷ್ಟೇ ಹತ್ರ ನೀನಿದ್ದರೆ ಯಾವಾಗಲೋ ಓಡಿಬರುತ್ತಿದ್ದೆ. ನೀನೆಲ್ಲೋ ಇದ್ದಿ ಕಾಣದ ಊರಲ್ಲಿ. ಅವನು ಭೂಪಟ ತೆರೆದು ಸಿರ್ಸಿ ಊರನ್ನು ಕಣ್ಣರಳಿಸಿ ನೋಡುತ್ತಾನೆ. ಅಕ್ಕ ಎಲ್ಲಿದ್ದಾಳೆ? ಹಾಗೇ ಸುಮ್ಮನೆ ಕಣ್ಣೀರು ಸೋರಿ ಸೋರಿ, ಎಲ್ಲೋ ಅಜ್ಜಮ್ಮ, ಆಯಿ ನೋಡಿ ಹತ್ತಿರ ಬಂದು, "ಯಾಕಳುವೆ ನನ ಕಂದ ಬೇಕಾದ್ದು ನಿನಗಿರಲು" ಮುದ್ದಿಸುವಾಗ ತಥ್, ಎದ್ದು ಧೀರ ಹೆಜ್ಜೆ ಇಟ್ಟು ಹೊರ ನಡೆದು ಕಣ್ಣೊರಸಿ, ಯಾರೂ ನೋಡಬಾರದಲ್ಲ! ತಾನೀಗ ದೊಡ್ಡ ಆಗಿದ್ದೇನೆ, ಇಷ್ಟೆತ್ತರ? ಅಕ್ಕ ಬರೆಯುತ್ತಾಳೆ ಪತ್ರವನ್ನು. ಓದುವುದೇ ಕಷ್ಟ. ಅಪ್ಪಯ್ಯ, ಅಜ್ಜಯ್ಯ ಓದಿ ಹೇಳಬೇಕು. ಯಾರಿಗೆ ಬೇಕು ಆ ಪತ್ರ?. "ನೀ ಬರೀಬೇಡ ಅಕ್ಕ. ನೀನಿಲ್ಲದೆ ಪತ್ರ ಬಂದರೆ ದೋಣಿ ಮಾಡಿ ಹೊಳೆಗೆ ಬಿಡ್ತೆ" ಎನ್ನುವ ಸಿಟ್ಟಿನಲ್ಲಿ. ಭಗತಸಿಂಘ ಮತ್ತು ಇನ್ನಿಬ್ಬರಿಗೆ ನೇಣುಗಂಭದ ಶಿಕ್ಷೆಯಾದ ಅಕ್ಕನ ಪತ್ರ ಅಜ್ಜಯ್ಯ ಓದಿ ಹೇಳುವಾಗ ಇವನಿಗೆ ಕೇಳಿ ಅತ್ತು ಅತ್ತು ಸುಸುಸ್ತು. ಅವನನ್ನು ಸಮಾಧಾನ ಮಾಡಲು ಆಯಿ ಅಜ್ಜಮ್ಮನಿಗೆ ಸುಸ್ತು.

ಒಂದು ರಾತ್ರೆ ಆಯಿ ಅಪ್ಪಯ್ಯ ಮಾತನಾಡುವುದು ಕೇಳುತ್ತದೆ, "ಮಗು ತುಂಬ ಮನಸ್ಸಿಗೆ ಹಚ್ಚಿಕಂಡಿದೆ. ಹಿಂಡು ಅಗಲಿದ ಕರುವಿನಂತೆ ಗೌರಿ ಇಲ್ಲದೆ ಬೇಜಾರು ಅದಕೆ. ಒಂದಲ್ಲ ಒಂದು ರಗಳೆ ತೆಗ್ದು ನಮಗೂ ತಲೆನೋವು."

"ಸ್ವಲ್ಪ ಸಮಯ ಹೀಗೆ ಶರಾವತಿ, ಸಮಾ ಆಗ್ತಾನೆ ಬಿಡು"

"ನಿನ್ನೆ ಅವನಿಗಾಗಿ ಹಿಟ್ಟಿನುಂಡೆ, ಚಕ್ಕಲಿ ಮಾಡಿದ್ದೆ. ಒಂದು ಮುರುಕೂ ಬಾಯಿಗಿಡಲಿಲ್ಲೆ. ಗೌರಿ ಇದ್ದಾಗ ಬಕಾಸುರ. ಇಡೀ ಡಬ್ಬಿ ಖಾಲಿ ಮಾಡ್ತಿದ್ದ ಒಂದೇ ದಿನದಲ್ಲಿ"

"ಹೇಳ್ದೆ ಅಲ್ಲದ, ಸ್ವಲ್ಪ ಸಮಯ ಬೇಕು. ಗೌರಿಯ ಪ್ರತಿಭೆಗೆ, ಕಲಿಯೂದಕ್ಕೆ ಸಾಸ್ತಾನಕ್ಕಿಂತ ಸಿರ್ಸಿ ಶಾಲೆನೇ ಒಳ್ಳೆಯದು. ಹೋಗಿ ನಾಲ್ಕು ತಿಂಗಳು ಆಗ್ಲಿಲ್ಲೆ, ಅವಳ ನಸೀಬು ಖುಲಾಯ್ಸಿದೆ. ಆಟದಲ್ಲಿ, ಪಾಠದಲ್ಲಿ ಅವಳೇ ಎಲ್ಲರಿಗೂ ಹೀರೋ! ಅವಳನ್ನು

ಸಿರ್ಸಿಯಿಂದ ಮತ್ತೆ ಇಲ್ಲಿಗೆ ಕರೆ ತರೂದು ಬ್ಯಾಡ. ಅಲ್ಲೇ ಇರಲಿ. ಇನ್ನು ನಾಣಿ ನಮ್ಮ ಸಮೀಪ ಇರೆಕ್ಕಲ್ಲದ? ಅವನಿಗಾಗಿ ಸಾಸ್ತಾನದ ಶಾಲೆ ಹೆಡ್‌ಮಾಸ್ತರರ ಕಂಡು ಬಂದೆ. ಮಳೆಗಾಲದಲ್ಲಿ ಮಕ್ಕಳ ದಾಖಲಾತಿ ಶುರುವಾದಾಗ ನಾಣಿಯನ್ನು ಕರ್ಕೊಂಡು ಬನ್ನಿ ಅಂದ್ರು. ನೀನಿನ್ನು ನನ್ನ ತಡಿಬ್ಯಾಡ ಶರಾವತಿ" ಅಂದ್ರು. ನೀನಿನ್ನು ತನ್ನ ತಡೀಬ್ಯಾ ಶರಾವತಿ"

"ನಮ್ಮದೇ ಕುದ್ರುನಲ್ಲಿ ಶಾಲೆ ಶುರು ಆದ್ಮೇಲೆ ನಾಣಿಯನ್ನು ಇಲ್ಲೇ ಸೇರಿಸಿದ್ರಾತು"

"ನಮ್ಮ ಹೊಸ ಶಾಲೆ ಬಳಪ ಹಿಡಿವ ಸಣ್ಣ ಮಕ್ಕಳಿಗಾಗಿ. ನಮ್ಮ ನಾಣಿಗೆ ಸೀದಾ ನಾಲ್ಕನೇ ಇಯತ್ತೆಗೆ ಹೋಪ ಯೋಗ್ಯತೆ ಇದ್ದು. ಅದಕ್ಕೇ ಸಾಸ್ತನಕ್ಕೆ ಸೇರಿಸುವಾ ಅಂದದ್ದು"

"ನಾನಾದರೂ ಎಂತ ಮಾಡಲಿ?"

ಕಿವಿಯಾರೆ ಕೇಳಿದ ನಾಣಿ...

"ನಾನಾದರೂ ಎಂತ ಮಾಡಲಿ? ಈ ಮಳೆಗಾಲದಲ್ಲಿ ಮಾವ ಪೂರಾ ಹಾಸಿಗೆ ಹಿಡಿವ ಅಂದಾಜು. ಅತ್ತೆಗೂ ಏನೂ ಕೂಡ್ತಾ ಇಲ್ಲ. ಅವರನ್ನು ಕಮಲಿ ಮೇಲೆ ಬಿಟ್ಟು ನಾವು ಮಾತ್ರ ಸಾಸ್ತಾನದಲ್ಲಿ ಮನೆ ಮಾಡೂದುಂಟಾ?"

ಕಿವಿಯಾರೆ ಕೇಳಿದ ನಾಣಿ. ಅಕ್ಕನಿಲ್ಲದೆ ಸಾಸ್ತಾನ ಒಂದೇ ಅಲ್ಲ, ಕರ್ನಾಟಕದ ಭೂಪಟ ತೋರಿಸುವ ಯಾವ ಊರಿನ ಶಾಲೆಯೂ ತನಗೆ ಬೇಡ. ಇತ್ತ ಆಯಿ ಇನ್ನೂ ಹೇಳುತ್ತಿದ್ದಾಳೆ, "ನಾಣಿಯನ್ನೂ ಸಿರ್ಸಿಗೆ ಕಳುಹಿಸುವ. ಗೌರಿ ಜೊತೆ ಅಲ್ಲೇ ಶಾಲೆಗೆ ಹೋಗಲಿ. ಸುಶೀಲಚಿಕ್ಕಿಗೆ ಹೇಳಿ ಬಾಡಿಗೆ ಮನೆ ಮಾಡಿದ್ರೆ ಮೂರು ಮಂದಿ ಒಟ್ಟಿಗೆ ಇರ್ತಾವೆ. ಮತ್ತೆ ಖರ್ಚು ಪರ್ಚು ನಾವು ನೋಡ್ಕಂಡ್ರಾತು. ಎಂತ ಹೇಳ್ತರಿ?"

"ನೀ ಹೇಳಿದ್ದು ವಿಚಾರ ಮಾಡುವ ವಿಷಯ. ನೋಡ್ವ."

ಆಯಿ ಅಪ್ಪಯ್ಯನ ಕೊನೆ ಮಾತುಗಳು ಕಿವಿಗೆ ಬಿದ್ದದ್ದೇ ಎಳೆಗರುವಿನ ಕಿವಿಗೆ ಗಾಳಿ ಹೊಕ್ಕಂತೆ ನೆಗೆದು ಕುಣಿದ. ಎರಡೂ ಕೈ ಅಗಲಿಸಿ ಅಂಗಳದ ತುಂಬ ಓಡಿದ ಕನಸು ಕಂಡ. ತಾನು ಅಕ್ಕನ ಸಂಗಡ ಸಿರ್ಸಿಗೆ ಹೋದಂತೆ, ಪಾಟಿಚೀಲ ಏರಿಸಿ ಶಾಲೆಗೆ ನಡೆದಂತೆ, ಅಜ್ಜಯ್ಯನಿಂದ ತಾನು ಕಲಿತದ್ದು ಮತ್ತೆ ಓದಿ ಬರೆದಂತೆ, ಏನು ಗಮ್ಮತ್ತು, ಸುಶೀಲಚಿಕ್ಕಿ, ಅಕ್ಕನಿಂದ ತಿಳಿವದು ರಾಶಿ ಇತ್ತು. ಅಕ್ಕ ಹುಷಾರಾದಾಂಗೆ ತಾನೂ ಆಯೆಕ್ಕು. ಮರುದಿನವೆಲ್ಲ ಮೋತಿಯನ್ನು ಮುದ್ದಿಟ್ಟು ಕುಣಿದದ್ದೇ ಕುಣಿದದ್ದು. ನಿನ್ನನ್ನು ಬಿಡ್ತಿಲ್ಲೆ. ಒಟ್ಟಿಗೆ ಕರ್ಕೊಂಡೇ ಹೋಪದು. ಕೇಳ್ತಾ?" ಮೋತಿ ಅರ್ಥ ಆದವರಂತೆ ತಲೆ ಅಲ್ಲಾಡಿಸಿತು.

ಮತ್ತೆ ಎರಡು ದಿನದಲ್ಲಿ ಚಳಿಯೆಂದು ಮಲಗಿದ ನಾಣಿಗೆ ಮೈ ಕೆಂಡದತೆ ಸುಡುವ ಜ್ವರ. ನೆಗಡಿ, ಸಣ್ಣಕ್ಕೆ ಎದೆನೋವು. ಕಫ್, ಸಿಂಬಳ ಕಟ್ಟಿ ಹಾಗೆ ಆಗಿದೆಯೆಂದು ಅಜ್ಜಮ್ಮ ಎಂತದೋ ಸೊಪ್ಪು ಅರೆದು ಮೆಣಸಿನ ಕಾಳು ಸೇರಿಸಿ ಕುಡಿಯಲು ಕೊಟ್ಟು ಕಂಬಳಿ ಹೊದೆಸಿ ಮಲಗಿಸಿದಳು. ಪಂಡಿತರಿಂದ ಔಷಧಿಯನ್ನೂ ತಂದಾಯಿತು. ಜ್ವರ ಇಳಿಯಲಿಲ್ಲ. ನೆತ್ತಿಗೇರುತ್ತಿದ್ದ ಜ್ವರಕ್ಕೆ ಆಯಿ ತಣ್ಣೀರು ಪಟ್ಟಿ ಇಟ್ಟಳು. ಕಫ ಕರಗಲು ಉಪ್ಪು ಕಟ್ಟಿದ ಬಟ್ಟೆಯನ್ನು ಬಿಸಿ ಹಂಚಿನ ಮೇಲಿಟ್ಟು ಎದೆಗೆ ಶಾಖ ಕೊಟ್ಟಳು. ಹಾಗೇ ಮೈಕೈ ನೋವಿಗೂ ಉಪ್ಪಿನ ಶಾಖ ಒಳ್ಳೆಯದೆಂದು ಅದನ್ನೇ ಇಟ್ಟು ಇಟ್ಟು ತೆಗೆದಳು. ಎಂತ ಕರ್ಮವೋ, ಯಾವ ಚಿಕಿತ್ಸೆಗೂ ಜ್ವರ ಇಳಿಯಲಿಲ್ಲ. ಕನವರಿಕೆ ಹೆಚ್ಚಿತು. ಮಾರನೇ ದಿನವಂತೂ ಹುಡುಗ ಕಂಗಾಲು. ಇದೂ ಒಂದು ತರಹದ ಫ್ಲ್ಯೂ ಜ್ವರ. ದೊಡ್ಡ ಶಹರಿನಲ್ಲಿ ಕೆಲವರ್ಷಗಳ ಮೊದಲು ತುಂಬ ಜನ ಈ ಫ್ಲ್ಯೂನಲ್ಲಿ ಸತ್ತಿದ್ದಾರೆಂದು ಅಪ್ಪಯ್ಯ ಸಾಸ್ತಾನಕ್ಕೆ ಹೋದವ ಸುದ್ದಿ ತಂದ. ಇಲ್ಲಿ ಪಂಡಿತರೂ ಅದೇ ಸಂಶಯ ಹೇಳುವಾಗ ಪರಿಸ್ಥಿತಿಯ ಗಂಭೀರತೆ ಅರಿವಿಗೆ ಬಂದದ್ದು. ಇದರ ಜೊತೆಗೆ ನಾಣಿಗೆ ಅಕ್ಕನ ನೆನಪಿನಲ್ಲಿ ನರಳಾಟ ಹೆಚ್ಚಿತು. ಅವಳು ಅಷ್ಟು ದೂರದಲ್ಲಿ ಇದ್ದಾಳೆ, ಬರುವುದು ಕಷ್ಟವೆಂದರೂ ಈ ಭೂಪತಿಗೆ ಜ್ವರದ ಸಂಕಟಕ್ಕಿಂತ ಅವಳು ಜೊತೆಗೇ ಇರಬೇಕೆಂಬ ಹಠ ಹೆಚ್ಚಿತು. ಮುಷ್ಟು ಕಟ್ಟಿ ಗಾಳಿ ಗುದ್ದಿ, "ಅಕ್ಕಾ, ನಾ ಹೋಗ್ತೆ ದೂರ, ದೂರ, ಯಾರೂ ಕಾಣದ ಊರಿಗೆ. ನೀ ಬತ್ತಿಲ್ಲೆಯಾ? ನಿನ್ನ ಬಿಟ್ಟು ನಾ ಒಬ್ನೇ ಎಲ್ಲಿಗೆ ಹೋಗ್ಲಿ?" ಎನ್ನುವ. ಮತ್ತೊಮ್ಮೆ "ಕೆಟ್ಟವಳು ನೀನು. ಒಂದ್ಸಾರಿ ನನ್ನನ್ನು ನೋಡಲು ಬರಬಾರದೇ? ಚಕ್ರಿಅಮ್ಮಮ್ಮನ ಮನೆಯಿಂದ ಶಾಲೆಗೆ ಹೋಪವ ಆವತ್ತು ದೋಣಿಯಲ್ಲಿ ನಾನೊಬ್ಬನೇ ಬಂದದ್ದು ನಿನಗಾಗಿ ಅಂತ ನೆನಪಿಲ್ಲೆಯಾ? ಬಾ ಅಕ್ಕ. ನೀ ಬಂದ್ರೆ ನನ್ನ ಜ್ವರ ಗಾಳಿಗೆ ಹಾರಿದ ಎಲೆಯಂತೆ ಹಾರಿ ಹೋಕು." ಸುಮ್ಮನೆ ಅಳುವ. ಜ್ವರಕ್ಕೆ ಇವನ ಸಂಕಟವೇನು ಗೊತ್ತು? ಅದಿನ್ನೂ ಸತಾಯಿಸಿತು ಅವನನ್ನು.

ನಿಜವಾಗಿ ಹೆದರಿದವರು ಹಿರಿಯರು. ಗೌರಿ ಬಾರದೆ ಇವನಲ್ಲಿ ಚೇತರಿಕೆ ಕಾಣದೆಂದು ಅರಿವಾಗಿ ಅಪ್ಪಯ್ಯ ಎರಡು ದಿನ ತನ್ನ ಕೆಲಸಕ್ಕೆ ರಜೆ ಹಾಕಿ ಸೀದಾ ಸಿರ್ಸಿಗೆ ಹೊರಟ.

♣♣♣

ಗೌರಿಗೆ ವಿಷಯ ತಿಳಿಸಿ ಅವಳನ್ನು ಹೊಳೆಬಾಗಿಲಿಗೆ ಕರೆ ತರುವಾಗ ಮರುದಿನ ಮಧ್ಯಾಹ್ನ ಕಳೆದಿತ್ತು. ಆತಂಕದಿಂದಲೇ ನಿಂತ ಕಾಲಲ್ಲಿ ಬಂದ ಗೌರಿ ತಮ್ಮನನ್ನು ನೋಡುತ್ತಾಳೆ, ತಾನು ಇಲ್ಲಿಂದ ಹೋಗುವಾಗ ಕುಂಬಳಕಾಯಿಯಂತಿದ್ದ ನಾಣಿ ಸೋತ ಪುಟ್ಟ ಸೋರೆಕಾಯಿ ಆಗಿದ್ದಾನೆ. ಪಾಪ, ದಿನವೆಲ್ಲ ತನ್ನದೇ ಜಪವೆಂದು ಅಪ್ಪಯ್ಯ

ಹೇಳಿದ್ದು ಸತ್ಯವೇ. ಅವನ ಹಾಸಿಗೆ ಬದಿಗೆ ಕುಳಿತು ತಲೆ ನೇವರಿಸಿದಳು, ಮೈ ತಿಕ್ಕಿದಳು. ನಿಧಾನವಾಗಿ ಕಣ್ಣುಬಿಟ್ಟ ನಾಣಿ ಅವಳನ್ನು ಕಂಡು ಕೈ ಹಿಡಿದ. ಉಮ್ಮಳಿಸಿದ ಅಳು ಹೊದ್ದ ಚಾದರವನ್ನು ತೋಯಿಸಿತು. ಏಳಲು ಯತ್ನಿಸಿ ಏಳಲಾಗದೆ ಕಣ್ಣು ಮುಚ್ಚಿದ. ಪರಿಸ್ಥಿತಿ ಕೈ ಮೀರಿತೇ? ಅಪ್ಪಯ್ಯ ಅವನ ಕಾಲಕೆಳಗೆ ಕುಸಿದ, ಆಯಿ ಬಾಯಿಗೆ ಸೆರಗು ಹಚ್ಚಿ ಒಳ ಓಡಿದಳು. ಅಜ್ಜಮ್ಮ, ಸುಬ್ಬಪ್ಪಯ್ಯರು ಓಡಿಬಂದರು. ಅದಾ, ಮೋತಿ ಯಾಕೆ ಒರಲುತ್ತಿದೆ ವಿಕಾರವಾಗಿ? ಕೆಲಸದ ಲಿಂಗಪ್ಪ ಅದನ್ನು ಓಡಿಸಿದ ಅಂಗಳದಾಚೆಗೆ. ಹೆಚ್ಚು ಧೈರ್ಯ ತಂದುಕೊಂಡವಳು ಗೌರಿಯೇ. ತನ್ನ ತೊಡೆಯ ಮೇಲೆ ಅವನ ತಲೆಯಿರಿಸಿ ಚಮಚದಲ್ಲಿ ಮೊದಲು ಉಗುರು ಬಿಸಿ ನೀರನ್ನು ಕುಡಿಸಿದಳು. ಹಣೆಗೆ ತಣ್ಣೀರು ಪಟ್ಟಿ ಇಟ್ಟಳು. ಆಮೇಲೆ ಆಯಿಗೆ ಹೇಳಿ ಬಿಸಿ ಗಂಜಿಗೆ ಚೂರು ನಿಂಬೆಹಣ್ಣಿನ ಚಪ್ಪೆ ಉಪ್ಪಿನಕಾಯಿ ಬೆರೆಸಿ ಕಷ್ಟದಲ್ಲಿ ತಿನ್ನಿಸಿದಳು. "ನಾನು ಬಂದಿದ್ದೇನೆ ತಮ್ಮಾ, ಇಲ್ನೋಡು. ಇನ್ನು ನಿಂಗೆ ಎಂತದೂ ಆಗ್ದು." ಮುಖ ಒರಸಿ ಹೊದಿಕೆ ಹೊದೆಯಿಸಿದಳು. ಅವಳ ಸ್ಪರ್ಶದಿಂದಲೇ ನಾಣಿಯ ಜ್ವರ ಅರ್ಧ ಕಡಿಮೆ ಆದಂತೆ ಮರುದಿನ ಬೆಳಗಿನ ಹೊತ್ತಿಗೆ ಸುಮಾರಾಗಿ ಚೇತರಿಕೆ ಕಾಣಿಸಿತು. ದೊಡ್ಡ ಹೆಂಗಸಿನಂತೆ ಅವಳ ಕೆಲಸ, ತಮ್ಮನನ್ನು ಆರೈಕೆ ಮಾಡುವ ರೀತಿ ಕಂಡು ಆಯಿ, ಅಪ್ಪಯ್ಯನಿಗೆ ಅಚ್ಚರಿ.

"ನನ್ನನ್ನು ಬಿಟ್ಟು ನೀ ಎಲ್ಲಿಗೂ ಹೋಗ್ಬೇಡ ಅಕ್ಕ." ನಾಣಿ ಮಾತಿಗೆ ಮುಂಚೆ ಅಳುವಾಗ ಅವಳೂ ಅಳುತ್ತ, "ಇಲ್ಲ ಪುಟ್ಟಾ," ಎಂದಳು.

ಅವನ ಮುಗ್ಧ ನಿಷ್ಕಳಕ ಪ್ರೀತಿಗೆ ಯಾವ ಉಪಮೆಯೂ ಇಲ್ಲ. ಎಂಟು ದಿನ ಎಂಟು ನಿಮಿಷದಂತೆ ಕಳೆದುಹೋದವು. ಅವನಿಗೆ ಬಂದದ್ದು ಸಾಮಾನ್ಯ ಶೀತಜ್ವರವೆಂದೂ ಗಂಭೀರದ ಸಾಂಕ್ರಾಮಿಕ ರೋಗ ಅಲ್ಲವೆಂದು ತಿಳಿದು ಎಲ್ಲರೂ ನಿರಾಳರಾದರು. ಗೌರಿ ಎರಡು ದಿನ ಹೆಚ್ಚಿಗೆಯೇ ನಿಂತು ಸಿರ್ಸಿಗೆ ಹೊರಡಲು ಸಿದ್ಧಳಾದಾಗ ಅವಳನ್ನು ಕಳುಹಿಸಲು ಯಾರಿಗೂ ಮನಸ್ಸಿಲ್ಲ. ಆದರೆ ಹೋಗುವುದು ಅನಿವಾರ್ಯ. ತಮ್ಮನ ಮೇಲೆ ಪ್ರೀತಿ, ವಾತ್ಸಲ್ಯ ಇದ್ದರೂ ಓದಿನ ರುಚಿ, ಬರವಣಿಗೆಯ ಆಸಕ್ತಿ, ದೇಶಪ್ರೇಮದ ಜಾಗ್ರತಿಯಿಂದ ಮನಸ್ಸು ಸಿರ್ಸಿಯತ್ತ ಎಳೆಯುತ್ತಿದೆ. ಸುಶೀಲ ಚಿಕ್ಕಿಯಿಂದ ಬೇಗ ಬಾಗ ಎಂದು ಆಗಲೇ ಕಾಗದ ಬಂದಾಗಿದೆ.

ಅಪ್ಪಯ್ಯ ಎರಡು ದಿನ ರಜೆ ಹಾಕಿ ಆ ನಸುಕಿನಲ್ಲಿ ಗೌರಿ ಜೊತೆ ಹೊರಡುವಾಗ ಭವಿಷ್ಯ ಅರ್ಥ ಮಾಡಿಕೊಂಡ ನಾಣಿ ಪಾಪ, ಅಳು ಇಲ್ಲದೆ ಮೌನವಾಗಿದ್ದ. ಗೌರಿ ಅವನ ಕಣ್ಣಲ್ಲಿ ಕಣ್ಣಿಟ್ಟು ಕೈ ಹಿಡಿದಳು, "ಬ್ಯಾಸರನಾ ನಾಣಿ?"

"ಇಲ್ಲ ಅಕ್ಕ" ಎಂದವನು ಜೋಪಾನವಾಗಿ ತೆಗೆದಿಟ್ಟ ಅಂದು ಅವಳಿಲ್ಲೇ ಬಿಟ್ಟು

ಹೋದ ಗೊಂಬೆ ಪೆಟ್ಟಿಗೆಯನ್ನು ಕೊಡುತ್ತ ಅವಳ ಕಿವಿಯಲ್ಲಿ ಉಸುರಿದ, "ನಾನೀಗ ದೊಡ್ಡ ಆಗಿದ್ದೇನೆ ಅಕ್ಕ, ನೀನು ಇನ್ಯಾವಾಗ ಬರ್ತಿ ಹೇಳು, ಇಲ್ಲೇ ಬಂದು ಮರ ಏರಿ ಕಾಯ್ತೆ ನಿನಗಾಗಿ" ಮೊದಲಬಾರಿ ಬಹಳ ದಿನಗಳ ನಂತರ ಅವನ ಮುಖದಲ್ಲಿ ಅಪೂರ್ವವಾದ ನಗು, ಸಮಾಧಾನ ಕಾಣುತ್ತಿತ್ತು.

ಆಯಿ, ಉಳಿದವರೆಲ್ಲ ಗಂಗೊಳ್ಳಿ ದಡದವರೆಗೆ ಬೀಳ್ಕೊಡಲು ತಾವೂ ಬಂದರು. ಸಾಸ್ತಾನಕ್ಕೆ ಹೋಗಲು ಎತ್ತಿನಗಾಡಿ ಇತ್ತು. ಆದರೆ ಗೌರಿಗೆ ದೋಣಿಯಲ್ಲೇ ಹೋಗುವ ಆಸೆ. ಇನ್ನೊಮ್ಮೆ ತಾನು ಹೊಳೆಬಾಗಿಲಿಗೆ ಬರುವಾಗ ಈ ಕುದ್ರು ಬದಲಾವಣೆಯ ಗಾಳಿಗೆ ತೆರೆದುಕೊಳ್ಳುತ್ತ ಜನರ ಓಡಾಟಕ್ಕೆ ಪ್ರಯಾಣಿಕರ ದೋಣಿ, ತೆಪ್ಪ ಇರಲಿಕ್ಕಿಲ್ಲ. ಸೇತುವೆಗಳನ್ನು ಕಟ್ಟಿದರೆ ಗಂಗೊಳ್ಳಿ ಹೊಳೆಯೂ ತಾನು ಹರಿಯುವ ದಿಕ್ಕಿನ ಪಾತ್ರ ಬದಲಾಯಿಸೀತು. ಅವಳು ಬೊಗಸೆ ತುಂಬ ಹೊಳೆ ನೀರು ಎತ್ತಿಕೊಳ್ಳುತ್ತ ಮನಸ್ಸಿನಲ್ಲೇ ಹೊಳೆಗೆ, ಅನ್ನಪೂರ್ಣೇಶ್ವರಿ ದೇವಿಗೆ ನಮಿಸಿ ಅಪ್ಪಯ್ಯನ ಜೊತೆ ದೋಣಿ ಏರಿದಳು. ಇವರಿಗಾಗಿ ತಾರೆಗಳು ಬಾನಂಗಳದಿಂದ ನಿರ್ಗಮಿಸುವ ಮೊದಲೇ ಕಾದು ನಿಂತಿದ್ದ ದೋಣಿಯವ ದಡಕ್ಕೆ ಕಟ್ಟಿದ ಹಗ್ಗ ಬಿಚ್ಚಿ ಹುಟ್ಟು ಕೈಗೆತ್ತಿಕೊಂಡ.

> **"ಓಬೇ ಲೇಸು, ದೂರದೂರಿನ ಹೆಂಣ್ತಿನ ತಂದೆ। ಹೆಂಣ್ತಿನ ತಂದು ಮಾವಂಗೆ ಹೇಳ್ತೆ।**
> **ಮಾವ ಕೇಂತಿಲ್ಲೆ ನಾ ದೈವವ ಕೇನ್ತೆ। ದೈವ ಕೇನ್ತಾ ನನ್ನ ಎದೇಲಿ ಕುಂತು?॥**
> **ಓಬೇ ಲೇಸು ಓಬೇ ಲೇಸು!"**

ದೋಣಿಯವ ಹಾಡಿನ ಗುನುಗಿನೊಂದಿಗೆ ನಿಧಾನಕ್ಕೆ ದೋಣಿ ತೇಲಿತು ಮುಂದೆ ಮುಂದೆ. ಎಳೆ ಬಿಸಿಲು ಇಬ್ಬನಿಯಲ್ಲಿ ತೊಯ್ದಂತೆ ಏರುವ ಹೊತ್ತು. ಗಂಗೊಳ್ಳಿ ಹೊಳೆ, ಅರಬ್ಬೀಸಮುದ್ರ ಒಂದೇ ರೇಖೆಯಲ್ಲಿ ಸಂಧಿಸಿದಂತೆ ಕಾಣುವ ವಿಸ್ಮಯದ ಪೂರ್ವ ದಿಗಂತದಲ್ಲಿ ಕೆಂಪಿನ ಗೋಲಕ. ಇದೋ ಕೈ ಚಾಚಿದರೆ ಅಂಗೈ ಮೇಲೇ ಬಂದು ಕುಳಿತಂತೆ ಎಲ್ಲೆಡೆಗೂ ಸಡಗರದ, ಸಂಭ್ರಮದ ತೋರಣ. ದಡದಲ್ಲಿ ನಿಂತವರು ದೂರವಾಗಿ ತಾನು ನಾಣಿ ಪ್ರತಿ ಶನಿವಾರ ಅಪ್ಪಯ್ಯನನ್ನು ಕಾಯುತ್ತಿದ್ದ ಮರ ಕಾಣುತ್ತಿದೆ ದೂರದಿಂದ. ಅದರ ತುದಿಯಲ್ಲಿ ಕುಳಿತು ಅಕ್ಕನಿಗೆ ಕೈ ಬೀಸುತ್ತಿದ್ದಾನೆ ನಾಣಿ!

# ಹೊಳೆಬಾಗಿಲು ಕಾದಂಬರಿಗೆ ಓದುಗರ ಪ್ರತಿಕ್ರಿಯೆಗಳು

ಕಾದಂಬರಿ ಓದುವಾಗ ಆಗುವ ಖುಷಿಯನ್ನು ಅದು ಮುಗಿದ ನಂತರ ನಾನು ಇನ್ನೆಲ್ಲಿ ಹುಡುಕಲಿ? ಇದರ ಮುಂದಿನ ಭಾಗ ಬರೆಯಬಹುದು.. ಇಬ್ಬರು ಮಕ್ಕಳು ಕಲಿತು ಜೀವನ ದೋಣಿಯಲ್ಲಿ ಮೇಲೆ ಬರುವಂತೆ ಆಗಲಿ

**– ಕೃಷ್ಣ ಭಟ್ಟ (ಡೊಂಬಿವಿಲಿ, ಮಹಾರಾಷ್ಟ್ರ)**

ಹಪ್ಪಳ, ಮಾಂಬಳದ ಓದು ಮಳೆಗಾಲದ ಇಂದಿನ ದಿನಕ್ಕೆ ರುಚಿಕಟ್ಟಾಗಿತ್ತು. ಚಕ್ರೀ ಅಮ್ಮಮ್ಮ ಹೇಳುವ ಕಥೆ ಕೇಳುತ್ತ ಆ ಹೊದಿಕೆಯ ನವಿರಾದ ಪರಿಮಳ ನನ್ನನ್ನೂ ಸವರಿದಂತಾಯ್ತು. ಚಕ್ರಿ ಅಮ್ಮಮ್ಮ ಗೌರಿ ಮದುವೆಗೆ ಒಪ್ಪದಿರಲಿ

**– ಜಯಲಕ್ಷ್ಮಿ ಪಾಟೀಲ (ಲೇಖಕಿ, ಸಿನಿಮಾ ನಟಿ, ಚಿತ್ರ ಕಲಾವಿದೆ)**

ಹೊಳೆಬಾಗಿಲಿನಿಂದ ಓತ್ತಲಿನವರೆಗೂ ಈಜಿದಷ್ಟು ಸಂಪಿಗೆಯ ಕಂಪು, ಪ್ರೀತಿಯ ಸೊಂಪು, ಪ್ರಕೃತಿಯ ಇಂಪು, ಬಾಂಧವ್ಯದ್ವೈನಿಪು. ಚಂದ, ಚಂದ, ಚಂದ. ಎರಡೆರಡು ಬಾರಿ ಓದುವಂತಿದೆ.

ಹೊಳೆಬಾಗಿಲು 3 ಕಂತುಗಳನ್ನು ಓದಿದೆ. ಬಾಲ್ಯ ಚೆಂದ. ಕುತೂಹಲಮಯ. ಮುಗ್ಧಬಾಲ್ಯ ಮುಗ್ಧತೆಯನ್ನು ವಿವರಿಸುವುದು ಕಷ್ಟ. ಮಕ್ಕಳ ಮನಸ್ಸನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ನಾವೂ ಕಾಗದ ದೋಣಿ ತೇಲಿ ಬಿಡೋಣ. ಚಕ್ರಿ ಅಮ್ಮಮ್ಮನ ವ್ಯಕ್ತಿತ್ವ ತುಂಬ ಇಷ್ಟ ಆಯಿತು.

**– ವಿನಯಾ ಪ್ರಸಾದ್ [ಸಿನಿಮಾ ನಟಿ, ಕಿರುಚಿತ್ರ ಕಲಾವಿದೆ]**

ಸಾಸ್ತಾನು, ಕುದುರು ಇವೆಲ್ಲ ಹೊಸ ಶಬ್ಧಗಳು. ಗಂಗೊಳ್ಳಿ ಹೊಳೆ ವರ್ಣನೆ ಚೆನ್ನಾಗಿ ಬಂದಿದೆ.

**– ಸೀಮಾ ಬುರುಡೆ**

ಗೌರಿ, ನಾಣಿಯರ ಆಟದಲ್ಲಿ ಕಂಡ ಹಳ್ಳಿ ಬದುಕು ಸುಂದರವಾಗಿತ್ತು. ಮುಗ್ಧತೆಯ ಜೊತೆಗೆ ಬೆಳೆದ ತಿಳಿಯುವ ಉತ್ಸಾಹ, ಕಲಿಯುವ ಬಯಕೆ, ಸ್ವತಂತ್ರ ವಿಚಾರ ಮೆಚ್ಚಿಗೆಯಾಯ್ತು. ಹೆಣ್ಣುಮಕ್ಕಳು ಮುದುಡಿ ಕೂರದೆ ಬದುಕು ಎದುರಿಸುವ ಪ್ರಯತ್ನ ಚೆನ್ನಾಗಿದೆ. ನಾಣಿಯೂ ಅಕ್ಕನ ಪ್ರೀತಿ ನೆನೆಯುತ್ತ ಬೆಳೆಯುತ್ತಾನೆ. ಹಳೆಯ ಕಾಲದ ಚಿತ್ರಣದಲ್ಲಿ ಕಾದಂಬರಿ ಸುಂದರವಾಯ್ತು!

**– ನಳಿನಿ ಮಾಯ್ಲಂಕೋಡಿ**

ಕಥೆ ತುಂಬಾ ಚೆನ್ನಾಗಿದೆ. ದಿನಾ ಹೊಳೆಬಾಗಿಲಿಗೆ ಕಾಯುವೆ.

**–ಮಲ್ಲಿಕಾ ತಾಳಿತ್ತಾಯ,** ಬೆಂಗಳೂರು

ಹೊಳೆಬಾಗಿಲನ್ನು, ಗಾಂಧಿಯುಗವನ್ನೂ, ಸೇವಾಶ್ರಮವನ್ನೂ ಸ್ತ್ರೀಶಕ್ತಿಯನ್ನು ತೋರಿದ ಮಾಲತಿ ಲೇಖನಿಗೆ ಹೃತ್ಪೂರ್ವಕ ಅಭಿನಂದನೆಗಳು.

**– ಶ್ಯಾಮಲಾ ಮಾಧವ (ಲೇಖಕಿ, ಸಾಹಿತಿ)**

ಹೊಳೆಬಾಗಿಲು ಚೆನ್ನಾಗಿ ಬರುತ್ತಿದೆ. ಪ್ರತಿ ಪಾತ್ರವನ್ನು ಮನ ಮುಟ್ಟುವ ಹಾಗೆ ವಿವರಿಸಿದ್ದಾರೆ. ಆಯಿಯ ಸಹಾನುಭೂತಿ ಮೆಚ್ಚುವಂತಹುದು. ನನ್ನ ಬಾಲ್ಯ ನೆನಪಿಗೆ ತಂದಿತು. ಇಂದು ಅಳು, ನಾಳೆ ನಗು, ಇಂದು ಸುಖ, ನಾಳೆ ದುಃಖ, ಇದೇ ಅಲ್ಲವಾ ಜೀವನ? ಖಂಡಿತ ಹೌದು.

"ಮಾನವೀಯತೆ, ಕರುಣೆ ಎಲ್ಲಕ್ಕಿಂತ ದೊಡ್ಡದು. ಅದು ಸಂಪ್ರದಾಯ, ವಿಧಿಗಳನ್ನು ಧಿಕ್ಕರಿಸುತ್ತದೆ" ವಾಹ್!

**– ಥೆರೆಸಾ ಮಾಡ್ತಾ**

ಪಾಪ ಗೌರಿ, ಮದುವೆ ಅಂದರೆ ಆಟದ ಮದುವೆ ಎಂದು ತಿಳಿದ ಮುಗ್ಧಬಾಲೆ. ಈ ವಯಸ್ಸಿನಲ್ಲಿ ಮದುವೆ ಆಗದಿರಲಿ ಎಂದು ಹಾರೈಕೆ

**– ಗೀತಾ ಹಾಸ್ಯಗಾರ**

ಇಷ್ಟು ಬೇಗ ಧಾರಾವಾಹಿ ಮುಗಿದು ಹೋಯ್ತು? ತುಂಬಾ ಚೆಂದ ಬಂದಿದೆ.

**– ಮಂಗಳಾ ಮುಂಬಯಿ**

ಈ ಕಥೆ ಓದುವಾಗ ನನಗೆ ನಿಜವಾಗಲೂ ನನ್ನ ಬಾಲ್ಯ ಬಹಳ ಕಾಡಿತು. ಗೌರಿ ಮತ್ತು ನಾಣಿಯಲ್ಲಿ ನಾನು ನನ್ನ ಹಾಗೂ ನನ್ನ ಅಣ್ಣನನ್ನು ಕಂಡೆ. ಅವರು ಪ್ರತಿ ಶನಿವಾರ ಹೊಳೆ ದಡಕ್ಕೆ ಹೋಗಿ ಮರ ಹತ್ತೋದು ಓದಿದಾಗ ನಾನೂ ಚಿಕ್ಕವಳಿದ್ದಾಗ ಮೈಸೂರಿನಲ್ಲಿ ನಮ್ಮ ಮನೇಲಿ ಒಂದು ದೊಡ್ಡ ನುಗ್ಗೆಕಾಯಿ ಮರ ಇತ್ತು. ನುಗ್ಗೆಕಾಯಿ ಮರದ ಮನೆ ಅಂತಾನೆ ಕರೀತಿದ್ರು. ನಾನು ಅಣ್ಣ ಆ ಮರ ಹತ್ತಿ ಕೂತ್ಕೋತಾ ಇದ್ವಿ. ಏನಾರೆ ತಿಂಡಿ ಇದ್ರೆ ಅದನ್ನು ತಗೊಂಡು ಹತ್ತುತ್ತಾ ಇದ್ವಿ. ಮಿಕ್ಕವರಿಗೆ ಮರ ಹತ್ತೋ ಭಯ. ಇದರಲ್ಲೂ ಹಾಂಗೆ. ಎಷ್ಟು innocent ಮಕ್ಕಳು! ಇನ್ನು ಗುಜ್ಜಿ ಎಂಜಲು ಇದನ್ನು ನಾ ಕೇಳಿಯೇ ಇಲ್ಲ. super! ಲಂಗದಲ್ಲಿ wrap ಮಾಡಿ ಕಚ್ಚಿ half ಮಾಡಿದ್ದು ಎಂತಾ Idea! ಮಕ್ಕಳ ಬಾಲ್ಯ ಕಾಲದ ಮೊದಲ ಭಾಗ ಇಷ್ಟ ಆಯ್ತು.

– **ವೀಣಾ ಪ್ರಕಾಶ್**

Hole bagilu village sean you explained so well I felt as if we are playing. Very happy to read

– **Lakshmi Ramacandra**

## ಇದೇ ಲೇಖಕಿಯ ಇತರ ಸಾಹಿತ್ಯ ಕೃತಿಗಳು

**ಕಾದಂಬರಿಗಳು :**

1] ಅರ್ಧಾಂಗಿ

2] ಆಘಾತ

3] ಅನಿಶ್ಚಯ

4] ಅತೃಪ್ತೆ

5] ಅಲೋಕ

6] ಹೊಸ ಹೆಜ್ಜೆ

7] ಮಿನುಗದ ಚುಕ್ಕೆ

8] ಸರಿದ ತೆರೆ

9] ಬದಲಾಗದವರು

10] ದೇವ

11] ಅಂಜನಾ

12] ತಿರುಗಿದ ಚಕ್ರ

13] ಪುನರ್ಮಿಲನ

14] ನೂಪುರಗಾನ

15] ಕಾಡುಕರೆಯಿತು

16] ವಕ್ರರೇಖೆ

17] ಮಂದಾರ

18] ಖಾಲಿಮನೆ

19] ಪುಣ್ಯದ ಎಣ್ಣೆ

20] ಹಸಿರು ಚಿಗುರು

21] ಅವಧಿ ಬ್ಲಾಗ್‌ನಲ್ಲಿ "ಹೊಳೆಬಾಗಿಲು" ಕಾದಂಬರಿ ದಿನ ಧಾರಾವಾಹಿಯಾಗಿ ಪ್ರಕಟಿತ.

22] "ಅಂಜನ" ಕಾದಂಬರಿ ಸಂಸ್ಕೃತಕ್ಕೆ ಅನುವಾದ

**ಸಣ್ಣಕಥಾ ಸಂಕಲನ :**

1] ವಸಂತದ ಹೂವುಗಳು.

2] ಸಂಜೆ ಬಿಸಿಲು

**ಇತರ ಕೃತಿಗಳು :**

1] ಗ್ರಾಮೀಣ ಮಹಿಳೆಯರು

2] ಹಳ್ಳಿಗೆ ಬಂದ ಎಳೆಯರು

3] ಸುಖದ ಹಾದಿ

4] ಮಕ್ಕಳಪಾಲನೆ

5] ದಿವ್ಯಪಥ

6] ಸಮಯದ ಸದುಪಯೋಗ

7] ಮಹಿಳೆ-ಸಮಾಜ ಕಲ್ಯಾಣ

8] ಸಂತೋಷದ ಹುಡುಕಾಟ

9] ಮಹಿಳೆ-ಪರಿವರ್ತನೆಯ ಹಾದಿಯಲ್ಲಿ [ಲೇಖನಗಳು]

**ಜೀವನ ಚರಿತ್ರೆ**

1] ಕಾರುಣ್ಯನಿಧಿ ಶ್ರೀ ಮಾತೆ ಶ್ರೀ ಶಾರದಾದೇವಿ .

2] ಅನನ್ಯ ಅನುವಾದಕ ಶ್ರೀ ಅಹೋಬಲಶಂಕರ

3] ಸಮನ್ವಯ ಸಾಹಿತ್ಯದ ಲೇಖಕಿ ಎ.ಪಿ. ಮಾಲತಿ [ಲೇಖಕಿ ಡಾ. ಶೈಲಾ ಯು]

4] ಸ್ಮೃತಿಯಾನ [ಆತ್ಮಕಥನ]

‘ಜಡಚೇತನವನ್ನು ಬಡಿದೆಬ್ಬಿಸಿ ಉತ್ಸಾಹ, ನವಚೈತನ್ಯ ತುಂಬಿಸುವ ಕಾರಂಜಿ ಈ ಹೊಳೆಬಾಗಿಲು.’ ಕಾದಂಬರಿಯಲ್ಲಿ ಬಂದಿರುವ ಈ ಸಾಲುಗಳು ನಿಜವಾಗಿಯೂ ಓದುಗರಿಗೆ ಸ್ನಿಗ್ಧ ನವಿರಾದ ಭಾವನೆಯನ್ನು ಕೊಡುತ್ತದೆ. ಮಕ್ಕಳು ಬಾಲ್ಯದಲ್ಲಿ ಶಾಲೆಗೆ ಹೋಗಿ ಕಲಿಯುವುದು ಒಂದು ತೆರನಾದರೆ ಮನೆಯ ಹಿರಿಯರ ಮಾತುಗಳು ಕಿರಿಯರಿಗೆ ದಾರಿದೀಪಗಳಾಗುತ್ತವೆ ಎನ್ನಲು ಈ ಕಾದಂಬರಿಯಲ್ಲಿ ಅನೇಕ ಉದಾಹರಣೆಗಳು ಸಿಗುತ್ತವೆ. ‘ಇನ್ನೊಬ್ಬರ ವಸ್ತುಗಳ ಬಗ್ಗೆ ಆಸೆಬುರುಕರಾದರೆ ಕಷ್ಟ ನಿಮಗೇ’ ಎನ್ನುವ ತಾಯಿ, ನಂಬಿಕೆ–ವಿಶ್ವಾಸ ಮುಖ್ಯ ಅದಿಲ್ಲದಿದ್ದರೆ ಯಾವುದದಕ್ಕೂ ಬೆಲೆ ಇಲ್ಲ ಎಂದು ಅವರನ್ನು ತಿದ್ದುತ್ತ ತೋರಿಸಿಕೊಡುತ್ತಾಳೆ. ‘ಹೆಣ್ಣುಮಕ್ಕಳಿಗೆ ಕತ್ತಲೆ ಕೂಪದಿಂದ ಬೆಳಕಿನೆಡೆಗೆ ದಾರಿತೋರ್ಸೆಕ್ಕು ಗೌರಿ’ ಎನ್ನುವ ಸುಶೀಲ ಚಿಕ್ಕಿಯ ಮಾತುಗಳು ಎಂದೆಂದಿಗೂ ಪ್ರಸ್ತುತ. ಗೌರಿಯ ಹಾಡು, ಕಮಲತ್ತೆಯ ಹಾರ್ಮೋನಿಯಂ ಓದುವಾಗಲೆ ಕಿವಿಗೆ ಇಂಪಾಗಿ ಕೇಳಿಬಿಡುತ್ತದೆ. ಹೊಳೆಬಾಗಿಲಿನಿಂದ ಹಿತ್ತಲವರೆಗೂ ಈಜಿದಷ್ಟೂ ಸಂಪಿಗೆಯ ಕಂಪು, ಪ್ರೀತಿಯ ಸೊಂಪು, ಬಾಂಧವ್ಯದ ಇನಿಪು. ಚಂದ, ಚಂದ, ಚಂದ. ನಾಣಿ, ಗೌರಿಯ ಮುಗ್ಧ ಬಾಲ್ಯವಂತೂ ತುಂಬ ಚಂದವಾಗಿ ಮೂಡಿಬಂದಿದೆ. ಹೆಚ್ಚಿನ ಜವಾಬ್ದಾರಿಯಿಲ್ಲದ ಕುತೂಹಲಮಯ ಮುಗ್ಧ ಬಾಲ್ಯ ಓದುತ್ತ ಹೋದಂತೆ ನಾವೂ ಅವರಂತೆ ಕಾಗದದ ದೋಣಿ ಮಾಡುತ್ತ ನೀರಿನಲ್ಲಿ ತೇಲಿ ಬಿಡುವ, ಮೊಲ, ಪಾತರಗಿತ್ತಿ ಹಿಡಿಯುವ ಆಟ ಆಡುವ ಆಶೆಯಾಗುತ್ತದೆ. ಅಹಾ! ಅವರ ಮುಗ್ಧತೆ ವಿವರಿಸುವುದು ಕಷ್ಟ. ಮಕ್ಕಳ ಮನಸ್ಸನ್ನು ಚೆನ್ನಾಗಿ ಅರ್ಥ ಮಾಡಿಕೊಂಡ ಲೇಖಕಿ. ಇನ್ನು ಚಿಕ್ರಿ ಅಮ್ಮಮ್ಮನ ವಿವರಣೆ ಅಪ್ಯಾಯಮಾನ. ಆಕೆ ಡೇರ್‌ಡೆವಿಲ್ ತರಹ, ವ್ಯವಹಾರಸ್ಥೆ. ಮನುಷ್ಯತ್ವ, ಕರುಣೆ, ನೈತಿಕತೆ, ಗಟ್ಟಿ ಸಂಬಂಧ, ಗಂಗೊಳ್ಳಿ ಹೊಳೆಯ ಕುದ್ರುವಿನ ಚಿತ್ರಣ, ಹಳ್ಳಿಯ ಸೊಗಡು ನೈಜವಾಗಿ ಶ್ರೇಷ್ಠವಾಗಿ ಮೂಡಿಬಂದಿದೆ. ಎ.ಪಿ.ಮಾಲತಿಯವರು ತಮ್ಮ ಇಳಿವಯಸ್ಸಿನಲ್ಲಿ ಇಂತಹದೊಂದು ಕೃತಿಯನ್ನು ಬರೆದಿರುವುದು ನಮ್ಮ ಕನ್ನಡ ಸಾಹಿತ್ಯ ಪ್ರಪಂಚಕ್ಕೊಂದು ಮುಕುಟ!

ವಿನಯಾ ಪ್ರಸಾದ್
ಚಲನಚಿತ್ರ ಕಲಾವಿದೆ, ಕಿರುತೆರೆ ನಟಿ



ಎ.ಪಿ. ಮಾಲತಿ



ಪಾಂಚಜನ್ಯ ಪಬ್ಲಿಕೇಷನ್ಸ್
ನಂ. 1, ಮಿಲ್ಕ್ ನರಸಿಂಹಯ್ಯ ಲೇಔಟ್,
ಎನ್.ಆರ್.ಐ. ಇನ್‌ಸ್ಟಿಟ್ಯೂಟ್ ಹತ್ತಿರ,
ಪಾಪರೆಡ್ಡಿಪಾಳ್ಯ, ಬೆಂಗಳೂರು–560 072.

ISBN: 978-93-92275-09-8
9 789392 275098

**Holebagilu**

**Price: Rs. 200/-**